# ನಿಮ್ಮ ನಂಬಿಕೆಯನ್ನು ಮಾತನಾಡಿ



ನಿಮಗೆ ಸತ್ಯವಾಗಿ ಹೇಳುತ್ತೇನೆ,ಯಾವನಾದರೂ ಈ ಬೆಟ್ಟಕ್ಕೆ - ನೀನು ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ ಬೀಳು ಎಂದು ಹೇಳಿ ತನ್ನ ಮನಸ್ಸಿನಲ್ಲಿ ಸಂಶಯಪಡದೆ ತಾನು ಹೇಳಿದ್ದು ಆಗುವದೆಂದು ನಂಬಿದರೆ ಅವನು ಹೇಳಿದಂತೆಯೇ ಆಗುವದು.
*(ಮಾರ್ಕ 11:23)*

**ಆಶಿಷ್ ರಾಯ್‌ಚೂರ್**

**ಉಚಿತವಾದ ಹಂಚಿಕೆಗಾಗಿ ಮಾತ್ರ**
ಮುದ್ರಣ ಮತ್ತು ಹಂಚಿಕೆ: ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್, ಬೆಂಗಳೂರು
ಪ್ರಸ್ತುತ ಪ್ರತಿ: 2024

**ಸಂಪರ್ಕ ಮಾಹಿತಿ**
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

ದೂರವಾಣಿ: + 91-80-25452617
ಇಮೇಲ್: **bookrequest@apcwo.org**
ವೆಬ್ಸೈಟ್: **apcwo.org**

ಬೇರೆ ರೀತಿಯಲ್ಲಿ ಸೂಚಿಸಿದ ಹೊರತು, ಎಲ್ಲಾ ಧರ್ಮಗ್ರಂಥದ ಉಲ್ಲೇಖಗಳನ್ನು ಕನ್ನಡ ಸತ್ಯವೇದವು - ಜೆ.ವಿ - ಬಿ ಎಸ್ ಐ, ಆವೃತ್ತಿಯಿಂದ ತೆಗೆದುಕೊಳ್ಳಲಾಗಿದೆ. ಬೈಬಲ್ ಸೊಸೈಟಿ ಆಫ್ ಇಂಡಿಯಾದ(BSI) ಅನುಮತಿಯಿಂದ ಬಳಸಲಾಗಿದೆ.

**ಉಚಿತ ವಿತರಣೆಗಾಗಿ**
ಈ ಪುಸ್ತಕದ ಉಚಿತ ವಿವರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ಆಲ್ ಪೀಪಲ್ಸ್ ಸಭೆಯೊಟ್ಟಿಗೆ ಪಾಲುದಾರರಾಗಲೂ **apcwo.org/give** ಅಥವಾ ಈ ಪುಸ್ತಕದ ಹಿಂಭಾಗದ ಪುಟಗಳಲ್ಲಿರುವ "ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ" ಎಂಬ ಪುಟವನ್ನು ಹೇಗೆ ಸಹಾಯ ಮಾಡಬಹುದೆಂಬುದನ್ನು ನೋಡಿರಿ. ವಂದನೆಗಳು!

**ಉಚಿತ ಸಂಪನ್ಮೂಲಗಳು ಮತ್ತು ಸಂಬಂಧಿತ ವೆಬ್‌ಸೈಟ್‌ಗಳು**
**ಪ್ರಸಂಗಗಳು:** apcwo.org/sermons | **ಪುಸ್ತಕಗಳು:** apcwo.org/books
**ಚರ್ಚ್ ಆಪ್:** apcwo.org/app | **ಸತ್ಯವೇದ ಕಾಲೇಜು:** apcbiblecollege.org
**ಇ-ಕಲಿಕೆ:** apcbiblecollege.org/elearn | **ಸಲಹಾ ಸೇವೆ:** chrysalislife.org
**ಸಂಗೀತ:** apcmusic.org | **ಸೇವಕರುಗಳ ಅನ್ಯೋನ್ಯತೆ:** pamfi.org
**ಏಪಿಸಿ ಪ್ರಪಂಚ ಸೇವೆಗಳು:** apcworldmissions.org

(Kannada – Speak Your Faith)

# ನಿಮ್ಮ ನಂಬಿಕೆಯನ್ನು ಮಾತನಾಡಿ

ನಿಮಗೆ ಸತ್ಯವಾಗಿ ಹೇಳುತ್ತೇನೆ,ಯಾವನಾದರೂ ಈ ಬೆಟ್ಟಕ್ಕೆ - ನೀನು ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ ಬೀಳು ಎಂದು ಹೇಳಿ ತನ್ನ ಮನಸ್ಸಿನಲ್ಲಿ ಸಂಶಯಪಡದೆ ತಾನು ಹೇಳಿದ್ದು ಆಗುವದೆಂದು ನಂಬಿದರೆ ಅವನು ಹೇಳಿದಂತೆಯೇ ಆಗುವದು.

*(ಮಾರ್ಕ 11:23)*

*ಯೇಸು ಹೇಳಿದ್ದೇನಂದರೆ - ನಿಮಗೆ ದೇವರಲ್ಲಿ ನಂಬಿಕೆಯಿರಲಿ.*
*ನಿಮಗೆ ಸತ್ಯವಾಗಿ ಹೇಳುತ್ತೇನೆ, ಯಾವನಾದರೂ ಈ ಬೆಟ್ಟಕ್ಕೆ - ನೀನು*
*ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ ಬೀಳು ಎಂದು ಹೇಳಿ ತನ್ನ ಮನಸ್ಸಿನಲ್ಲಿ*
*ಸಂಶಯಪಡದೆ ತಾನು ಹೇಳಿದ್ದು ಆಗುವದೆಂದು ನಂಬಿದರೆ ಅವನು*
*ಹೇಳಿದಂತೆಯೇ ಆಗುವದು.*

**(ಮಾರ್ಕ 11:22,23)**

# ನೈಸೀನ ಮತ ( ಕ್ರೀಡ್)

ನೈಸೀನ್ ಮತ ಎಂಬುದು ಪವಿತ್ರ ವಾಕ್ಯಗಳ ಆಧಾರದ ಮೇಲೆ ಕ್ರೈಸ್ತ ನಂಬಿಕೆಯ ಮಹಾನ್ ಸಿದ್ಧಾಂತಗಳ ಬಗ್ಗೆ ಇಡೀ ಸಭೆ ಏನು ನಂಬುತ್ತದೆ ಎಂಬುದರ ಘೋಷಣೆಯಾಗಿದೆ. ಇದನ್ನು ಮೊದಲು ಕ್ರಿ.ಶ. 325 ರಲ್ಲಿ ಕೌನ್ಸಿಲ್ ಆಫ್ ನೈಸಿಯಾದಲ್ಲಿ ಬಿಷಪ್‌ಗಳ ಸಭೆಯಿಂದ ಅಂಗೀಕರಿಸಲಾಯಿತು ಮತ್ತು ಶತಮಾನಗಳಿಂದಲೂ ನಂಬಿಕೆಯ ಧೈರ್ಯದ ತಪ್ಪೊಪ್ಪಿಗೆಯಾಗಿ ಬಳಸಲ್ಪಟ್ಟಿದೆ. “ಕ್ರೀಡ್” ಎಂಬ ಪದವು ಲ್ಯಾಟಿನ್ ಪದ *‘ಕ್ರೆಡೋ’* ನಿಂದ ಬಂದಿದೆ, ಅಂದರೆ “ನಾನು ವಿಶ್ವಾಸವಿಡುತ್ತೇನೆ ಮತ್ತು ನಂಬಿಕೆಯಿಡುತ್ತೇನೆ.”

ಪರಲೋಕ ಭೂಲೋಕಗಳನ್ನು ಸೃಷ್ಟಿಸಿದ
ಸರ್ವಶಕ್ತನಾಗಿರುವ ತಂದೆಯಾದ
ದೇವರನ್ನು ನಂಬುತ್ತೇನೆ.

ನಾವು ಒಬ್ಬ ದೇವರನ್ನು ನಂಬುತ್ತೇವೆ, ಯೇಸು ಕ್ರಿಸ್ತನು,
ದೇವರ ಏಕೈಕ ಪುತ್ರ, ಶಾಶ್ವತವಾಗಿ ತಂದೆಯಿಂದ ದೇವರು ಹುಟ್ಟಿದಾತನು,
ದೇವರಿಂದ ಬಂದ ದೇವರು, ಬೆಳಕಿನಿಂದ ಬೆಳಕು,
ನಿಜವಾದ ದೇವರಿಂದ ನಿಜವಾದ ದೇವರು ಹುಟ್ಟಿದವನು,
ಮಾಡಲ್ಪಟ್ಟವನಲ್ಲ , ತಂದೆಯೊಂದಿಗೆ ಒಬ್ಬನಾಗಿ;
ಅವನ ಮೂಲಕ ಎಲ್ಲಾ ಕೆಲಸಗಳನ್ನು ಮಾಡಲಾಯಿತು.

ನಮಗಾಗಿ ಮತ್ತು ನಮ್ಮ ರಕ್ಷಣೆಗಾಗಿ ಆತನು ಪರಲೋಕದಿಂದ ಇಳಿದು ಬಂದನು,
ಈತನು ಪರಿಶುದ್ಧಾತ್ಮನಿಂದ ಕನ್ಯಾಮರಿಯಳ ಗರ್ಭದಲ್ಲಿ ಧರಿಸಲ್ಪಟ್ಟನು,
ಆಕೆಯಲ್ಲಿ ಹುಟ್ಟಿ ಪೊಂತಿಪಿಲಾತನ ಆಧಿಪತ್ಯದಲ್ಲಿ ಶ್ರಮಹೊಂದಿ,
ಶಿಲುಬೆಗೆ ಜಡಿಯಲಟ್ಟು, ಸತ್ತು ಹೂಣಲ್ಪಟ್ಟು ಪಾತಾಳಕ್ಕೆ ಇಳಿದುಹೋಗಿ,
ಮೂರನೆಯ ದಿನದಲ್ಲಿ ಸತ್ತವರೋಳಗಿಂದ ಎದ್ದು ಬಂದನು.
ಪರಲೋಕಕ್ಕೆ ಏರಿಹೋಗಿ ಅಲ್ಲಿ ಸರ್ವಶಕ್ತನಾಗಿರುವ ತಂದೆಯಾದ ದೇವರ ಬಲಪಾರ್ಶ್ವದಲ್ಲಿ ಕುಳಿತುಕೊಂಡಿರುತ್ತಾನೆ.

ಅಲ್ಲಿಂದ ತಿರುಗಿ ಬಂದು ಬದುಕಿರುವವರಿಗೂ ಸತ್ತವರಿಗೂ

ನ್ಯಾಯತಿರಿಸುವನು ಎಂಬದನ್ನು ನಂಬುತ್ತೇನೆ.

ನಾವು ಪವಿತ್ರ ಆತ್ಮನನ್ನು ನಂಬುತ್ತೇವೆ, ಕರ್ತನು, ಜೀವ ನೀಡುವವನು,
ತಂದೆ ಮತ್ತು ಮಗನಿಂದ ಮುಂದುವರಿಯುವಂತವ,
ತಂದೆ ಮತ್ತು ಮಗನೊಂದಿಗೆ ಆರಾಧಿಸಲ್ಪಡುವಂತವ ಮತ್ತು ಮಹಿಮೆಹೊಂದುವಂತವ,
ಪ್ರವಾದಿಗಳ ಮೂಲಕ ಮಾತನಾಡಿದಂತವ
ಒಂದೇ ಪರಿಶುದ್ಧ ಕ್ರೈಸ್ತಸಭೆಯೂ ಭಕ್ತರ ಅನ್ಯೋನ್ಯತೆಯೂ ನಂಬುತ್ತೇವೆ,
ಪಾಪದ ಪರಿಹಾರಕ್ಕಾಗಿ ಒಂದೇ ದೀಕ್ಷಾಸ್ನಾನವನ್ನು ನಂಬುತ್ತೇವೆ,
ದೇಹದ ಪುನರುತ್ಥಾನವೂ ನಿತ್ಯಜೀವವೂ ಉಂಟು ಎಂಬುದನ್ನು ನಂಬುತ್ತೇನೆ.
ಆಮೆನ್.

**ಗಮನಿಸಿ:** “ಕ್ಯಾಥೋಲಿಕ್” ಪದವು “ಸಂಪೂರ್ಣ” ಅಥವಾ “ಸಾರ್ವತ್ರಿಕ” ಎಂದರ್ಥ.

# ನಮ್ಮ ಘೋಷಣೆ

ದೇವರ ವಾಕ್ಯದ ಸಂದೇಶವನ್ನು ಕೇಳುವ ಮೊದಲು ನಮ್ಮ ಭಾನುವಾರದ ಆರಾಧನೆಯ ಸಮಯದಲ್ಲಿ ನಾವು ಸಾಮಾನ್ಯವಾಗಿ ಒಂದು ಸಭೆಯಾಗಿ ಇದನ್ನು ಘೋಷಿಸುತ್ತೇವೆ.

ಇದು ದೇವರ ವಾಕ್ಯ.

ಇದು ದೇವರು ನನ್ನೊಂದಿಗೆ ಮಾತನಾಡುತ್ತಿದ್ದಾನೆ.

ನಾನು ಯಾರೆಂದು ದೇವರು ಹೇಳುವಂತೆ ನಾನು.

ನಾನು ಮಾಡಬಲ್ಲೆ ಎಂದು ದೇವರು ಹೇಳುವುದನ್ನು ನಾನು ಮಾಡಬಲ್ಲೆ.

ನಾನು ದೇವರು ವಾಗ್ದಾನ ಮಾಡಿದ್ದೆಲ್ಲವೂ ಆಗುತ್ತೇನೆ.

ನಾನು ರಕ್ಷಿಸಲ್ಪಟ್ಟಿದ್ದೇನೆ, ಗುಣಮುಖನಾಗಿದ್ದೇನೆ, ಬಿಡುಗಡೆಹೊಂದಿದ್ದೇನೆ, ವಿಮೋಚನೆಗೊಂಡಿದ್ದೇನೆ.

ನಾನು ಧನ್ಯ, ಜಯಶಾಲಿ, ಸಮೃದ್ಧ, ವಿಜಯೋತ್ಸಾಹಿಯಾಗಿದ್ದೇನೆ.

ನಾನು ದೇವರ ಸೇವಕ, ಕ್ರಿಸ್ತನ ಸೇವಕ

ಮತ್ತು ಅನೇಕ ಜನರಿಗೆ ಅವರ ಆಶೀರ್ವಾದದ ಮಾರ್ಗವಾಗಿದ್ದೇನೆ.

ನಾನು ಆತನ ವಾಕ್ಯವನ್ನು ಸ್ವೀಕರಿಸುತ್ತೇನೆ, ನಾನು ಆತನ ವಾಕ್ಯವನ್ನು ನಂಬುತ್ತೇನೆ ಮತ್ತು ನಾನು ಆತನ ವಾಕ್ಯದಂತೆ ಜೀವಿಸುತ್ತೇನೆ.

ಕ್ರಿಸ್ತನು ನನ್ನ ಯಜಮಾನ, ಮತ್ತು ಆತನಿಗೆ, ನಾನು ಸಂಪೂರ್ಣ ಶರಣಾಗತಿಯಲ್ಲಿದ್ದೇನೆ.

ಯೇಸುವಿನ ಹೆಸರಿನಲ್ಲಿ. ಆಮೆನ್.

# ನನ್ನ ಜೀವನದ ಮೇಲೆ ದೇವರ ವಾಕ್ಯದ ನನ್ನ ಘೋಷಣೆ

ನಿಮ್ಮ ಜೀವನದ ವಿವಿಧ ಕ್ಷೇತ್ರಗಳಲ್ಲಿ ದೇವರ ವಾಕ್ಯದಲ್ಲಿ ನಿಮ್ಮ ನಂಬಿಕೆಯನ್ನು ನೀವು ಹೇಗೆ ಮಾತನಾಡಬಹುದು ಎಂಬುದಕ್ಕೆ ಇವುಗಳನ್ನು ಉದಾಹರಣೆಗಳಾಗಿ ನೀಡಲಾಗಿದೆ. ದೇವರ ವಾಕ್ಯವನ್ನು ಧ್ಯಾನಿಸಿ. ದೇವರ ವಾಕ್ಯವು ನಿಮ್ಮ ಹೃದಯದಲ್ಲಿ ನಂಬಿಕೆ ಹುಟ್ಟುವಂತೆ ಮಾಡಲಿ. ನಂತರ, ನಿಮ್ಮ ನಂಬಿಕೆಯನ್ನು ಹೇಳಿ.

## ಅಧಿಕಾರ ಮತ್ತು ಪ್ರಭುತ್ವ

ಯೇಸು ತನ್ನ ಹೆಸರನ್ನು ಬಳಸಲು, ಆತನ ಪರವಾಗಿ ಕಾರ್ಯನಿರ್ವಹಿಸಲು ಮತ್ತು ಆತನು ಬಯಸಿದ್ದನ್ನು ಮಾಡಲು ನನಗೆ ಹಕ್ಕನ್ನು ಕೊಟ್ಟಿದ್ದಾನೆ. ಆತನ ಹೆಸರಿನಲ್ಲಿ, ನಾನು ದೆವ್ವಗಳನ್ನು ಬಿಡಿಸುತ್ತೇನೆ ಮತ್ತು ರೋಗಿಗಳನ್ನು ಗುಣಪಡಿಸುತ್ತೇನೆ. ಶತ್ರುವಿನ ಎಲ್ಲಾ ಶಕ್ತಿಯ ಮೇಲೆ ಯೇಸು ನನಗೆ ಅಧಿಕಾರವನ್ನು ಕೊಟ್ಟಿದ್ದಾನೆ ಮತ್ತು ಯಾವುದೂ ನನ್ನನ್ನು ಯಾವುದೇ ರೀತಿಯಲ್ಲಿ ನೋಯಿಸುವುದಿಲ್ಲ. ನಾನು ಯೇಸು ಕ್ರಿಸ್ತನಲ್ಲಿ ತಂದೆಯ ಬಲಗಡೆಯಲ್ಲಿ, ಪ್ರಭುತ್ವ ಮತ್ತು ಅಧಿಕಾರದ ಸ್ಥಳದಲ್ಲಿ ಕುಳಿತಿದ್ದೇನೆ. (ಮಾರ್ಕ್ 16:17,18; ಲೂಕ 10:19; ಎಫೆಸದವರಿಗೆ 2:6)

## ಪ್ರಾರ್ಥನೆಗೆ ಉತ್ತರ

ಕರ್ತನಾದ ಯೇಸು ನಾನು ತಂದೆಯನ್ನು ಆತನ ಹೆಸರಿನಲ್ಲಿ ಏನನ್ನಾದರೂ ನಂಬಿಕೆಯಿಂದ ಕೇಳಿದರೆ, ನಾನು ಅದನ್ನು ಹೊಂದುತ್ತೇನೆ ಎಂದು ವಾಗ್ದಾನ ಮಾಡಿದ್ದಾನೆ. ನಾನು ಏನು ಕೇಳಿದರೂ, ನಾನು ಪ್ರಾರ್ಥಿಸುವಾಗ, ನಾನು ಅವುಗಳನ್ನು ಸ್ವೀಕರಿಸಿದ್ದೇನೆ ಮತ್ತು ನಾನು ಅವುಗಳನ್ನು ಹೊಂದುತ್ತೇನೆ ಎಂದು ನಾನು ನಂಬುತ್ತೇನೆ. ನಾನು ಆತನಲ್ಲಿಯೂ ಆತನ ವಾಕ್ಯವು ನನ್ನಲ್ಲಿ ನೆಲೆಗೊಂಡಿದೆ, ಮತ್ತು ನಾನು ಪ್ರಾರ್ಥನೆಯಲ್ಲಿ ಏನು ಕೇಳುತ್ತೇನೆ, ಅದು ನನಗಾಗಿ ಮಾಡಲಾಗುತ್ತದೆ. (ಯೋಹಾನ 16:23,24; ಮತ್ತಾಯ 21:22; ಮಾರ್ಕ 11:24; ಯೋಹಾನ 15:7)

### ಅಭಿಷೇಕ ಮತ್ತು ಶಕ್ತಿ

ಪವಿತ್ರಾತ್ಮನು ನನ್ನ ಮೇಲೆ ಬಂದಿದ್ದರಿಂದ ನಾನು ಶಕ್ತಿಯನ್ನು ಪಡೆದುಕೊಂಡಿದ್ದೇನೆ ಮತ್ತು ನಾನು ಯೇಸುಕ್ರಿಸ್ತನ ಸಾಕ್ಷಿಯಾಗಿದ್ದೇನೆ. ಕರ್ತನ ಆತ್ಮವು ನನ್ನ ಮೇಲಿದೆ ಮತ್ತು ಗುಣಪಡಿಸಲು, ಬಿಡುಗಡೆ ಮಾಡಲು ಮತ್ತು ಬಂದಿತರನ್ನು ಮುಕ್ತಗೊಳಿಸಲು ಆತನು ನನಗೆ ಅಧಿಕಾರ ನೀಡುತ್ತಾನೆ. ನನ್ನನ್ನು ಕರೆದಾತನು ಮತ್ತು ಅಭಿಷೇಕ ಮಾಡಿದಾತನು ದೇವರು. ನನ್ನ ಜೀವನದ ಮೇಲೆ ಪವಿತ್ರಾತ್ಮನ ಅಭಿಷೇಕವು ದೆವ್ವದ ನೊಗಗಳನ್ನು ನಾಶಪಡಿಸುತ್ತದೆ ಮತ್ತು ಜನರ ಮೇಲೆ ದೆವ್ವದ ಹೊರೆಗಳನ್ನು ತೆಗೆದುಹಾಕುತ್ತದೆ. (ಅಪೋಸ್ತಲ ಕೃತ್ಯಗಳು 1:8; ಲೂಕ 4:18,19; 2 ಕೊರಿಂಥದವರಿಗೆ 1:21; ಯೆಶಾಯ 10:27)

### ಆಶೀರ್ವಾದಗಳು

ದೇವರಿಂದ ಬರುವ ಪ್ರತಿಯೊಂದು ಆಶೀರ್ವಾದದಿಂದ ನಾನು ಆಶೀರ್ವದಿಸಲ್ಪಟ್ಟಿದ್ದೇನೆ. ದೇವರು ತನ್ನ ಜನರಿಗೆ ಇರುವ ಎಲ್ಲಾ ಆಶೀರ್ವಾದಗಳನ್ನು ನಾನು ಹಂಚಿಕೊಳ್ಳುತ್ತೇನೆ ಮತ್ತು ಆನಂದಿಸುತ್ತೇನೆ. ನಾನು ಕೈ ಹಾಕುವ ಎಲ್ಲದರಲ್ಲೂ ನಾನು ಆಶೀರ್ವದಿಸಲ್ಪಟ್ಟಿದ್ದೇನೆ. ಕರ್ತನು ನನಗೆ ಏಳಿಗೆಯನ್ನು ಕಲಿಸುತ್ತಾನೆ ಮತ್ತು ನನ್ನ ಮಾರ್ಗಗಳನ್ನು ನಿರ್ದೇಶಿಸುತ್ತಾನೆ. ನಾನು ದೇವರಿಗೆ ವಿಧೇಯನಾಗಿ ನಡೆಯುತ್ತೇನೆ, ಮತ್ತು ಆತನ ಆಶೀರ್ವಾದಗಳು ಎಂದಿಗೂ ಬತ್ತಿ ಹೋಗದ ಹೊಳೆಯಂತೆ ಹರಿಯುತ್ತವೆ. ವಿಜಯವು ಸಮುದ್ರ ತೀರದಲ್ಲಿ ಅಲೆಗಳಂತೆ ನನಗೆ ಬರುತ್ತದೆ. (ಎಫೆಸದವರಿಗೆ 1:3; ಕೊಲೊಸ್ಸೆಯವರಿಗೆ 1:12; ಧರ್ಮೋಪದೇಶಕಾಂಡ 28:6; ಯೆಶಾಯ 48:17,18)

### ಧೈರ್ಯ ಮತ್ತು ಆತ್ಮವಿಶ್ವಾಸ

ನಾನು ಸ್ಥಿರಚಿತ್ತ ಮತ್ತು ಧೈರ್ಯದಿಂದಿದ್ದೇನೆ ಧೈರ್ಯಶಾಲಿ. ನಾನು ಸಿಂಹದಂತೆ ಧೈರ್ಯಶಾಲಿ. ದೇವರು ನನಗೆ ಕೊಟ್ಟಿರುವ ಆತ್ಮವು ಬಲ ಪ್ರೀತಿ ಶಿಕ್ಷಣಗಳ ಆತ್ಮವೇ ಹೊರತು ಹೇಡಿತನದ ಆತ್ಮವಲ್ಲ. ಕರ್ತನು ನನ್ನ ವಿಶ್ವಾಸ ಮತ್ತು ಭದ್ರತೆ. (ಯೆಹೋಶುವ 1:9; ಜ್ಞಾನೋಕ್ತಿಗಳು 28:1; 2 ತಿಮೊಥೆಯನಿಗೆ 1:7; ಜ್ಞಾನೋಕ್ತಿಗಳು 14:26)

## ವೀರಕೃತ್ಯಗಳು

ನನ್ನ ದೇವರನ್ನು ನಾನು ಅರಿತಿರುವೆ. ನಾನು ಬಲಶಾಲಿಯಾಗಿದ್ದೇನೆ ಮತ್ತು ದೇವರ ರಾಜ್ಯಕ್ಕಾಗಿ ನಾನು ವೀರಕೃತ್ಯಗಳನ್ನು ಮಾಡುತ್ತೇನೆ. ನನ್ನಲ್ಲಿ ಕೆಲಸ ಮಾಡುತ್ತಿರುವ ಆತನ ಶಕ್ತಿಯಿಂದ ನಾನು ಕೇಳಬಹುದಾದ ಅಥವಾ ಯೋಚಿಸುವ ಎಲ್ಲವನ್ನೂ ಮೀರಿ ವಿಷಯಗಳನ್ನು ಸಾಧಿಸಲು ದೇವರು ನನ್ನಲ್ಲಿ ಮತ್ತು ನನ್ನ ಮೂಲಕ ಕೆಲಸ ಮಾಡುತ್ತಾನೆ. (ದಾನಿಯೇಲ 11:32; ಎಫೆಸದವರಿಗೆ 3:20)

## ಭವಿಷ್ಯ

ದೇವರು ನನಗಾಗಿ ಹೊಂದಿರುವ ಯೋಜನೆಗಳನ್ನು ತಿಳಿದಿದ್ದಾನೆ, ನನ್ನ ಗತಿಯಾಗಲಿ, ನನಗೆ ನಿರೀಕ್ಷೆಯ ಪೂರ್ಣ ಭವಿಷ್ಯವನ್ನು ನೀಡಲು ಯೋಜನೆಗಳನ್ನು ಮಾಡುತ್ತಾನೆ. ದೇವರು ತಾನು ಬಯಸುವಂತೆ ನಾನು ಮಾಡಬೇಕಾದ ವಿಷಯಗಳನ್ನು ಯೋಜಿಸಿದ್ದಾನೆ ಮತ್ತು ನಾನು ಅವುಗಳಲ್ಲಿ ನಡೆಯುತ್ತಿದ್ದೇನೆ. ಎಲ್ಲಾ ವಿಷಯಗಳು ನನ್ನ ಒಳಿತಿಗಾಗಿ ಒಟ್ಟಾಗಿ ಕೆಲಸ ಮಾಡುತ್ತಿವೆ ಏಕೆಂದರೆ ನಾನು ಆತನ ಉದ್ದೇಶಗಳಿಗಾಗಿ ಕರೆಯಲ್ಪಟ್ಟಿದ್ದೇನೆ. ನಾನು ದೇವರನ್ನು ಪ್ರೀತಿಸುವದರಿಂದ ಆತನು ನನಗಾಗಿ ಸಿದ್ಧಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ. (ಯೆರೆಮೀಯ 29:11; ಎಫೆಸದವರಿಗೆ 2:10; ರೋಮಾಪುರದವರಿಗೆ 8:28; 1 ಕೊರಿಂಥದವರಿಗೆ 2:9)

## ಕುಟುಂಬ, ಮನೆ ಮತ್ತು ಮಕ್ಕಳು

ದೇವರು ನನ್ನ ಮನೆಯನ್ನು ಆಶೀರ್ವದಿಸಿದ್ದಾನೆ. ಉಲ್ಲಾಸ ಧ್ವನಿ ಮತ್ತು ರಕ್ಷಣೆ ನನ್ನ ಮನೆಯನ್ನು ತುಂಬುತ್ತದೆ. ನನ್ನ ಮನೆ ಸಮಾಧಾನ ಮತ್ತು ಶಾಂತ ಸ್ಥಳವಾಗಿದೆ, ನಿರ್ಭಯ ಸ್ಥಳವಾಗಿದೆ ಮತ್ತು ಚಿಂತೆಗಳಿಂದ ಮುಕ್ತವಾಗಿದೆ. ದೇವರು ನನ್ನ ಮಕ್ಕಳ ಮೇಲೆ ತನ್ನ ಆತ್ಮವನ್ನು ಮತ್ತು ಆತನ ಆಶೀರ್ವಾದವನ್ನು ಸುರಿಯುತ್ತಾನೆ. ನನ್ನ ಎಲ್ಲಾ ಮಕ್ಕಳು ಕರ್ತನಿಂದ ಶಿಕ್ಷಿತರಾಗಿದ್ದಾರೆ ಮತ್ತು ಅವರು ಅಧಿಕ ಸುಕ್ಷೇಮವನ್ನು ಹೊಂದಿದ್ದಾರೆ. (ಜ್ಞಾನೋಕ್ತಿಗಳು 3:33; ಕೀರ್ತನೆಗಳು 118:15; ಯೆಶಾಯ 32:18; ಯೆಶಾಯ 44:3; ಯೆಶಾಯ 54:13)

## ನಂಬಿಕೆ

ದೇವರು ನನಗೆ ನಂಬಿಕೆಯ ಅಳತೆಯನ್ನು ಕೊಟ್ಟಿದ್ದಾನೆ. ನಾನು ನೋಡುವವರಾಗಿ ನಡೆಯದೆ ನಂಬುವವನಾಗಿಯೇ ನಡೆಯುತ್ತೇನೆ. ನಾನು ನಂಬುತ್ತೇನೆ ಮತ್ತು ನಾನು ದೇವರ ಮಹಿಮೆಯನ್ನು ಕಾಣುತ್ತೇನೆ. ನನ್ನ ಹೃದಯದಲ್ಲಿ ನಂಬಿಕೆಯಿಂದ, ನಾನು ಬೆಟ್ಟಕ್ಕೆ–ಇಲ್ಲಿಂದ ಅಲ್ಲಿಗೆ ಹೋಗು ಎಂದು ಹೇಳಿದರೂ ಅದು ಹೋಗುವದು ಮತ್ತು ನನಗೆ ಯಾವುದೂ ಅಸಾಧ್ಯವಲ್ಲ. (ರೋಮಾಪುರದವರಿಗೆ 12:3; 2 ಕೊರಿಂಥದವರಿಗೆ 5:7; ಯೋಹಾನ 11:40; ಮತ್ತಾಯ 17:20)

## ದಯ ಮತ್ತು ಸಂಬಂಧಗಳು

ದೇವರ ದಯವು ನನ್ನನ್ನು ಗುರಾಣಿಯಂತೆ ಸುತ್ತುವರೆದಿದೆ. ದೇವರು ನನಗೆ ಗೌರವ ಮತ್ತು ಹೆಚ್ಚಿನ ಮಾನವನ್ನು ನೀಡುತ್ತಾನೆ . ನಾನು ಪ್ರೀತಿಸತ್ಯತೆಗಳಲ್ಲಿ ನಡೆಯುತ್ತೇನೆ ಮತ್ತು ನನ್ನ ಸುತ್ತಮುತ್ತಲಿನವರಿಂದ ನಾನು ದಯೆ ಮತ್ತು ಸಮ್ಮತಿಯನ್ನು ಪಡೆದಿದ್ದೇನೆ . ದೇವರು ನನ್ನ ಶತ್ರುಗಳನ್ನು ಸಹ ನನ್ನೊಂದಿಗೆ ಸಮಾಧಾನದಿಂದ ಇರುವಂತೆ ಮಾಡುತ್ತಾನೆ. ಕರ್ತನನ್ನು ಪ್ರೀತಿಸುವವರು ನನ್ನನ್ನು ನೋಡಿದಾಗ ಸಂತೋಷಪಡುತ್ತಾರೆ ಏಕೆಂದರೆ ನಾನು ಕರ್ತನನ್ನು ಗೌರವಿಸುತ್ತೇನೆ. (ಕೀರ್ತನೆಗಳು 5:12; ಜ್ಞಾನೋಕ್ತಿಗಳು 22:4; ಜ್ಞಾನೋಕ್ತಿಗಳು 3:3,4; ಜ್ಞಾನೋಕ್ತಿಗಳು 16:7; ಕೀರ್ತನೆಗಳು 119:74)

## ಮಾರ್ಗದರ್ಶನ

ಪವಿತ್ರಾತ್ಮನು ನನ್ನನ್ನು ಎಲ್ಲಾ ಸತ್ಯಕ್ಕೆ ನಡೆಸುತ್ತಾನೆ ಮತ್ತು ಮಾರ್ಗದರ್ಶನ ನೀಡುತ್ತಾನೆ. ಕರ್ತನು ನನಗೆ ಉಪದೇಶಿಸಿ ನಡೆಯ ಬೇಕಾದ ಮಾರ್ಗವನ್ನು ತಿಳಿಸುತ್ತಾನೆ. ಆತನು ತನ್ನ ಕಾವಲು ಕಣ್ಣಿನಿಂದ ನನಗೆ ಮಾರ್ಗದರ್ಶನ ನೀಡುತ್ತಾನೆ. ನನ್ನ ಹೆಜ್ಜೆಗಳನ್ನು ದೇವರು ಆದೇಶಿಸುತ್ತಾನೆ ಏಕೆಂದರೆ ಆತನು ನನ್ನ ಮಾರ್ಗಗಳಲ್ಲಿ ಸಂತೋಷಪಡುತ್ತಾನೆ. ನಾನು ಕೆಳಗೆ ಬಿದ್ದರೂ, ಆತನು ನನ್ನನ್ನು ಎತ್ತಿಹಿಡಿದು ಮತ್ತೆ ಮೇಲಕ್ಕೆ ತರುತ್ತಾನೆ. ದೇವರ ವಾಕ್ಯವು ನನಗೆ ಮಾರ್ಗದರ್ಶನ ಮಾಡಲು ದೀಪವಾಗಿದೆ ಮತ್ತು ನನ್ನ ಮಾರ್ಗಕ್ಕೆ ಬೆಳಕು. ನಾನು ಆತನ ವಾಕ್ಯವನ್ನು ಅನುಸರಿಸುತ್ತೇನೆ. (ಯೋಹಾನ 16:13; ಕೀರ್ತನೆಗಳು 32:8; ಕೀರ್ತನೆಗಳು 37:23,24; ಕೀರ್ತನೆಗಳು 119:105)

## ಆರೋಗ್ಯ ಮತ್ತು ಸ್ವಸ್ತತೆ

ಕರ್ತನಾದ ಯೇಸುವೇ ನನ್ನ ಎಲ್ಲಾ ಕಾಯಿಲೆಗಳನ್ನು ಮತ್ತು ರೋಗಗಳನ್ನು ಶಿಲುಬೆಯ ಮೇಲೆ ತೆಗೆದುಕೊಂಡನು. ಯೇಸು ಶಿಲುಬೆಯಲ್ಲಿ ನನಗಾಗಿ ಹೊಂದಿದ ಗಾಯಗಳಿಂದ ನಾನು ವಾಸಿಯಾಗಿದ್ದೇನೆ. ನನ್ನ ದೇವರು ನನ್ನನ್ನು ವಾಸಿಮಾಡುವ ಕರ್ತನು. ಕರ್ತನು ನನ್ನ ಆಹಾರ ಮತ್ತು ಪಾನೀಯವನ್ನು ಆಶೀರ್ವದಿಸುತ್ತಾನೆ ಮತ್ತು ನನ್ನಿಂದ ಎಲ್ಲಾ ಕಾಯಿಲೆಗಳನ್ನು ತೆಗೆದುಹಾಕುತ್ತಾನೆ. ಆತನು ನನ್ನ ಎಲ್ಲಾ ಪಾಪಗಳನ್ನು ಕ್ಷಮಿಸುತ್ತಾನೆ ಮತ್ತು ನನ್ನ ಎಲ್ಲಾ ರೋಗಗಳನ್ನು ಗುಣಪಡಿಸುತ್ತಾನೆ. (ಮತ್ತಾಯ 8:17; 1 ಪೇತ್ರನು 2:24; ವಿಮೋಚನಕಾಂಡ 15:26; ವಿಮೋಚನಕಾಂಡ 23:25; ಕೀರ್ತನೆಗಳು 103:3)

## ಸಂತೋಷ

ಕರ್ತನ ಆತ್ಮವು ನನ್ನನ್ನು ಸಂತೋಷದಿಂದ ತುಂಬಿಸುತ್ತದೆ. ನಾನು ನೀತಿಯನ್ನು ಪ್ರೀತಿಸುತ್ತೇನೆ ಮತ್ತು ದುಷ್ಟತನವನ್ನು ದ್ವೇಷಿಸುತ್ತೇನೆ ಮತ್ತು ಆದ್ದರಿಂದ ದೇವರು ನನ್ನನ್ನು ಸಂತೋಷ ಮತ್ತು ಆನಂದದಿಂದ ಅಭಿಷೇಕಿಸಿದ್ದಾನೆ. ಕರ್ತನ ಸಂತೋಷವು ನನಗೆ ಶಕ್ತಿ ನೀಡುತ್ತದೆ ಮತ್ತು ಬಲದಿಂದ ತುಂಬುತ್ತದೆ. ನಿರೀಕ್ಷೆಯ ದೇವರು ನನ್ನನ್ನು ಸಂತೋಷ ಮತ್ತು ಸಮಾಧಾನದಿಂದ ತುಂಬುತ್ತಾನೆ. ನಾನು ಪವಿತ್ರಾತ್ಮನಲ್ಲಿ ನೀತಿವಂತಿಕೆ, ಸಮಾಧಾನ ಮತ್ತು ಸಂತೋಷದಲ್ಲಿ ನಡೆಯುತ್ತೇನೆ. (ಗಲಾತ್ಯದವರಿಗೆ 5:22; ಕೀರ್ತನೆಗಳು 45:7; ನೆಹೆಮೀಯ 8:10; ರೋಮಾಪುರದವರಿಗೆ 15:13; ರೋಮಾಪುರದವರಿಗೆ 14:17)

## ಸಮರ್ಥನೆ ಮತ್ತು ನೀತಿವಂತ

ಕ್ರಿಸ್ತನಲ್ಲಿ ನಂಬಿಕೆಯ ಮೂಲಕ ನಾನು ದೇವರ ದೃಷ್ಟಿಯಲ್ಲಿ ಸಮರ್ಥಿಸಲ್ಪಟ್ಟಿದ್ದೇನೆ. ಆತನ ದೃಷ್ಟಿಯಲ್ಲಿ, ನಾನು "ನಾನು-ಎಂದಿಗೂ-ಪಾಪ ಮಾಡಿಲ್ಲ" ಏಕೆಂದರೆ ಯೇಸುಕ್ರಿಸ್ತನ ರಕ್ತವು ಎಲ್ಲಾ ಪಾಪಗಳಿಂದ ನನ್ನನ್ನು ತೊಳೆದಿದೆ. ನಾನು ಆತನ ನೀತಿಯನ್ನು ಧರಿಸಿದ್ದೇನೆ ಮತ್ತು ನಾನು ಯಾವುದೇ ಖಂಡನೆ ಇಲ್ಲದೆ ವಿಶ್ವಾಸ ಮತ್ತು ಭರವಸೆಯೊಂದಿಗೆ ದೇವರ ಮುಂದೆ ನಿಲ್ಲುತ್ತೇನೆ. ನಾನು ಆತನ ಮಗು ಎಂದು ಪವಿತ್ರಾತ್ಮನು ನನಗೆ ಭರವಸೆಯನ್ನು ತುಂಬುತ್ತಾನೆ ಮತ್ತು ನಾನು ಆತನನ್ನು "ಅಪ್ಪಾ, ತಂದೆ"

ಎಂದು ಕರೆಯುತ್ತೇನೆ. (ರೋಮಾಪುರದವರಿಗೆ 3:22; 1 ಯೋಹಾನ 1:7; 2 ಕೊರಿಂಥದವರಿಗೆ 5:21; ರೋಮಾಪುರದವರಿಗೆ 8:1,15)

## ಪ್ರೀತಿ

ದೇವರ ಆತ್ಮನು ದೇವರ ಪ್ರೀತಿಯನ್ನು ನನ್ನ ಹೃದಯದಲ್ಲಿ ಸುರಿದಿದ್ದಾನೆ. ದೇವರ ಪ್ರೀತಿಯಿಂದ ಜನರನ್ನು ಪ್ರೀತಿಸಲು ನಾನು ಅಧಿಕಾರ ಹೊಂದಿದ್ದೇನೆ. ನನ್ನಲ್ಲಿರುವ ದೇವರ ಪ್ರೀತಿಯು ನನ್ನನ್ನು ತಾಳ್ಮೆ ಮತ್ತು ದಯೆಯಿಂದ ಇರುವಂತೆಮಾಡುತ್ತದೆ ಮತ್ತು ಹೊಟ್ಟೆಕಿಚ್ಚುಪಡುವದಿಲ್ಲ, ಹೊಗಳಿಕೊಳ್ಳುವದಿಲ್ಲ, ಮರ್ಯಾದೆಗೆಟ್ಟು ನಡೆಯುವದಿಲ್ಲ, ಸ್ವಪ್ರಯೋಜನವನ್ನು ಚಿಂತಿಸುವದಿಲ್ಲ, ಸಿಟ್ಟುಗೋಳ್ಳುವದಿಲ್ಲ. ಅಪಕಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವದಿಲ್ಲ. (ರೋಮಾಪುರದವರಿಗೆ 5:5; 1 ಕೊರಿಂಥದವರಿಗೆ 13:4,5)

## ದೀರ್ಘಾಯುಷ್ಯ

ದೇವರು ನನ್ನನ್ನು ದೀರ್ಘಾಯುಷ್ಯದಿಂದ ತೃಪ್ತಿಪಡಿಸುತ್ತಾನೆ. ಕರ್ತನು ನನ್ನ ಜೀವನವನ್ನು ಒಳ್ಳೆಯ ಸಂಗತಿಗಳಿಂದ ತುಂಬಿಸುತ್ತಾನೆ, ಇದರಿಂದ ನಾನು ಹದ್ದಿನಂತೆ ಯೌವನ ಮತ್ತು ಬಲವಾಗಿ ಉಳಿಯುತ್ತೇನೆ. (ಕೀರ್ತನೆಗಳು 91:16; ವಿಮೋಚನಕಾಂಡ 23:26; ಕೀರ್ತನೆಗಳು 103:5)

## ಮನಸ್ಸು ಮತ್ತು ಆಲೋಚನೆಗಳು

ನನ್ನ ಮನಸ್ಸು ಪವಿತ್ರ ಭೂಮಿ. ನನ್ನ ಮನಸ್ಸಿನಲ್ಲಿ ಸತ್ಯವು, ಮಾನ್ಯವು, ನ್ಯಾಯವು, ಶುದ್ಧವು, ಪ್ರೀತಿಕರವು, ಮನೋಹರವು, ಸದ್ಗುಣವಾದದ್ದು, ಕೀರ್ತಿಗೆ ಯೋಗ್ಯವಾದದ್ದನ್ನು ಮಾತ್ರ ನಾನು ಅನುಮತಿಸುತ್ತೇನೆ. ನನಗೆ ಸ್ವಸ್ಥ ಮನಸ್ಸು, ಸ್ವಸ್ಥ ಸ್ಮರಣೆ, ಸ್ವಸ್ಥ ಏಕಾಗ್ರತೆ ಮತ್ತು ಸ್ವಸ್ಥ ತಿಳುವಳಿಕೆ ಇದೆ. ನಾನು ನನ್ನ ಆಲೋಚನೆಗಳು, ಭಾವನೆಗಳು ಮತ್ತು ಆಸೆಗಳನ್ನು ದೇವರಿಗೆ ಅರ್ಪಿಸುತ್ತೇನೆ ಮತ್ತು ಪ್ರತಿ ಆಲೋಚನೆಯನ್ನು ಕ್ರಿಸ್ತನ ವಿಧೇಯತೆಗೆ ತರುತ್ತೇನೆ. (ಫಿಲಿಪ್ಪಿಯವರಿಗೆ 4:8; 2 ತಿಮೊಥೆಯನಿಗೆ 1:7; 2 ಕೊರಿಂಥದವರಿಗೆ 10:4,5)

## ಜಗತ್ತು ಮತ್ತು ಶರೀರಭಾವದ ಅಭಿಲಾಷೆಯನ್ನು ಜಯಿಸುವುದು

ನಾನು ದೇವರಿಂದ ಹುಟ್ಟಿದ್ದೇನೆ ಮತ್ತು ನಾನು ಜಗತ್ತನ್ನು ಮತ್ತು ಅದರಲ್ಲಿರುವ ಎಲ್ಲವನ್ನೂ ಜಯಿಸುತ್ತೇನೆ. ನಾನು ಪಾಪದ ಶರೀರಭಾವದ ಅಭಿಲಾಷೆಯನ್ನು,

ಕಣ್ಣುಗಳ ಕಡುಬಯಕೆಗಳನ್ನು ಮತ್ತು ಹೆಮ್ಮೆಯನ್ನು ಜಯಿಸುತ್ತೇನೆ. ನಾನು ದೇವರ ದೈವಿಕ ಸ್ವಭಾವದಲ್ಲಿ ಪಾಲು ಹೊಂದಿದ್ದೇನೆ ಮತ್ತು ಜಗತ್ತಿನಲ್ಲಿ ಇರುವ ನೈತಿಕ ಕೊಳೆತದಿಂದ ನಾನು ದೂರವಿರುತ್ತೇನೆ. ಪವಿತ್ರಾತ್ಮನ ಶಕ್ತಿಯಿಂದ, ನಾನು ನನ್ನ ದೇಹದ ಎಲ್ಲಾ ಪಾಪ ಕಾರ್ಯಗಳನ್ನು ಕೊನೆಗೊಳಿಸುತ್ತೇನೆ. ನಾನು ಆತ್ಮನಲ್ಲಿ ನಡೆಯುತ್ತೇನೆ ಮತ್ತು ನನ್ನ ದೇಹದ ಪಾಪದ ಆಸೆಗಳಿಗೆ ನಾನು ಮಣಿಯುವುದಿಲ್ಲ. (1 ಯೋಹಾನ 5:4; 2 ಪೇತ್ರನು 1:3,4; ರೋಮಾಪುರದವರಿಗೆ 8:13; ಗಲಾತ್ಯದವರಿಗೆ 5:16)

## ಸಮಾಧಾನ, ಶಾಂತತೆ ಮತ್ತು ವಿಶ್ರಾಂತಿ

ನಾನು ನನ್ನ ಎಲ್ಲಾ ಕಾಳಜಿಗಳನ್ನು ಕರ್ತನ ಮುಂದೆ ಇಡುತ್ತೇನೆ ಮತ್ತು ಮಾನವ ತಿಳುವಳಿಕೆಯನ್ನು ಮೀರಿದ ದೇವರ ಶಾಂತಿ ನನ್ನ ಹೃದಯ ಮತ್ತು ಮನಸ್ಸನ್ನು ತುಂಬುತ್ತದೆ. ನಾನು ಶಾಂತತೆ ಮತ್ತು ಆತ್ಮವಿಶ್ವಾಸದಿಂದ ನಡೆಯಲು ಆಯ್ಕೆ ಮಾಡುತ್ತೇನೆ ಮತ್ತು ಇದು ನನಗೆ ಶಕ್ತಿಯನ್ನು ತುಂಬುತ್ತದೆ. ಕರ್ತನು ನನಗೆ ಕೊಡುವ ವಿಶ್ರಾಂತಿಯಲ್ಲಿ ನಾನು ನಡೆಯುತ್ತೇನೆ. (1 ಪೇತ್ರನು 5:7; ಫಿಲಿಪ್ಪಿಯವರಿಗೆ 4:7; ಯೆಶಾಯ 30:15; ಮತ್ತಾಯ 11:28,29)

## ರಕ್ತದ ಶಕ್ತಿ

ಯೇಸುವಿನ ರಕ್ತವು ನನ್ನನ್ನು ಕೊಂಡುಕೊಂಡಿದೆ ಮತ್ತು ವಿಮೋಚನೆಗೊಳಿಸಿದೆ, ಎಲ್ಲಾ ಪಾಪಗಳಿಂದ ನನ್ನನ್ನು ಶುದ್ಧೀಕರಿಸಿದೆ, ನನ್ನನ್ನು ಪವಿತ್ರಗೊಳಿಸಿದೆ, ನನ್ನನ್ನು ಸಮರ್ಥಿಸಿದೆ, ನನ್ನನ್ನು ದೇವರ ಬಳಿಗೆ ಕರೆತಂದಿದೆ ಮತ್ತು ದೇವರ ಅತ್ಯಂತ ಪವಿತ್ರ ಉಪಸ್ಥಿತಿಯನ್ನು ಪ್ರವೇಶಿಸಲು ನನಗೆ ಧೈರ್ಯವನ್ನು ನೀಡಿದೆ. ಯೇಸುವಿನ ರಕ್ತದ ಹೊದಿಕೆಯಲ್ಲಿ ನಾನು ರಕ್ಷಿಸಲ್ಪಟ್ಟಿದ್ದೇನೆ. ನಾನು ಯೇಸುವಿನ ರಕ್ತದ ಮೂಲಕ ದೇವರೊಂದಿಗೆ ಒಡಂಬಡಿಕೆಯಲ್ಲಿದ್ದೇನೆ. ಆ ರಕ್ತವು ನನ್ನ ಪೂರ್ವಜರ ತಪ್ಪು ಮಾರ್ಗಗಳಿಂದ ನನ್ನನ್ನು ಮುಕ್ತಗೊಳಿಸಿದೆ. ನಾನು ಯೇಸುವಿನ ರಕ್ತದಿಂದ ಶತ್ರುವನ್ನು ಜಯಿಸುತ್ತೇನೆ. (ಅಪೊಸ್ತಲರ ಕೃತ್ಯಗಳು 20:28; ಎಫೆಸದವರಿಗೆ 1:7; 1 ಯೋಹಾನ 1:7; ಇಬ್ರಿಯರಿಗೆ 13:12; ವಿಮೋಚನಕಾಂಡ 12:13; 1 ಪೇತ್ರನು 1:18-20; ಪ್ರಕಟನೆ 12:11)

## ಸಮೃದ್ಧಿ ಮತ್ತು ಯಶಸ್ಸು

ನಾನು ನೀರಿನ ಕಾಲುವೆಗಳ ಬಳಿಯಲ್ಲಿ ಬೆಳೆದಿರುವ ಮರದಂತೆ ಇರುವೆನು.

ನಾನು ಅದರ ಋತುವಿನಲ್ಲಿ ನನ್ನ ಹಣ್ಣುಗಳನ್ನು ಹೊರತರುತ್ತೇನೆ. ನನ್ನ ಎಲೆ ಬಾಡುವದೆ ಇಲ್ಲ ಮತ್ತು ನಾನು ಏನು ಮಾಡಿದರೂ ಅದು ಸಮೃದ್ಧವಾಗಿದೆ. ನನ್ನ ಕೈಗಳ ಎಲ್ಲಾ ಕೆಲಸಗಳಲ್ಲಿ ನಾನು ಆಶೀರ್ವದಿಸಲ್ಪಟ್ಟಿದ್ದೇನೆ. ನಾನು ಕರ್ತನನ್ನು, ಆತನ ವಾಕ್ಯವನ್ನು ಮತ್ತು ಆತನ ಮಾರ್ಗಗಳನ್ನು ಹಿಂಬಾಲಿಸುತ್ತೇನೆ ಮತ್ತು ಆತನು ನನಗೆ ಏಳಿಗೆಯನ್ನುಂಟುಮಾಡುತ್ತಾನೆ ಮತ್ತು ನನಗೆ ಉತ್ತಮ ಯಶಸ್ಸನ್ನು ನೀಡುತ್ತಾನೆ. ನಾನು ದೀನಭಾವದಿಂದ ಮತ್ತು ದೇವರ ಭಯದಲ್ಲಿ ನಡೆಯುವಾಗ ಆತನು ನನಗೆ ಧನ ಮಾನ ಜೀವಗಳಿಂದ ಆಶೀರ್ವದಿಸುತ್ತಾನೆ. (ಕೀರ್ತನೆಗಳು 1:1-3; ಧರ್ಮೋಪದೇಶಕಾಂಡ 28:8; ಯೆಹೋಶುವಾ 1:8; ಜ್ಞಾನೋಕ್ತಿಗಳು 22:4)

## ರಕ್ಷಣೆ ಮತ್ತು ವಿಮೋಚನೆ

ನಾನು ಕರ್ತನನ್ನು ನನ್ನ ರಕ್ಷಕನನ್ನಾಗಿ, ಪರಮೋನ್ನತನನ್ನು ನನ್ನ ರಕ್ಷಕನನ್ನಾಗಿ ಮಾಡಿದ್ದೇನೆ. ಯಾವುದೇ ವಿಪತ್ತು ನನಗೆ ಅಪ್ಪಳಿಸುವುದಿಲ್ಲ, ನನ್ನ ಮನೆಯ ಬಳಿ ಯಾವುದೇ ಉಪದ್ರವವು ಬರುವುದಿಲ್ಲ. ಕಷ್ಟದಲ್ಲಿ ದೇವರು ನನ್ನೊಂದಿಗಿದ್ದಾನೆ. ಆತನು ನನಗೆ ಉತ್ತರಿಸುತ್ತಾನೆ ಮತ್ತು ನನ್ನನ್ನು ಕಾಪಾಡುತ್ತಾನೆ. ದೇವರ ದೂತನು ನನ್ನನ್ನು ಸುತ್ತುವರೆದು ನನ್ನನ್ನು ಬಿಡುಗಡೆ ಮಾಡುತ್ತಾನೆ. ನನ್ನ ವಿರುದ್ಧ ರೂಪಿಸಿದ ಯಾವ ಆಯುಧವೂ ನನ್ನನ್ನು ನೋಯಿಸಲಾರದು. ದೇವರು ನನ್ನನ್ನು ರಕ್ಷಿಸುತ್ತಾನೆ ಮತ್ತು ನನಗೆ ಜಯವನ್ನು ನೀಡುತ್ತಾನೆ. ನನ್ನ ವಿರುದ್ಧ ಏಳುವ ಪ್ರತಿಯೊಂದು ನಾಲಿಗೆಯನ್ನು ಕರ್ತನು ನನ್ನ ಮುಂದೆ ಕೆಳಗೆ ಹಾಕುತ್ತಾನೆ. (ಕೀರ್ತನೆಗಳು 91:10,11,15; ಕೀರ್ತನೆಗಳು 34:7; ಯೆಶಾಯ 54:17)

## ಬಡತಿ

ನನ್ನ ಬಡತಿ, ಬೆಳವಣಿಗೆ ಮತ್ತು ಹೆಚ್ಚಳವು ದೇವರಿಂದ ಬಂದಿದೆ. ನನ್ನ ಪ್ರಬಡತಿಗೆ ಕಾರಣ ದೇವರೇ. ನಾನು ಕರ್ತನಿಗೆ ಸಲ್ಲಿಸುವಾಗ, ಆತನು ತನ್ನ ಸಮಯದಲ್ಲಿ ನನ್ನನ್ನು ಹೆಚ್ಚಿಸುತ್ತಾನೆ. ನಾಯಕತ್ವ, ಅಧಿಕಾರ ಮತ್ತು ಪ್ರಭಾವದ ಸ್ಥಳಗಳಲ್ಲಿ ನನ್ನನ್ನು ಇರಿಸುವವನು ದೇವರು. (ಕೀರ್ತನೆಗಳು 7:6,7; ಯಾಕೋಬ 4:10; ಧರ್ಮೋಪದೇಶಕಾಂಡ 28:13)

## ಅಗತ್ಯತೆ ಮತ್ತು ಪೂರೈಕೆ

ನನ್ನ ದೇವರು ಯೇಸುಕ್ರಿಸ್ತನ ಮೂಲಕ ತನ್ನ ಐಶ್ವರ್ಯಕ್ಕೆ ಅನುಗುಣವಾಗಿ ನನ್ನ ಎಲ್ಲಾ ಅಗತ್ಯಗಳನ್ನು ಒದಗಿಸುತ್ತಾನೆ. ಯೆಹೋವನು ನನ್ನ ಕುರುಬನು, ಮತ್ತು ನನಗೆ ಕೊರತೆಯಿಲ್ಲ. ಕರ್ತನು ನನಗೆ ಸೂರ್ಯ ಮತ್ತು ಗುರಾಣಿ. ಆತನು ನನ್ನಿಂದ ಯಾವ ಶುಭವನ್ನು ದಯಪಾಲಿಸದೆ ಇರುವದಿಲ್ಲ. ದೇವರು ನನಗೆ ಬೇಕಾದುದಕ್ಕಿಂತ ಹೆಚ್ಚಿನದನ್ನು ನೀಡುತ್ತಾನೆ, ಇದರಿಂದ ನಾನು ಯಾವಾಗಲೂ ನನಗೆ ಬೇಕಾದುದನ್ನು ಹೊಂದಿದ್ದೇನೆ ಮತ್ತು ಇತರರನ್ನು ಆಶೀರ್ವದಿಸಲು ಕೂಡ ಸಾಕಷ್ಟು ಹೊಂದಿದ್ದೇನೆ. ಸಂಪತ್ತನ್ನು ಸಂಪಾದಿಸುವ ಶಕ್ತಿಯನ್ನು ನನಗೆ ಕೊಡುವವನು ದೇವರು. (ಫಿಲಿಪ್ಪಿಯವರಿಗೆ 4:19; ಕೀರ್ತನೆಗಳು 23:1; ಕೀರ್ತನೆಗಳು 84:11; 2 ಕೊರಿಂಥದವರಿಗೆ 9:8; ಧರ್ಮೋಪದೇಶಕಾಂಡ 8:18)

## ಸೂಚಕಕಾರ್ಯಗಳು, ಅದ್ಭುತಗಳು ಮತ್ತು ಮಹತ್ಕಾರ್ಯಗಳು

ನಂಬುವವರಿಗೆ ಈ ಸೂಚಕಕಾರ್ಯಗಳು ನನ್ನನ್ನು ಹಿಂಬಾಲಿಸುತ್ತವೆ—ಆತನ ಹೆಸರಿನಲ್ಲಿ, ನಾನು ಹೊಸ ಭಾಷೆಗಳಲ್ಲಿ ಮಾತನಾಡುತ್ತೇನೆ, ನಾನು ದೆವ್ವಗಳನ್ನು ಬಿಡಿಸುತ್ತೇನೆ ಮತ್ತು ನಾನು ರೋಗಿಗಳ ಮೇಲೆ ಕೈಗಳನ್ನು ಇಡುತ್ತೇನೆ ಮತ್ತು ಅವರು ಚೇತರಿಸಿಕೊಳ್ಳುತ್ತಾರೆ. ದೇವರು ನನ್ನೊಂದಿಗಿದ್ದಾನೆ ಮತ್ತು ನಾನು ಸೂಚಕಕಾರ್ಯಗಳು, ಅದ್ಭುತಗಳು ಮತ್ತು ಮಹತ್ಕಾರ್ಯಗಳೊಂದಿಗೆ ಮಾತನಾಡುವ ಆತನ ವಾಕ್ಯವನ್ನು ದೃಢೀಕರಿಸುತ್ತಾನೆ. ಯೇಸು ಮಾಡಿದ ಕಾರ್ಯಗಳನ್ನು ನಾನು ಮಾಡುತ್ತೇನೆ ಮತ್ತು ಇನ್ನೂ ಹೆಚ್ಚಿನ ಕಾರ್ಯಗಳನ್ನು ಮಾಡುತ್ತೇನೆ ಏಕೆಂದರೆ ಯೇಸು ತಂದೆಯ ಬಳಿಗೆ ಹೋಗಿದ್ದಾನೆ. ನಾನು ಯೇಸುವಿನ ಸುವಾರ್ತೆಯನ್ನು ಹಂಚಿಕೊಳ್ಳುವಾಗ, ದೇವರು ಸ್ವತಃ ಪವಿತ್ರಾತ್ಮನ ಸೂಚಕಕಾರ್ಯಗಳು, ಅದ್ಭುತಗಳು, ಮಹತ್ಕಾರ್ಯಗಳು ಮತ್ತು ವರಗಳೊಂದಿಗೆ ಸಾಕ್ಷಿಯಾಗುತ್ತಾನೆ. (ಮಾರ್ಕ 16:17,18; ಮಾರ್ಕ 16:20; ಯೋಹಾನ 14:12; ಇಬ್ರಿಯ 2:3,4)

## ನಿದ್ರೆ

ಕರ್ತನು ನನಗೆ ಒಳ್ಳೆಯ ನಿದ್ರೆ ಕೊಡುತ್ತಾನೆ. ನಾನು ನಿರ್ಭಯವಾಗಿರುವದರಿಂದ ಮಲಗಿಕೊಂಡ ಕೂಡಲೇ ನಿದ್ದೆ ಮಾಡುವೆನು. ನಾನು ಮಲಗಿದ ಮೇಲೆ ಸುಖವಾಗಿ ನಿದ್ರೆ ಮಾಡುವೆ. ನಾನು ನಿದ್ದೆಮಾಡಿ ಸುಖವಾಗಿ ಎಚ್ಚರಗೊಂಡೆನು

(ಕೀರ್ತನೆಗಳು 127:2; ಕೀರ್ತನೆಗಳು 4:8; ಜ್ಞಾನೋಕ್ತಿಗಳು 3:24; ಕೀರ್ತನೆಗಳು 3:5)

## ನನ್ನ ಜೀವನದಲ್ಲಿ ದೇವರ ಆತ್ಮ

ನಾನು ದೇವರ ಆಲಯವಾಗಿದ್ದೇನೆ. ದೇವರ ಆತ್ಮನು ನನ್ನಲ್ಲಿ ವಾಸಮಾಡುತ್ತಾನೆ. ಆತನು ನನ್ನನ್ನು ಮುನ್ನಡೆಸುತ್ತಾನೆ ಮತ್ತು ಮಾರ್ಗದರ್ಶನ ಮಾಡುತ್ತಾನೆ. ಆತನು ನನಗೆ ಎಲ್ಲವನ್ನೂ ಕಲಿಸುತ್ತಾನೆ. ನಾನು ಆತ್ಮನಲ್ಲಿ ನಡೆಯುವಾಗ, ನಾನು ಶರೀರಭಾವದ ಅಭಿಲಾಷೆಗಳಿಗೆ ಅಧೀನನಾಗುವುದಿಲ್ಲ. ಆತನು ನನಗೆ ಅಧಿಕಾರ ನೀಡುತ್ತಿದ್ದಾನೆ. ಆತನ ಉಪಸ್ಥಿತಿ ಮತ್ತು ಶಕ್ತಿಯು ನನ್ನಿಂದ ನದಿಗಳಂತೆ ಹರಿಯುತ್ತದೆ ಮತ್ತು ನನ್ನ ಸುತ್ತಲಿನ ಜನರನ್ನು ಆಶೀರ್ವದಿಸಿ, ಗುಣಪಡಿಸಿ ಮತ್ತು ಬಿಡುಗಡೆ ಮಾಡುತ್ತದೆ (1 ಕೊರಿಂಥದವರಿಗೆ 3:16; ರೋಮಾಪುರದವರಿಗೆ 8:14; 1 ಯೋಹಾನ 2:27; ಗಲಾತ್ಯದವರಿಗೆ 5:16; ಯೋಹಾನ 7:38,39)

## ವಿಜಯ ಮತ್ತು ಜಯ

ದೇವರು ಯಾವಾಗಲೂ ನನಗೆ ಎಲ್ಲಾ ವಿಷಯಗಳಲ್ಲಿ ವಿಜಯವನ್ನು ನೀಡುತ್ತಾನೆ. ನನ್ನ ಕರ್ತನಾದ ಯೇಸು ನನಗೆ ಶಿಲುಬೆಯಲ್ಲಿ ಗಳಿಸಿದ ಜಯದಲ್ಲಿ ನಾನು ನಡೆಯುತ್ತೇನೆ. ನನ್ನ ದೇವರ ಮೂಲಕ, ನಾನು ಶೌರ್ಯದಿಂದ ಮಾಡುತ್ತೇನೆ. (2 ಕೊರಿಂಥದವರಿಗೆ 2:14; ಕೊಲೊಸ್ಸೆಯವರಿಗೆ 2:14; ಯೆಶಾಯ 53:12; ಕೀರ್ತನೆಗಳು 60:12)

## ಜ್ಞಾನ, ತಿಳುವಳಿಕೆ ಮತ್ತು ಸ್ಫೂರ್ತಿ

ಕ್ರಿಸ್ತನು ನನ್ನ ಜ್ಞಾನವಾಗಿದ್ದಾನೆ. ಜ್ಞಾನ, ತಿಳುವಳಿಕೆ, ಸಲಹೆ ಮತ್ತು ಶಕ್ತಿಯ ಆತ್ಮವು ನನ್ನ ಮೇಲೆ ನೆಲೆಗೊಂಡಿದೆ. ಕರ್ತನು ನನಗೆ ಎಲ್ಲಾ ವಿಷಯಗಳಲ್ಲಿ ತಿಳುವಳಿಕೆಯನ್ನು ನೀಡುತ್ತಾನೆ. ಆತನ ವಾಕ್ಯವು ನನಗೆ ಬೆಳಕು ಮತ್ತು ತಿಳುವಳಿಕೆಯಿಂದ ತುಂಬುತ್ತದೆ. ನನ್ನ ಅಂತರಾತ್ಮದಲ್ಲಿ ದೇವರ ಸ್ಫೂರ್ತಿ ನನಗೆ ತಿಳುವಳಿಕೆಯನ್ನು ನೀಡುತ್ತದೆ. (1 ಕೊರಿಂಥದವರಿಗೆ 1:30; ಯೆಶಾಯ 11:1,2; 2 ತಿಮೊಥೆಯನಿಗೆ 2:7; ಕೀರ್ತನೆಗಳು 119:130; ಯೋಬ 32:8)

## ಸಾಕ್ಷಿ

ನಾನು ಯೇಸು ಕ್ರಿಸ್ತನಿಗೆ ದಿಟ್ಟ ಸಾಕ್ಷಿಯಾಗಿದ್ದೇನೆ. ಯೇಸುಕ್ರಿಸ್ತನ ಸುವಾರ್ತೆಗೆ

ನಾನು ನಾಚಿಕೆಪಡುವುದಿಲ್ಲ. ನಾನು ಆತನನ್ನು ಮನುಷ್ಯರ ಮುಂದೆ ಒಪ್ಪಿಕೊಳ್ಳುವಂತೆ, ಆತನು ನನ್ನನ್ನು ಪರಲೋಕದಲ್ಲಿರುವ ತಂದೆಯ ಮುಂದೆ ಒಪ್ಪಿಕೊಳ್ಳುತ್ತಾನೆ. (ಅಪೊಸ್ತಲರ ಕೃತ್ಯಗಳು 1:8; ರೋಮಾಪುರದವರಿಗೆ 1:16; ಮತ್ತಾಯ 10:32)

### ನನ್ನ ಜೀವನದಲ್ಲಿ ದೇವರ ವಾಕ್ಯ

ದೇವರ ವಾಕ್ಯವು ಸತ್ಯವೆಂದು ನಾನು ಘೋಷಿಸುತ್ತೇನೆ. ಆತನ ವಾಕ್ಯ ನನ್ನ ಜೀವನದಲ್ಲಿ ಮೇಲುಗೈ ಸಾಧಿಸುತ್ತದೆ. ನನ್ನ ಜೀವನವು ಆತನ ವಾಕ್ಯದ ಶಕ್ತಿಯಿಂದ ಎತ್ತಿಹಿಡಿಯಲ್ಪಟ್ಟಿದೆ, ಸಮರ್ಥವಾಗಿದೆ ಮತ್ತು ನಿಯಂತ್ರಿಸಲ್ಪಡುತ್ತದೆ. ನನ್ನ ಪ್ರಪಂಚದಲ್ಲಿರುವ ಎಲ್ಲವೂ ದೇವರ ವಾಕ್ಯಕ್ಕೆ ಒಳಪಟ್ಟಿರುತ್ತದೆ ಮತ್ತು ದೇವರ ವಾಕ್ಯಕ್ಕೆ ಅನುಗುಣವಾಗಿದೆ (ಯೋಹಾನ 17:17; ಕೀರ್ತನೆಗಳು 119:128; ಇಬ್ರಿಯ 1:3; ಇಬ್ರಿಯ 11:3)

# “ಕ್ರಿಸ್ತನಲ್ಲಿ” ನನ್ನ ಘೋಷಣೆಗಳು

ಕ್ರಿಸ್ತನಲ್ಲಿ ನಾನು ಯಾರಾಗಿದ್ದೆನೋ ಅವನೇ ನಿಜವಾದ ನಾನು! ನನ್ನ ಗುರುತು, ಭದ್ರತೆ, ಮಹತ್ವ ಮತ್ತು ಸ್ವ-ಮೌಲ್ಯವು ಆತನಲ್ಲಿದೆ, ಆತನಿಂದ ಮತ್ತು ಆತನಿಗಾಗಿ. ನನ್ನ ಸ್ವ-ಚಿತ್ರಣ, ಸ್ವಾಭಿಮಾನ ಮತ್ತು ಆತ್ಮವಿಶ್ವಾಸವು ದೇವರು ನನ್ನನ್ನು ಕ್ರಿಸ್ತನಲ್ಲಿ ಹೇಗೆ ಮಾಡಿದ್ದಾನೆ ಎಂಬುದರ ಮೇಲೆ ಆಧರಿಸಿದೆ. ಕ್ರಿಸ್ತನಲ್ಲಿ ನಾನು ಯಾರು ಎಂಬುದೇ ದೇವರು ನನ್ನ ಮೇಲಿನ ಆತನ ಅಪಾರವಾದ ಮತ್ತು ಬೇಷರತ್ತಾದ ಪ್ರೀತಿಯ ಕಾರಣದಿಂದ ನನಗಾಗಿ ಏನು ಮಾಡಿದನೆಂಬುದನ್ನು ಸಂಪೂರ್ಣವಾಗಿ ಆಧರಿಸಿದೆ.

ಕ್ರಿಸ್ತನಲ್ಲಿ ನಾನು ಯಾರಾಗಿದ್ದೆನೋ ಅವನೇ ನಿಜವಾದ ನಾನು ಎಂದು ಘೋಷಿಸುತ್ತೇನೆ.

ಕ್ರಿಸ್ತನಲ್ಲಿ, ನಾನು ನೂತನಸೃಷ್ಟಿಯಾಗಿದ್ದೇನೆ. ಹಳೆಯ ಸಂಗತಿಗಳೆಲ್ಲ ಹೋಗಿವೆ. ನಾನು ಒಳಗಿನಿಂದಹೊಸ ಮನುಷ್ಯ (2 ಕೊರಿಂಥದವರಿಗೆ 5:17). ನನ್ನ ಹಳೆಯ ಜೀವನವು ಕೊನೆಗೊಂಡಿದೆ ಮತ್ತುನನ್ನ ಹೊಸ ಜೀವನವು ಕ್ರಿಸ್ತನಲ್ಲಿ ಸುರಕ್ಷಿತವಾಗಿದೆ. ನಾನು ಜೀವಿಸುವ ಈ ಹೊಸ ಜೀವನವು ಕ್ರಿಸ್ತನಿಂದಲೇ ಬಂದಿದೆ (ಕೊಲೊಸ್ಸೆಯವರಿಗೆ 3:3). ನಾನು ಎಂಬ ಹೊಸ ಸೃಷ್ಟಿಯು ದೇವರ ಪ್ರತಿರೂಪದಲ್ಲಿ ರಚಿಸಲ್ಪಟ್ಟಿದೆ ಮತ್ತು ದೇವರ ಪಾತ್ರ, ನೀತಿವಂತಿಕೆ ಮತ್ತು ಪವಿತ್ರತೆಯಿಂದ ತುಂಬಿದೆ. ನಾನು ಕ್ರಿಸ್ತನಲ್ಲಿ ಹೊಸ ಸೃಷ್ಟಿಯಾಗಿ ಜೀವಿಸುತ್ತೇನೆ (ಎಫೆಸದವರಿಗೆ 4:24).

ಕ್ರಿಸ್ತನಲ್ಲಿ, ನಾನು ದೇವರ ಮಗು, ದೇವರ ಭಾಧ್ಯಸ್ತನು.ಮತ್ತು ಯೇಸು ಕ್ರಿಸ್ತನೊಂದಿಗೆ ಜಂಟಿ ಭಾಧ್ಯಸ್ತನು. ನಾನು ದೇವರ ಕುಟುಂಬ ಮತ್ತು ದೇವರ ರಾಜ್ಯದ ಭಾಗವಾಗಿದ್ದೇನೆ (ರೋಮಾಪುರದವರಿಗೆ 8:17). ಕ್ರಿಸ್ತನಲ್ಲಿ, ತಂದೆಯು ತನ್ನ ಮಗನಾದ ಕರ್ತನಾದ ಯೇಸು ಕ್ರಿಸ್ತನನ್ನು ಪ್ರೀತಿಸುವ ರೀತಿಯಲ್ಲಿಯೇ ನನ್ನನ್ನು ಪ್ರೀತಿಸುತ್ತಾನೆ. ಈ ಪ್ರೀತಿಯ ಬಗ್ಗೆ ನನಗೆ ಭರವಸೆ ಇದೆ (ಯೋಹಾನ 16:27; ಯೋಹಾನ 17:23). ಕ್ರಿಸ್ತನಲ್ಲಿರುವ ದೇವರ ಪ್ರೀತಿಯಿಂದ ಯಾವುದೂ ನನ್ನನ್ನು ಪ್ರತ್ಯೇಕಿಸಲು ಸಾಧ್ಯವಿಲ್ಲ. ನನ್ನ

ಮೇಲಿರುವ ಆತನ ಪ್ರೀತಿಯಿಂದಾಗಿ ನಾನು ಪ್ರತಿಯೊಂದು ಸನ್ನಿವೇಶದಲ್ಲೂ ಜಯಶಾಲಿಯಾಗಿದ್ದೇನೆ (ರೋಮಾಪುರದವರಿಗೆ 8:37,39). ಕ್ರಿಸ್ತನಲ್ಲಿ, ನಾನು ಪವಿತ್ರಾತ್ಮನಿಂದ ಮುದ್ರಿಸಲ್ಪಟ್ಟಿದ್ದೇನೆ. ದೇವರು ತನ್ನ ಒಡೆಯತ್ವದ ಗುರುತನ್ನು ನನ್ನ ಮೇಲೆ ಹಾಕಿದ್ದಾನೆ (ಎಫೆಸದವರಿಗೆ 1:13,14). ಕ್ರಿಸ್ತನಲ್ಲಿ, ನಾನು ದೇವರ ಪವಿತ್ರ ದೇವಾಲಯದ ಭಾಗವಾಗಿದ್ದೇನೆ, ಆತನ ಆತ್ಮನಿಂದ ದೇವರ ವಾಸಸ್ಥಾನವಾಗಿದ್ದೇನೆ. ದೇವರು ನನ್ನಲ್ಲಿ ನೆಲೆಸಿದ್ದಾನೆ ಮತ್ತು ನನ್ನ ಮೂಲಕ ತನ್ನನ್ನು ತಾನು ಪ್ರಕಟಿಸಿಕೊಳ್ಳುತ್ತಾನೆ (ಎಫೆಸದವರಿಗೆ 2:21,22).

ನಾನು ನೀತಿಕರಿಸಲ್ಪಟ್ಟಿದ್ದೇನೆ, ವಿಮೋಚಿಸಲ್ಪಟ್ಟಿದ್ದೇನೆ, ದೇವರ ದೃಷ್ಟಿಯಲ್ಲಿ ಸರಿಯಾಗಿ ಮಾಡಲ್ಪಟ್ಟಿದ್ದೇನೆ ಮತ್ತು ಯೇಸುಕ್ರಿಸ್ತನ ಮೂಲಕ ನಾನು ದೇವರೊಂದಿಗೆ ಸಮಾಧಾನದಲ್ಲಿ ಇದ್ದೇನೆ. ನಾನು ಕ್ರಿಸ್ತನಲ್ಲಿ ದೇವರೊಂದಿಗೆ ಸರಿಯಾದ ನಿಲುವಿನಲ್ಲಿ ಇದ್ದೇನೆ (ರೋಮಾಪುರದವರಿಗೆ 5:1,2). ಕ್ರಿಸ್ತನಲ್ಲಿ ನನ್ನ ವಿರುದ್ಧ ಯಾವುದೇ ಖಂಡನೆ ಇಲ್ಲ. ನಾನು ದೇವರೊಂದಿಗೆ ಮುಕ್ತವಾಗಿ, ಆತ್ಮವಿಶ್ವಾಸದಿಂದ, ಯಾವುದೇ ಅವಮಾನ, ಅಪರಾಧ ಅಥವಾ ಖಂಡನೆಯಿಲ್ಲದೆ ಸಂಬಂಧ ಹೊಂದಿದ್ದೇನೆ (ರೋಮಾಪುರದವರಿಗೆ 8:1). ಕ್ರಿಸ್ತನಲ್ಲಿ, ನಾನು ದೇವರ ನೀತಿವಂತಿಕೆಯಾಗಿ ಮಾಡಲ್ಪಟ್ಟಿದ್ದೇನೆ. ಇದು ಆತನ ಪ್ರಸನ್ನತೆಗೆ ಆತ್ಮವಿಶ್ವಾಸದಿಂದ ಬರಲು ನನಗೆ ಧೈರ್ಯ ಮತ್ತು ಪ್ರವೇಶವನ್ನು ಕೊಡುತ್ತದೆ (2 ಕೊರಿಂಥದವರಿಗೆ 5:21). ದೇವರು ನನ್ನನ್ನು ಕ್ರಿಸ್ತನಲ್ಲಿ ಆರಿಸಿಕೊಂಡನು, ಮತ್ತು ನಾನು ಪವಿತ್ರ ಮತ್ತು ಆತನ ದೃಷ್ಟಿಯಲ್ಲಿ ದೋಷವಿಲ್ಲದೆ, ಆತನ ಪ್ರೀತಿಯಿಂದ ಮುಚ್ಚಲ್ಪಟ್ಟಿದ್ದೇನೆ (ಎಫೆಸದವರಿಗೆ 1:4). ಕ್ರಿಸ್ತನಲ್ಲಿ, ನಾನು ದೇವರಿಗೆ ಸಮೀಪಿಸಲ್ಪಟ್ಟಿದ್ದೇನೆ ಮತ್ತು ಆತ್ಮನ ಮೂಲಕ ನಾನು ತಂದೆಯ ಬಳಿಗೆ ನೇರ ಪ್ರವೇಶವನ್ನು ಹೊಂದಿದ್ದೇನೆ (ಎಫೆಸದವರಿಗೆ 2:13,18).

ಹಳೆಯ ಪಾಪಿ ಸ್ವಭಾವವನ್ನು ಕ್ರಿಸ್ತನೊಂದಿಗೆ ಶಿಲುಬೆಗೇರಿಸಲಾಯಿತು, ನನ್ನ ಜೀವನದ ಮೇಲೆ ಪಾಪದ ಶಕ್ತಿಯು ಮುರಿದುಹೋಗಿದೆ ಮತ್ತು ನಾನು ಪಾಪದ ಬಂಧನದಿಂದ ಮುಕ್ತನಾಗಿದ್ದೇನೆ. ಪಾಪವು ಇನ್ನು ಮುಂದೆ ನನ್ನ ಮೇಲೆ ಅಧಿಕಾರವನ್ನು ಹೊಂದಿಲ್ಲ (ರೋಮಾಪುರದವರಿಗೆ 6:6,14). ಕ್ರಿಸ್ತನಲ್ಲಿ, ನಾನು ಕತ್ತಲೆಯ ಶಕ್ತಿಗಳಿಂದ ಬಿಡುಗಡೆ ಹೊಂದಿದ್ದೇನೆ ಮತ್ತು ಯೇಸುಕ್ರಿಸ್ತನ ರಾಜ್ಯಕ್ಕೆ ವರ್ಗಾಯಿಸಲ್ಪಟ್ಟಿದ್ದೇನೆ. ಸೈತಾನನಿಗೆ ನನ್ನಲ್ಲಿ ಸ್ಥಾನವಿಲ್ಲ, ನನ್ನ ಮೇಲೆ ಹಕ್ಕು ಇಲ್ಲ ಮತ್ತು ನನ್ನ ಮೇಲೆ ಕಟ್ಟುಪಾಡು ಇಲ್ಲ.

ನಾನು ದೇವರ ಸ್ವತ್ತು-ಪ್ರಾಣ , ಆತ್ಮ ಮತ್ತು ಶರೀರ (ಕೊಲೊಸ್ಸೆಯವರಿಗೆ 1:13,14; 1 ಕೊರಿಂಥದವರಿಗೆ 6:20). ನಾನು ಯೇಸುಕ್ರಿಸ್ತನ ರಕ್ತದಿಂದ ವಿಮೋಚನೆಗೊಂಡಿದ್ದೇನೆ. ನಾನು ದೇವರು ಕೊಂಡುಕೊಂಡ ಸ್ವತ್ತು. ನನ್ನ ಸಂಪೂರ್ಣ ಅಸ್ತಿತ್ವವು ದೇವರಿಗೆ ಸೇರಿದೆ (ಎಫೆಸದವರಿಗೆ 1:7). ಕ್ರಿಸ್ತನಲ್ಲಿ, ನಾನು ಪಾಪದ ಶಕ್ತಿಯಿಂದ ಬಿಡುಗಡೆ ಹೊಂದಿದ್ದೇನೆ. ನಾನು ಕ್ರಿಸ್ತನೊಂದಿಗೆ ಸತ್ತೆ ಮತ್ತು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟಿದ್ದೇನೆ. ಹಳೆಯ ಜೀವನದ ಶಕ್ತಿಯು ಮುರಿದುಹೋಗಿದೆ (ಕೊಲೊಸ್ಸೆಯವರಿಗೆ 2:11,12).

ನಾನು ಯೇಸುವಿನೊಂದಿಗೆ ಆತ್ಮಿಕವಾಗಿ ಒಂದಾಗಿದ್ದೇನೆ. ಆತನು ಬಳ್ಳಿ ಮತ್ತು ನಾನು ಆತನೊಂದಿಗೆ ಸಂಪರ್ಕ ಹೊಂದಿದ ಕೊಂಬೆ. ಆತನು ನನ್ನಲ್ಲಿದ್ದಾನೆ ಮತ್ತು ನಾನು ಆತನಲ್ಲಿದ್ದೇನೆ. ಆತನ ಜೀವನವು ನನ್ನ ಮೂಲಕ ಹರಿಯುತ್ತದೆ ಮತ್ತು ನನ್ನ ಮೂಲಕ ವ್ಯಕ್ತವಾಗುತ್ತದೆ. ನನ್ನಲ್ಲಿ ಹರಿಯುವ ಆತನ ಜೀವನದ ಗುಣಲಕ್ಷಣ ಮತ್ತು ಶಕ್ತಿಯನ್ನು ನಾನು ವ್ಯಕ್ತಪಡಿಸುತ್ತೇನೆ. ಆತನ ಮಹಿಮೆಗಾಗಿ ನಾನು ಹೆಚ್ಚು ಫಲವನ್ನು ಕೊಡುತ್ತೇನೆ (1 ಕೊರಿಂಥದವರಿಗೆ 6:17; ಯೋಹಾನ 15:1–7). ನಾನು ಆತನಲ್ಲಿ ಪೂರ್ಣವಾಗಿದ್ದೇನೆ ಮತ್ತು ದೇವರ ಸರ್ವಸಂಪೂರ್ಣತೆಯಿಂದ ತುಂಬಿದ್ದೇನೆ. ಆತನು ನನ್ನನ್ನು ತನ್ನೊಂದಿಗೆ ತುಂಬಿಸುತ್ತಾನೆ (ಕೊಲೊಸ್ಸೆಯವರಿಗೆ 2:9,10). ನಾನು ಯೇಸುವಿನಲ್ಲಿ ಇದ್ದೇನೆ ಮತ್ತು ಯೇಸು ನಡೆದಂತೆ ನಾನು ನಡೆಯುತ್ತೇನೆ. ನಾನು ಆತನ ಪ್ರೀತಿಯಲ್ಲಿ, ಆತನ ಕೃಪೆಯಲ್ಲಿ ಮತ್ತು ಆತನ ಶಕ್ತಿಯಲ್ಲಿ ನಡೆಯುತ್ತೇನೆ (1 ಯೋಹಾನ 2:6). ಯೇಸು ದೇವರ ಮಗನೆಂದು ನಾನು ಅರಿಕೆ ಮಾಡುತ್ತೇನೆ ಮತ್ತು ನಾನು ದೇವರಲ್ಲಿ ವಾಸಿಸುತ್ತೇನೆ ಮತ್ತು ದೇವರು ನನ್ನಲ್ಲಿ ವಾಸಿಸುತ್ತಾನೆ. ನಾನು ಆತನೊಂದಿಗಿನ ಐಕ್ಯತೆಯಿಂದ ನನ್ನ ಜೀವನವನ್ನು ನಡೆಸುತ್ತೇನೆ (1 ಯೋಹಾನ 4:15).

ಕರ್ತನಾದ ಯೇಸುವೇ ಸ್ವತಃ ನನ್ನ ಜ್ಞಾನ. ಆತನಲ್ಲಿ, ನಾನು ದೇವರೊಂದಿಗೆ ಸರಿಯಾದ ಸ್ಥಾನದಲ್ಲಿ ಇರಿಸಲ್ಪಟ್ಟಿದ್ದೇನೆ. ನಾನು ಪರಿಶುದ್ಧನಾಗಿದ್ದೇನೆ ಮತ್ತು ದೇವರಿಗಾಗಿ ಪ್ರತ್ಯೇಕಿಸಲ್ಪಟ್ಟಿದ್ದೇನೆ ಮತ್ತು ಬಿಡುಗಡೆ ಹೊಂದಿದ್ದೇನೆ (1 ಕೊರಿಂಥದವರಿಗೆ 1:30). ಕ್ರಿಸ್ತನಲ್ಲಿ, ನಾನು ಆತನ ಕೈಕೆಲಸ, ಮತ್ತು ಆತನು ನನಗೆ ಮಾಡಲು ಯೋಜಿಸಿದ ಒಳ್ಳೆಯ ಕಾರ್ಯಗಳಿಗಾಗಿ ನನ್ನನ್ನು ಸೃಷ್ಟಿಸಿದ್ದಾನೆ (ಎಫೆಸದವರಿಗೆ 2:10).

ನಾನು ದೇವರ ಹೇರಳವಾದ ಕೃಪೆಯನ್ನು ಮತ್ತು ನೀತಿವಂತಿಕೆಯ ಉಡುಗೊರೆಯನ್ನು ಪಡೆದಿದ್ದೇನೆ ಮತ್ತು ನಾನು ಜೀವನದಲ್ಲಿ ಆಳ್ವಿಕೆ ನಡೆಸುತ್ತೇನೆ. ನಾನು ಯೇಸು ಕ್ರಿಸ್ತನ ಮೂಲಕ ಜೀವನದಲ್ಲಿ ಪ್ರಭುತ್ವವನ್ನು ಹೊಂದಿದ್ದೇನೆ (ರೋಮಾಪುರದವರಿಗೆ 5:17). ದೇವರು ಯಾವಾಗಲೂ ನನ್ನನ್ನು ಕ್ರಿಸ್ತನಲ್ಲಿ ಪ್ರತಿ ಸನ್ನಿವೇಶದಲ್ಲಿ ಮತ್ತು ಪ್ರತಿಯೊಂದು ಸಂದರ್ಭದಲ್ಲಿಯೂ ಜಯಿಸುವಂತೆ ಮಾಡುತ್ತಾನೆ. ಪ್ರಸ್ತುತ ವಿಷಯಗಳು ಹೇಗೆ ಕಂಡುಬಂದರೂ, ನಾನು ಯೇಸುವಿನಲ್ಲಿ ಜಯಶಾಲಿಯಾಗಿ ಹೊರಬರುತ್ತೇನೆ (2 ಕೊರಿಂಥದವರಿಗೆ 2:14). ನಾನು, ದೇವರಿಂದ ಹುಟ್ಟಿದವನು, ನಾನು ಪ್ರಪಂಚದ ಮೇಲೆ, ಕತ್ತಲೆಯ ಕೆಲಸಗಳ ಮೇಲೆ ಮತ್ತು ಲೋಕದಲ್ಲಿರುವ ದುಷ್ಟತನದ ಮೇಲೆ ಜಯಿಸಿ ವಿಜಯಿ ಆಗುತ್ತೇನೆ. ಕ್ರಿಸ್ತನಲ್ಲಿ, ನಾನು ಜಯಶಾಲಿಯಾಗಿದ್ದೇನೆ (1 ಯೋಹಾನ 5:4). ದೇವರು ನನ್ನನ್ನು ಎಬ್ಬಿಸಿದ್ದಾನೆ ಮತ್ತು ಕ್ರಿಸ್ತನಲ್ಲಿ ಪರಲೋಕದಲ್ಲಿ ತನ್ನ ಬಲಗಡೆಯಲ್ಲಿ ಕುಳಿತುಕೊಳ್ಳುವಂತೆ ಮಾಡಿದ್ದಾನೆ. ನಾನು ಕತ್ತಲೆಯ ಎಲ್ಲಾ ಶಕ್ತಿಗಳ ಮೇಲೆ, ಸೈತಾನನ ಮೇಲೆ ಮತ್ತು ಎಲ್ಲಾ ದೆವ್ವಗಳ ಮೇಲೆ ಅಧಿಕಾರದ ಸ್ಥಳದಲ್ಲಿ ಕುಳಿತಿದ್ದೇನೆ (ಎಫೆಸದವರಿಗೆ 2:4–6). ಕ್ರಿಸ್ತನಲ್ಲಿ ಸ್ವರ್ಗದಿಂದ ಬರುವ ಪ್ರತಿಯೊಂದು ಆಶೀರ್ವಾದದಿಂದ ನಾನು ಆಶೀರ್ವದಿಸಲ್ಪಟ್ಟಿದ್ದೇನೆ.

ದೇವರ ಎಲ್ಲಾ ಆಶೀರ್ವಾದಗಳು ನನ್ನದು. ನಂಬಿಕೆಯಿಂದ, ನಾನು ಅವುಗಳನ್ನು ಸ್ವೀಕರಿಸುತ್ತೇನೆ ಮತ್ತು ಅವುಗಳಲ್ಲಿ ನಡೆಯುತ್ತೇನೆ (ಎಫೆಸದವರಿಗೆ 1:3). ಕ್ರಿಸ್ತನಲ್ಲಿ, ನಾನು ಅಬ್ರಹಾಮನ ಆಶೀರ್ವಾದವನ್ನು ಆನುವಂಶಿಕವಾಗಿ ಪಡೆಯುತ್ತೇನೆ. ನಾನು ನೀತಿವಂತನಾಗಿ ಮಾಡಲ್ಪಟ್ಟಿದ್ದೇನೆ. ನಾನು ದೇವರ ಸ್ನೇಹಿತ. ನಾನು ಎಲ್ಲಾ ವಿಷಯಗಳಲ್ಲಿ ಆಶೀರ್ವದಿಸಲ್ಪಟ್ಟಿದ್ದೇನೆ. ರಾಷ್ಟ್ರಗಳಿಗೆ ಆಶೀರ್ವಾದವಾಗಲು ನಾನು ಆಶೀರ್ವದಿಸಲ್ಪಟ್ಟಿದ್ದೇನೆ. ನನ್ನ ಶತ್ರುಗಳ ಮೇಲೆ ನನಗೆ ಜಯವಿದೆ (ಗಲಾತ್ಯದವರಿಗೆ 3:29). ಆತನಲ್ಲಿರುವ ದೇವರ ಎಲ್ಲಾ ವಾಗ್ದಾನಗಳೂ ಹೌದು ಮತ್ತು ಆಮೆನ್ ಆಗಿದೆ. ನನ್ನ ಜೀವನಕ್ಕಾಗಿ ಆತನ ವಾಗ್ದಾನಗಳ ನೆರವೇರಿಕೆಯನ್ನು ನಾನು ಸ್ವೀಕರಿಸುತ್ತೇನೆ (2 ಕೊರಿಂಥದವರಿಗೆ 1:20).

ಕ್ರಿಸ್ತನಲ್ಲಿ ನಾನು ಯಾರಾಗಿದ್ದೇನೋ ಅವನೇ ನಿಜವಾದ ನಾನು!

# ಪರಿವಿಡಿ

ಪರಿಚಯ

1. ಎರಡೂ ಕ್ಷೇತ್ರಗಳಲ್ಲಿ ಮಾತುಗಳು ಪ್ರಮುಖವಾಗಿವೆ 1
2. ಪ್ರಭುತ್ವವನ್ನು ಮಾತುಗಳ ಮೂಲಕ ಪ್ರಯೋಗಿಸಲಾಗುತ್ತದೆ 3
3. ಆತನ ಮಾತಿನ ಪ್ರಕಾರ ನಿಮ್ಮನ್ನು ನೀವೇ ಕರೆ ಮಾಡಿ 5
4. ನಿಮ್ಮ ಮಾತುಗಳು ಆಶೀರ್ವಾದವನ್ನು ಬಿಡುಗಡೆ ಮಾಡುತ್ತವೆ 7
5. ದೇವರ ವಾಕ್ಯವು ಮುಂಚಿತವಾಗಿ ಬರೆದ ನಿಮ್ಮ ವರದಿಯಾಗಿದೆ, ಅದನ್ನು ಮಾತನಾಡಿ! 9
6. ಆತನ ವಾಕ್ಯವು ನಿಮ್ಮ ಬಳಿಯಲ್ಲಿದೆ—ಆತನ ವಾಕ್ಯವನ್ನು ಮಾತನಾಡಿ 11
7. ಆತನ ವಾಕ್ಯವು ನಿನ್ನ ಬಾಯಲ್ಲಿರಲಿ 13
8. ಆತನ ವಾಗ್ದಾನಗಳು ಶಾಶ್ವತವಾಗಿರುತ್ತವೆ—ಮತ್ತು ಅದರಂತೆ ನಮ್ಮ ಘೋಷಣೆ 15
9. ದೇವರೊಂದಿಗೆ ನಿಮ್ಮ ಒಡಂಬಡಿಕೆಯನ್ನು ಘೋಷಿಸಿ 17
10. ದೇವರ ಮುಂದೆ ಸ್ವೀಕಾರಾರ್ಹವಾದ ಪದಗಳನ್ನು ಮಾತನಾಡಿ 19
11. ಪ್ರತಿಯೊಂದು ಸಂದರ್ಭದಲ್ಲೂ ನಿಮಗೆ ದೇವರು ಯಾರೆಂದು ಘೋಷಿಸಿ 21
12. ನೈಸರ್ಗಿಕ ಪ್ರಪಂಚವು ಕರ್ತನ ಧ್ವನಿಗೆ ಪ್ರತಿಕ್ರಿಯಿಸುತ್ತದೆ 23
13. ನೈಸರ್ಗಿಕ ಪ್ರಪಂಚವು ಆತನ ಮಾತಿನಿಂದ ನಿರ್ಮಿತವಾಯಿತು ಮತ್ತು ರೂಪುಗೊಂಡಿತು 25
14. ನಿಮ್ಮ ನಾಲಿಗೆಯು ನಿಮಗೆ ಒಳ್ಳೆಯ ದಿನಗಳನ್ನು ಮತ್ತು ದೀರ್ಘಾಯುಷ್ಯವನ್ನು ತರಬಹುದು 27
15. ಆತನ ವಾಕ್ಯವನ್ನು ಘೋಷಿಸುವುದು ಆತನ ಒಡಂಬಡಿಕೆಯನ್ನು ಹೇಳಿಕೊಂಡಂತೆ 29

16. ನಾನು ಕರ್ತನ ಬಗ್ಗೆ ಹೇಳುತ್ತೇನೆ 31
17. ದೇವದೂತರು ಆತನ ವಾಕ್ಯದ ಧ್ವನಿಯನ್ನು ಆಲಿಸುತ್ತಾರೆ 34
18. ಕರ್ತನಿಂದ ವಿಮೋಚನೆಗೊಂಡವರು ಹೀಗೆ ಹೇಳಲಿ 36
19. ಸಂತೋಷ ಮತ್ತು ರಕ್ಷಣೆಯ ಧ್ವನಿಯನ್ನು ಕಾಪಾಡಿಕೊಳ್ಳಿ 38
20. ನಿಮ್ಮ ಜೀವನವನ್ನು ರೂಪಿಸುವ ಶಕ್ತಿಗಳು ನಿಮ್ಮ ಹೃದಯದಿಂದ ಹೊರಬರುತ್ತವೆ 40
21. ನ್ಯಾಯಯುತ ಮಾತುಗಳು ಜೀವನ ಮತ್ತು ಶಕ್ತಿಯನ್ನು ಬಿಡುಗಡೆ ಮಾಡುತ್ತವೆ 42
22. ಮಾತುಗಳು ಗುಣಪಡಿಸಬಹುದು ಮತ್ತು ಸಂಪೂರ್ಣಗೊಳಿಸಬಹುದು 44
23. ಆಹ್ಲಾದಕರ ಮಾತುಗಳ ಶಕ್ತಿಯನ್ನು ಬಿಡುಗಡೆ ಮಾಡಿ 46
24. ನಿಮ್ಮ ಮಾತುಗಳ ಫಲದಿಂದ ನಿಮ್ಮ ಜೀವನವು ತುಂಬುತ್ತದೆ 48
25. ನಿಮ್ಮ ಮಾತುಗಳು ಜೀವನ ಮತ್ತು ಮರಣದ ಶಕ್ತಿಯನ್ನು ಹೊಂದಿವೆ 50
26. ನಿಮ್ಮ ಬಾಯಿಯಲ್ಲಿರುವ ಆತನ ಮಾತು ಜನಾಂಗಗಳ ಮೇಲೆ ಪರಿಣಾಮಬೀರಬಹುದು 52
27. ಒಣ ಎಲುಬುಗಳೊಂದಿಗೆ ಅವು ಜೀವಿಸಬಹುದೆಂದು ಮಾತನಾಡಿ 54
28. ನಿಮ್ಮ ಮಾತುಗಳು ಸ್ವರ್ಗದಲ್ಲಿ ಕೇಳಿಬರುತ್ತವೆ 56
29. ಮಾತುಗಳು ಆತ್ಮಿಕದಿಂದ ಸ್ವಭಾವಿಕಕ್ಕೆ ರವಾನೆಯಾಗುತ್ತವೆ 58
30. ನಾನು ಬಲಶಾಲಿ ಎಂದು ದುರ್ಬಲರು ಹೇಳಲಿ 60
31. ನಿಮ್ಮ ಮಾತುಗಳಿಂದ ದೇವರ ಮನಸ್ಸು ನೋಯಿಸ ಬೇಡಿರಿ 63
32. “ಅದನ್ನು ಬರೆಯಲಾಗಿದೆ" ಎಂದು ಹೇಳಲು ಕಲಿಯಿರಿ—ಯೇಸು ಹಾಗೆ ಮಾಡಿದ 65
33. ಮಾತಿನಿಂದ ಆತ್ಮಗಳನ್ನು ಹೊರಹಾಕಿ 67

34. ನೀವು ಆತನನ್ನು ಭೂಮಿಯ ಮೇಲೆ ಒಪ್ಪಿಕೊಂಡಾಗ, ನಿಮ್ಮನ್ನು ಪರಲೋಕದಲ್ಲಿ ಉಲ್ಲೇಖಿಸಲಾಗುತ್ತದೆ 69
35. ಮಾತುಗಳು ನಿಮ್ಮ ಹೃದಯದಲ್ಲಿರುವುದನ್ನು ನಿಮ್ಮ ಜೀವನದಲ್ಲಿ ಬಿಡುಗಡೆ ಮಾಡುತ್ತವೆ 71
36. ನಿಮ್ಮ ಮಾತುಗಳಿಂದ ನೀವು ಸಮರ್ಥಿಸಲ್ಪಟ್ಟಿದ್ದೀರಿ ಅಥವಾ ಖಂಡಿಸಲ್ಪಟ್ಟಿದ್ದೀರಿ 73
37. ಮಾತುಗಳು ಕಟ್ಟಿ ಹಾಕಲು ಮತ್ತು ಬಿಡುಗಡೆ ಮಾಡಲು ರಾಜ್ಯದ ಅಧಿಕಾರವನ್ನು ಬಿಡುಗಡೆ ಮಾಡುತ್ತವೆ 75
38. ಪರ್ವತದೊಂದಿಗೆ ಮಾತನಾಡಿ 77
39. ನಿಮ್ಮ ಅಪೇಕ್ಷಿತ ಫಲಿತಾಂಶವನ್ನು ಮಾತನಾಡಿ 79
40. ನೀವು ಏನು ಹೇಳುತ್ತೀರೋ ಅದು ಕಾರ್ಯರೂಪಕ್ಕೆ ಬರುತ್ತದೆ ಎಂದು ನಂಬಿರಿ 81
41. ಪ್ರಾರ್ಥನೆಯಲ್ಲಿ ನಂಬಿಕೆಯ ಮಾತುಗಳನ್ನು ಮಾತನಾಡಿ 83
42. ಆತನ ಮಾತಿಗೆ ಒಪ್ಪಿಕೊಳ್ಳಿ 85
43. ರೋಗಗಳು ಬಿಟ್ಟು ಹೋಗಲು ಆಜ್ಞಾಪಿಸಿ 87
44. ಬೀರುಗಾಳಿಯೊಂದಿಗೆ ಮಾತನಾಡಿ 89
45. ಬಂಧನಗಳಿಂದ ಬಿಡುಗಡೆಯಾದ ಜನರನ್ನು ಘೋಷಿಸಿ 91
46. ಅಭಿಷಿಕ್ತ ಮಾತುಗಳು ಆತ್ಮನ ಜೀವನವನ್ನು ಹೊತ್ತುಕೊಳ್ಳುತ್ತವೆ 93
47. ನಂಬಿಕೆಯಿಂದ ಆಜ್ಞಾಪಿಸಿ 95
48. ಮಾತುಗಳು ನಿಮ್ಮನ್ನು ನಿಮ್ಮ ಆನುವಂಶಿಕತೆಗೆ ತರುತ್ತದೆ 97
49. ಇದು ನನಗೆ ಹೇಳಲ್ಪಟ್ಟ ಪ್ರಕಾರವೇ ಆಗುವದು ಎಂದು ನಾನು ನಂಬುತ್ತೇನೆ 99
50. ಇಲ್ಲದ್ದನ್ನು ಇರುವದಾಗಿ ಕರೆಯುವವರಾಗಿ 101
51. ಆತನ ವಾಗ್ದಾನದ ಪ್ರಕಾರ ಮಾತನಾಡಿ 103

52. ಜೀವನದಲ್ಲಿ ಆಳ್ವಿಕೆ—ಪ್ರಭುತ್ವದ ಮಾತುಗಳನ್ನು ಮಾತನಾಡಿ 105
53. ನಂಬಿಕೆ ಈ ರೀತಿ ಮಾತನಾಡುತ್ತದೆ 107
54. ಅರಿಕೆಮಾಡುವದರ ಮೂಲಕ ರಕ್ಷಣೆಯಾಗುತ್ತದೆ 109
55. ಆತನ ಎಲ್ಲಾ ವಾಗ್ದಾಧಾನಗಳಿಗೆ ನಿಮ್ಮ "ಹೌದು ಮತ್ತು ಆಮೆನ್" ಎಂದು ಘೋಷಿಸಿ 111
56. ನಾವು ನಂಬುತ್ತೇವೆ ಆದ್ದರಿಂದ ನಾವು ಮಾತನಾಡುತ್ತೇವೆ 113
57. ಕೃಪೆಯನ್ನು ಸಾರಲು ವಾಕ್ಯಗಳನ್ನು ಬಳಸಿ 115
58. ಆತ್ಮನ ಕತ್ತಿಯನ್ನು ಉಪಯೋಗಿಸಿ 116
59. ಪ್ರವಾದಿಯ ಮಾತುಗಳೊಂದಿಗೆ ಉತ್ತಮ ಯುದ್ಧವನ್ನು ಸಾರಿರಿ 118
60. ಕ್ರಿಸ್ತನಲ್ಲಿ ನಿಮ್ಮಲ್ಲಿರುವ ಪ್ರತಿಯೊಂದು ಒಳ್ಳೆಯದನ್ನು ಒಪ್ಪಿಕೊಳ್ಳಿ 120
61. ಆತನ ಮಾತು ನಿಮ್ಮ ಪ್ರಪಂಚವನ್ನು ಎತ್ತಿಹಿಡಿಯಬಹುದು ಮತ್ತು ನಿಯಂತ್ರಿಸಬಹುದು 122
62. ಯೇಸು ನಮ್ಮ ತಪ್ಪೊಪ್ಪಿಗೆಯ ಮಹಾಯಾಜಕ 124
63. ನಿಮ್ಮ ಪ್ರತಿಜ್ಞೆಯನ್ನು ಗಟ್ಟಿಯಾಗಿ ಹಿಡಿದುಕೊಳ್ಳಿ 125
64. ಆತನ ಮಾತುಗಳು ಲೋಕವನ್ನು ರೂಪಿಸಿದವು 127
65. ದೇವರು ಹೇಳಿದ್ದಾನೆ, ಆದ್ದರಿಂದ ನಾವು ಧೈರ್ಯವಾಗಿ ಹೇಳುತ್ತೇವೆ 129
66. ನಿಮ್ಮ ನಾಲಿಗೆಯನ್ನು ನಿಯಂತ್ರಿಸಿ, ನಿಮ್ಮ ಇಡೀ ವ್ಯಕ್ತಿಯನ್ನು ನಿಯಂತ್ರಿಸಿ 131
67. ನಿಮ್ಮ ಮಾತುಗಳು ನಿಮ್ಮ ಜೀವನವನ್ನು ಮಾರ್ಗದರ್ಶಿಸುತ್ತವೆ, ಆಳುತ್ತವೆ ಮತ್ತು ಆಶೀರ್ವದಿಸುತ್ತವೆ 134
68. ನಂಬಿಕೆಯನ್ನು ನಿರಂತರವಾಗಿ ಮಾತನಾಡಿ 136
69. ಸೈತಾನನನ್ನು ವಿರೋಧಿಸಿ 138
70. ಆಶೀರ್ವಾದದ ಮಾತುಗಳನ್ನು ಬಿಡುಗಡೆ ಮಾಡಿ 140

71. ಮಾತುಗಳು ವಿಜಯಕ್ಕಾಗಿ ನಿಮ್ಮ ನಂಬಿಕೆಯನ್ನು ಬಿಡುಗಡೆ ಮಾಡುತ್ತವೆ 142
72. ನಾವು ದೇವರವರಾಗಿದ್ದೇವೆ, ಆದ್ದರಿಂದ ನಾವು ದೇವರಿಂದ ಮಾತನಾಡುತ್ತೇವೆ 144
73. ಕುರಿಮರಿಯ ರಕ್ತದಿಂದ ಮತ್ತು ನಮ್ಮ ಸಾಕ್ಷಿಯ ವಾಕ್ಯದಿಂದ ನಾವು ಜಯಿಸುತ್ತೇವೆ 146

# ಪರಿಚಯ

ನಾನು ಯೇಸುವಿನಲ್ಲಿ ನನ್ನ ಸ್ವಂತ ವೈಯಕ್ತಿಕ ಆತ್ಮಿಕ ಪ್ರಯಾಣವನ್ನು ಹಿಂತಿರುಗಿ ನೋಡಿದಾಗ, ನನ್ನ ನಂಬಿಕೆಯನ್ನು ಮಾತನಾಡುವುದು ನನ್ನನ್ನು ಬಲವಾಗಿಡಲು ಸಹಾಯ ಮಾಡಿದ ಶಿಸ್ತುಗಳು ಅಥವಾ ಅಭ್ಯಾಸಗಳಲ್ಲಿ ಒಂದಾಗಿದೆ. ನನ್ನ ಹದಿಹರೆಯದ ವಯಸ್ಸಿನಿಂದ ನಾನು ದೇವರೊಂದಿಗೆ ನನ್ನ ದೈನಂದಿನ ಸಮಯದ ಭಾಗವನ್ನು ನೆನಪಿಸಿಕೊಂಡರೆ, ಸುಮಾರು 30 ನಿಮಿಷಗಳು ಅಥವಾ ಅದಕ್ಕಿಂತ ಹೆಚ್ಚು ಸಮಯವನ್ನು ಮೀಸಲಿಡುತ್ತಿದೆ, ನನ್ನ ಜೀವನ, ನನ್ನ ವರ್ತಮಾನ ಮತ್ತು ನನ್ನ ಭವಿಷ್ಯದ ಮೇಲೆ ದೇವರ ವಾಕ್ಯವನ್ನು ಘೋಷಿಸುತ್ತಾ ಇದ್ದೆ. ನಾನು ಅ ನಿಂದ ಅಃ ವರೆಗೆ ಹೋಗುತ್ತಾ, ನನ್ನ ಜೀವನದ ವಿವಿಧ ಕ್ಷೇತ್ರಗಳಲ್ಲಿ ದೇವರ ವಾಕ್ಯವನ್ನು ಮಾತನಾಡುತ್ತಾ ಮತ್ತು ಕ್ರಿಸ್ತನಲ್ಲಿ ನಾನು ಯಾರೆಂದು ಘೋಷಿಸುತ್ತಾ ಇದ್ದೆ. ಇದು ಪ್ರತಿದಿನ ನನ್ನ ನಂಬಿಕೆಯನ್ನು ಪೋಷಿಸಿತು. ಈ ಪರಿಭಾಷೆಯಲ್ಲಿ ಯೋಚಿಸುವುದು, ದೇವರು ಏನು ಹೇಳುತ್ತಾನೆಂದು ಹೇಳುವುದು ಮತ್ತು ನನ್ನ ನಂಬಿಕೆಯನ್ನು ಹೇಳುವುದು ಪ್ರತಿಯೊಂದು ಸನ್ನಿವೇಶದಲ್ಲೂ ಸಹಜ ಪ್ರತಿಕ್ರಿಯೆಯಾಯಿತು. ಇದನ್ನು ಮಾಡುವುದರಿಂದ ಪ್ರತಿ ಸನ್ನಿವೇಶದ ಮಧ್ಯದಲ್ಲಿ ನಾನು ಮೇಲೇರಲು ಮತ್ತು ನನಗೆ ಗೆಲ್ಲಲು ಸಹಾಯ ಮಾಡಿದೆ. ಈ ರೀತಿಯಾಗಿ ನಾನು ಕೊನೆಯವರೆಗೂ ಬದುಕಲು ಬಯಸುತ್ತೇನೆ—ಆತನ ಶಕ್ತಿಯುತವಾದ, ವಿಫಲಗೊಳ್ಳದ ವಾಕ್ಯದಲ್ಲಿ ನನ್ನ ನಂಬಿಕೆಯನ್ನು ಹೇಳುತ್ತೇನೆ. ಈ ಪುಸ್ತಕವು ನನ್ನನ್ನು ಅಪಾರವಾಗಿ ಶ್ರೀಮಂತಗೊಳಿಸಿರುವದನ್ನು ನಿಮಗೆ ರವಾನಿಸಲು ವಿನ್ಯಾಸಗೊಳಿಸಲಾಗಿದೆ—ಯಾವಾಗಲೂ ದೇವರು ಮತ್ತು ಆತನ ವಾಕ್ಯದಲ್ಲಿ ನಿಮ್ಮ ನಂಬಿಕೆಯನ್ನು ಹೇಳುವ ಸರಳ ಅಭ್ಯಾಸ. **ಇದನ್ನು ನಿಮ್ಮ ಜೀವನ ವಿಧಾನವನ್ನಾಗಿ ಮಾಡಿಕೊಳ್ಳಿ.**

ದೇವರು ಎಲ್ಲಾ ಸೃಷ್ಟಿಯನ್ನು ವಿನ್ಯಾಸಗೊಳಿಸಿದ. ಆತನು ಸೃಷ್ಟಿಸಿದ ಲೋಕಗಳನ್ನು ನಿಯಂತ್ರಿಸುವ ಕಾನೂನುಗಳನ್ನು ಸ್ಥಾಪಿಸಿದನು. ನಾವು ನೈಸರ್ಗಿಕ, ಭೌತಿಕ ಕ್ಷೇತ್ರದಲ್ಲಿ ಕಾನೂನುಗಳನ್ನು ಅರ್ಥಮಾಡಿಕೊಳ್ಳುತ್ತೇವೆ. ನಾವು ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಇತರ ಕ್ಷೇತ್ರಗಳಲ್ಲಿ ಈ ಹಲವು ನಿಯಮಗಳನ್ನು ಪ್ರಮಾಣೀಕರಿಸಿದ್ದೇವೆ ಮತ್ತು ನಾವು ಅವುಗಳನ್ನು ನಮ್ಮ

ಪ್ರಯೋಜನಕ್ಕೆ ಬಳಸಿಕೊಳ್ಳುತ್ತೇವೆ ಮತ್ತು ಫಲಿತಾಂಶಗಳು ವಿನಾಶಕಾರಿ ಎಂದು ತಿಳಿದಿರುವ ಈ ಕಾನೂನುಗಳನ್ನು ಉಲ್ಲಂಘಿಸದಂತೆ ಎಚ್ಚರಿಕೆ ವಹಿಸುತ್ತೇವೆ. ಅದೇ ರೀತಿಯಲ್ಲಿ, ಆತ್ಮಿಕ ಮತ್ತು ನೈಸರ್ಗಿಕ ಕ್ಷೇತ್ರಗಳೊಂದಿಗೆ ನಮ್ಮ ಪರಸ್ಪರ ಕ್ರಿಯೆಯನ್ನು ನಿಯಂತ್ರಿಸುವ ಆತ್ಮಿಕ ಕಾನೂನುಗಳಿವೆ. ನೈಸರ್ಗಿಕವು ಆತ್ಮಿಕತೆಯಿಂದ ಬಂದ ಕಾರಣ, ಈ ಆತ್ಮಿಕ ನಿಯಮಗಳು ನಮ್ಮ ನೈಸರ್ಗಿಕ ಕ್ಷೇತ್ರದ ಮೇಲೂ ಪರಿಣಾಮ ಬೀರುತ್ತವೆ. ಈ ಕೆಲವು ಆತ್ಮಿಕ ನಿಯಮಗಳು ದೇವರ ವಾಕ್ಯದಲ್ಲಿ ನಮಗೆ ಬಹಿರಂಗಗೊಂಡಿವೆ, ಇದರಿಂದ ನಾವು ಅವುಗಳನ್ನು ಅರ್ಥಮಾಡಿಕೊಳ್ಳಬಹುದು ಮತ್ತು ಬದುಕಬಹುದು.

ಶಾಸ್ತ್ರದಲ್ಲಿ ಬಹಿರಂಗಪಡಿಸಿದ ಅನೇಕ ಆತ್ಮಿಕ ಕಾನೂನುಗಳು ಅಥವಾ ಆತ್ಮಿಕ ಸತ್ಯಗಳಲ್ಲಿ, ನಾವು ದೇವರ ವಾಕ್ಯದ ಶಕ್ತಿ, ನಮ್ಮ ಮಾತನಾಡುವ ಮಾತುಗಳ ಶಕ್ತಿ, ನಂಬಿಕೆಯಿಂದ ನಮ್ಮಿಂದ ಮಾತನಾಡುವ ದೇವರ ವಾಕ್ಯದ ಶಕ್ತಿ ಮತ್ತು ಪವಿತ್ರಾತ್ಮನಿಂದ ಪ್ರೇರಿತವಾದ ವಾಕ್ಯಗಳ ಶಕ್ತಿಯ ಬಗ್ಗೆ ನಾವು ಕಲಿಯುತ್ತೇವೆ (ಪ್ರವಾದಿಯ ಮಾತುಗಳು). ದೇವರ ವಾಕ್ಯದಲ್ಲಿ ಅಂತರ್ಗತ ಶಕ್ತಿಯಿದೆ. ಸತ್ಯವೇದವು ನಮಗೆ ಲಿಖಿತ ರೂಪದಲ್ಲಿ ದೇವರ ವಾಕ್ಯವಾಗಿದೆ, ಆದ್ದರಿಂದ ನಾವು ಅದನ್ನು ಸ್ವೀಕರಿಸಬಹುದು. ನಮ್ಮ ಜೀವನದ ಮೇಲೆ ಪ್ರತ್ಯೇಕವಾಗಿ ಪರಿಣಾಮ ಬೀರುವ ನಮ್ಮ ಬಾಯಿಯ ಮಾತುಗಳಲ್ಲಿ ಶಕ್ತಿ ಇದೆ. ದೇವರು ಮತ್ತು ಆತನ ವಾಕ್ಯದಲ್ಲಿ ನಂಬಿಕೆಯಿಂದ ಮಾತನಾಡುವ ಮಾತುಗಳಲ್ಲಿ ಶಕ್ತಿಯಿದೆ. ನಮ್ಮ ನಂಬಿಕೆಯು ದೇವರು ಮತ್ತು ಆತನ ವಾಕ್ಯದಲ್ಲಿದೆ. ನಂಬಿಕೆಯಿಂದ ಮಾತನಾಡುವ ಮಾತುಗಳು, ನಮ್ಮ ಹೃದಯದಲ್ಲಿ ದೇವರ ವಾಕ್ಯದಿಂದ ಹುಟ್ಟಿಕೊಂಡಿವೆ, ಪರ್ವತಗಳನ್ನು ಚಲಿಸುತ್ತವೆ, ಬಿರುಗಾಳಿಗಳನ್ನು ಶಾಂತಗೊಳಿಸುತ್ತವೆ ಮತ್ತು ನಮ್ಮ ಕ್ಷೇತ್ರದಲ್ಲಿ ಅಲೌಕಿಕತೆಯನ್ನು ಬಿಡುಗಡೆ ಮಾಡುತ್ತವೆ. ಪವಿತ್ರಾತ್ಮನ ಪ್ರೇರಣೆಯಿಂದ ಬರುವ ಮಾತುಗಳನ್ನು ಮಾತನಾಡುವ ಶಕ್ತಿಯೂ ಕೂಡ ಇದೆ. ಪವಿತ್ರಾತ್ಮನು ಆತನ ಉದ್ದೇಶಗಳನ್ನು ನಮ್ಮ ಕ್ಷೇತ್ರದಲ್ಲಿ ಮಾತನಾಡುವಂತೆ ಪ್ರೇರೇಪಿಸುತ್ತಾನೆ ಮತ್ತು ನಮಗೆ ಸೂಚನೆ ನೀಡುತ್ತಾನೆ. ನಾವು ಆತನಿಗೆ ವಿಧೇಯರಾದಾಗ, ನೈಸರ್ಗಿಕ ಕ್ಷೇತ್ರದಲ್ಲಿ ಪ್ರಬಲವಾದ ವಿಷಯಗಳು ಸಂಭವಿಸುತ್ತವೆ. ಇವೆಲ್ಲವೂ ನಮ್ಮ ಮಾತಿಗೆ, ನಾವು ಮಾತನಾಡುವ ಮಾತಿಗೆ ಸಂಬಂಧಿಸಿದ್ದು.

ವಾಕ್ಯದ ಉದ್ದಕ್ಕೂ, ದೇವರು ತನ್ನ ಜನರಿಗೆ ತನ್ನ ವಾಕ್ಯವನ್ನು

ಮಾತನಾಡಲು ಸೂಚಿಸುತ್ತಾನೆ. ಆತನ ವಾಕ್ಯವು ನಮ್ಮ ಬಾಯಿಂದ ಮತ್ತು ನಮ್ಮ ಹೃದಯದಲ್ಲಿ ನಂಬಿಕೆಯಿಂದ ಹೊರಡುವ ಮಾತುಗಳಂತೆ ಆತನ ಸೃಜನಾತ್ಮಕ, ಅದ್ಭುತ ಮಾಡುವ ಶಕ್ತಿಯನ್ನು ನಮ್ಮ ನೈಸರ್ಗಿಕ ಕ್ಷೇತ್ರದಲ್ಲಿ ಬಿಡುಗಡೆ ಮಾಡಲು ಕಾರಣವಾಗುತ್ತದೆ. ನಮ್ಮ ಬಾಯಿಂದ ಹೊರಡುವ ಮಾತುಗಳಂತೆ ಆತನ ವಾಕ್ಯವು ಶತ್ರುಗಳ ವಿರುದ್ಧ ನಮ್ಮ ಅಸ್ತ್ರವಾಗುತ್ತದೆ.

ನಮ್ಮ ವರ್ತಮಾನ ಮತ್ತು ನಮ್ಮ ಭವಿಷ್ಯದ ಮೇಲೆ ದೇವರ ವಾಕ್ಯವನ್ನು ಮಾತನಾಡುವ ಮೂಲಕ ನಾವು ನಮ್ಮ ಜಗತ್ತನ್ನು ರೂಪಿಸಬಹುದು. ನಾವು ಯಾವಾಗಲೂ ಮತ್ತು ಎಲ್ಲಾ ಸಂದರ್ಭಗಳಲ್ಲಿ ನಂಬಿಕೆಯ ಮಾತುಗಳನ್ನು ಮಾತನಾಡಲು ಕಲಿಯಬೇಕು. ನಂಬಿಕೆಯಿಂದ ಮಾತನಾಡುವುದು ಪರ್ವತದ ಅಸ್ತಿತ್ವವನ್ನು ಅಥವಾ ಚಾಲ್ತಿಯಲ್ಲಿರುವ ಬೀರುಗಾಳಿಯ ಉಗ್ರತೆಯನ್ನು ನಿರಾಕರಿಸುವುದಲ್ಲ. ಬದಲಿಗೆ, ನಂಬಿಕೆಯು ಪರ್ವತಕ್ಕೆ ದಾರಿಯಲ್ಲಿ ನಿಲ್ಲುವ ಹಕ್ಕನ್ನು ನಿರಾಕರಿಸುತ್ತದ ನಂಬಿಕೆಯು ಗಾಳಿ ಮತ್ತು ಬೀರುಗಾಳಿಯನ್ನು ನಾಶಪಡಿಸುವ ಹಕ್ಕನ್ನು ಕಸಿದುಕೊಳ್ಳುತ್ತದೆ ಮತ್ತು ಬದಲಾಗಿ, ದೇವರು ಬಿಡುಗಡೆ ಮಾಡುವ ಶಾಂತಿ ಮತ್ತು ಶಾಂತತೆಗೆ ದಾರಿ ಮಾಡಿಕೊಡುತ್ತದೆ. ನಂಬಿಕೆಯು ಅನಾರೋಗ್ಯವನ್ನು ಬಿಟ್ಟುಹೋಗುವಂತೆ ಮತ್ತು ದೇವರಿಂದ ಬರುವ ಸ್ವಸ್ಥತೆ ಮತ್ತು ಸಂಪೂರ್ಣತೆಗೆ ದಾರಿ ಮಾಡಿಕೊಡುವಂತೆ ಆದೇಶಿಸುತ್ತದೆ.

ಅನೇಕ ಜನರು ಕೀಳರಿಮೆ, ಆತ್ಮವಿಶ್ವಾಸದ ಕೊರತೆ, ಭಯ, ಆತಂಕ, ಕಾತರ, ಖಿನ್ನತೆ ಮತ್ತು ಇತರ ಭಾವನಾತ್ಮಕ ಸಮಸ್ಯೆಗಳು ಮತ್ತು ಬಂಧನಗಳ ಜೊತೆ ಹೋರಾಡುತ್ತಾರೆ. ನಮ್ಮ ಜೀವನದಲ್ಲಿ ಉದ್ದೇಶಪೂರ್ವಕವಾಗಿ ಮತ್ತು ಪ್ರತಿಯೊಂದು ಸನ್ನಿವೇಶದಲ್ಲೂ ದೇವರ ವಾಕ್ಯವನ್ನು ಮಾತನಾಡುವ ಅಭ್ಯಾಸವು ಭಾವನಾತ್ಮಕವಾಗಿ ಸಂಪೂರ್ಣ ಸ್ವಾತಂತ್ರ್ಯ ಮತ್ತು ಸಂಪೂರ್ಣತೆಗೆ ಪ್ರಮುಖವಾಗಿದೆ. ಅದನ್ನು ಅಭ್ಯಾಸ ಮಾಡಿ. ಇದು ಉಚಿತ! ಅದಕ್ಕೆ ಬೇಕಾಗಿರುವುದು ಸ್ವಲ್ಪ ನಂಬಿಕೆ ಮತ್ತು ಶಿಸ್ತು. ನೀವು ಮತ್ತೆ ಎಂದಿಗೂ ಅದೇ ಆಗುವುದಿಲ್ಲ!

ನಮ್ಮ ಮಾತುಗಳ ಪ್ರಾಮುಖ್ಯತೆ, ದೇವರ ವಾಕ್ಯವನ್ನು ಮಾತನಾಡುವ ಶಕ್ತಿ, ನಂಬಿಕೆಯಿಂದ ತುಂಬಿದ ಮಾತುಗಳನ್ನು ಮಾತನಾಡುವ ಶಕ್ತಿ ಮತ್ತು ಆತ್ಮದಿಂದ ಪ್ರೇರಿತವಾದ ಮಾತುಗಳನ್ನು ಮಾತನಾಡುವ ಶಕ್ತಿಯ ಬಗ್ಗೆ

ಒಳನೋಟವನ್ನು ನೀಡುವ ಅನೇಕ ಪ್ರಮುಖ ವೇದವಾಕ್ಯಗಳನ್ನು ನಾವು ಸೆರೆಹಿಡಿಯಲು ಪ್ರಯತ್ನಿಸಿದ್ದೇವೆ. (ಈ ಪಟ್ಟಿಗೆ ನೀವು ಸೇರಿಸಲು ಬಯಸುವ ಇತರ ವಾಕ್ಯದ ವಾಕ್ಯವೃಂದಗಳು ಇರಬಹುದು. ದಯವಿಟ್ಟು ಹಾಗೆ ಮಾಡಿ.) ಇವುಗಳನ್ನು ಚಿಕ್ಕದಾದ, ಸುಲಭವಾಗಿ **ಜೀರ್ಣಿಸಿಕೊಳ್ಳುವ ಅಧ್ಯಾಯಗಳಲ್ಲಿ** ಸಂಕಲಿಸಲಾಗಿದೆ. ನಿಮ್ಮ ವೈಯಕ್ತಿಕ ಸಮಯಕ್ಕಾಗಿ, ನಿಮ್ಮ ಕುಟುಂಬ ಪ್ರಾರ್ಥನೆಯ ಸಮಯದಲ್ಲಿ ಅಥವಾ ನಿಮ್ಮ ಸಣ್ಣ ಗುಂಪಿನಲ್ಲಿ ಈ ಪುಸ್ತಕವನ್ನು ದೈನಂದಿನ ಭಕ್ತಿಯಂತೆ ಬಳಸಿ. ನಿಮ್ಮ ವರ್ತಮಾನ ಮತ್ತು ನಿಮ್ಮ ಭವಿಷ್ಯದ ಮೇಲೆ ನಂಬಿಕೆಯಿಂದ ದೇವರ ವಾಕ್ಯವನ್ನು ಮಾತನಾಡುವ ಶಕ್ತಿಯನ್ನು ನೆನಪಿಸಿಕೊಳ್ಳಲು ಇದನ್ನು ಆಗಾಗ್ಗೆ ಓದಿ. ನಿಮ್ಮ ನಂಬಿಕೆಯನ್ನು ನೀವು ಮಾತನಾಡುವಾಗ ದೇವರ ವಾಕ್ಯದ ಶಕ್ತಿಯು ನಿಮ್ಮ ಜಗತ್ತನ್ನು ರೂಪಿಸಲಿ.

ದೇವರು ಆಶೀರ್ವದಿಸಲಿ!

ಆಶಿಷ್ ರಾಯ್‌ಚೂರ್

# 1

# ಎರಡೂ ಕ್ಷೇತ್ರಗಳಲ್ಲಿ ಮಾತುಗಳು ಪ್ರಮುಖವಾಗಿವೆ

**ಆದಿಕಾಂಡ 1:1–5**

**1 ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಉಂಟುಮಾಡಿದನು.**

**2 ಭೂಮಿಯು ಕ್ರಮವಿಲ್ಲದೆಯೂ ಬರಿದಾಗಿಯೂ ಇತ್ತು; ಆದಿಸಾಗರದ ಮೇಲೆಕತ್ತಲಿತ್ತು; ದೇವರಾತ್ಮವು ಜಲಸಮೂಹಗಳ ಮೇಲೆ ಚಲಿಸುತ್ತಿತ್ತು.**

**3 ಆಗ ದೇವರು – ಬೆಳಕಾಗಲಿ ಅನ್ನಲು ಬೆಳಕಾಯಿತು.**

**4 ದೇವರು ಆ ಬೆಳಕನ್ನು ಒಳ್ಳೇದೆಂದು ನೋಡಿದನು. ದೇವರು ಬೆಳಕನ್ನೂ ಕತ್ತಲೆಯನ್ನೂ ಬೇರೆ ಬೇರೆ ಮಾಡಿ ಬೆಳಕಿಗೆ ಹಗಲೆಂದೂ ಕತ್ತಲೆಗೆ ಇರುಳೆಂದೂ ಹೆಸರಿಟ್ಟನು.**

**5 ಹೀಗೆ ಸಾಯಂಕಾಲವೂ ಪ್ರಾತಃಕಾಲವೂ ಆಗಿ ಮೊದಲನೆಯ ದಿನವಾಯಿತು.**

ದೇವರು ಎಲ್ಲಾ ವಸ್ತುಗಳ ಮಹಾನ್ ವಿನ್ಯಾಸಕ, ವಾಸ್ತುಶಿಲ್ಪಿ ಮತ್ತು ಸೃಷ್ಟಿಕರ್ತ. ಸೃಷ್ಟಿಯ ವಿಸ್ತಾರದಲ್ಲಿ ನಾವು ಇನ್ನೂ ಅನೇಕ ವಿಷಯಗಳನ್ನು ಅನ್ವೇಷಿಸುತ್ತಿದ್ದೇವೆ ಮತ್ತು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದೇವೆ. ದೇವರು ಅನಂತ, ಮತ್ತು ಆತನ ಸೃಷ್ಟಿ ಅನೇಕ ವಿಧಗಳಲ್ಲಿ ಆತನ ಅನಂತತೆಯನ್ನು ಘೋಷಿಸುತ್ತದೆ. ದೇವರು ಅನೇಕ ರೀತಿಯಲ್ಲಿ ಸೃಷ್ಟಿಯ ಪ್ರಕ್ರಿಯೆಯನ್ನು ನಡೆಸಬಹುದಿತ್ತು. ಬಹುಶಃ ಆತನು ಕೇವಲ ಆಲೋಚನೆಗಳನ್ನು ಹೊಂದಿ ಮತ್ತು ಆತನ ಆಲೋಚನೆಗಳು ಭೌತಿಕ ಕ್ಷೇತ್ರದಲ್ಲಿ ರೂಪುಗೊಳ್ಳಲು ಅವಕಾಶ ಮಾಡಿಕೊಡಬಹುದಿತ್ತು. ಪ್ರಾಯಶಃ ಆತನು ತನ್ನ ನೀಲನಕ್ಷೆಯ ಪ್ರಕಾರ ನೈಸರ್ಗಿಕ ಕ್ಷೇತ್ರಕ್ಕೆ ಆಕಾರ ಕೊಡಲು, ರೂಪಿಸಲು ಮತ್ತು ವಿತರಿಸಲು ದೇವದೂತರ ದಂಡನ್ನು ಕೆಲಸಕ್ಕೆ ಇಡಬಹುದಿತ್ತು. ಆದಾಗ್ಯೂ, ದೇವರು ವಿಷಯಗಳನ್ನು ಅಸ್ತಿತ್ವಕ್ಕೆ ತರಲು ಮಾತುಗಳನ್ನು ಬಳಸಿದನು. ದೇವರು ತನ್ನ ಮಾತುಗಳಿಂದ ಸೃಷ್ಟಿಸಿದನೆಂದು ಸತ್ಯವೇದವು ನಮಗೆ ತಿಳಿಸುತ್ತದೆ. *“ದೇವರು ಅನ್ನಲು ... ಮತ್ತು ಹಾಗೆ ಆಯಿತು ...”*

ಆತನ ಮಾತುಗಳು ಆತನ ಮನಸ್ಸಿನಲ್ಲಿರುವದನ್ನು ಅಸ್ತಿತ್ವಕ್ಕೆ ತರಲು ಆತನ ವಿನ್ಯಾಸ ಮತ್ತು ಆತನ ಸೃಜನಶೀಲ ಶಕ್ತಿಯನ್ನು ಹೊಂದಿದ್ದವು. ಈ ಸತ್ಯವನ್ನು ವೇದವಾಕ್ಯದಲ್ಲಿ ನಮಗೆ ಪುನರಾವರ್ತಿಸುವುದನ್ನು ನಾವು ನೋಡುತ್ತೇವೆ. ದೇವರು ತನ್ನ ಮಾತಿನ ಮೂಲಕ ಕೆಲಸ ಮಾಡುತ್ತಾನೆ.

ಆತನು ಮಾತನಾಡುತ್ತಾನೆ, ಮತ್ತು ಆತನು ಏನು ಮಾತನಾಡುತ್ತಾನೋ ಅದು ಕಾರ್ಯರೂಪಕ್ಕೆ ಬರುತ್ತದೆ. ಆದ್ದರಿಂದ ನೈಸರ್ಗಿಕ ಕ್ಷೇತ್ರದಲ್ಲಿ ಎಲ್ಲವೂ ಆತನ ಮಾತುಗಳಿಗೆ ಒಳಪಟ್ಟಿರುತ್ತದೆ ಮತ್ತು ಆತನು ಮಾತುಗಳಿಗೆ ಪ್ರತಿಕ್ರಿಯಿಸುತ್ತದೆ.

ದೇವರು ಆತ್ಮನು ಮತ್ತು ಆತನು ನೈಸರ್ಗಿಕ ಕ್ಷೇತ್ರವನ್ನು ಅಸ್ತಿತ್ವಕ್ಕೆ ತರಲು ಮಾತುಗಳನ್ನು ಬಳಸಿದನು. ಆದ್ದರಿಂದ, ಮಾತುಗಳು ಈ ಎರಡು ಕ್ಷೇತ್ರಗಳನ್ನು ಜೋಡಿಸುತ್ತವೆ. ನೈಸರ್ಗಿಕ ಕ್ಷೇತ್ರವು ಆತ್ಮನ ಕ್ಷೇತ್ರದ ಮಾತುಗಳಿಗೆ ಪ್ರತಿಕ್ರಿಯಿಸುತ್ತದೆ.

ಮನುಷ್ಯರಾಗಿ, ನಾವು ದೇವರ ಸ್ವರೂಪದಲ್ಲಿ ಸೃಷ್ಟಿಯಾಗಿದ್ದೇವೆ ಎಂದು ಸತ್ಯವೇದವು ನಮಗೆ ಕಲಿಸುತ್ತದೆ. ನಾವು ಆತ್ಮವನ್ನು ಹೊಂದಿರುವ ಆತ್ಮ ಜೀವಿಗಳು (ಮನಸ್ಸು, ಚಿತ್ತ, ಭಾವನೆಗಳು) ದೇಹದಲ್ಲಿ ನೆಲೆಗೊಂಡಿವೆ (1 ಥೆಸಲೋನಿಕದವರಿಗೆ 5:23). ನಮ್ಮ ಮಾತುಗಳು ಕೂಡ ಎರಡು ಕ್ಷೇತ್ರಗಳನ್ನು ಜೋಡಿಸುತ್ತವೆ, ಆತ್ಮಿಕ ಮತ್ತು ನೈಸರ್ಗಿಕ ಕ್ಷೇತ್ರಗಳು. ನಮ್ಮ ಮಾತುಗಳು ನಮ್ಮನ್ನು ದೇವರೊಂದಿಗೆ ಜೋಡಿಸುತ್ತವೆ (ಅಥವಾ ಇತರರು, ಉದಾಹರಣೆಗೆ, ಮಾಂತ್ರಿಕರು ತಮ್ಮ ಮಾತುಗಳನ್ನು ದುಷ್ಟ ಶಕ್ತಿಗಳೊಂದಿಗೆ ಸಂಪರ್ಕಿಸಲು ಬಳಸುತ್ತಾರೆ). ನಮ್ಮ ಮಾತುಗಳು ನಮ್ಮ ನೈಸರ್ಗಿಕ ಪ್ರಪಂಚದ ಮೇಲೆ ಪರಿಣಾಮ ಬೀರುತ್ತವೆ. ಮತ್ತು ದೇವರು ನಮ್ಮ ಮೂಲಕ ತನ್ನ ಮಾತುಗಳನ್ನು ಹೇಳಿದಾಗ, ಆತನ ಶಕ್ತಿಯು ನಮ್ಮ ಮೂಲಕ ಬಿಡುಗಡೆಯಾಗುತ್ತದೆ ಮತ್ತು ನಮ್ಮ ಪ್ರಪಂಚದ ಮೇಲೆ ಪರಿಣಾಮ ಬೀರುತ್ತದೆ!

# 2

# ಪ್ರಭುತ್ವವನ್ನು ಮಾತುಗಳ ಮೂಲಕ ಪ್ರಯೋಗಿಸಲಾಗುತ್ತದೆ

**ಆದಿಕಾಂಡ 1:26–28**

**[26] ಆಮೇಲೆ ದೇವರು – ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟುಮಾಡೋಣ; ಅವರು ಸಮುದ್ರದಲ್ಲಿರುವ ಮೀನುಗಳ ಮೇಲೆಯೂ ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳ ಮೇಲೆಯೂ ಪಶುಗಳ ಮೇಲೆಯೂ ನೆಲದ ಮೇಲೆ ಹರಿದಾಡುವ ಎಲ್ಲಾ ಕ್ರಿಮಿಕೀಟಗಳ ಮೇಲೆಯೂ ಎಲ್ಲಾ ಭೂಮಿಯ ಮೇಲೆಯೂ ದೊರೆತನಮಾಡಲಿ ಅಂದನು.**

**[27] ಹೀಗೆ ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದನು; ದೇವಸ್ವರೂಪದಲ್ಲಿ ಅವನನ್ನು ಉಂಟುಮಾಡಿದನು; ಅವರನ್ನು ಗಂಡುಹೆಣ್ಣಾಗಿ ನಿರ್ಮಿಸಿದನು.**

**[28] ಇದಲ್ಲದೆ ದೇವರು ಅವರನ್ನು ಆಶೀರ್ವದಿಸಿ- ನೀವು ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ. ಸಮುದ್ರದ ಮೀನುಗಳ ಮೇಲೆಯೂ ಆಕಾಶದ ಪಕ್ಷಿಗಳ ಮೇಲೆಯೂ ಭೂಮಿಯಲಿ ಚಲಿಸುವ ಎಲ್ಲಾ ಜೀವಿಗಳ ಮೇಲೆಯೂ ದೊರೆತನಮಾಡಿರಿ ಅಂದನು.**

**ಆದಿಕಾಂಡ 2:19,20**

**[19] ಆಗ ಆತನು ಎಲ್ಲಾ ಭೂಜಂತುಗಳನ್ನೂ ಆಕಾಶದ ಪಕ್ಷಿಗಳನ್ನೂ ಮಣ್ಣಿನಿಂದ ನಿರ್ಮಿಸಿ- ಇವುಗಳಿಗೆ ಆ ಮನುಷ್ಯನು ಏನೇನು ಹೆಸರಿಡುವನು ನೋಡೋಣ ಎಂದು ಅವನ ಬಳಿಗೆ ಬರಮಾಡಿದನು. ಮನುಷ್ಯನು ಒಂದೊಂದು ಪ್ರಾಣಿಗೆ ಯಾವ ಯಾವ ಹೆಸರಿಟ್ಟನೋ ಅದೇ ಹೆಸರಾಯಿತು.**

**[20] ಹೀಗೆ ಆ ಮನುಷ್ಯನು ಎಲಾ ಪಶುಗಳಿಗೂ ಆಕಾಶದ ಪಕ್ಷಿಗಳಿಗೂ ಕಾಡು ಮೃಗಗಳಿಗೂ ಹೆಸರಿಟ್ಟನು. ಆದರೆ ಆ ಮನುಷ್ಯನಿಗೆ ಸರಿಬೀಳುವ ಸಹಕಾರಿ ಕಾಣಿಸಲಿಲ್ಲ.**

ದೇವರು ಪುರುಷ ಮತ್ತು ಸ್ತ್ರೀಯನ್ನು ಸೃಷ್ಟಿಸಿದನು ಮತ್ತು ಅವರಿಗೆ ಒಂದು ಆಯೋಗವನ್ನು ಕೊಟ್ಟನು, ಅದನ್ನು ನಾವು ಆದಿಕಾಂಡ ಮೊದಲ ಎರಡು ಅಧ್ಯಾಯಗಳಲ್ಲಿ ಓದುತ್ತೇವೆ ಮತ್ತು ನಾವು ಅದನ್ನು ಆದಿಕಾಂಡದ ಆಯೋಗ ಎಂದು ಉಲ್ಲೇಖಿಸುತ್ತೇವೆ. ಭೂಮಿಯ ಮೇಲಿನ ಎಲ್ಲಾ ಜೀವಿಗಳ ಮೇಲೆ ಜನರು ಪ್ರಾಬಲ್ಯ ಹೊಂದುವದು ಆದಿಕಾಂಡ ಆಯೋಗದ ಭಾಗವಾಗಿತ್ತು. ಪ್ರಭುತ್ವ ಹೊಂದುವುದು ಎಂದರೆ ಆಳುವುದು. ದೇವರು ಈ ಪ್ರತಿಯೊಂದು ಜೀವಿಗಳನ್ನು ಆದಾಮನು ತಮ್ಮ ಹೆಸರನ್ನು ನೀಡುವಂತೆ ಕರೆತಂದನು

ಎಂಬುದು ಕುತೂಹಲಕಾರಿಯಾಗಿದೆ. ಅಂತಹ ಕ್ರಿಯೆಯ ಫಲಿತಾಂಶಗಳಲ್ಲಿ ಒಂದು ಏನೆಂದರೆ ಪ್ರತಿಯೊಂದು ಜೀವಿಯು ಯಾರು ಉಸ್ತುವಾರಿ ವಹಿಸುತ್ತಾರೆ ಎಂಬುದನ್ನು ಅರ್ಥಮಾಡಿಕೊಳ್ಳುವದು. ದೇವರು ಆದಾಮನಿಗೆ ಭೂಮಿಯ ಉಸ್ತುವಾರಿ ವಹಿಸಿದ್ದನು. ಆದ್ದರಿಂದ ಭೂಮಿಯ ಮೇಲಿನ ಪ್ರತಿಯೊಂದು ಜೀವಿಯೂ ಆದಾಮನ ಆಳ್ವಿಕೆಯಲ್ಲಿತ್ತು, ಯಾವುದೇ ಪ್ರಶ್ನೆಗಳನ್ನು ಕೇಳಲಿಲ್ಲ! ಆದಾಮನ ಪ್ರಭುತ್ವ ಅಥವಾ ಆಳ್ವಿಕೆಯು ದೇವರಿಂದಲೇ ಬಂದಿತು. ಆದಾಮನು ಪ್ರತಿಯೊಂದು ಜೀವಿಗಳಿಗೆ ಒಂದು ಹೆಸರನ್ನು ಕರೆದು ನಿಯೋಜಿಸಿದಂತೆ, ಅವನು ಪದಗಳ ಮೂಲಕ, ಭೂಮಿಯ ಮೇಲೆ ತನ್ನ ದೇವರು ನೀಡಿದ ಪ್ರಭುತ್ವ ಮತ್ತು ಆಳ್ವಿಕೆಯನ್ನು ವ್ಯಕ್ತಪಡಿಸುತ್ತಿದ್ದನು ಮತ್ತು ಚಲಾಯಿಸುತ್ತಿದ್ದನು. ಈ ಪ್ರಕ್ರಿಯೆಯಲ್ಲಿ ದೇವರು ಅವನನ್ನು ಬೆಂಬಲಿಸುತ್ತಿದ್ದನು.

ದೇವರು ಆದಿಕಾಂಡ ಆಯೋಗವನ್ನು ಹಿಂತೆಗೆದುಕೊಂಡಿಲ್ಲ. ನಾವು ಪ್ರಭುತ್ವವನ್ನು ಹೊಂದಲು ದೇವರಿಂದ ವಿನ್ಯಾಸಗೊಳಿಸಲ್ಪಟ್ಟಿದ್ದೇವೆ ಮತ್ತು ನಿಯೋಜಿಸಲ್ಪಟ್ಟಿದ್ದೇವೆ. ಪ್ರಭುತ್ವವನ್ನು ಮಾತುಗಳ ಮೂಲಕ ವ್ಯಕ್ತಪಡಿಸಲಾಗುತ್ತದೆ ಮತ್ತು ಪ್ರಯೋಗಿಸಲಾಗುತ್ತದೆ. ನಿಮ್ಮ ಮಾತುಗಳು ಈ ಕ್ಷೇತ್ರದಲ್ಲಿನ ವಿಷಯಗಳ ಮೇಲೆ ನಿಮ್ಮ ದೇವರು ನೀಡಿದ ಪ್ರಭುತ್ವವನ್ನು ವ್ಯಕ್ತಪಡಿಸಲಿ.

# 3
# ಆತನ ಮಾತಿನ ಪ್ರಕಾರ ನಿಮ್ಮನ್ನು ನೀವೇ ಕರೆ ಮಾಡಿ

**ಆದಿಕಾಂಡ 17:4,5,15,16**

**[4]ನಾನಂತೂ ನಿನಗೆ ವಾಗ್ದಾನಮಾಡುತ್ತೇನೆ; ಏನಂದರೆ ನೀನು ಅನೇಕ ಜನಾಂಗಗಳಿಗೆ ಮೂಲಪುರುಷನಾಗುವಿ.**

**[5] ಇನ್ನು ಮುಂದೆ ನಿನಗೆ ಅಬ್ರಾಮ ಎಂದು ಹೆಸರಿರುವದಿಲ್ಲ. ನಿನ್ನನ್ನು ಅನೇಕ ಜನಾಂಗಗಳಿಗೆ ಮೂಲ ಪಿತೃವಾಗಿ ನೇಮಿಸಿರುವದರಿಂದ ನಿನಗೆ ಅಬ್ರಹಾಮನೆಂದು ಹೆಸರಿರುವದು.**

**[15] ಇದಲ್ಲದೆ ದೇವರು ಅಬ್ರಹಾಮನಿಗೆ - ನೀನು ಇನ್ನು ಮುಂದೆ ನಿನ್ನ ಪತ್ನಿಯನ್ನು ಸಾರಯಳೆಂದು ಕರೆಯದೆ ಸಾರಾ ಎಂದು ಕರೆಯಬೇಕು.**

**[16] ನಾನು ಆಕೆಯನ್ನು ಆಶೀರ್ವದಿಸಿ ಆಕೆಯಲ್ಲಿ ನಿನಗೆ ಮಗನನ್ನು ಕೊಡುವೆನು. ನಾನು ಆಕೆಯನ್ನು ಆಶಿರ್ವದಿಸಿದ್ದರಿಂದ ಆಕೆಯಿಂದ ಅನೇಕ ಜನಾಂಗಗಳೂ ಅರಸರೂ ಉತ್ಪತಿಯಾಗುವರು ಎಂದು ಹೇಳಲು**

ಅಬ್ರಹಾಮನನ್ನು ಹೊಸ ಒಡಂಬಡಿಕೆಯಲ್ಲಿ ನಂಬಿಕೆಯ ತಂದೆ ಎಂದು ಕರೆಯಲಾಗುತ್ತದೆ. ದೇವರು ಅಬ್ರಾಮ್ ಮತ್ತು ಸಾರಾಯಳೊಂದಿಗೆ ವ್ಯವಹರಿಸುವಾಗ, ಅವರ ಹೆಸರುಗಳನ್ನು ಬದಲಾಯಿಸಲು ಅವರಿಗೆ ಸೂಚನೆ ನೀಡುವುದು ಅಗತ್ಯವೆಂದು ಗಮನಿಸುವುದು ಆಸಕ್ತಿದಾಯಕವಾಗಿದೆ, ಇದರಿಂದಾಗಿ ಅವರು ತಮ್ಮ ಜೀವನಕ್ಕಾಗಿ ಆತನು ವಾಗ್ದಾನ ಮಾಡಿದ ಪ್ರಕಾರ ತಮ್ಮನ್ನು ತಾವು ಕರೆಯಲು ಪ್ರಾರಂಭಿಸಬಹುದು.

ಅಬ್ರಾಮ್ ಎಂದರೆ "ಉನ್ನತ ತಂದೆ" ಎಂದರ್ಥ, ಆದರೆ ಅಬ್ರಹಾಮ ಎಂದರೆ "ಬಹುಜನರ ತಂದೆ" ಎಂದರ್ಥ.

ಸಾರಾಯ ಎಂದರೆ "ರಾಜರೀವಿಯ ಅಥವಾ ಪ್ರಾಬಲ್ಯ" ಎಂದರ್ಥ, ಆದರೆ ಸಾರಾ ಎಂದರೆ "ರಾಣಿ ಅಥವಾ ರಾಜಕುಮಾರರ ತಾಯಿ."

ಅಬ್ರಹಾಮನು ತನ್ನನ್ನು ಆ ಹೆಸರಿನಿಂದ ಕರೆದುಕೊಂಡಾಗಲೆಲ್ಲಾ, ಅವನು ತನ್ನ ಜೀವನದ ಮೇಲೆ ದೇವರ ವಾಗ್ದಾನವನ್ನು ಘೋಷಿಸುತ್ತಿದ್ದನು.

ದೇವರು ನನ್ನ ಕುರಿತು ಹೇಳಿದಂತೆಯೇ "ನಾನು ಅನೇಕ ಜನಾಂಗಗಳ ತಂದೆ" ಎಂದು ಹೇಳುತ್ತಿದ್ದನು. ಪ್ರತಿ ಬಾರಿ ಸಾರಾ ತನ್ನನ್ನು ಆ ಹೆಸರಿನಿಂದ ಕರೆದುಕೊಂಡಾಗ, ಅವಳು ತನ್ನ ಜೀವನದ ಮೇಲೆ ದೇವರ ವಾಗ್ದಾನವನ್ನು ಘೋಷಿಸುತ್ತಿದ್ದಳು. ದೇವರು ನನ್ನ ಕುರಿತು ಹೇಳಿದಂತೆ "ನಾನು ಜನಾಂಗಗಳ, ರಾಜರ, ರಾಜಕುಮಾರರ ತಾಯಿ" ಎಂದು ಅವಳು ಹೇಳುತ್ತಿದ್ದಳು. ಅವರಿಗೆ ಇನ್ನೂ ಮಗುವಾಗಿರಲಿಲ್ಲ. ಆದರೆ ಅವರು ದೇವರು ಹೇಳಿದ್ದನ್ನು ಸತ್ಯವೆಂದು ಘೋಷಿಸಿದರು. ಅವರು ದೇವರ ವಾಗ್ದಾನದ ಪ್ರಕಾರ ತಮ್ಮನ್ನು ತಾವು ಕರೆಯಲು ಪ್ರಾರಂಭಿಸಿದಾಗ ಅದು ಆರಂಭದಲ್ಲಿ ಮೂರ್ಖತನ ಮತ್ತು ಹಾಸ್ಯಾಸ್ಪದವಾಗಿ ತೋರಿರಬಹುದು. ಆದರೆ ವಾಗ್ದಾನವು ನೆರವೇರಿತು, ಮತ್ತು ಅವರು ದೇವರು ಹೇಳಿದ ಪ್ರಕಾರ ಆದರು!

ದೇವರ ವಾಗ್ದಾನದ ಪ್ರಕಾರ ತಮ್ಮನ್ನು ತಾವು ಕರೆದುಕೊಳ್ಳುವಲ್ಲಿ ಅವರು ಏನಾದರೂ ತಪ್ಪು ಮಾಡುತ್ತಿದ್ದಾರಾ? ಖಂಡಿತವಾಗಿಯೂ ಇಲ್ಲ! ದೇವರು ಅವರಿಗೆ ಹಾಗೆ ಮಾಡಲು ಸೂಚಿಸಿದನು. ಪೌಲ ಇದನ್ನು ರೋಮಾಪುರದವರಿಗೆ 4 ರಲ್ಲಿ ವಿವರಿಸುತ್ತಾನೆ, ಅದನ್ನು ನಾವು ನಂತರ ಪರಿಗಣಿಸೋಣ. ಅಬ್ರಹಾಮನ ನಂಬಿಕೆಯ ಹೆಜ್ಜೆಗಳನ್ನು ಅನುಸರಿಸಲು ನಮಗೆ ಹೇಳಲಾಗಿದೆ.

ನಾವು ದೇವರ ಲಿಖಿತ ವಾಕ್ಯವನ್ನು ಹೊಂದಿದ್ದೇವೆ, ಅಲ್ಲಿ ದೇವರು ತನ್ನ ಜನರಿಗೆ ಮತ್ತು ಯೇಸು ಕ್ರಿಸ್ತನಲ್ಲಿರುವ ಎಲ್ಲರಿಗೂ ವಾಗ್ದಾನಗಳನ್ನು ಘೋಷಿಸಿದ್ದಾನೆ. ಈ ವಾಗ್ದಾನಗಳು ದೇವರ ಎಲ್ಲಾ ಜನರಿಗೆ ಲಭ್ಯವಿದೆ. ಆತನು ತನ್ನ ಜನರಿಗಾಗಿ ಹೊಂದಿರುವ ಬಾಧ್ಯತೆಯಲ್ಲಿ ಪಾಲ್ಗೊಳ್ಳಲು ನಮ್ಮನ್ನು ಯೋಗ್ಯಾರನ್ನಾಗಿ ಮಾಡಿದ್ದಾನೆ (ಕೊಲೊಸ್ಸೆಯವರಿಗೆ 1:12). ನಿಮ್ಮ ಜೀವನದಲ್ಲಿ ದೇವರ ವಾಗ್ದಾನಗಳ ಸತ್ಯವನ್ನು ಘೋಷಿಸಿ. ದೇವರ ವಾಕ್ಯದ ಪ್ರಕಾರ ನಿಮ್ಮನ್ನು ಕರೆದುಕೊಳ್ಳಿ. ನೀವು ಯಾರೆಂದು ದೇವರು ಹೇಳುವಂತೆ ನೀವಾಗಿದ್ದಿರಿ. ನೀವು ಏನು ಮಾಡಬಹುದೆಂದು ದೇವರು ಹೇಳುತ್ತಾನೋ ಅದನ್ನು ನೀವು ಮಾಡಬಹುದು. ಆತನು ವಾಗ್ದಾನ ಮಾಡಿದ್ದೆಲ್ಲವೂ ನೀವು ಆಗುವಿರಿ.

# 4

# ನಿಮ್ಮ ಮಾತುಗಳು ಆಶೀರ್ವಾದವನ್ನು ಬಿಡುಗಡೆ ಮಾಡುತ್ತವೆ

**ಆರಣ್ಯಕಾಂಡ 6:22-27**

**22 ಯೆಹೋವನು ಮೋಶೆಗೆ ಹೇಳಿದ್ದೇನಂದರೆ –**

**23 ನೀನು ಆರೋನನಿಗೂ ಅವನ ಮಕ್ಕಳಿಗೂ ಹೀಗೆ ಅಜ್ಞಾಪಿಸು – ನೀವು ಇಸ್ರಾಯೇಲ್ಯರನ್ನು ಆಶಿರ್ವದಿಸುವಾಗ ಈ ಪ್ರಕಾರ ಅವರಿಗೆ ಹೇಳಬೇಕು –**

**24 ಯೆಹೋವನು ನಿಮ್ಮನ್ನು ಆಶೀರ್ವದಿಸಿ ಕಾಪಾಡಲಿ;**

**25 ಯೆಹೋವನು ಪ್ರಸನ್ನಮುಖದಿಂದ ನಿಮ್ಮನ್ನು ನೋಡಿ ನಿಮ್ಮ ಮೇಲೆ ದಯವಿಡಲಿ;**

**26 ಯೆಹೋವನು ನಿಮ್ಮ ಮೇಲೆ ಕೃಪಾಕಟಾಕ್ಷವಿಟ್ಟು ಶಾಂತಿಯನ್ನು ಅನುಗ್ರಹಿಸಲಿ ಎಂಬದೇ.**

**27 ಹೀಗೆ ಅವರು ಇಸ್ರಾಯೇಲ್ಯರ ಮೇಲೆ ನನ್ನ ಹೆಸರನ್ನು ಉಚ್ಚರಿಸಲಾಗಿ ನಾನು ಅವರನ್ನು ಆಶಿರ್ವದಿಸುವೆನು**

ಮಾತುಗಳು ಆಶೀರ್ವಾದವನ್ನು ರವಾನಿಸುವ ವಾಹನಗಳಾಗಿವೆ. ದೇವರು ಇದನ್ನು ಸ್ಥಾಪಿಸಿದನು. ಈ ನಿದರ್ಶನದಲ್ಲಿ, ಮಹಾಯಾಜಕನು ದೇವರ ಜನರನ್ನು ಹೇಗೆ ಆಶೀರ್ವದಿಸಬೇಕು ಎಂಬುದರ ಕುರಿತು ದೇವರು ಸ್ಪಷ್ಟವಾದ ಸೂಚನೆಗಳನ್ನು ನೀಡುವುದನ್ನು ನಾವು ನೋಡುತ್ತೇವೆ, ದೇವರು ತನ್ನ ಜನರನ್ನು ಆಶೀರ್ವದಿಸುವಂತೆ ದೇವರ ಹೆಸರನ್ನು ಅವರ ಮೇಲೆ ಇಡುತ್ತಾನೆ. ಮಹಾಯಾಜಕನು "ಅವರಿಗೆ ಹೇಳುತ್ತಾನೆ," ಅವರ ಮೇಲೆ ಮಾತನಾಡುತ್ತಾನೆ ಮತ್ತು ಕರ್ತನ ಹೆಸರಿನಲ್ಲಿ ಅವರ ಮೇಲೆ ಆಶೀರ್ವಾದದ ಮಾತುಗಳನ್ನು ಹೇಳುತ್ತಾನೆ.

ಈ ರೀತಿಯಾಗಿ ಹಳೆ ಒಡಂಬಡಿಕೆಯ ದೇವರ ಜನರು ಆಶೀರ್ವಾದವನ್ನು ಬಿಡುಗಡೆ ಮಾಡುತಿದ್ದರು. ಇಸಾಕ ಯಾಕೋಬನನ್ನು ಆಶೀರ್ವದಿಸಿದನು (ಆದಿಕಾಂಡ 27:27-29). ಯಾಕೋಬನು ಮಾತನಾಡುವಮೂಲಕ ತನ್ನ ಮಕ್ಕಳನ್ನು ಆಶೀರ್ವದಿಸಿದನು (ಆದಿಕಾಂಡ 48,49).

ಹೊಸ ಒಡಂಬಡಿಕೆಯಲ್ಲಿ ಯಾಜಕರಾಗಿ, ಕರ್ತನ ಹೆಸರಿನಲ್ಲಿ ಆಶೀರ್ವಾದದ ಮಾತುಗಳನ್ನು ಹೇಳುವ ಮೂಲಕ ನಮ್ಮ ಸ್ವಂತ ಜೀವನ,

ನಮ್ಮ ಕುಟುಂಬಗಳು ಮತ್ತು ಇತರರ ಜೀವನದ ಮೇಲೆ ಆಶೀರ್ವಾದವನ್ನು ಬಿಡುಗಡೆ ಮಾಡಲು ನಮಗೂ ಅವಕಾಶವಿದೆ. ನಿಮ್ಮ ಬಗ್ಗೆ, ನಿಮ್ಮ ವರ್ತಮಾನದ ಬಗ್ಗೆ ಮತ್ತು ನಿಮ್ಮ ಭವಿಷ್ಯದ ಬಗ್ಗೆ ನೀವು ಯಾವ ರೀತಿಯ ಮಾತುಗಳನ್ನು ಮಾತನಾಡುತ್ತಿದ್ದೀರಿ? ನಿಮ್ಮ ಕುಟುಂಬ ಮತ್ತು ಅವರ ಭವಿಷ್ಯದ ಬಗ್ಗೆ ನೀವು ಯಾವ ರೀತಿಯ ಮಾತುಗಳನ್ನು ಮಾತನಾಡುತ್ತಿದ್ದೀರಿ? ನಿಮ್ಮ ಆಶೀರ್ವಾದದ ಮಾತುಗಳು ಅವರ ಮೇಲೆ ಕರ್ತನ ಆಶೀರ್ವಾದವನ್ನು ಬಿಡುಗಡೆ ಮಾಡಬಹುದು.

# 5

# ದೇವರ ವಾಕ್ಯವು ಮುಂಚಿತವಾಗಿ ಬರೆದ ನಿಮ್ಮ ವರದಿಯಾಗಿದೆ, ಅದನ್ನು ಮಾತನಾಡಿ!

**ಅರಣ್ಯಕಾಂಡ 13:30–33**

**30 ಇಸ್ರಾಯೇಲ್ಯರು ಮೋಶೆಗೆ ವಿರೋಧವಾಗಿ ಗುಣುಗುಟ್ಟಲಾಗಿ ಕಾಲೇಬನು ಅವರನ್ನು ಸುಮ್ಮನಿರಿಸಿ – ನಾವು ನಿರ್ಭಯವಾಗಿ ಆ ಬೆಟ್ಟದ ಸೀಮೆಗೆ ಹತ್ತಿಹೋಗಿ ಅದನ್ನು ಸ್ವಾಧೀನಪಡಿಸಿಕೊಳ್ಳೋಣ; ಅದನ್ನು ಜಯಿಸಬಲ್ಲೆವು ಎಂದು ಹೇಳಿದನು.**
**31 ಆದರೆ ಅವನ ಜೊತೆಯಲ್ಲಿ ಹೋದವರು – ಆ ಜನರು ನಮಗಿಂತ ಬಲಿಷ್ಠರು; ಅವರ ಮೇಲೆ ಹೋಗುವದಕ್ಕೆ ನಮಗೆ ಶಕ್ತಿಸಾಲದು ಅಂದರು.**
**32 ಅದಲ್ಲದೆ ಇವರು ತಾವು ಸಂಚರಿಸಿ ನೋಡಿದ ದೇಶದ ವಿಷಯವಾಗಿ ಇಸ್ರಾಯೇಲ್ಯರಿಗೆ ಅಶುಭಸಮಾಚಾರವನ್ನು ಹೇಳುವವರಾಗಿ – ನಾವು ಸಂಚರಿಸಿ ನೋಡಿದ ದೇಶವು ತನ್ನಲ್ಲಿ ವಾಸಿಸುವವರನ್ನು ನುಂಗಿಬಿಡುತ್ತದೆ; ಅದಲ್ಲದೆ ನಾವು ಅದರಲ್ಲಿ ನೋಡಿದ ಜನರೆಲ್ಲರೂ ಬಹಳ ಎತ್ತರವಾದವರು.**
**33 ಅಲ್ಲಿ ನೆಫೀಲಿಯರನ್ನು ಅಂದರೆ ನೇಫಿಲಿಯ ವಂಶದವರಾದ ಉನ್ನತಪುರುಷರನ್ನು ನೋಡಿದೆವು. ನಾವು ಅವರ ಮುಂದೆ ಮಿಡತೆಗಳಂತೆ ಇದ್ದೇವೆಂದು ತಿಳಿದುಕೊಂಡೆವು; ಅವರಿಗೂ ನಾವು ಹಾಗೆಯೇ ತೋರಿದೆವು ಅಂದರು.**

**ಅರಣ್ಯಕಾಂಡ 14:11**

**ಯೆಹೋವನು ಮೋಶೆಗೆ - ಈ ಜನರು ಇನ್ನು ಎಷ್ಟರ ಮಟ್ಟಿಗೆ ನನ್ನನ್ನು ಅಲಕ್ಷ್ಯ ಮಾಡುವರೋ; ನಾನು ನಡಿಸಿದ ಎಲ್ಲಾ ಮಹತ್ಕಾರ್ಯಗಳನ್ನು ಇವರು ಪ್ರತ್ಯಕ್ಷವಾಗಿ ನೋಡಿದಾಗ್ಯೂ ಇನ್ನು ಎಷ್ಟು ದಿನ ನನ್ನನ್ನು ನಂಬದೆ ಇರುವರೋ.**

ಹನ್ನೆರಡು ಗೂಢಚಾರರ ಘಟನೆ ನಮಗೆ ತಿಳಿದಿದೆ, ಅವರಲ್ಲಿ ಇಬ್ಬರು ಯೆಹೋಶುವ ಮತ್ತು ಕಾಲೆಬ್. ಯೆಹೋಶುವ ಮತ್ತು ಕಾಲೇಬ್ ಒಂದೇ ದೈತ್ಯರನ್ನು ನೋಡಿದರು, ಆದರೆ ದೇವರು ಯಾರು ಮತ್ತು ದೇವರು ಅವರಿಗೆ ಏನು ಭರವಸೆ ನೀಡಿದ್ದಾನೆ ಎಂಬುದರ ಆಧಾರದ ಮೇಲೆ ಅವರ ಅಂತಿಮ ಮೌಲ್ಯಮಾಪನವನ್ನು ಮಾಡಿದರು. ಕಾಲೆಬ ಹೇಳಿದ, *"ನಾವು ಜಯಿಸಲು ಸಮರ್ಥರಾಗಿದ್ದೇವೆ."* 45 ವರ್ಷಗಳ ನಂತರ, ಅದೇ ಕಾಲೇಬ್ ಹೇಳಿದನು, *"ಈ ಪರ್ವತವನ್ನು ನನಗೆ ಕೊಡು ... ಕರ್ತನು ಹೇಳಿದಂತೆ ನಾನು ಅವರನ್ನು ಓಡಿಸಲು ಸಾಧ್ಯ ವಾಗುತ್ತದೆ"* (ಯೆಹೋಶುವ 14:12). ಅವನು ದೇವರ

ವಾಗ್ದಾನವನ್ನು ಹಿಡಿದಿಟ್ಟುಕೊಂಡನು ಮತ್ತು 45 ವರ್ಷಗಳ ನಂತರವೂ ಅವನು ಹೇಳಿದ್ದನ್ನು ಎಂದಿಗೂ ಬದಲಾಯಿಸಲಿಲ್ಲ!

ದೇವರ ವಾಕ್ಯವು ಫಲಿತಾಂಶ, ವರದಿ, ಫಲಿತಾಂಶವನ್ನು ಮುಂಚಿತವಾಗಿ ಬರೆಯಲಾಗಿದೆ. ದೇವರ ವಾಕ್ಯದ ಪ್ರಕಾರ ಮಾತನಾಡಿ. ಹೌದು, ಖಂಡಿತವಾಗಿಯೂ, ನಮ್ಮನ್ನು ಎದುರಿಸಲು ದೈತ್ಯರು ಇರುತ್ತಾರೆ ಮತ್ತು ಈ ದೈತ್ಯರು ಬೆದರಿಸುವಂತೆ ಕಾಣಿಸುತ್ತಾರೆ. ಹೋರಾಡಲು ಯುದ್ಧಗಳಿರುತ್ತವೆ. ದೇವರು ನಮಗೆ ಏನನ್ನು ಹೊಂದಬೇಕೆಂದು ಬಯಸುತ್ತಾನೋ ಅದನ್ನು ಹೊಂದುವ ಮಾರ್ಗವು ದೈತ್ಯರು ಮತ್ತು ಯುದ್ಧಗಳಿಂದ ದೂರವಿರುವುದಿಲ್ಲ. ಆದರೆ ದೈತ್ಯರ ಮುಖದಲ್ಲಿ ಮತ್ತು ಯುದ್ಧಗಳ ಮಧ್ಯೆ, ದೇವರು ಯಾರು ಮತ್ತು ದೇವರು ನಿಮಗೆ ಏನು ಭರವಸೆ ನೀಡಿದ್ದಾನೆಂದು ಘೋಷಿಸಿ. ನೀವು ಜಯಿಸಬಲ್ಲಿರಿ ಎಂದು ಘೋಷಿಸಿ ಏಕೆಂದರೆ ದೇವರಿಂದ ಹುಟ್ಟಿದವನು ಜಗತ್ತನ್ನು ಜಯಿಸುತ್ತಾನೆ (1 ಯೋಹಾನ 5:4). ದೇವರು ಯಾವಾಗಲೂ ನಿಮಗೆ ವಿಜಯವನ್ನು ಉಂಟುಮಾಡುತ್ತಾನೆ ಎಂದು ಘೋಷಿಸಿ (2 ಕೊರಿಂಥದವರಿಗೆ 2:14). ದೇವರು ನಿಮ್ಮನ್ನು ಕೆಸರುಗದ್ದೆಯಿಂದ ಹೊರತೆಗೆದು, ಬಂಡೆಯ ಮೇಲೆ ನಿಮ್ಮ ಪಾದಗಳನ್ನು ಇಡುತ್ತಾನೆ ಮತ್ತು ನಿಮ್ಮ ಬಾಯಿಯಲ್ಲಿ ನೂತನಕೀರ್ತನೆಯನ್ನು ಹುಟ್ಟಿಸುತ್ತಾನೆ ಎಂದು ಘೋಷಿಸಿ (ಕೀರ್ತನೆಗಳು 40:1-4). ನಿಮ್ಮ ಸಹಾಯವು ಭೂಮಿ, ಆಕಾಶಗಳನ್ನು ನಿರ್ಮಿಸಿದ ಯೆಹೋವನಿಂದಲೇ ಬರುತ್ತದೆ ಎಂದು ಘೋಷಿಸಿ. ನಿಮ್ಮನ್ನು ಕಾಯುವಾತನು ಎಂದಿಗೂ ನಿದ್ರಿಸುವುದಿಲ್ಲ ಅಥವಾ ತೂಕಡಿಸುವದಿಲ್ಲ (ಕೀರ್ತನೆಗಳು 121). ನಿಮ್ಮ ದೇವರು ಯಾರು ಮತ್ತು ಆತನು ನಿಮಗೆ ಏನು ವಾಗ್ದಾನ ಮಾಡಿದ್ದಾನೆಂದು ಘೋಷಿಸಿ. ಈ ನಿಮ್ಮ ಫಲಿತಾಂಶವನ್ನು ಮುಂಚಿತವಾಗಿ ಬರೆಯಲಾಗಿದೆ.

# 6

# ಆತನ ವಾಕ್ಯವು ನಿಮ್ಮ ಬಳಿಯಲ್ಲಿದೆ–ಆತನ ವಾಕ್ಯವನ್ನು ಮಾತನಾಡಿ

**ಧರ್ಮೋಪದೇಶಕಾಂಡ 30:11–14**

**[11] ನಾನು ಈಗ ನಿಮಗೆ ಬೋಧಿಸಿದ ಧರ್ಮೋಪದೇಶವು ನಿಮಗೆ ಗ್ರಹಿಸುವದಕ್ಕೆ ಕಷ್ಟವಾದದ್ದೂ ಅಲ್ಲ, ಹೊಂದುವದಕ್ಕೆ ಅಸಾಧ್ಯವಾದದ್ದೂ ಅಲ್ಲ.**

**[12] ಇದು ಮೇಲಣ ಲೋಕದಲ್ಲಿರುವ ಮಾತಲ್ಲ. ನಮಗೋಸ್ಕರ ಮೇಲಣ ಲೋಕವನ್ನು ಏರಿ ಅದನ್ನು ತಿಳಿದುಕೊಂಡುಬಂದು ನಮಗೆ ತಿಳಿಸುವಷ್ಟು ಶಕ್ತರು ಯಾರಿದ್ದಾರೆ? ಇದ್ದರೆ ನಾವು ಕೇಳಿ ಕೈಕೊಂಡೇವು ಅಂದುಕೊಳ್ಳುವದಕ್ಕೆ ಅವಕಾಶವೇನೂ ಇಲ್ಲ**

**[13] ಮತ್ತು ಇದು ಸಮುದ್ರದ ಆಚೆ ಇರುವ ಮಾತಲ್ಲ. ನಮಗೋಸ್ಕರ ಸಮುದ್ರವನ್ನು ದಾಟಿ ಅದನ್ನು ತೆಗೆದುಕೊಂಡು ಬಂದು ನಮಗೆ ತಿಳಿಸುವಷ್ಟು ಶಕ್ತರು ಯಾರಿದ್ದಾರೆ? ಇದ್ದರೆ ನಾವು ಕೈಕೊಂಡೇವು ಅಂದುಕೊಳ್ಳುವದಕ್ಕೆ ಆಸ್ಪದವೇನೂ ಇಲ್ಲ.**

**[14] ಈ ವಾಕ್ಯವು ನಿಮಗೆ ಸಮೀಪದಲ್ಲಿಯೇ ಇದೆ; ಇದು ನಿಮ್ಮ ಬಾಯಲ್ಲಿಯೂ ಹೃದಯದಲ್ಲಿಯೂ ಇದೆ; ಇದನ್ನು ಅನುಸರಿಸುವದಕ್ಕೆ ಅವಕಾಶಉಂಟಷ್ಟೆ.**

ದೇವರು ತನ್ನ ಜನರು ತಮ್ಮ ಬಾಯಿಯಲ್ಲಿ ಮತ್ತು ಅವರ ಹೃದಯದಲ್ಲಿ ಆತನ ವಾಕ್ಯವನ್ನು ಇಟ್ಟುಕೊಳ್ಳಬೇಕೆಂದು ಬಯಸಿದನು. ಅವರು ತಮ್ಮ ಬಾಯಿಯಲ್ಲಿ ಮತ್ತು ಅವರ ಹೃದಯದಲ್ಲಿ ಆತನ ವಾಕ್ಯವನ್ನು ಹೊಂದಬೇಕೆಂದು ಆತನು ಬಯಸಿದನು, ಆದ್ದರಿಂದ ಅವರು ಅದನ್ನು ಮಾಡುತ್ತಾರೆ ಮತ್ತು ಅದರ ಮೂಲಕ ಬದುಕುತ್ತಾರೆ ಎಂಬುವದಕ್ಕಾಗಿ. ದೇವರ ವಾಕ್ಯವು ನಮ್ಮ ಹೃದಯದಲ್ಲಿ ಮತ್ತು ನಮ್ಮ ಬಾಯಲ್ಲಿ ನೆಲೆಸಬೇಕು. ಆತನ ವಾಕ್ಯವು ನಮ್ಮ ಹೃದಯವನ್ನು ತುಂಬಬೇಕು. ಆತನ ವಾಕ್ಯದಿಂದ ನಮ್ಮ ಹೃದಯದಲ್ಲಿ ನಂಬಿಕೆ ಹುಟ್ಟಿದೆ. ನಾವು ಆತನ ವಾಕ್ಯವನ್ನು ನಮ್ಮ ಹೃದಯದಲ್ಲಿ ನಂಬುತ್ತೇವೆ. ಆತನ ಮಾತು ನಮ್ಮ ಬಾಯಲ್ಲಿಯೂ ಇರಬೇಕು. ನಾವು ಅದನ್ನು ಹೇಳುತ್ತೇವೆ. ನಾವು ಅದನ್ನು ಮಾತನಾಡುತ್ತೇವೆ. ನಾವು ಆತನ ಬಾಯಿಂದ ಬರುವ ಮಾತುಗಳನ್ನು ನಮ್ಮ ಬಾಯಿಯ ಮಾತುಗಳಾಗಲು ಬಿಡುತ್ತೇವೆ. ಆತನ ವಾಕ್ಯವು ನಿಗೂಢವಾಗಿಲ್ಲ ಅಥವಾ ನಮ್ಮ ವ್ಯಾಪ್ತಿಯನ್ನು ಮೀರಿಲ್ಲ. ಆತನ ವಾಕ್ಯವು ನಮ್ಮಲ್ಲಿದೆ–ನಮ್ಮ ಹೃದಯದಲ್ಲಿ ಮತ್ತು ನಮ್ಮ ಬಾಯಲ್ಲಿದೆ. ನಾವು ಈ ರೀತಿಯಲ್ಲಿ ಜೀವಿಸುವಾಗ, ಆತನ ವಾಕ್ಯವು ನಮ್ಮ

ಜೀವನಶೈಲಿಯಾಗುತ್ತದೆ. ನಾವು ಆತನ ವಾಕ್ಯದ ಪ್ರಕಾರ ಜೀವಿಸುತ್ತೇವೆ.

ಇದು ದೇವರ ವಾಕ್ಯವು ನಮ್ಮಲ್ಲಿ ನೆಲೆಸಿರುವ ಮತ್ತು ನಮ್ಮಲ್ಲಿ ಶರೀರಬಾವವನ್ನು ಹೊಂದುವ ಮಾರ್ಗವಾಗಿದೆ. ಆತನು ನಮಗೆ ಈ ವಿಧಾನವನ್ನು ನೀಡಿದನು. ಆತನ ವಾಕ್ಯವನ್ನು ನಮಗೆ ಲಭ್ಯವಾಗುವಂತೆ ಮಾಡಿದ್ದಾನೆ ಎಂದು ಆತನು ಹೇಳಿದನು. ನಾವು ಆತನ ವಾಕ್ಯವನ್ನು ನಮ್ಮ ಬಾಯಿಯಲ್ಲಿ (ನಮ್ಮ ಮಾತಿನ ಭಾಗ) ಮತ್ತು ನಮ್ಮ ಹೃದಯದಲ್ಲಿ (ಚಿಂತನೆ ಮತ್ತು ನಂಬಿಕೆಯ ಭಾಗ) ಇಟ್ಟುಕೊಳ್ಳುವುದರಿಂದ, ಆತನ ವಾಕ್ಯವು ನಮ್ಮ ದೈನಂದಿನ ಜೀವನದ ಭಾಗವಾಗುತ್ತದೆ.

# 7

# ಆತನ ವಾಕ್ಯವು ನಿನ್ನ ಬಾಯಲ್ಲಿರಲಿ

**ಯೆಹೋಶುವ 1:8**

**ಈ ಧರ್ಮಶಾಸ್ತ್ರವು ಯಾವಾಗಲೂ ನಿನ್ನ ಬಾಯಿಯಲ್ಲಿರಲಿ; ಹಗಲಿರುಳು ಅದನ್ನು ಧ್ಯಾನಿಸುತ್ತಾ ಅದರಲ್ಲಿ ಬರೆದಿರುವದನ್ನೆಲ್ಲಾ ಕೈಕೊಂಡು ನಡಿ. ಆಗ ನಿನ್ನ ಮಾರ್ಗದಲ್ಲೆಲ್ಲಾ ಸಫಲನಾಗುವಿ, ಕೃತಾರ್ಥನಾಗುವಿ.**

ದೇವರ ಜನರನ್ನು ವಾಗ್ದಾನ ಮಾಡಿದ ದೇಶಕ್ಕೆ ಕರೆದೊಯ್ಯುವ ಅಗಾಧವಾದ ಕೆಲಸವನ್ನು ಯೆಹೋಶುವ ಹೊಂದಿದ್ದನು. ಅವನು ಮೋಶೆಯ ಸ್ಥಾನದಲ್ಲಿದ್ದುಕೊಂಡು ದೇವರ ಜನರನ್ನು ಮುನ್ನಡೆಸಬೇಕಾಗಿತ್ತು. ದೇವರು ಅವನಿಗೆ ನೀಡಿದ ಸೂಚನೆಗಳಲ್ಲಿ ಒಂದಾದ ಧರ್ಮಶಾಸ್ತ್ರವು ಯಾವಾಗಲೂ ಅವನ ಮಾತನಾಡುವ ಮತ್ತು ಆಲೋಚನೆಯ (ಧ್ಯಾನ) ಭಾಗವಾಗಿರಿಸಿಕೊಳ್ಳುವುದು. ಮೂಲಭೂತವಾಗಿ, ದೇವರು ಯೆಹೋಶುವನಿಗೆ ಹೀಗೆ ಹೇಳಿದನು, *"ಈ ಧರ್ಮಶಾಸ್ತ್ರವು ಯಾವಾಗಲೂ ನಿನ್ನ ಬಾಯಿಯಲ್ಲಿರಲಿ; ಹಗಲಿರುಳು ಅದನ್ನು ಧ್ಯಾನಿಸುತ್ತಾ ಅದರಲ್ಲಿ ಬರೆದಿರುವದನ್ನೆಲ್ಲಾ ಕೈಕೊಂಡು ನಡಿ. ಆಗ ನಿನ್ನ ಮಾರ್ಗದಲ್ಲೆಲ್ಲಾ ಸಫಲನಾಗುವಿ, ಕೃತಾರ್ಥನಾಗುವಿ."*

ಸಮಯಗಳು ಬದಲಾಗಿವೆ, ಆದರೆ ದೇವರ ವಾಕ್ಯ ಮತ್ತು ಆತನ ವಾಕ್ಯದಲ್ಲಿನ ಶಕ್ತಿಯು ಕಡಿಮೆಯಾಗಿಲ್ಲ. ದೇವರ ವಾಕ್ಯವು ಯೆಹೋಶುವನಿಗೆ ಅವನ ದಿನದಲ್ಲಿ, ಅವನ ಸಮಯದಲ್ಲಿ ಮತ್ತು ಅವನ ಜೀವನದಲ್ಲಿ ನೇಮಕಗೊಂಡ ಕೆಲಸದಲ್ಲಿ ಏನು ಮಾಡಿದಿಯೋ, ದೇವರ ವಾಕ್ಯವು ನಮ್ಮ ದಿನ, ಸಮಯ ಮತ್ತು ನಮ್ಮಲ್ಲಿ ಪ್ರತಿಯೊಬ್ಬರಿಗೂ ನಿಯೋಜಿಸಲಾದ ಕೆಲಸದಲ್ಲಿಯೂ ಮಾಡಬಲ್ಲದು. ದೇವರ ಪುಸ್ತಕದ ಮಾತುಗಳು ಯಾವಾಗಲೂ ನಮ್ಮ ಬಾಯಿಯಲ್ಲಿ ಇರುವಂತೆ ನಾವು ಅನುಮತಿಸಿದರೆ ಮತ್ತು ನಮ್ಮ ಆಲೋಚನೆಯನ್ನು (ಧ್ಯಾನ) ಹಗಲು ರಾತ್ರಿ ತುಂಬಿದರೆ, ನಾವು ಆಗ ಆತನ ವಾಕ್ಯದ ಪ್ರಕಾರ ನಡೆಯುತ್ತೇವೆ. ಆ ಮೂಲಕ ನಾವು ನಮ್ಮ ಮಾರ್ಗವನ್ನು ಸಮೃದ್ಧಗೊಳಿಸುತ್ತೇವೆ ಮತ್ತು ನಮಗೆ ನಿಯೋಜಿಸಲಾದ ಕೆಲಸದಲ್ಲಿ ನಾವು ಉತ್ತಮ ಯಶಸ್ಸನ್ನು ಹೊಂದುತ್ತೇವೆ.

ಯೆಹೋಶುವ 1:8 ತತ್ವವನ್ನು ನಿಮ್ಮ ಜೀವನಕ್ಕೆ ಅನ್ವಯಿಸಿ. ಆತನ ಧರ್ಮಶಾಸ್ತ್ರವು ನಿಮ್ಮ ಬಾಯಿಯ ಮಾತುಗಳಾಗಿರಲಿ. ದೇವರು ಹೇಳುವುದನ್ನು ಹೇಳಿ. ಆತನ ವಾಕ್ಯಕ್ಕೆ ಅನುಗುಣವಾಗಿ ಧ್ಯಾನಿಸಿ ಮತ್ತು ಯೋಚಿಸಿ. ಆತನ ವಾಕ್ಯಕ್ಕೆ ಹೊಂದಿಕೊಂಡು ಬದುಕು. ನಿನ್ನ ಕಾರ್ಯಯೋಜನೆಗಳಲ್ಲಿ ನೀನು ಸಮೃದ್ಧಿ ಮತ್ತು ಉತ್ತಮ ಯಶಸ್ಸನ್ನು ಹೊಂದುವಿ.

# 8

# ಆತನ ವಾಗ್ದಾನಗಳು ಶಾಶ್ವತವಾಗಿರುತ್ತವೆ–ಮತ್ತು ಅದರಂತೆ ನಮ್ಮ ಘೋಷಣೆ

**ಯೆಹೋಶುವ 14:10–12**

**10 ಯೆಹೋವನು ಈ ಮಾತುಗಳನ್ನು ಮೋಶೆಗೆ ಹೇಳಿದಂದಿನಿಂದ ಇಸ್ರಾಯೇಲ್ಯರು ಆರಣ್ಯದಲ್ಲಿ ಅಲೆಯುತ್ತಿದ್ದ ವರುಷಗಳೂ ಸೇರಿ ನಲ್ವತ್ತೈದು ವರುಷಗಳು ದಾಟಿದವು. ಯೆಹೋವನು ತಾನು ನುಡಿದಂತೆಯೇ ಈ ಕಾಲವೆಲ್ಲಾ ನನ್ನನ್ನು ಜೀವದಿಂದುಳಿಸಿದ್ದಾನೆ. ಈಗ ನಾನು ಎಂಬತ್ತೈದು ವರುಷದವನಾಗಿದ್ದೇನೆ.**

**11 ಮೋಶೆಯು ನನ್ನನ್ನು ಕಳುಹಿಸಿದಾಗ ನನಗೆಷ್ಟು ಬಲವಿತ್ತೋ ಈಗಲೂ ಅಷ್ಟಿದೆ. ಯುದ್ಧ ಮಾಡುವದಕ್ಕೂ ವಿಶೇಷ ಕಾರ್ಯಗಳನ್ನು ನಿರ್ವಹಿಸುವದಕ್ಕೂ ನನಗೆ ಮುಂಚಿನಂತೆಯೇ ಶಕ್ತಿಯಿರುತ್ತದೆ.**

**12 ಹೀಗಿರಲಾಗಿ ಯೆಹೋವನು ಆ ದಿನದಲ್ಲಿ ಸುಚಿದಂಥ ಈ ಪರ್ವತಪ್ರದೇಶವನ್ನು ನನಗೆ ಕೊಡು. ಇದರಲ್ಲಿ ಉನ್ನತ ಪುರುಷರಿರುತ್ತಾರೆಂದು ಇದರ ಪಟ್ಟಣಗಳು ದೊಡ್ಡವೂ ಕೋಟೆಕೊತ್ತಲುಳ್ಳವುಗಳೂ. ಆಗಿವೆ ಎಂದೂ ಆ ಕಾಲದಲ್ಲಿ ನೀನು ಕೇಳಿದಿಯಲ್ಲಾ.ಅವರೆಲ್ಲರನ್ನೂ ಓಡಿಸಿ ಬಿಡುವದಕ್ಕೋಸ್ಕರ ಯೆಹೋವನು ತನ್ನ ಮಾತಿಗನುಸಾರವಾಗಿ ನನಗೆ ಸಹಾಯ ಮಾಡುವನೆಂದು ನಿರೀಕ್ಷಿಸಿಕೊಂಡಿದ್ದೇನೆ ಅಂದನು.**

45 ವರ್ಷಗಳ ನಂತರ, ಕಾಲೇಬನು ತನ್ನ, 85 ನೇ ವಯಸ್ಸಿನಲ್ಲಿ, ದೇವರು ವಾಗ್ದಾನ ಮಾಡಿದ್ದನ್ನು ಹೊಂದಲು ತೀವ್ರಾಸಕ್ತಿಮತ್ತು ಉತ್ಸಾಹದಿಂದ ತುಂಬಿದನು. ಹೋರಾಡಲು ಮತ್ತು ವಶಪಡಿಸಿಕೊಳ್ಳಲು ಇನ್ನೂ ಕೆಲವು ದೈತ್ಯರು ಇದ್ದರು, ಆದರೆ ಅವನು ಸಿದ್ಧನಾಗಿದ್ದನು. ಅವನು 45 ವರ್ಷಗಳ ಹಿಂದೆ ಮಾಡಿದ ಅದೇ ರೀತಿಯಲ್ಲಿ ಇಗಲೂ ತನ್ನ ದೇವರಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾನೆ.

ನಿಮ್ಮ ಜೀವನದಲ್ಲಿ ಎಷ್ಟು ಸಮಯದವರೆಗೆ ನೀವು ದೇವರ ವಾಕ್ಯವನ್ನು ಸತ್ಯವೆಂದು ಘೋಷಿಸಲಿದ್ದೀರಿ? ಸತ್ಯವೆಂದರೆ ದೇವರು ಸುಳ್ಳು ಹೇಳುವ ಮನುಷ್ಯನಲ್ಲ. ಆತನ ವಾಕ್ಯವು ಸತ್ಯವಾಗಿದೆ. ಆತನ ವಾಕ್ಯವು ಶಾಶ್ವತವಾಗಿರುತ್ತದೆ. ಆತನ ಮಾತು ಎಂದಿಗೂ ಬದಲಾಗುವುದಿಲ್ಲ. ದೇವರು ತನ್ನ ವಾಕ್ಯದಲ್ಲಿ ನಿಮ್ಮ ಬಗ್ಗೆ ವಾಗ್ದಾನ ಮಾಡಿರುವುದು ಮತ್ತು

ಘೋಷಿಸಿರುವುದು ಸತ್ಯವಾಗಿದೆ. ಇದು ಸ್ಥಾಪಿಸಲ್ಪಟ್ಟಿದೆ ಮತ್ತು ಶಾಶ್ವತವಾಗಿ ಪರಲೋಕದಲ್ಲಿ ನೆಲೆಸಿದೆ. ನಮ್ಮ ದೇವರು ದೊಡ್ಡವನು **ನಾನೇ ಆಗಿದ್ದಾನೆ**. ಆತನು ಎಂದಿಗೂ ಬದಲಾಗುವುದಿಲ್ಲ. ಆದ್ದರಿಂದ, ನಮ್ಮ ದೇವರ ಬಗ್ಗೆ ಮತ್ತು ಆತನು ವಾಗ್ದಾನ ಮಾಡಿರುವುದನ್ನು ನಾವು ಬದಲಾಯಿಸುವುದಿಲ್ಲ. ನಮ್ಮ ದೇವರು ಯಾರು ಎಂದು ಹೇಳುತ್ತಲೇ ಇರುತ್ತೇವೆ. ಆತನು ಇನ್ನೂ ನಮ್ಮ ರಕ್ಷಕ, ವೈದ್ಯ, ವಿಮೋಚಕ, ಬಿಡುಗಡೆಮಾಡುವವ, ಪೂರೈಕೆದಾರ, ಮಾರ್ಗ-ನಿರ್ಮಾಪಕ, ಅದ್ಭುತಗಳ-ಕಾರ್ಯಕರ್ತ. ಆತನು ಇನ್ನೂ ನಮ್ಮ ಸ್ವರ್ಗೀಯ ತಂದೆ. ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಆತನು ನಮಗೆ ವಾಗ್ದಾನ ಮಾಡಿರುವುದು ಒಳ್ಳೆಯದು ಮತ್ತು ಸತ್ಯ ಎಂದು ನಾವು ಘೋಷಿಸುತ್ತೇವೆ. ಇದು ಜೀವನದ ಎಲ್ಲಾ ಋತುಗಳಲ್ಲಿ ಉತ್ತಮ ಮತ್ತು ನಿಜವಾಗಿ ಉಳಿಯುತ್ತದೆ. ಹಾಗಾಗಿ, ಆತನು ವಾಗ್ದಾನ ಮಾಡಿದ್ದನ್ನು ನಾವು ಹಿಡಿದಿಟ್ಟುಕೊಳ್ಳುತ್ತೇವೆ.

ಕಾಲೆಬ್‌ನಂತೆಯೇ, ದೇವರು ವಾಗ್ದಾನ ಮಾಡಿದ ಮೇಲೆ ನೀವು ಹೆಜ್ಜೆ ಹಾಕಲು (ಹೊಂದಲು) ಸ್ವಲ್ಪ ಸಮಯ ತೆಗೆದುಕೊಳ್ಳಬಹುದು. ನೆನಪಿಡಿ, ಆತನ ವಾಗ್ದಾನಗಳು ಶಾಶ್ವತವಾಗಿರುತ್ತವೆ. ಅವು ಸಮಯದೊಂದಿಗೆ ಬದಲಾಗುವುದಿಲ್ಲ. ಆತನ ವಾಗ್ದಾನಗಳ ನಿಮ್ಮ ಘೋಷಣೆಯನ್ನು ಕಾಪಾಡಿಕೊಳ್ಳಿ.

# 9

# ದೇವರೊಂದಿಗೆ ನಿಮ್ಮ ಒಡಂಬಡಿಕೆಯನ್ನು ಘೋಷಿಸಿ

**1 ಸಮುವೇಲ 17:26,36,45**

**[26] ದಾವೀದನು – ಜೀವಸ್ವರೂಪನಾದ ದೇವರ ಸೈನ್ಯವನ್ನು ಹೀಯಾಳಿಸುವದಕ್ಕೆ ಸುನ್ನತಿಯಿಲ್ಲದ ಈ ಫಿಲಿಷ್ಟಿಯನು ಎಷ್ಟರವನು? ಇವನನ್ನು ಕೊಂದು ಇಸ್ರಾಯೇಲ್ಯರಿಗೆ ಬಂದಿರುವ ನಿಂದೆಯನ್ನು ತೆಗೆದುಹಾಕುವವನಿಗೆ ಸಿಕ್ಕುವದೇನೆಂದು ಹೇಳಿದಿರಿ ಎಂದು ತನ್ನ ಬಳಿಯಲ್ಲಿ ನಿಂತಿದ್ದ ಮನುಷ್ಯರನ್ನು ಕೇಳಲು**

**[36] ನಿನ್ನ ಸೇವಕನಿಂದ ಕೊಲ್ಲಲ್ಪಟ್ಟ ಸಿಂಹಕ್ಕೂ ಕರಡಿಗೂ ಆದ ಗತಿಯೇ ಜೀವಸ್ವರೂಪನಾದ ದೇವರ ಸೈನ್ಯವನ್ನು ನಿಂದಿಸುವಂಥ ಈ ಸುನ್ನತಿಯಿಲ್ಲದ ಫಿಲಿಷ್ಟಿಯನಿಗೂ ಆಗಬೇಕು.**

**[45] ಆಗ ದಾವೀದನು ಅವನಿಗೆ – ನೀನು ಈಟಿ ಕತ್ತಿ ಬರ್ಜಿಗಳೊಡನೆ ನನ್ನ ಬಳಿಗೆ ಬರುತ್ತೀ; ನಾನಾದರೋ ನೀನು ಹಿಯಾಳಿಸಿದಂಥ ಸೇನಾಧೀಶ್ವರನೂ ಇಸ್ರಾಯೇಲ್ಯರ ಯುದ್ಧಭಟರ ದೇವರೂ ಆಗಿರುವ ಯೆಹೋವನ ನಾಮದೊಡನೆ ನಿನ್ನ ಬಳಿಗೆ ಬರುತ್ತೇನೆ.**

ದಾವೀದನು ಗೊಲ್ಯಾತನನ್ನು ಎದುರಿಸಲು ಸಿದ್ಧನಾದಾಗ, ದಾವೀದನಿಗೆ ತಿಳಿದಿರುವ ಒಂದು ಪ್ರಮುಖ ಸತ್ಯವಿತ್ತು. ದಾವೀದನು ಸುನ್ನತಿ ಮಾಡಿಸಿಕೊಂಡಿದ್ದನು, ಅಂದರೆ ಅವನು ದೇವರೊಂದಿಗೆ ಒಡಂಬಡಿಕೆಯನ್ನು ಹೊಂದಿದ್ದ ವ್ಯಕ್ತಿಯಾಗಿದ್ದನು. ಅವನು ಗೊಲ್ಯಾತನನ್ನು *"ಈ ಸುನ್ನತಿಯಿಲ್ಲದ ಫಿಲಿಷ್ಟಿಯ"* ಎಂದು ಉಲ್ಲೇಖಿಸಿದನು, ಅಂದರೆ ದೇವರೊಂದಿಗೆ ಒಡಂಬಡಿಕೆಯಿಲ್ಲದ ಮನುಷ್ಯನು. ದಾವೀದನು ದೇವರೊಂದಿಗೆ ಒಡಂಬಡಿಕೆಯಲ್ಲಿದ್ದ ಕಾರಣ, ಜೀವಂತ ದೇವರು ತನ್ನ ಪರವಾಗಿ ಇದ್ದಾನೆ ಎಂದು ಅವನಿಗೆ ತಿಳಿದಿತ್ತು. ಸ್ವರ್ಗೀಯ ಮತ್ತು ಭೂಸೇನೆಗಳ ದೇವರಾದ ಸೈನ್ಯಗಳ ಕರ್ತನು ದಾವೀದನೊಂದಿಗೆ ಇದ್ದನು. ಇದು ಎಲ್ಲಾ ವ್ಯತ್ಯಾಸವನ್ನು ಮಾಡಿದೆ.

ದಾವೀದನು ಗೊಲ್ಯಾತನನ್ನು ಭೇಟಿಯಾಗಲು ಓಡಿಹೋದಾಗ, ಅವನು ದೇವರೊಂದಿಗಿನ ತನ್ನ ಒಡಂಬಡಿಕೆಯ ಆಧಾರದ ಮೇಲೆ ಹಾಗೆ ಮಾಡಿದನು. ದೇವರು ಯಾರು, ದೇವರು ಏನು ಮಾಡಿದ್ದಾನೆ ಮತ್ತು ಅವನ ಮೂಲಕ ದೇವರು ಏನು ಮಾಡುತ್ತಾನೆ ಎಂದು ದಾವೀದನು ಧೈರ್ಯದಿಂದ ಘೋಷಿಸಿದನು.

ದಾವೀದನು ದೇವರೊಂದಿಗೆ ಒಡಂಬಡಿಕೆಯ ಮನುಷ್ಯನಾಗಿದ್ದರಿಂದ ಧೈರ್ಯದಿಂದ ಮಾತನಾಡಬಲ್ಲವನಾಗಿದ್ದನು.

ನೀವು ಎದುರಿಸುತ್ತಿರುವ ದೈತ್ಯರು ಯಾರು? ದೇವರಿಗೆ ದೊಡ್ಡ ದೈತ್ಯ ಇಲ್ಲ. ಸೌಲನ ಸೈನ್ಯದಲ್ಲಿದ್ದ ಸುಶಿಕ್ಷಿತ ಸೈನಿಕರು ದೈತ್ಯನನ್ನು ತಮ್ಮೊಂದಿಗೆ ಹೋಲಿಸಿಕೊಳ್ಳುತ್ತಿದ್ದರು. ಆದ್ದರಿಂದ, ಅವರು ಭಯಭೀತರಾಗಿದ್ದರು. ಅವರು ಯುದ್ಧಕ್ಕೆ ಮುಂದಾಗಲಿಲ್ಲ. ಆದರೆ ದಾವೀದ ದೈತ್ಯನನ್ನು ನೋಡಿದನು ಮತ್ತು ದೈತ್ಯನ ಸೈನ್ಯವು ಕರ್ತನಿಗೆ ಹೊಂದಿಕೆಯಾಗುವುದಿಲ್ಲ ಎಂದು ಅರಿತುಕೊಂಡನು. ನೀವು ಅನಾರೋಗ್ಯ, ಆರ್ಥಿಕ ಸಮಸ್ಯೆಗಳು, ಸಾಲಗಳು, ನಿಮ್ಮ ಕುಟುಂಬದಲ್ಲಿನ ಸಮಸ್ಯೆಗಳು, ಕೆಲಸದ ಸ್ಥಳದಲ್ಲಿನ ಸಮಸ್ಯೆಗಳು, ಕಾನೂನು ಹೋರಾಟಗಳು, ಯಾವುದೇ ದೈತ್ಯರನ್ನು ಎದುರಿಸುತ್ತಿರುವಿರಿ– ನೆನಪಿಡಿ, ನಿಮ್ಮ ದೈತ್ಯರು ದೇವರಿಗೆ ಹೊಂದಿಕೆಯಾಗುವುದಿಲ್ಲ. ನೀವು ದೇವರೊಂದಿಗೆ ಒಡಂಬಡಿಕೆಯಲ್ಲಿರುವ ವ್ಯಕ್ತಿ. ದೇವರು ನಿಮ್ಮ ಕಡೆ ಇದ್ದಾನೆ. ನಿಮ್ಮ ದೈತ್ಯರನ್ನು ನೀವು ಜಯಿಸುವಿರಿ ಎಂದು ಘೋಷಿಸಿ. ನಿಮ್ಮ ದೈತ್ಯರು ಸೋಲಿಸಲ್ಪಟ್ಟರು ಮತ್ತು ನೀವು ವಿಜಯಶಾಲಿಯಾಗಿದ್ದೀರಿ ಎಂದು ಘೋಷಿಸಿ. ಯೇಸುಕ್ರಿಸ್ತನ ಹೆಸರಿನಲ್ಲಿ ವಿಜಯವನ್ನು ಘೋಷಿಸಿ. ದೇವರು ನಿಮ್ಮ ಪರವಾಗಿರುತ್ತಾನೆ ಮತ್ತು ಆತನು ನಿಮಗಾಗಿ ಹೋರಾಡುತ್ತಾನೆ.

# 10
# ದೇವರ ಮುಂದೆ ಸ್ವೀಕಾರಾರ್ಹವಾದ ಪದಗಳನ್ನು ಮಾತನಾಡಿ

**ಕೀರ್ತನೆಗಳು 19:14**

**ಯೆಹೋವನೇ, ನನ್ನ ಶರಣನೇ, ನನ್ನ ವಿಮೋಚಕನೇ, ನನ್ನ ಮಾತುಗಳೂ ನನ್ನ ಹೃದಯದ ಧ್ಯಾನವು ನಿನಗೆ ಸಮರ್ಪಕವಾಗಿರಲಿ.**

ಕೀರ್ತನೆಗಳು 19 ರಲ್ಲಿ, ದೇವರ ಶ್ರೇಷ್ಠತೆ ಮತ್ತು ಆತನ ವಾಕ್ಯದ ಪರಿಶುದ್ಧತೆಯನ್ನು ಘೋಷಿಸಿದ ನಂತರ, ದಾವೀದ ತನ್ನ ಬಾಯಿಯ ಮಾತುಗಳು ದೇವರ ದೃಷ್ಟಿಯಲ್ಲಿ ಸ್ವೀಕಾರಾರ್ಹವಾಗಬೇಕೆಂದು ಪ್ರಾರ್ಥಿಸುತ್ತಾನೆ. ಹೀಬ್ರೂ ಭಾಷೆಯಲ್ಲಿ "ಸ್ವೀಕಾರಾರ್ಹ" ಎಂಬ ಪದವು "ಮೆಚ್ಚಿಕೆಯಾಗುವ, ಸಂತೋಷಕರ, ಅನುಕೂಲಕರ" ಎಂದರ್ಥ.

ನಾವು ಮಾತನಾಡುವ ಮಾತುಗಳನ್ನು ನಾವು ಆಯ್ಕೆ ಮಾಡಬಹುದು. ದೇವರ ದೃಷ್ಟಿಯಲ್ಲಿ ಸ್ವೀಕಾರಾರ್ಹ, ಮೆಚ್ಚುವ ಮತ್ತು ಸಂತೋಷಕರವಾದ ಮಾತುಗಳನ್ನು ಮಾತನಾಡಲು ನಾವು ಆಯ್ಕೆ ಮಾಡಬಹುದು. ನಮ್ಮ ಮಾತುಗಳು ಶುದ್ಧ, ಪರಿಪೂರ್ಣ ಮತ್ತು ಸರಿಯಾದ ದೇವರ ವಾಕ್ಯಕ್ಕೆ ಅನುಸಾರವಾಗಿದ್ದಾಗ, ನಮ್ಮ ಮಾತುಗಳು ಖಂಡಿತವಾಗಿಯೂ ದೇವರ ದೃಷ್ಟಿಯಲ್ಲಿ ಸ್ವೀಕಾರಾರ್ಹ, ಮೆಚ್ಚಿಕೆಯ ಮತ್ತು ಸಂತೋಷಕರವಾಗಿರುತ್ತದೆ. ನಾವು ಆತನ ಮಹಿಮೆಯನ್ನು ಪ್ರಕಟಿಸುವ ಮಾತುಗಳನ್ನು ಮಾತನಾಡುವಾಗ, ನಮ್ಮ ಮಾತುಗಳು ಆತನ ದೃಷ್ಟಿಯಲ್ಲಿ ಆಹ್ಲಾದಕರವಾಗಿರುತ್ತವೆ. ನಮ್ಮ ದೇವರು ಏನು ಮಾಡಬಹುದೆಂಬುದನ್ನು ನಾವು ಮಾತನಾಡುವಾಗ, ನಮ್ಮ ಮಾತುಗಳು ಆತನ ದೃಷ್ಟಿಯಲ್ಲಿ ಸಂತೋಷಕರವಾಗಿವೆ. ನಾವು ನಮ್ಮ ದೇವರ ಅದ್ಭುತ ಸ್ವಭಾವ, ಆತನ ಪ್ರೀತಿ, ಕರುಣೆ, ಕನಿಕರದ ಬಗ್ಗೆ ಮಾತನಾಡುವಾಗ, ನಮ್ಮ ಮಾತುಗಳು ಆತನ ದೃಷ್ಟಿಯಲ್ಲಿ ಸ್ವೀಕಾರಾರ್ಹವಾಗಿರುತ್ತವೆ.

ನಂಬಿಕೆಯು ದೇವರನ್ನು ಮೆಚ್ಚಿಸುತ್ತದೆ ಎಂದು ಇಬ್ರಿಯರಿಗೆ 11:6 ನಮಗೆ ಕಲಿಸುತ್ತದೆ. ನಂಬಿಕೆಯ ಮಾತುಗಳನ್ನು ಮಾತನಾಡಿರಿ. ದೇವರು

ಯಾರು ಮತ್ತು ಆತನು ತನ್ನ ಜನರಿಗೆ ಏನು ಮಾಡುತ್ತಾನೆ ಎಂಬುದರಲ್ಲಿ ನಿಮ್ಮ ನಂಬಿಕೆಯನ್ನು ಘೋಷಿಸುವ ಮಾತುಗಳನ್ನು ಮಾತನಾಡಿ. ದೇವರಲ್ಲಿ ನಿಮ್ಮ ನಂಬಿಕೆ, ಆತನ ಮಾತುಗಳು ಮತ್ತು ನಿಮ್ಮ ಜೀವನದಲ್ಲಿ ಕೆಲಸ ಮಾಡುವ ಆತನ ಶಕ್ತಿಯನ್ನು ಘೋಷಿಸುವ ಮಾತುಗಳನ್ನು ಮಾತನಾಡಿ. ನಂಬಿಕೆಯು ದೇವರನ್ನು ಮೆಚ್ಚಿಸುತ್ತದೆ. ನಂಬಿಕೆಯ ಮಾತುಗಳು ದೇವರಿಗೆ ಸ್ವೀಕಾರಾರ್ಹ, ಮೆಚ್ಚಿಕೆ ಮತ್ತು ಸಂತೋಷಕರ.

ಪ್ರತಿಯೊಂದು ಸನ್ನಿವೇಶದಲ್ಲಿಯೂ, ದೇವರ ದೃಷ್ಟಿಯಲ್ಲಿ ಸ್ವೀಕಾರಾರ್ಹ, ಮೆಚ್ಚುವಂಥ ಮತ್ತು ಸಂತೋಷಕರವಾದ ಮಾತುಗಳನ್ನು ಮಾತನಾಡಿರಿ. ನಂಬಿಕೆಯ ಹೃದಯದಿಂದ ನಂಬಿಕೆಯ ಮಾತುಗಳನ್ನು ಮಾತನಾಡಿ.

# 11
# ಪ್ರತಿಯೊಂದು ಸಂದರ್ಭದಲ್ಲೂ ನಿಮಗೆ ದೇವರು ಯಾರೆಂದು ಘೋಷಿಸಿ

**ಕೀರ್ತನೆಗಳು 27:1–3**

**1 ಯೆಹೋವನು ನನಗೆ ಬೆಳಕೂ ರಕ್ಷಕನೂ ಆಗಿದ್ದಾನೆ; ನಾನು ಯಾರಿಗೆ ಭಯಪಟ್ಟೇನು? ಯೆಹೋವನು ನನ್ನ ಪ್ರಾಣದ ಆಧಾರವು ; ನಾನು ಯಾರಿಗೆ ಹೆದರೇನು?**

**2 ನನ್ನನ್ನು ಬಾಧಿಸುತ್ತಿರುವ ದುರ್ವೈರಿಗಳು ನನ್ನನ್ನು ನುಂಗಿಬಿಡಬೇಕೆಂದು ಬಂದು ತಾವೇ ನೆಲಕ್ಕೆ ಬಿದ್ದುಹೋದರು.**

**3 ನನಗೆ ವಿರೋಧವಾಗಿ ದಂಡುಬಂದಿಳಿದರೂ ನನಗೇನೂ ಭಯವಿಲ್ಲ; ಚತುರಂಗಬಲವು ಯುದ್ಧಸನ್ನದ್ಧವಾಗಿ ನಿಂತರೂ ಭರವಸವುಳ್ಳವನಾಗಿಯೇ ಇರುವೆನು.**

ಕಷ್ಟಕರ ಸಂದರ್ಭಗಳಲ್ಲಿ ದಾವೀದ ಏನು ಹೇಳುತ್ತಿದ್ದಾನೆ ಎಂಬುದನ್ನು ಪರಿಗಣಿಸಿ. ವೈರಿಗಳು ಮತ್ತು ಶತ್ರುಗಳು ಇದ್ದಾರೆ ಎಂದು ಅವನು ಗುರುತಿಸುತ್ತಾನೆ. ಆದಾಗ್ಯೂ, ಅವನಿಗೆ ದೇವರು ಯಾರೆಂದು ಅವನು ಘೋಷಿಸುತ್ತಾನೆ - ಕರ್ತನು, ನನ್ನ ಬೆಳಕು, ನನ್ನ ರಕ್ಷಕನೂ, ನನ್ನ ಪ್ರಾಣದ ಆಧಾರವೂ! ಮತ್ತು ತನಗೆ ದೇವರು ಯಾರೆಂಬ ಕಾರಣಕ್ಕಾಗಿ, ದಾವೀದ ಧೈರ್ಯಶಾಲಿ ಹೇಳಿಕೆಗಳನ್ನು ನೀಡಬಹುದು, *“ನಾನು ಯಾರಿಗೆ ಭಯಪಡಲಿ?”, “ಯಾರಿಗೆ ನಾನು ಹೆದರೇನು?”, “ನನ್ನ ಹೃದಯವು ಭಯಪಡುವುದಿಲ್ಲ”, “ನಾನು ಧೈರ್ಯದಿಂದ ಇರುತ್ತೇನೆ.”* ದೇವರು ತನ್ನೊಂದಿಗೆ ಇರುವುದರಿಂದ ಅವನು ತನ್ನ ಶತ್ರುಗಳ ಸೋಲನ್ನು ಘೋಷಿಸುತ್ತಾನೆ ಮತ್ತು ಸಾರುತ್ತಾನೆ.

ದಾವೀದನ ಮಾದರಿಯನ್ನು ಅನುಸರಿಸುವುದು ಸರಿಯೇ? ಖಂಡಿತವಾಗಿ. ಪ್ರತಿಯೊಂದು ಸಂದರ್ಭದಲ್ಲೂ, ನಮಗೆ ದೇವರು ಯಾರು ಎಂದು ಧೈರ್ಯದಿಂದ ನಿಲ್ಲಬೇಕು. ನಾವು ಸಹ ಘೋಷಿಸಬಹುದು, *“ಯೆಹೋವನು ನನಗೆ ಬೆಳಕೂ ರಕ್ಷಕನೂ ಆಗಿದ್ದಾನೆ; ನಾನು ಯಾರಿಗೆ ಭಯಪಟ್ಟೇನು? ಯೆಹೋವನು ನನ್ನ ಪ್ರಾಣದ ಆಧಾರವು; ನಾನು ಯಾರಿಗೆ ಹೆದರೇನು?”* ಕಷ್ಟದ ಸಮಯದಲ್ಲಿ, ದೇವರು ನಮ್ಮ ವಿಮೋಚಕ ಎಂದು ನಾವು ಘೋಷಿಸಬಹುದು. ಅನಾರೋಗ್ಯದ ಮಧ್ಯೆ, ದೇವರು ನಮ್ಮ ವೈದ್ಯ

ಎಂದು ನಾವು ಘೋಷಿಸಬಹುದು. ಅಗತ್ಯದ ಮಧ್ಯೆ, ದೇವರು ನಮ್ಮ ಪೂರೈಕೆದಾರ ಎಂದು ನಾವು ಘೋಷಿಸಬಹುದು. ನಿರಾಶೆ ಸನ್ನಿವೇಶಗಳ ಮಧ್ಯೆ, ದೇವರು ನಮ್ಮ ಶೋಕವನ್ನು ನೃತ್ಯವಾಗಿ ಪರಿವರ್ತಿಸುತ್ತಾನೆ ಎಂದು ನಾವು ಘೋಷಿಸಬಹುದು. ಅಳುವುದು ಒಂದು ರಾತ್ರಿ ಸಹಿಸಬಹುದಾದರೂ, ಸಂತೋಷವು ಬೆಳಿಗ್ಗೆ ಬರುತ್ತದೆ ಎಂದು ನಾವು ಘೋಷಿಸಬಹುದು.

ನಾವು ಎದುರಿಸುತ್ತಿರುವ ಸಮಸ್ಯೆಗಳನ್ನು ನಾವು ನಿರಾಕರಿಸುವುದಿಲ್ಲ. ವೈರಿಗಳು ಮತ್ತು ಶತ್ರುಗಳು ಇದ್ದಾರೆ ಎಂಬುದನ್ನು ನಾವು ನಿರಾಕರಿಸುವುದಿಲ್ಲ. ಆದರೆ ನಾವು ದೇವರು ಯಾರು, ನಾವು ಆತನಲ್ಲಿ ಏನನ್ನು ಹೊಂದಿದ್ದೇವೆ ಮತ್ತು ನಾವು ಏನನ್ನು ಎದುರಿಸುತ್ತಿದ್ದೇವೆ ಎಂಬುದರ ಹೊರತಾಗಿಯೂ ಆತನಿಂದ ನಾವು ಹೊಂದಿರುವ ವಿಶ್ವಾಸವನ್ನು ನಾವು ಘೋಷಿಸುತ್ತೇವೆ. ಪ್ರತಿಯೊಂದು ಸಂದರ್ಭದಲ್ಲೂ ನಿಮಗೆ ದೇವರು ಯಾರೆಂದು ಘೋಷಿಸಿ. ಪ್ರತಿಯೊಂದು ಸನ್ನಿವೇಶದಲ್ಲಿಯೂ, ನೀವು ಆತನಲ್ಲಿ ಏನನ್ನು ಹೊಂದಿದ್ದೀರಿ ಎಂಬುದನ್ನು ಘೋಷಿಸಿ. ಪ್ರತಿಯೊಂದು ಸನ್ನಿವೇಶದಲ್ಲಿಯೂ ಆತನಿಂದಾಗಿ ನಿಮ್ಮ ಧೈರ್ಯ, ಆತ್ಮವಿಶ್ವಾಸ, ಸಂತೋಷ, ಜಯ ಮತ್ತು ವಿಜಯವನ್ನು ಘೋಷಿಸಿ. ದಾವೀದನು ಹಾಗೆ ಮಾಡಿದನು. ನೀವೂ ಮಾಡಬಹುದು!

# 12

# ನೈಸರ್ಗಿಕ ಪ್ರಪಂಚವು ಕರ್ತನ ಧ್ವನಿಗೆ ಪ್ರತಿಕ್ರಿಯಿಸುತ್ತದೆ

**ಕೀರ್ತನೆಗಳು 29:3–9**

**3 ಯೆಹೋವನ ಮಹಾಧ್ವನಿಯು ಮೇಘಮಂಡಲದಲ್ಲಿ ಕೇಳಿಸುತ್ತದೆ; ಪ್ರಭಾವಸ್ವರೂಪನಾದ ದೇವರು ಗುಡುಗುತ್ತಾನೆ; ಯೆಹೋವನು ಆಕಾಶದ ಜಲರಾಶಿಗಳ ಮೇಲೆ ಇದ್ದಾನೆ.**

**4 ಯೆಹೋವನ ಧ್ವನಿಯು ಎಷ್ಟೋ ಬಲವುಳ್ಳದ್ದು, ಎಷ್ಟೋ ಗಂಭೀರವಾದದ್ದು.**

**5 ಯೆಹೋವನ ಗರ್ಜನೆಗೆ ದೇವದಾರುವೃಕ್ಷಗಳು ದಡಲ್ ಎಂದು ಮುರಿದು ಬೀಳುತ್ತವೆ; ಯೆಹೋವನು ಲೆಬನೋನ್ ಪರ್ವತದಲ್ಲಿನ ಮಹಾ ದೇವದಾರುಗಳನ್ನೂ ಮುರಿದುಬಿಡುತ್ತಾನೆ.**

**6 ಲೆಬನೋನ್ ಪರ್ವತವು ಕರುವಿನೋಪಾದಿಯಲ್ಲಿಯೂ ಸಿರ್ಯೋನೆ ಬೆಟ್ಟವು ಕಾಡುಕೋಣದ ಮರಿಯಂತೆಯೂ ಹಾರಾಡುವ ಹಾಗೆ ಮಾಡುತ್ತಾನೆ.**

**7 ಯೆಹೋವನ ಗರ್ಜನೆಗೆ ಮಿಂಚುಗಳು ಥಳಥಳನೆ ಹೊಳೆಯುತ್ತವೆ.**

**8 ಯೆಹೋವನ ಗರ್ಜನೆಗೆ ಕಾಡು ಹೊರಳಾಡುತ್ತದೆ; ಕಾದೇಶ ಆರಣ್ಯವು ಕಂಪಿಸುತ್ತದೆ.**

**9 ಯೆಹೋವನ ಗರ್ಜನೆಗೆ ಗರ್ಭದ ಜಿಂಕೆಗಳು ಈಯುತ್ತವೆ; ಕಾಡಿನ ಮರಗಳು ಬರೀದಾಗುತ್ತವೆ. ಆಗ ಆತನ ಮಂದಿರದಲ್ಲಿರುವವರೆಲ್ಲರು- ಎಷ್ಟೋ ಪ್ರಭಾವ! ಎನ್ನುತ್ತಾರೆ.**

ದೇವರ ದೊಡ್ಡತನವನ್ನು ಘೋಷಿಸುವಾಗ, ಈ ಕೀರ್ತನೆಯಲ್ಲಿ, ದಾವೀದನು ಕರ್ತನ ಧ್ವನಿಯ ಶ್ರೇಷ್ಠತೆ ಮತ್ತು ಶಕ್ತಿಯನ್ನು ಘೋಷಿಸಲು ಮುಂದುವರಿಯುತ್ತಾನೆ. ಕರ್ತನ ಧ್ವನಿಯು ಕರ್ತನ ಮಾತಿನ ಮೂಲಕ ಬಿಡುಗಡೆಯಾಗುತ್ತದೆ. ದೇವರು ಮಾತನಾಡುವ ಮಾತುಗಳ ಮೂಲಕ ತನ್ನ ಧ್ವನಿಯನ್ನು ಬಿಡುಗಡೆ ಮಾಡುತ್ತಾನೆ. ಈ ಸ್ವಾಭಾವಿಕ ಜಗತ್ತಿನಲ್ಲಿ ಎಲ್ಲವೂ ಕರ್ತನ ಧ್ವನಿಗೆ, ಅಂದರೆ ಕರ್ತನ ವಾಕ್ಯಕ್ಕೆ ಪ್ರತಿಕ್ರಿಯಿಸುತ್ತದೆ ಎಂದು ಈ ಭಾಗವು ಮತ್ತೊಮ್ಮೆ ನಮಗೆ ತಿಳಿಸುತ್ತದೆ. ದೇವರ ವಾಕ್ಯ (ಧ್ವನಿ) ನೀರಿನ ಮೇಲೆ ಚಲಿಸುವುದು ದೇವರು ನೀರಿನ ಮೇಲೆ ಚಲಿಸಿದಂತೆ. ಕರ್ತನ ಮಾತು (ಧ್ವನಿ) ಆತನ ಶಕ್ತಿ ಮತ್ತು ಘನತೆಯ ಅಭಿವ್ಯಕ್ತಿಯಾಗಿದೆ. ಎಲ್ಲಾ ಸೃಷ್ಟಿ, ಸಜೀವ ಮತ್ತು ನಿರ್ಜೀವ, ಕರ್ತನ ಮಾತಿಗೆ (ಧ್ವನಿ) ಪ್ರತಿಕ್ರಿಯಿಸುವವು .

ವೇದವಾಕ್ಯದಲ್ಲಿ ಸಮಯಗಳಿವೆ, ಪವಿತ್ರಾತ್ಮನು ಜನರ ಮೇಲೆ

ಚಲಿಸಿದಾಗ, ಕರ್ತನ ಧ್ವನಿಯನ್ನು ಮಾನವರ ಧ್ವನಿಯ ಮೂಲಕ ಬಿಡುಗಡೆ ಮಾಡಲಾಯಿತು. ಅವರು ಪವಿತ್ರಾತ್ಮನಿಂದ ಪ್ರೇರಿತರಾಗಿ ಮಾತನಾಡುವಾಗ ಕರ್ತನ ಮಾತು (ಧ್ವನಿ) ಅವರ ಮೂಲಕ ಬಂದಿತು. ಕರ್ತನ ಮಾತು (ಧ್ವನಿ) ಅವರೊಂದಿಗಿದೆ ಎಂದು ಅವರ ಬಗ್ಗೆ ಹೇಳಲಾಗಿದೆ. ಪವಿತ್ರಾತ್ಮನ ಅಭಿಷೇಕದ ಅಡಿಯಲ್ಲಿ ಕರ್ತನ ಧ್ವನಿ (ಮಾತು) ಮಾನವರ ಧ್ವನಿಯ(ಮಾತು) ಮೂಲಕ ಬಿಡುಗಡೆಯಾದಾಗ, ಅದ್ಭುತವಾದ ಸಂಗತಿಗಳು ಸಂಭವಿಸಿದವು. ಬಂಡೆಯಿಂದ ನೀರು ಹರಿಯಿತು, ಸಮುದ್ರಗಳು ಮತ್ತು ನದಿಗಳು ಬೇರ್ಪಟ್ಟವು, ಸೂರ್ಯನು ನಿಂತನು, ಸೂರ್ಯನು ಹತ್ತು ಡಿಗ್ರಿ ಹಿಂದಕ್ಕೆ ತಿರುಗಿದನು, ಎಣ್ಣೆ ಮತ್ತು ಹಿಟ್ಟು ಹೆಚ್ಚಾಯಿತು, ಕೊಡಲಿ ತಲೆಯು ನೀರಿನ ಮೇಲೆ ತೇಲಿತು, ಮತ್ತು ಇನ್ನೂ ಅನೇಕ.

ವಿಶ್ವಾಸಿಗಳಾಗಿ, ನಂಬಿಕೆಯಿಂದ ಕರ್ತನ ವಾಕ್ಯವನ್ನು ಮಾತನಾಡುವ ಸವಲತ್ತು ನಮಗಿದೆ. ನಾವು ದೇವರು ಈಗಾಗಲೇ ಹೇಳಿದ್ದನ್ನು ತೆಗೆದುಕೊಳ್ಳುತ್ತೇವೆ, ಆ ಮಾತನ್ನು ನಂಬುತ್ತೇವೆ ಮತ್ತು ಇಂದು ಅದನ್ನು ಹೇಳುತ್ತೇವೆ. ಹಿಂದಿನ ಕಾಲದಂತೆಯೇ ದೇವರ ಆತ್ಮನು ನಮ್ಮ ಮೇಲೆ ಚಲಿಸುವ ಸಂದರ್ಭಗಳೂ ಇವೆ, ಆದ್ದರಿಂದ ನಾವು ಮಾತನಾಡಲು ಪ್ರೇರೇಪಿಸುವ ಮಾತುಗಳನ್ನು ನಾವು ಮಾತನಾಡುತ್ತೇವೆ. ನಾವು ಆ ಮಾತನ್ನು ಮಾತನಾಡುವಾಗ, ಕರ್ತನ ಧ್ವನಿ (ಮಾತು) ನಮ್ಮ ಧ್ವನಿ (ಮಾತುಗಳ) ಮೂಲಕ ಬಿಡುಗಡೆಯಾಗುತ್ತಿದೆ. ಸಹಜ ಪ್ರಪಂಚವು ಕರ್ತನ ಧ್ವನಿಗೆ ಸ್ಪಂದಿಸುತ್ತದೆ. ಎರಡನ್ನೂ ಮಾಡಲು ಕಲಿಯಿರಿ. ನಿಮ್ಮ ಹೃದಯದಲ್ಲಿ ನಂಬಿಕೆಯಿಂದ ದೇವರ ವಾಕ್ಯವನ್ನು ಮಾತನಾಡಿ. ಪವಿತ್ರಾತ್ಮನು ಪ್ರೇರೇಪಿಸುವಂತೆ ಕರ್ತನ ಧ್ವನಿಯನ್ನು ಮಾತನಾಡಿ.

# 13
# ನೈಸರ್ಗಿಕ ಪ್ರಪಂಚವು ಆತನ ಮಾತಿನಿಂದ ನಿರ್ಮಿತವಾಯಿತು ಮತ್ತು ರೂಪುಗೊಂಡಿತು

**ಕೀರ್ತನೆಗಳು 33:6,9**

**[6] ಯೆಹೋವನ ಅಪ್ಪಣೆಯಿಂದಲೇ ಆಕಾಶವು ಉಂಟಾಯಿತು; ಅದರಲ್ಲಿರುವದೆಲ್ಲವೂ ಆತನ ಶ್ವಾಸದಿಂದ ನಿರ್ಮಿತವಾಯಿತು.**

**[9] ಆತನು ನುಡಿದ ಮಾತ್ರಕ್ಕೆ ಸಮಸ್ತವೂ ಉಂಟಾಯಿತು; ಆತನು ಅಜ್ಞಾಪಿಸುತ್ತಲೇ ಸರ್ವವೂ ಸ್ಥಾಪನೆಯಾಯಿತು.**

ವೇದವಾಕ್ಯದ ಉದ್ದಕ್ಕೂ ನಮಗೆ ಪ್ರಸ್ತುತಪಡಿಸಲಾದ ಸತ್ಯವೆಂದರೆ ದೇವರು ತನ್ನ ವಾಕ್ಯದಿಂದ ಎಲ್ಲವನ್ನೂ ಸೃಷ್ಟಿಸಿದನು. ಆತನು ಮಾತನಾಡಿದ. ಆತನು ಆದೇಶಿಸಿದನು. ಆತನು ತನ್ನ ಬಾಯಿಯ ಉಸಿರನ್ನು ಬಿಡುಗಡೆ ಮಾಡಿದನು. ಆತನು ಮಾತುಗಳನ್ನು ಬಿಡುಗಡೆ ಮಾಡಿದನು. ಆತನು ನೈಸರ್ಗಿಕವಾಗಿ ಕಾಣುವ ಪ್ರದೇಶವನ್ನು ಅಸ್ತಿತ್ವಕ್ಕೆ ತರುವ ಕುರಿತು ಮಾತನಾಡಿದನು. ನಾವು ಅರ್ಥಮಾಡಿಕೊಳ್ಳಲು ಇದು ಮುಖ್ಯವಾಗಿದೆ.

ನೈಸರ್ಗಿಕ, ಗೋಚರವಾಗುವ ಮತ್ತು ಭೌತಿಕ ಕ್ಷೇತ್ರದಲ್ಲಿನ ಎಲ್ಲವೂ ದೇವರ ವಾಕ್ಯಕ್ಕೆ ಅಧೀನವಾಗಿದೆ.

ದೇವರ ವಾಕ್ಯವು ಇನ್ನೂ ಸೃಷ್ಟಿಸುತ್ತದೆ. ದೇವರ ವಾಕ್ಯವು ನಮ್ಮ "ಜಗತ್ತು" (ನಮ್ಮ ಜೀವನ, ನಮ್ಮ ದೈನಂದಿನ ಜೀವಿತದಲ್ಲಿ) ಅಲ್ಲಿ ಇಲ್ಲದಿರುವುದನ್ನು ತರಬಹುದು. ದೇವರ ವಾಕ್ಯದ ಶಕ್ತಿಯನ್ನು ನಮ್ಮ ಜಗತ್ತಿನಲ್ಲಿ ಬಿಡುಗಡೆ ಮಾಡುವುದು ಹೇಗೆ ಎಂದು ನಾವು ಕಲಿತರೆ ದೇವರು ವಾಗ್ದಾನ ಮಾಡಿರುವುದನ್ನು ನಾವು ಹೊಂದಬಹುದು.

ದೇವರ ವಾಕ್ಯವು ಬದಲಾವಣೆ ತರುತ್ತದೆ ಮತ್ತು ರೂಪಾಂತರಗೊಳ್ಳಿಸುತ್ತದೆ. ದೇವರ ವಾಕ್ಯವು ನಮ್ಮ "ಜಗತ್ತಿನಲ್ಲಿ" (ನಮ್ಮ ಜೀವನ, ನಮ್ಮ ದೈನಂದಿನ ಜೀವಿತದಲ್ಲಿ) ವಿಷಯಗಳನ್ನು

ಬದಲಾಯಿಸಬಹುದು ಮತ್ತು ಮಾರ್ಪಡಿಸಬಹುದು ಮತ್ತು ದೇವರು ನಮಗೆ ವಾಗ್ದಾನ ಮಾಡಿರುವುದನ್ನು ಜೋಡಣೆಗೆ ತರಬಹುದು. ಆದರೆ ದೇವರ ವಾಕ್ಯದ ಶಕ್ತಿಯನ್ನು ನಮ್ಮ ಜಗತ್ತಿನಲ್ಲಿ ಬಿಡುಗಡೆ ಮಾಡಲು ನಾವು ಕಲಿಯಬೇಕು.

ನಾವು ನಂಬಿಕೆಯಿಂದ ಆತನ ವಾಕ್ಯವನ್ನು ಮಾತನಾಡುವಾಗ ದೇವರು ವೇದವಾಕ್ಯಾದ್ಯಂತ ಇರಿಸಿರುವ ಕೀಲಿಗಳಲ್ಲಿ ಒಂದಾದ ಆತನ ವಾಕ್ಯದ ಶಕ್ತಿಯನ್ನು ನಮ್ಮ ಜಗತ್ತಿನಲ್ಲಿ ಬಿಡುಗಡೆ ಮಾಡಲು ಕಾರಣವಾಗುತ್ತದೆ. ನಾವು ಆತನ ವಾಕ್ಯವನ್ನು ನಂಬಿದಾಗ ಮತ್ತು ಆತನ ವಾಕ್ಯವನ್ನು ನಮ್ಮ ಜಗತ್ತಿನಲ್ಲಿ ಮಾತನಾಡುವಾಗ–ನಮ್ಮ ಪರಿಸ್ಥಿತಿಗಳು, ನಮ್ಮ ಸನ್ನಿವೇಶಗಳು, ನಮ್ಮ ಮನ್ನಸ್ಸು , ದೇಹ, ಹಣಕಾಸು, ಕುಟುಂಬ, ಕೆಲಸದ ಸ್ಥಳಗಳು ಇತ್ಯಾದಿಗಳ ಮೇಲೆ–ಆತನ ವಾಕ್ಯದ ಶಕ್ತಿಯು ನಮ್ಮ ಜಗತ್ತಿನಲ್ಲಿ ಬಿಡುಗಡೆಯಾಗುತ್ತದೆ. ನಮ್ಮ ಪ್ರಪಂಚದಲ್ಲಿರುವ ಎಲ್ಲವೂ ಆತನ ವಾಕ್ಯಕ್ಕೆ ಒಳಪಟ್ಟಿರುತ್ತದೆ ಮತ್ತು ಆತನ ವಾಕ್ಯಕ್ಕೆ ಅನುಗುಣವಾಗಿ ತರಲಾಗುವುದು. ನಿಮ್ಮ ಪ್ರಪಂಚವು ಆತನ ವಾಕ್ಯದಿಂದ ಆಕಾರಗೊಳ್ಳಲಿ ಮತ್ತು ರೂಪುಗೊಂಡಿರಲಿ.

# 14

# ನಿಮ್ಮ ನಾಲಿಗೆಯು ನಿಮಗೆ ಒಳ್ಳೆಯ ದಿನಗಳನ್ನು ಮತ್ತು ದೀರ್ಘಾಯುಷ್ಯವನ್ನು ತರಬಹುದು

**ಕೀರ್ತನೆಗಳು 34:12–14**

**[12] ದಿರ್ಘಾಯುಷ್ಯವು ಬೇಕೋ? ಬಹುದಿವಸ ಬದುಕಿ ಸುಖವನ್ನು ಅನುಭವಿಸಬೇಕೋ ?**

**[13] ಹಾಗಾದರೆ ಕೆಟ್ಟದ್ದಕ್ಕೆ ಹೋಗದಂತೆ ನಾಲಿಗೆಯನ್ನು ಕಾದುಕೋ; ವಂಚನೆಯ ಮಾತುಗಳಿಗೆ ಬಿಡದೆ ತುಟಿಗಳನ್ನು ಇಟ್ಟುಕೋ.**

**[14] ಕೆಟ್ಟದ್ದನ್ನು ಬಿಟ್ಟು ಒಳ್ಳೆಯದನ್ನೇ ಮಾಡು; ಸಮಾಧಾನವನ್ನು ಹಾರೈಸಿ ಅದಕ್ಕಾಗಿ ಪ್ರಯತ್ನಪಡು.**

ನಮ್ಮ ಮಾತುಗಳು ನಮ್ಮ ಜೀವಿತಾವಧಿಯ ಮೇಲೆ ಮತ್ತು ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತವೆ ಎಂದು ವೇದವಾಕ್ಯವು ಇಲ್ಲಿ ನಮಗೆ ಕಲಿಸುತ್ತವೆ. ಒಳ್ಳೆಯ ಮತ್ತು ದೀರ್ಘಾವಧಿಯ ಜೀವನವನ್ನು ಆನಂದಿಸಲು, ಈ ಭಾಗದಲ್ಲಿ ದಾವೀದ ಸೂಚಿಸುವ ಮೊದಲ ವಿಷಯವೆಂದರೆ ಕೆಟ್ಟ, ಭ್ರಷ್ಟ, ಅಪವಿತ್ರ ಮತ್ತು ಕ್ರೂರ ವಿಷಯಗಳನ್ನು ಮಾತನಾಡದಂತೆ ನಮ್ಮನ್ನು ಉಳಿಸಿಕೊಳ್ಳುವುದು. ಸುಳ್ಳು ಮತ್ತು ಮೋಸ ಮಾತನಾಡುವುದನ್ನು ತಪ್ಪಿಸಿ. ನಾಲಿಗೆಯನ್ನು ಪಳಗಿಸಿ. ಸರಿಯಾದ ಮಾತುಗಳನ್ನು ಮಾತನಾಡಿ. ಸತ್ಯದ ಮಾತುಗಳನ್ನು ಮಾತನಾಡಿ. ಜೀವನದ ಮಾತುಗಳನ್ನು ಮಾತನಾಡಿ. ಅದು ಮೊದಲನೆಯದು. ಮತ್ತು ಕೆಟ್ಟದ್ದನ್ನು ಮಾಡುವುದರಿಂದ ದೂರವಿರಿ. ಬದಲಾಗಿ, ಒಳ್ಳೆಯದನ್ನು ಮಾಡಿ ಮತ್ತು ಶಾಂತಿಯನ್ನು ಅನುಸರಿಸಿ.

ನಮ್ಮ ಮಾತುಗಳು ನಮ್ಮ ಪ್ರಪಂಚದ ಮೇಲೆ ಪ್ರಭಾವ ಬೀರುತ್ತವೆ. ಅವು ಒಳ್ಳೆಯದನ್ನು ಉಂಟುಮಾಡಬಹುದು, ಜೀವನ ಮತ್ತು ಆಶೀರ್ವಾದವನ್ನು ಉಂಟುಮಾಡಬಹುದು ಅಥವಾ ಅವು ದುಷ್ಟ, ಸಾವು ಮತ್ತು ಶಾಪವನ್ನು ಉಂಟುಮಾಡಬಹುದು. ನಮ್ಮ ಮಾತುಗಳು ತುಂಬಾ ಅತ್ಯಲ್ಪವೆಂದು ತೋರುತ್ತವೆ ಆದರೂ, ಅನೇಕ ವಿಧಗಳಲ್ಲಿ, ಅವು ನಮ್ಮ ಜೀವನದ ಅನುಭವದ ಕಟ್ಟಡದ ಇಟ್ಟಿಗೆಗಳಾಗಿವೆ. ಅವು ನಾವು ಬಿತ್ತುವ ಬೀಜಗಳಂತಿದ್ದು, ಒಂದು ದಿನ ನಮ್ಮ ಜೀವನದಲ್ಲಿ ತಮ್ಮದೇ ರೀತಿಯಲ್ಲಿ ಉತ್ಪತ್ತಿಯಾಗುತ್ತವೆ.

ದೇವರು ನಮ್ಮ ಮಾತುಗಳನ್ನು ನಮ್ಮ ಜೀವನದಲ್ಲಿ ಪ್ರಮುಖ ಪಾತ್ರವನ್ನು ಹೊಂದುವಂತೆ ವಿನ್ಯಾಸಗೊಳಿಸಿದ್ದಾನೆ. ನಿಮ್ಮ ಮಾತುಗಳನ್ನು ಲಘುವಾಗಿ ತೆಗೆದುಕೊಳ್ಳಬೇಡಿ. ಅವುಗಳನ್ನು ಎಚ್ಚರಿಕೆಯಿಂದ ನಡೆಸಿಕೊಳ್ಳಿ. ನಿಮ್ಮ ಮಾತುಗಳನ್ನು ಎಚ್ಚರಿಕೆಯಿಂದ ಆರಿಸಿ ಏಕೆಂದರೆ ನಿಮ್ಮ ಜೀವನವು ಆ ಮಾತುಗಳಿಂದ ರೂಪುಗೊಳ್ಳುತ್ತದೆ.

ನಾವು ದೇವರ ವಾಕ್ಯವನ್ನೇ ಮಾತನಾಡಿದರೆ ನಮ್ಮ ಮಾತುಗಳು ಎಷ್ಟು ಶಕ್ತಿಯುತವಾಗಿರುತ್ತವೆ! ನಾವು ದೇವರ ವಾಕ್ಯವನ್ನೇ ನಮ್ಮ ಜೀವನದ ಮೇಲೆ ಮಾತನಾಡಿ ಮತ್ತು ಘೋಷಿಸಿದರೆ ನಮ್ಮ ಜೀವನವು ಎಷ್ಟು ಆಶೀರ್ವದಿಸಲ್ಪಡುತ್ತದೆ! ದೇವರ ಸ್ವಂತ ವಾಕ್ಯದಿಂದ ಹುಟ್ಟಿದ ಪದಗಳು ನಮ್ಮ ಜೀವನವನ್ನು ನಿರ್ಮಿಸುವ ಅಂಶಗಳಾಗಲಿ. ದೇವರ ಸ್ವಂತ ವಾಕ್ಯದಿಂದ ಹುಟ್ಟಿದ ಮಾತುಗಳು ನಮ್ಮ ಜೀವನದಲ್ಲಿ ಬಿತ್ತುವ ಬೀಜಗಳಾಗಲಿ, ಅದರಿಂದ ಮುಂದಿನ ದಿನಗಳಲ್ಲಿ ನಮಗೆ ಫಲ ಸಿಗುತ್ತದೆ. ನಿಮ್ಮ ನಾಲಿಗೆ ನಿಮಗೆ ಒಳ್ಳೆಯ ದಿನಗಳನ್ನು ಮತ್ತು ದೀರ್ಘಾಯುಷ್ಯವನ್ನು ತರಲಿ. ಆತನ ಮಾತನ್ನು ಮಾತನಾಡಿ.

# 15

# ಆತನ ವಾಕ್ಯವನ್ನು ಘೋಷಿಸುವುದು ಆತನ ಒಡಂಬಡಿಕೆಯನ್ನು ಹೇಳಿಕೊಂಡಂತೆ

**ಕೀರ್ತನೆಗಳು 50:14–17**

**[14] ಸ್ತುತಿಯಜ್ಞವನ್ನೇ ದೇವರಿಗೆ ಸಮರ್ಪಿಸಿರಿ; ಮಾಡಿದ ಹರಕೆಗಳನ್ನು ಪರಾತ್ಪರನಿಗೆ ಸಲ್ಲಿಸಿರಿ.**
**[15] ಕಷ್ಟಕಾಲದಲ್ಲಿ ನನಗೆ ಮೊರೆಯಿಡಿರಿ; ಬಿಡಿಸುವೆನು; ಆಗ ನನ್ನನ್ನು ಕೊಂಡಾಡುವಿರಿ.**
**[16] ದುಷ್ಟರಿಗಾದರೋ ದೇವರು ಹೇಳುವದೇನಂದರೆ – ನನ್ನ ವಿಧಿಗಳನ್ನು ಪಠಿಸುವದಕ್ಕೆ ನಿಮಗೇನು ಬಾಧ್ಯತೆ ಉಂಟು? ನನ್ನ ನಿಬಂಧನೆಯನ್ನು ಉಚ್ಚರಿಸುವದು ನಿಮಗೇನು ಕೆಲಸ?**
**[17] ನೀವೋ ನನ್ನ ಸುಶಿಕ್ಷಣವನ್ನು ಹಗೆ ಮಾಡುತೀರಲ್ಲಾ; ನನ್ನ ಆಜ್ಞೆಯನ್ನು ಉಲ್ಲಂಘಿಸುತ್ತಿರಿ.**

ನಿಮ್ಮ ಬಾಯಿಯಿಂದ ದೇವರ ವಾಕ್ಯವನ್ನು ಮಾತನಾಡುವುದು ಆತನ ಒಡಂಬಡಿಕೆಯನ್ನು ನಿಮ್ಮ ಬಾಯಿಯಲ್ಲಿ ತೆಗೆದುಕೊಂಡಂತೆ, ಅಂದರೆ, ಆತನ ಒಡಂಬಡಿಕೆ ಅಥವಾ ವಾಗ್ದಾನಗಳನ್ನು ಆಹ್ವಾನಿಸುವುದು ಮತ್ತು ಹೇಳಿಕೊಳ್ಳುವುದು. ದೇವರು ಭಕ್ತಿಹೀನರನ್ನು ಖಂಡಿಸುತ್ತಾನೆ ಏಕೆಂದರೆ ಅವರು ಆತನ ವಾಕ್ಯವನ್ನು ತಿರಸ್ಕರಿಸುತ್ತಾರೆ. ಅವರು ದೇವರ ವಾಕ್ಯವನ್ನು ಗೌರವಿಸುವುದಿಲ್ಲ. ಅವರು ಆತನ ವಾಕ್ಯವನ್ನು ನಿಷ್ಪ್ರಯೋಜಕವೆಂದು ಬದಿಗಿಡುತ್ತಾರೆ. ಆದುದರಿಂದ, ದೇವರ ವಾಕ್ಯವನ್ನು ನಿರ್ಲಕ್ಷಿಸುವ ಈ ಜನರು ತಮ್ಮ ಬಾಯಿಂದ ಆತನ ವಾಕ್ಯವನ್ನು ಮಾತನಾಡಲು ಮತ್ತು ಆತನ ಒಡಂಬಡಿಕೆಯ ಪ್ರಯೋಜನಗಳನ್ನು ಪಡೆಯಲು ಪ್ರಯತ್ನಿಸುವ ಹಕ್ಕನ್ನು ಹೊಂದಿಲ್ಲ.

ಆದಾಗ್ಯೂ, ಆತನ ವಾಕ್ಯವನ್ನು ನಂಬುವ ಮತ್ತು ಗೌರವಿಸುವ ನಮ್ಮಲ್ಲಿ, ನಾವು ಆತನ ವಾಕ್ಯವನ್ನು ಘೋಷಿಸಿದಾಗ, ನಾವು ಆತನೊಂದಿಗೆ ಹೊಂದಿರುವ ಒಡಂಬಡಿಕೆಯನ್ನು ನಾವು ಹೇಳಿಕೊಳ್ಳುವಂತೆ ದೇವರು ಅದನ್ನು ನೋಡುತ್ತಾನೆ. ಆತನ ವಾಕ್ಯವನ್ನು ಘೋಷಿಸುವ ಮೂಲಕ ನಾವು ಆತನ ಒಡಂಬಡಿಕೆಯನ್ನು ನಮ್ಮ ಬಾಯಲ್ಲಿ ತೆಗೆದುಕೊಂಡಾಗ, ನಮ್ಮೊಂದಿಗೆ ದೇವರ ಒಡಂಬಡಿಕೆಯ ಪ್ರಯೋಜನಗಳನ್ನು ನಾವು ಹೇಳಿಕೊಳ್ಳುತ್ತೇವೆ.

ದೇವರು ಯೆಹೋವ, ಶಾಶ್ವತ, ಸ್ವಯಂ-ಅಸ್ತಿತ್ವದ, ಒಡಂಬಡಿಕೆಯನ್ನು ಉಳಿಸಿಕೊಳ್ಳುವ ಮತ್ತು ಭರವಸೆಗಳನ್ನು ಪೂರೈಸುವ ಬದಲಾಗದ ದೇವರು. ಆತನು ತನ್ನ ಒಡಂಬಡಿಕೆಯನ್ನು ಎಂದಿಗೂ ಮುರಿಯುವುದಿಲ್ಲ ಅಥವಾ ಆತನು ಹೇಳಿದ ಮಾತುಗಳನ್ನು ಬದಲಾಯಿಸುವುದಿಲ್ಲ. ನಾವು ಆತನ ಮಗನಾದ ಯೇಸು ಕ್ರಿಸ್ತನ ಮೂಲಕ ಸರ್ವಶಕ್ತ ದೇವರೊಂದಿಗೆ ರಕ್ತ ಒಡಂಬಡಿಕೆಯಲ್ಲಿದ್ದೇವೆ. ನಮ್ಮೊಂದಿಗೆ ಆತನ ರಕ್ತ ಒಡಂಬಡಿಕೆಯ ಮೂಲಕ, ಆತನು ತನ್ನನ್ನು, ತಾನು ಯಾರೆಂಬುದನ್ನು ನಮಗೆ ಲಭ್ಯವಾಗುವಂತೆ ಮಾಡಿದ್ದಾನೆ. ಆತನ ಒಡಂಬಡಿಕೆಯ ಹೆಸರುಗಳ ಮೂಲಕ ನಾವು ಇವುಗಳಲ್ಲಿ ಕೆಲವನ್ನು ಅರ್ಥಮಾಡಿಕೊಳ್ಳುತ್ತೇವೆ. ನಿಮ್ಮ ಒಡಂಬಡಿಕೆಯ ಆಶೀರ್ವಾದಗಳನ್ನು ತಿಳಿಯಿರಿ. ಯಾವುದೇ ಪರಿಸ್ಥಿತಿಯಲ್ಲಿ, ಆತನ ಮಾತನ್ನು ಘೋಷಿಸಿ. ಪಡೆದುಕೊಳ್ಳಿ ಮತ್ತು ನಿಮ್ಮ ಒಡಂಬಡಿಕೆಯ ಆಶೀರ್ವಾದದಲ್ಲಿ ನಡೆಯಿರಿ.

# 16
# ನಾನು ಕರ್ತನ ಬಗ್ಗೆ ಹೇಳುತ್ತೇನೆ

**ಕೀರ್ತನೆಗಳು 91:1,2**

**[1] ಪರಾತ್ಪರನ ಮೊರೆಹೊಕ್ಕಿರುವವನು ಸರ್ವಶಕ್ತನ ಆಶ್ರಯದಲ್ಲಿ ಸುರಕ್ಷಿತನಾಗಿರುವನು.**

**[2] ನಾನು ಯೆಹೋವನಿಗೆ – ನೀನೇ ನನ್ನ ಶರಣನು ನನ್ನ ದುರ್ಗವು ನಾನು ಭರವಸವಿಟ್ಟಿರುವ ನನ್ನ ದೇವರು ಎಂದು ಹೇಳುವೆನು.**

ನೀವು ಯೆಹೋವನ ಬಗ್ಗೆ ಏನು ಹೇಳುವಿರಿ? ದೇವರು ತನ್ನ ಆಶ್ರಯ ಮತ್ತು ಕೋಟೆ ಎಂದು ಕರ್ತನ ಬಗ್ಗೆ ಕೀರ್ತನೆಗಾರನು ಹೇಳಿದನು. ಅವನು ತನ್ನ ನಂಬಿಕೆ, ಅವಲಂಬನೆ, ವಿಶ್ವಾಸ ಮತ್ತು ತನ್ನ ರಕ್ಷಣೆಗಾಗಿ ಕರ್ತನ ಮೇಲೆ ಅವಲಂಬನೆಯನ್ನು ಇರಿಸುತ್ತಿದ್ದನು.

ನೀವು ಯೆಹೋವನ ಕುರಿತು ಏನು ಹೇಳುವಿರಿ?

- ನಾನು ಯೆಹೋವನ ಕುರಿತು ಹೇಳುತ್ತೇನೆ. ಆತನು ನನ್ನ ರಕ್ಷಕ. ಆತನು ನನ್ನ ಎಲ್ಲಾ ಪಾಪಗಳಿಂದ ನನ್ನನ್ನು ರಕ್ಷಿಸಿದ್ದಾನೆ. ಆತನು ನನ್ನ ಜೀವನದ ಮೇಲಿರುವ ಪಾಪದ ಶಕ್ತಿಯನ್ನು ಮುರಿದಿದ್ದಾನೆ. ನಾನು ಪಾಪದ ಅಧಿಪತ್ಯದಿಂದ ಮುಕ್ತನಾಗಿದ್ದೇನೆ.
- ನಾನು ಯೆಹೋವನ ಬಗ್ಗೆ ಹೇಳುತ್ತೇನೆ. ಆತನು ನನ್ನ ಸ್ವರ್ಗೀಯ ತಂದೆ. ಆತನು ನನ್ನನ್ನು ತನ್ನವನಂತೆ ನೋಡಿಕೊಳ್ಳುತ್ತಾನೆ. ಆತನ ಪ್ರೀತಿ ಎಂದಿಗೂ ಮುಗಿಯುವುದಿಲ್ಲ ಮತ್ತು ಎಂದಿಗೂ ವಿಫಲವಾಗುವುದಿಲ್ಲ. ನನ್ನನ್ನು ಆತನ ಸ್ವಂತ ಎಂದು ಒಪ್ಪಿಕೊಂಡಿದ್ದಾನೆ.
- ನಾನು ಕರ್ತನ ಕುರಿತು ಹೇಳುತ್ತೇನೆ, ಆತನು ನನ್ನ ವಾಸಿಮಾಡುವವನು ಮತ್ತು ನನ್ನ ವಿಮೋಚಕನು. ಆತನು ನನ್ನ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುತ್ತಾನೆ. ಆತನು ನನ್ನ ಎಲ್ಲಾ ಸಂಕಟಗಳಿಂದ ಮತ್ತು ಕಷ್ಟಗಳಿಂದ ನನ್ನನ್ನು ಬಿಡುಗಡೆ ಮಾಡುತ್ತಾನೆ.
- ನಾನು ಕರ್ತನ ಕುರಿತು ಹೇಳುತ್ತೇನೆ, ಆತನು ನನ್ನ ವಿಮೋಚಕನು. ಆತನು ನನ್ನನ್ನು ಕತ್ತಲೆಯ ಶಕ್ತಿಗಳಿಂದ ಬಿಡಿಸಿ ತನ್ನ ಸ್ವಂತ ರಾಜ್ಯಕ್ಕೆ ವರ್ಗಾಯಿಸಿದನು. ಆತನ ಮಗನಾದ ಯೇಸು ಕ್ರಿಸ್ತನ ರಕ್ತದಿಂದ ನಾನು

ವಿಮೋಚನೆಗೊಂಡಿದ್ದೇನೆ!

- ನಾನು ಕರ್ತನನ್ನು ಕುರಿತು ಹೇಳುತ್ತೇನೆ, ಆತನು ನನ್ನ ನೀತಿವಂತನು. ನಾನು ಯಾವುದೇ ಅಪರಾಧ, ಅವಮಾನ, ಕೀಳರಿಮೆ ಅಥವಾ ಖಂಡನೆ ಇಲ್ಲದೆ ಆತನ ನಿತಿವಂತಿಕೆಯನ್ನು ಧರಿಸಿದ್ದೇನೆ. ನಾನು ಪವಿತ್ರ ಮತ್ತು ಆತನ ಮುಂದೆ ದೋಷರಹಿತ.
- ನಾನು ಕರ್ತನ ಬಗ್ಗೆ ಹೇಳುತ್ತೇನೆ, ಆತನು ಒದಗಿಸುವವನು. ಆತನು ತನ್ನ ಐಶ್ವರ್ಯಕ್ಕೆ ಅನುಗುಣವಾಗಿ ನನ್ನ ಎಲ್ಲಾ ಅಗತ್ಯಗಳನ್ನು ಪೂರೈಸುತ್ತಾನೆ. ಆತನು ನನ್ನಿಂದ ಯಾವುದೇ ಒಳ್ಳೆಯದನ್ನು ತಡೆಹಿಡಿಯುವುದಿಲ್ಲ ಮತ್ತು ನನಗೆ ಎಲ್ಲಾ ಕೃಪೆಯನ್ನು ಹೇರಳವಾಗಿ ಸುರಿಸುತ್ತಾನೆ.
- ನಾನು ಕರ್ತನ ಕುರಿತು ಹೇಳುತ್ತೇನೆ, ಆತನು ನನ್ನನ್ನು ತನಗಾಗಿ ಪ್ರತ್ಯೇಕಿಸಿದ ನನ್ನ ಪರಿಶುದ್ಧನು. ಆತನು ಪರಿಶುದ್ಧನಾಗಿರುವಂತೆಯೇ ನಾನೂ ಪರಿಶುದ್ಧನು. ತನ್ನ ಸ್ವಂತ ವಿಶೇಷ ಜನರ ಭಾಗವಾಗಲು ಆತನು ನನ್ನನ್ನು ಶುದ್ಧೀಕರಿಸಿದ್ದಾನೆ.
- ನಾನು ಕರ್ತನ ಕುರಿತು ಹೇಳುತ್ತೇನೆ, ಆತನು ನನ್ನನ್ನು ನಡೆಸುವ, ನನಗೆ ಒದಗಿಸುವ, ನನ್ನನ್ನು ರಕ್ಷಿಸುವ, ನನಗೆ ಮಾರ್ಗದರ್ಶನ ನೀಡುವ ಮತ್ತು ನನ್ನನ್ನು ಪುನಃಸ್ಥಾಪಿಸುವ ನನ್ನ ಕುರುಬನು. ಆತನು ನನ್ನ ವೈರಿಗಳ ಮುಂದೆ ನನಗೆ ಔತಣವನ್ನು ಸಿದ್ಧಪಡಿಸುತ್ತಾನೆ!
- ನಾನು ಕರ್ತನ ಕುರಿತು ಹೇಳುತ್ತೇನೆ, ಆತನು ನನ್ನನ್ನು ಮಾರ್ಗದರ್ಶಿಸುವ ಮತ್ತು ನನ್ನ ಹೆಜ್ಜೆಗಳನ್ನು ನಿರ್ದೇಶಿಸುವ ನನ್ನ ಸಲಹೆಗಾರನು. ನನ್ನ ಹೆಜ್ಜೆಗಳು ಕರ್ತನಿಂದ ಆದೇಶಿಸಲ್ಪಟ್ಟಿವೆ ಮತ್ತು ನಾನು ಬಿದ್ದರೂ ಆತನು ನನ್ನನ್ನು ಎತ್ತಿ ಹಿಡಿಯುತ್ತಾನೆ.
- ನಾನು ಕರ್ತನ ಕುರಿತು ಹೇಳುತ್ತೇನೆ, ಆತನು ನನ್ನ ಸಹಾಯಕನು. ನನ್ನ ಸಹಾಯವು ಭೂಮಿ ಮತ್ತು ಆಕಾಶವನ್ನು ಉಂಟುಮಾಡಿದ ಸರ್ವಶಕ್ತನಿಂದ ಬರುತ್ತದೆ. ಆತನು ನನ್ನನ್ನು ಎಂದಿಗೂ ನಿರಾಸೆಗೊಳಿಸುವುದಿಲ್ಲ.
- ನಾನು ಕರ್ತನ ಕುರಿತು ಹೇಳುತ್ತೇನೆ, ಆತನು ನನ್ನ ನೀತಿವಂತ ನ್ಯಾಯಾಧೀಶ ಮತ್ತು ನನ್ನ ಸಮರ್ಥಕ. ನಾನು ನನ್ನ ವಿಷಯಗಳನ್ನು ಆತನ ಮುಂದೆ ಇಡುತ್ತೇನೆ. ಕೆಟ್ಟದ್ದಕ್ಕೆ ನಾನು ಯಾರಿಗೂ ಕೆಟ್ಟದ್ದನ್ನು ಕೊಡುವುದಿಲ್ಲ. ನಾನು ಒಳ್ಳೆಯದರಿಂದ ಕೆಟ್ಟದ್ದನ್ನು ಜಯಿಸುತ್ತೇನೆ. ನನ್ನ ದೇವರು ನನ್ನನ್ನು ಸಮರ್ಥಿಸುತ್ತಾನೆ.

- ನಾನು ಕರ್ತನ ಕುರಿತು ಹೇಳುತ್ತೇನೆ, ಆತನು ನನ್ನ ಧ್ವಜ, ಆತನ ಹೆಸರಿನಲ್ಲಿ ನನಗೆ ಜಯವಿದೆ. ಆತನು ಯಾವಾಗಲೂ ಎಲ್ಲಾ ಸಂದರ್ಭಗಳಲ್ಲಿಯೂ ನನ್ನನ್ನು ಜಯಿಸುವಂತೆ ಮಾಡುತ್ತಾನೆ. ಆತನ ಮೂಲಕ, ನಾನು ಧೈರ್ಯದಿಂದ ಮಾಡುತ್ತೇನೆ ಏಕೆಂದರೆ ಆತನು ನನಗೆ ವಿಜಯವನ್ನು ನೀಡುತ್ತಾನೆ.
- ನಾನು ಕರ್ತನ ಕುರಿತು ಹೇಳುತ್ತೇನೆ, ಆತನೇ ನನ್ನ ಶಾಂತಿ. ಅವನು ನನ್ನ ಜೀವನವನ್ನು ಪರಿಪೂರ್ಣ ಶಾಂತಿ, ಪರಿಪೂರ್ಣ *ಶಾಲೋಮ್*, ಸಂಪೂರ್ಣ ಯೋಗಕ್ಷೇಮದಿಂದ ತುಂಬುತ್ತಾನೆ.
- ನಾನು ಕರ್ತನ ಬಗ್ಗೆ ಹೇಳುತ್ತೇನೆ, ಆತನು ನನ್ನ ರಕ್ಷಕ. ನನಗೆ ಯಾವ ಕೇಡು ಬರುವುದಿಲ್ಲ. ನನ್ನನ್ನು ಕಾಯುವಾತನು ಎಂದಿಗೂ ನಿದ್ರಿಸುವುದಿಲ್ಲ. ಆತನ ದೂತರು ನನ್ನನ್ನು ನೋಡಿಕೊಳ್ಳುವ ನಿಯೋಜನೆಯಲ್ಲಿದ್ದಾರೆ.
- ನಾನು ಕರ್ತನ ಕುರಿತು ಹೇಳುತ್ತೇನೆ, ಆತನು ನನ್ನ ಬಲಪಡಿಸುವವ. ಆತನು ನನ್ನ ಜೀವನದ ಶಕ್ತಿ. ನಾನು ಆತನಿಗಾಗಿ ಕಾಯುತ್ತಿರುವಾಗ, ಹದ್ದಿನಂತೆ ರೆಕ್ಕೆಗಳೊಂದಿಗೆ ಹಾರಾಡಲು ಆತನು ನನಗೆ ಶಕ್ತಿ ನೀಡುತ್ತಾನೆ.
- ನಾನು ಕರ್ತನ ಕುರಿತು ಹೇಳುತ್ತೇನೆ, ಆತನು ನನಗೆ ಪ್ರತಿಫಲ ಕೊಡುವನು. ಆತನ ಹೆಸರಿನಲ್ಲಿ ಮಾಡಿದ ನನ್ನ ಪ್ರೀತಿಯ ಶ್ರಮವನ್ನು ನನ್ನ ದೇವರು ಮರೆಯುವುದಿಲ್ಲ. ಆತನು ನನಗೆ ಪ್ರತಿಫಲವನ್ನು ಕೊಡುವವನು, ನನಗೆ ವೃದ್ಧಿಯನ್ನು ಕೊಡುವವನು ಮತ್ತು ಫಲಕೊಡುವಂತೆ ಮಾಡುವನು.

ಮುಂದುವರೆಯುತ್ತಾ ಇದಕ್ಕೆ ಸೇರಿಸಿ. ನೀವು ಕರ್ತನ ಕುರಿತು ಏನು ಹೇಳುವಿರಿ?

# 17

# ದೇವದೂತರು ಆತನ ವಾಕ್ಯದ ಧ್ವನಿಯನ್ನು ಆಲಿಸುತ್ತಾರೆ

**ಕೀರ್ತನೆಗಳು 103:20,21**

**[20] ದೇವದೂತರೇ, ಆತನ ಶಬ್ದಕ್ಕೆ ಕಿವಿಗೊಡುವವರೇ, ಆತನ ಆಜ್ಞೆಯನ್ನು ನೆರವೇರಿಸುವ ಪರಾಕ್ರಮಶಾಲಿಗಳೇ, ಯೆಹೋವನನ್ನು ಕೊಂಡಾಡಿರಿ**

**[21] ಆತನ ಸೈನ್ಯಗಳೇ, ಆತನ ಮೆಚ್ಚಿಕೆಯನ್ನು ನೆರವೇರಿಸುವ ಸೇವಕರೇ, ಯೆಹೋವನನ್ನು ಕೊಂಡಾಡಿರಿ.**

ದೇವರ ದೂತರು ಬಲಶಾಲಿಗಳು ಮತ್ತು ಪ್ರಭಲರು. ಅವರು ಆತನ ವಾಕ್ಯವನ್ನು ನಿಭಾಯಿಸುತ್ತಾರೆ. ಅವರು ಆತನ ವಾಕ್ಯದ ಧ್ವನಿಗೆ ಗಮನಹರಿಸುತ್ತಾರೆ ಮತ್ತು ದೇವರ ವಾಕ್ಯವು ಏನನ್ನು ಘೋಷಿಸುತ್ತದೋ ಅದನ್ನು ಕೈಗೊಳ್ಳುತ್ತಾರೆ.

ನಾವು ಇಲ್ಲಿ ಒಂದು ತೀರ್ಮಾನವನ್ನು ಮಾಡುತ್ತಿದ್ದೇವೆ, ಈ ಎರಡು ವಚನಗಳಿಂದ ನಿರ್ಣಾಯಕವಾಗಿ ಸಾಬೀತುಪಡಿಸಲಾಗದಿದ್ದರೂ, ದೇವದೂತರ ಬಗ್ಗೆ ಮತ್ತು ವೇದವಾಕ್ಯದಲ್ಲಿ ಅವರ ಚಟುವಟಿಕೆಯ ಬಗ್ಗೆ ನಮಗೆ ತಿಳಿದಿರುವ ಸಾರದೊಂದಿಗೆ ಉತ್ತಮವಾಗಿದೆ. ದೇವರು ನಮ್ಮದು ಎಂದು ಘೋಷಿಸುವ ವಾಕ್ಯವನ್ನು ನಾವು ಮಾತನಾಡುವಾಗ, ನಾವು ಘೋಷಿಸುವ ಆತನ ವಾಕ್ಯದ ಧ್ವನಿಯನ್ನು ದೂತರು ಕೇಳುತ್ತಾರೆ ಮತ್ತು ಆದ್ದರಿಂದ, ದೇವರ ವಾಕ್ಯಕ್ಕೆ ಅನುಗುಣವಾಗಿ ರಕ್ಷಣೆಯ ಉತ್ತರಾಧಿಕಾರಿಗಳಾದ ನಮಗೆ ತಮ್ಮ ಸೇವೆಯನ್ನು ಕೈಗೊಳ್ಳುತ್ತಾರೆ. ಇದು ನಾವು ಮಾಡುತ್ತಿರುವ ಒಂದು ತೀರ್ಮಾನವಾಗಿದೆ, ಆದರೆ ಮಾನ್ಯವಾದದ್ದು.

ಇವರೆಲ್ಲರು ರಕ್ಷಣೆಯನ್ನು ಬಾಧ್ಯವಾಗಿ ಹೊಂದಬೇಕಾಗಿರುವವರ ಸೇವೆಗೋಸ್ಕರ ಕಳುಹಿಸಲ್ಪಡುವ ಊಳಿಗದ ಆತ್ಮಗಳಲ್ಲವೋ (ಇಬ್ರಿಯರಿಗೆ 1:14). ದೇವರು ನಮಗೆ, ಆತನ ದೇವಜನರಿಗೆ ಘೋಷಿಸಿದ್ದನ್ನು ಅವರು ನಮಗೆ ನಿರ್ವಹಿಸುತ್ತಾರೆ. ದೇವರು ನಮಗೆ, ಆತನ ಜನರಿಗಾಗಿ ಏನು

ಮಾಡಬೇಕೆಂದು ಬಯಸುವನೋ ಅದನ್ನು ದೇವದೂತರು ಮಾಡುತ್ತಾರೆ. ದಾನಿಯೇಲನ ಅನುಭವದಲ್ಲಿ (ದಾನಿಯೇಲನು 10) ಮತ್ತು ಪ್ರಾರಂಭದ ಸಭೆ (ಅಪೊಸ್ತಲರ ಕೃತ್ಯಗಳು 12:5-7) ನೋಡಿದಂತೆ, ನಮ್ಮ ಪರವಾಗಿ ಕೆಲಸ ಮಾಡಲು ದೇವದೂತರನ್ನು ನಾವು ತೊಡಗಿಸಿಕೊಳ್ಳುವ ಆತ್ಮಿಕ ಚಟುವಟಿಕೆಗಳಿವೆ ಎಂದು ನಾವು ಊಹಿಸಬಹುದು. ಪ್ರಾರ್ಥನೆಯು ಅಂತಹ ಒಂದು ವಿಷಯವಾಗಿದೆ. ನಮ್ಮ ಆರಾಧನೆ, ನಮ್ಮ ಕೊಡುಗೆ, ದೇವರಿಗೆ ನಮ್ಮ ವಿಧೇಯತೆಯು ನಮ್ಮ ಪರವಾಗಿ ಕೆಲಸ ಮಾಡಲು ದೂತರನ್ನು ಪ್ರೇರೇಪಿಸುತ್ತದೆ ಎಂದು ಹೇಳುವುದು ಸುರಕ್ಷಿತವಾಗಿದೆ. ದೇವದೂತರು ದೇವರ ವಾಕ್ಯಕ್ಕೆ ಗಮನ ಕೊಡುತ್ತಾರೆ ಮತ್ತು ಆತನ ವಾಕ್ಯವನ್ನು ನಿರ್ವಹಿಸುತ್ತಾರೆಂದು ನಮಗೆ ತಿಳಿದಿರುವುದರಿಂದ, ನಾವು ದೇವರ ವಾಕ್ಯ ಮತ್ತು ದೇವರ ವಾಗ್ದಾನಗಳಲ್ಲಿ ನಮ್ಮ ನಂಬಿಕೆಯನ್ನು ಘೋಷಿಸಿದಾಗ, ಇದು ನಮ್ಮ ಪರವಾಗಿ ಕೆಲಸ ಮಾಡಲು ದೂತರನ್ನು ಪ್ರೇರೇಪಿಸುತ್ತದೆ ಎಂದು ತೀರ್ಮಾನಿಸುವುದು ಸುರಕ್ಷಿತವಾಗಿದೆ. ದೇವದೂತರು ವಾಕ್ಯದ ವಿರುದ್ಧವಾದ ಯಾವುದನ್ನಾದರೂ ತೊಡಗಿಸಿಕೊಳ್ಳುವುದಿಲ್ಲ. ಆದ್ದರಿಂದ, ನಾವು ದೇವರ ವಾಕ್ಯಕ್ಕೆ ವಿರುದ್ಧವಾಗಿ ಮಾತನಾಡುವಾಗ, ಆ ವಾಕ್ಯಗಳ ಆಧಾರದ ಮೇಲೆ ದೂತರು ನಡೆಯುವುದಿಲ್ಲ.

ನಿಮ್ಮ ಜೀವನದಲ್ಲಿ ದೇವರ ವಾಕ್ಯವು ನೆರವೇರುವ ನಿರೀಕ್ಷೆಯಲ್ಲಿ ನೀವು ನಿಂತಿದ್ದೀರಿ ಎಂದು ದೂತರಿಗೆ ತಿಳಿಸಿ. ವಾಕ್ಯವನ್ನು ಮಾತನಾಡಿ. ಯಾವುದೇ ಪರಿಸ್ಥಿತಿಯಲ್ಲಿ, ಉದ್ದೇಶಪೂರ್ವಕವಾಗಿ ಆತನ ವಾಕ್ಯವನ್ನು ಘೋಷಿಸಿ. ಅಗತ್ಯವಿರುವ ಪರಿಸ್ಥಿತಿಯಲ್ಲಿ, "ನನ್ನ ದೇವರು ಯೇಸು ಕ್ರಿಸ್ತನ ಮೂಲಕ ಮಹಿಮೆಯಲ್ಲಿ ತನ್ನ ಐಶ್ವರ್ಯಕ್ಕೆ ತಕ್ಕಂತೆ ನನ್ನ ಎಲ್ಲಾ ಅಗತ್ಯಗಳನ್ನು ಪೂರೈಸುತ್ತಾನೆ" ಎಂದು ಘೋಷಿಸಿ. ಗೊಂದಲದ ಪರಿಸ್ಥಿತಿಯಲ್ಲಿ, ಘೋಷಿಸಿ, "ಈ ಪರಿಸ್ಥಿತಿಯಲ್ಲಿ ನಾನು ಪರಿಪೂರ್ಣ ಶಾಂತಿ, ಉತ್ತಮ ತಿಳುವಳಿಕೆ ಮತ್ತು ಸಹಕಾರವನ್ನು ಆಜ್ಞಾಪಿಸುತ್ತೇನೆ. ನನ್ನ ದೇವರು ಶಾಂತಿಯ ಕರ್ತೃವೇ ಹೊರತು ಗೊಂದಲಕ್ಕಲ್ಲ." ದೇವದೂತರು ನಿಮ್ಮ ಧ್ವನಿಯ ಮೂಲಕ ಆತನ ವಾಕ್ಯಗಳ ಧ್ವನಿಯನ್ನು ಕೇಳಲಿ ಮತ್ತು ಆ ವಾಕ್ಯದ ಮೇಲೆ ಕಾರ್ಯನಿರ್ವಹಿಸಲಿ.

# 18
# ಕರ್ತನಿಂದ ವಿಮೋಚನೆಗೊಂಡವರು ಹೀಗೆ ಹೇಳಲಿ

**ಕೀರ್ತನೆಗಳು 107:2**
**ಯೆಹೋವನ ವಿಮುಕ್ತರು ಅಂದರೆ ಆತನು ಶತ್ರುಗಳಿಂದ ಬಿಡಿಸಿ**

ನಾವು ಕರ್ತನಿಂದ ವಿಮೋಚನೆಗೊಂಡವರು, ಮತ್ತು ನಾವು ಹಾಗೆ ಹೇಳಬೇಕು!

ಸೆರೆಮನೆಯಿಂದ ಬಿಡುಗಡೆಯಾದ ನಂತರ ಖೈದಿ ತನ್ನನ್ನು ತಾನು ಖೈದಿ ಎಂದು ಕರೆದುಕೊಳ್ಳುವುದಿಲ್ಲ. ತಾನು ಸ್ವತಂತ್ರ ಮನುಷ್ಯ ಎಂದು ಧೈರ್ಯದಿಂದ ಮತ್ತು ಹೆಮ್ಮೆಯಿಂದ ಘೋಷಿಸುತ್ತಾನೆ! ಅವನು ಖೈದಿಯಾಗಿದ್ದನು. ಅದು ಹಿಂದಿನದು. ಈಗ ಅವನು ಯಾರೆಂಬುದು ಅತ್ಯಂತ ಮುಖ್ಯವಾದ ವಿಷಯ! ಅವನು ಸ್ವತಂತ್ರ ಮನುಷ್ಯ. ಅವನು ತನ್ನ ಸ್ವಾತಂತ್ರ್ಯದ ಸಂಪೂರ್ಣ ಹಕ್ಕುಗಳನ್ನು ಚಲಾಯಿಸಬಹುದು.

ವಿಶ್ವಾಸಿಗಳಾಗಿ, ನಾವು ಕತ್ತಲೆಯ ಶಕ್ತಿಗಳಿಂದ ಬಿಡುಗಡೆ ಹೊಂದಿದ್ದೇವೆ ಮತ್ತು ಯೇಸುಕ್ರಿಸ್ತನ ರಾಜ್ಯಕ್ಕೆ ಸೇರಿಸಲ್ಪಟ್ಟಿದ್ದೇವೆ. ದೇವರು ತನ್ನ ಜನರಿಗೆ, ದೇವಜನರಿಗೆ ನೀಡಿದ ಸ್ವಾಸ್ತ್ಯದಲ್ಲಿ ಪಾಲ್ಗೊಳ್ಳಲು ನಾವು ಅರ್ಹರಾಗಿದ್ದೇವೆ. ಯೇಸುಕ್ರಿಸ್ತನ ಅಮೂಲ್ಯವಾದ ರಕ್ತದಿಂದ ನಾವು ವಿಮೋಚನೆಗೊಂಡಿದ್ದೇವೆ (ಕೊಲೊಸ್ಸೆಯವರಿಗೆ 1:12-14). ವಿಮೋಚನೆ ಎಂದರೆ "ಹಿಂತಿರುಗಿ ಖರೀದಿಸುವುದು", ಸೆರೆಯಿಂದ ಬಿಡುಗಡೆ ಮಾಡುವುದು ಮತ್ತು ವೈಭವದ ಮೂಲ ಸ್ಥಿತಿಗೆ ಮರುಸ್ಥಾಪಿಸುವುದು. ನಾವು ಕರ್ತನ ಮುಖಾಂತರ ವಿಮೋಚನೆಗೊಂಡವರು. ಸೈತಾನನಿಗೆ ನಮ್ಮ ಮೇಲೆ ಯಾವುದೇ ಹಕ್ಕು ಇಲ್ಲ, ನಮ್ಮ ಮೇಲೆ ಯಾವುದೇ ಪ್ರಭುತ್ವವಿಲ್ಲ, ನಮ್ಮ ಮೇಲೆ ಅಧಿಕಾರವಿಲ್ಲ. ನಾವು ದೇವರು ಕೊಂಡುಕೊಂಡ ಸ್ವತ್ತು (1 ಕೊರಿಂಥದವರಿಗೆ 6:20).

- ನಾನು ಕರ್ತನ ಮುಖಾಂತರ ವಿಮೋಚನೆ ಹೊಂದಿದ್ದೇನೆ ಮತ್ತು ನಾನು

ಹಾಗೆ ಹೇಳುತ್ತೇನೆ!

- ಸೈತಾನನ ಮತ್ತು ಅವನ ಎಲ್ಲಾ ದೆವ್ವಗಳ ಶಕ್ತಿಯಿಂದ ನಾನು ವಿಮೋಚನೆಗೊಂಡಿದ್ದೇನೆ (ಕೊಲೊಸ್ಸೆಯವರಿಗೆ 1:13). ಕತ್ತಲೆಯ ಶಕ್ತಿಗಳಿಗೆ ನನ್ನ ಮೇಲೆ ಹಕ್ಕು ಇಲ್ಲ ಮತ್ತು ನನ್ನ ಮೇಲೆ ಅಧಿಕಾರವಿಲ್ಲ.
- ನಾನು ಪಾಪದ ಶಕ್ತಿಯಿಂದ ವಿಮೋಚನೆಗೊಂಡಿದ್ದೇನೆ (ರೋಮಾಪುರದವರಿಗೆ 6:6,14). ಪಾಪವು ನನ್ನ ಮೇಲೆ ಪ್ರಭುತ್ವವನ್ನು ಹೊಂದುವುದಿಲ್ಲ.
- ನಾನು ಕಾನೂನಿನ ಶಾಪದಿಂದ ವಿಮೋಚನೆಗೊಂಡಿದ್ದೇನೆ (ಗಲಾತ್ಯದವರಿಗೆ 3:13). ನಾನು ಈಗ ಅಬ್ರಹಾಮನ ಆಶೀರ್ವಾದದ ಅಡಿಯಲ್ಲಿ ನಡೆಯುತ್ತೇನೆ.
- ನಾನು ಈ ಪ್ರಸ್ತುತ ದುಷ್ಟ ಪ್ರಪಂಚದಿಂದ ವಿಮೋಚನೆಗೊಂಡಿದ್ದೇನೆ (ಗಲಾತ್ಯದವರಿಗೆ 1:4). ಈ ವರ್ತಮಾನದ ದಾರಿಗಳು, ಪ್ರಭಾವಗಳು ಮತ್ತು ಕೆಟ್ಟದ್ದಕ್ಕೆ ನನ್ನ ಮೇಲೆ ಯಾವುದೇ ಅಧಿಕಾರವಿಲ್ಲ.
- ನಾನು ಪ್ರತಿ ಪಾಪ ಕಾರ್ಯದಿಂದ ವಿಮೋಚನೆಗೊಂಡಿದ್ದೇನೆ (ತೀತನಿಗೆ 2:14). ಹಿಂದಿನ ಪಾಪದ ಜೀವನಶೈಲಿಯು ನನ್ನ ಮೇಲೆ ಯಾವುದೇ ಶಕ್ತಿಯನ್ನು ಹೊಂದಿಲ್ಲ. ನಾನು ಆತನ ಮತ್ತು ಒಳ್ಳೆಯ ಕಾರ್ಯಗಳಿಗಾಗಿ ಶುದ್ಧೀಕರಿಸಲ್ಪಟ್ಟಿದ್ದೇನೆ.
- ಹಿಂದಿನ ತಲೆಮಾರುಗಳ ಗುರಿಯಿಲ್ಲದ ಮತ್ತು ಪಾಪಪೂರ್ಣ ಜೀವನಶೈಲಿಯಿಂದ ನಾನು ವಿಮೋಚನೆಗೊಂಡಿದ್ದೇನೆ (1 ಪೇತ್ರನು 1:18,19). ನಾನು ಹೊಸ ಸೃಷ್ಟಿ ಮತ್ತು ಹೊಸ ಜೀವನದಲ್ಲಿ ನಡೆಯುತ್ತೇನೆ.
- ನಾನು ವಿಮೋಚನೆಗೊಂಡಿದ್ದೇನೆ ಮತ್ತು ಕುರಿಮರಿಯ ರಕ್ತದಿಂದಾಗಿ ನಾನು ಶತ್ರುವನ್ನು ಜಯಿಸುತ್ತೇನೆ (ಪ್ರಕಟನೆ 12:11). ಸೈತಾನ ಮತ್ತು ಅವನ ದೆವ್ವಗಳು ನನ್ನ ಕಾಲುಗಳ ಕೆಳಗೆ ತುಳಿಯಲ್ಪಟ್ಟವು (ಲೂಕ 10:19; ರೋಮಾಪುರದವರಿಗೆ 16:20).
- ನಾನು ಕರ್ತನ ಮುಖಾಂತರ ವಿಮೋಚನೆ ಹೊಂದಿದ್ದೇನೆ ಮತ್ತು ನಾನು ಹಾಗೆ ಹೇಳುತ್ತೇನೆ!

# 19

# ಸಂತೋಷ ಮತ್ತು ರಕ್ಷಣೆಯ ಧ್ವನಿಯನ್ನು ಕಾಪಾಡಿಕೊಳ್ಳಿ

**ಕೀರ್ತನೆಗಳು 118:15–17**

**[15] ಉತ್ಸಾಹಧ್ವನಿಯೂ ಜಯಘೋಷವೂ ನೀತಿವಂತರ ಗುಡಾರಗಳಲ್ಲಿವೆ; ಯೆಹೋವನ ಬಲಗೈ ಪರಾಕ್ರಮವನ್ನು ನಡಿಸುತ್ತದೆ.**
**[16] ಯೆಹೋವನ ಬಲಗೈ ಉನ್ನತವಾಗಿದೆ ಯೆಹೋವನ ಬಲಗೈ ಪರಾಕ್ರಮವನ್ನು ನಡಿಸುತ್ತದೆ.**
**[17] ನಾನು ಸಾಯುವದಿಲ್ಲ; ಜೀವದಿಂದಿದ್ದು ಯಾಹುವಿನ ಕ್ರಿಯೆಗಳನ್ನು ಸಾರುವೇನು**

ನೀತಿವಂತರ ಮನೆಗಳು ಸಂತೋಷ ಮತ್ತು ರಕ್ಷಣೆಯ ಧ್ವನಿಯನ್ನು ಹೊಂದಿವೆ. ಇಬ್ರಿಯ ಭಾಷೆಯಲ್ಲಿ "ರಕ್ಷಣೆ" ಎಂಬ ಪದವು *'ಯೇಶುವಾ'* ಎಂಬ ಪದವು ಒಂದು ಸಮಗ್ರ ಪದವಾಗಿದೆ (ಗ್ರೀಕ್ *'ಸೋಜೋ'* ನಂತೆ) ಮತ್ತು ರಕ್ಷಣೆ, ಸುರಕ್ಷತೆ, ವಿಮೋಚನೆ, ವಿಜಯ, ಸಮೃದ್ಧಿ, ಆರೋಗ್ಯ, ಸಹಾಯ, ಕಲ್ಯಾಣ, ಯೋಗಕ್ಷೇಮ ಮತ್ತು ಸಂಪೂರ್ಣತೆಯನ್ನು ಒಳಗೊಂಡಿದೆ.

ಈ ಪ್ರಪಂಚದ ಸವಾಲುಗಳು ಒಂದಲ್ಲ ಒಂದು ರೀತಿಯಲ್ಲಿ ಪ್ರತಿ ಮನೆಯೊಳಗೆ ಬರಲು ಪ್ರಯತ್ನಿಸುತ್ತವೆ. ನೀತಿವಂತರ ಮನೆಗಳು ಸವಾಲುಗಳನ್ನು ಮತ್ತು ಜೀವನದ ಬಿರುಗಾಳಿಗಳನ್ನು ಎದುರಿಸುತ್ತವೆ. ಆದಾಗ್ಯೂ, *"ಕರ್ತನ ಬಲಗೈ"* ನೀತಿವಂತರಿಗಾಗಿ ಪರಾಕ್ರಮವನ್ನು ಮಾಡುತ್ತದೆ. *"ಕರ್ತನ ಬಲಗೈ"* ದೇವರ ಶಕ್ತಿಯಾಗಿದ್ದು ಅದು ಯಾವಾಗಲೂ ವಿಜಯಶಾಲಿಯಾಗಿದೆ ಮತ್ತು ಇತರರಿಗಿಂತ ಹೆಚ್ಚು ಶಕ್ತಿಶಾಲಿಯಾಗಿದೆ. ಆದ್ದರಿಂದ, ನೀತಿವಂತರು ತಮ್ಮ ಮನೆಗಳಲ್ಲಿ ಸಂತೋಷ, ವಿಜಯ, ಆಚರಣೆ ಮತ್ತು ರಕ್ಷಣೆಯ ಘೋಷಣೆಗಳನ್ನು ಹೊಂದಿದ್ದಾರೆ. ಆದುದರಿಂದ, *"ನಾನು ಸಾಯುವದಿಲ್ಲ; ಜೀವದಿಂದಿದ್ದು ಯಾಹುವಿನ ಕ್ರಿಯೆಗಳನ್ನು ಸಾರುವೇನು"* ಎಂದು ನಾವು ಹೇಳಬಹುದು.

ನಾವು ಕೆಲವು ಸವಾಲುಗಳನ್ನು ಎದುರಿಸುತ್ತಿರುವಾಗ ನಾವು ಏನು ಮಾಡುತ್ತೇವೆ? ನಾವು ನಮ್ಮ ಧ್ವನಿಯನ್ನು ಬದಲಾಯಿಸುತ್ತೇವೆಯೇ?

ಇಲ್ಲ! ನಾವು ನಮ್ಮ ಮನೆಗಳಲ್ಲಿ ಸಂತೋಷ ಮತ್ತು ರಕ್ಷಣೆಯ ಧ್ವನಿಯನ್ನು ನಿರ್ವಹಿಸುತ್ತೇವೆ. ನಮ್ಮ ದೇವರು ಪರಾಕ್ರಮಿ ಎಂದು ಘೋಷಿಸುತ್ತಲೇ ಇರುತ್ತೇವೆ. ನಾವು ರಕ್ಷಣೆಯ ಧ್ವನಿಯನ್ನು ಕಾಪಾಡಿಕೊಳ್ಳುತ್ತೇವೆ ಏಕೆಂದರೆ ನಮ್ಮ ದೇವರು ನಮ್ಮನ್ನು ರಕ್ಷಿಸುತ್ತಾನೆ, ನಮ್ಮನ್ನು ಕಾಪಾಡುತ್ತಾನೆ, ನಮ್ಮನ್ನು ಉಳಿಸುತ್ತಾನೆ, ನಮ್ಮನ್ನು ಗುಣಪಡಿಸುತ್ತಾನೆ, ನಮ್ಮನ್ನು ಬಿಡುಗಡೆ ಮಾಡುತ್ತಾನೆ, ನಮ್ಮನ್ನು ಸಮೃದ್ಧಗೊಳಿಸುತ್ತಾನೆ ಮತ್ತು ನಮಗೆ ವಿಜಯವನ್ನು ನೀಡುತ್ತಾನೆ! ಕರ್ತನ ಬಲಗೈ ಯಾವಾಗಲೂ ಶಕ್ತಿಯುತವಾಗಿದೆ ಮತ್ತು ಎಲ್ಲಾ ಋತುಗಳಲ್ಲಿ ವಿಜಯಶಾಲಿಯಾಗಿದೆ. ನಿಮ್ಮ ಮನೆಯಲ್ಲಿ ಸಂತೋಷ ಮತ್ತು ರಕ್ಷಣೆಯ ಧ್ವನಿ ಕೇಳಲಿ. ಪ್ರತಿ ಋತುವಿನ ಮೂಲಕ ಸಂತೋಷ ಮತ್ತು ರಕ್ಷಣೆಯ ಧ್ವನಿಯನ್ನು ಕಾಪಾಡಿಕೊಳ್ಳಿ.

# 20

# ನಿಮ್ಮ ಜೀವನವನ್ನು ರೂಪಿಸುವ ಶಕ್ತಿಗಳು ನಿಮ್ಮ ಹೃದಯದಿಂದ ಹೊರಬರುತ್ತವೆ

**ಜ್ಞಾನೋಕ್ತಿಗಳು 4:20–23**

**[20] ಕಂದಾ, ನನ್ನ ಮಾತುಗಳನ್ನು ಆಲಿಸು, ನನ್ನ ನುಡಿಗಳಿಗೆ ಕಿವಿಗೊಡು.**

**[21] ನಿನ್ನ ದೃಷ್ಟಿಯು ಅವುಗಳ ಮೇಲೆ ತಪ್ಪದಿರಲಿ, ಅವುಗಳನ್ನು ನಿನ್ನ ಹೃದಯದೊಳಗೆ ಇಟ್ಟುಕೋ.**

**[22] ಅವುಗಳನ್ನು ಹೊಂದುವವರಿಗೆ ಅವು ಜೀವವು. ದೇಹಕ್ಕೆಲ್ಲಾ ಅವೇ ಆರೋಗ್ಯವು**

**[23] ನಿನ್ನ ಹೃದಯವನ್ನು ಬಹು ಜಾಗರೋಕತೆಯಿಂದ ಕಾಪಾಡಿಕೋ; ಅದರೊಳಗಿನಿಂದ ಜೀವಧಾರೆಗಳು ಹೊರಡುವವು**

ದೇವರ ವಾಕ್ಯದಿಂದ ನಮ್ಮ ಹೃದಯವನ್ನು ತುಂಬಿಕೊಳ್ಳುವುದು ಇಲ್ಲಿನ ಸೂಚನೆಯಾಗಿದೆ. ನಾವು ಆತನ ವಾಕ್ಯವನ್ನು ಸೂಕ್ಷ್ಮವಾಗಿ ಗಮನಿಸುತ್ತೇವೆ, ಒಲವು ತೋರುತ್ತೇವೆ ಮತ್ತು ಆತನ ವಾಕ್ಯವನ್ನು ಕೇಳುತ್ತೇವೆ ಮತ್ತು ಆತನ ವಾಕ್ಯವು ನಮ್ಮ ಅಂತರಂಗದಲ್ಲಿರುವಂತೆ ಆತನ ವಾಕ್ಯದ ಮೇಲೆ ನಮ್ಮ ಗಮನವನ್ನು ಇಟ್ಟುಕೊಳ್ಳುತ್ತೇವೆ. ಆತನ ವಾಕ್ಯವು ಆಗ ನಮಗೆ ಜೀವನ, ಆರೋಗ್ಯ ಮತ್ತು ಸಂಪೂರ್ಣತೆಯಿಂದ ಆಶೀರ್ವದಿಸುತ್ತದೆ. ನಮ್ಮ ಹೃದಯಗಳನ್ನು ಕಾಪಾಡಿಕೊಳ್ಳಲು ಆತನು ನಮಗೆ ಸೂಚಿಸುತ್ತಾನೆ. ವಾಕ್ಯದ ವಿರುದ್ಧವಾದ ಯಾವುದನ್ನೂ ನಮ್ಮ ಹೃದಯಕ್ಕೆ ಬರಲು ನಾವು ಅನುಮತಿಸಬಾರದು. ನಾವು ನಮ್ಮ ಹೃದಯಗಳನ್ನು ಕಾಪಾಡಿಕೊಳ್ಳಬೇಕು ಮತ್ತು ವಾಸ್ತವವಾಗಿ, ನಾವು ಅಲ್ಲಿ ಸಂಗ್ರಹಿಸಿದ ವಾಕ್ಯವನ್ನು ಕಾಪಾಡಬೇಕು.

ಹೃದಯ, ನಮ್ಮ ಆಂತರಿಕ ವ್ಯಕ್ತಿ, ತುಂಬಾ ಮುಖ್ಯ. ನಮ್ಮ ಜೀವನವನ್ನು ರೂಪಿಸುವ ಶಕ್ತಿಗಳು ನಮ್ಮ ಹೃದಯದಿಂದ ಹೊರಬರುತ್ತವೆ. ನಮ್ಮ ಹೃದಯದಲ್ಲಿರುವುದನ್ನು ನಮ್ಮ ಜೀವನದಲ್ಲಿ ಬಿಡುಗಡೆ ಮಾಡುವ ಒಂದು ಮಾರ್ಗವೆಂದರೆ ನಾವು ಮಾತನಾಡುವ ವಾಕ್ಯಗಳ ಮೂಲಕ. ನಮ್ಮ ಜೀವನವನ್ನು ರೂಪಿಸುವ ಶಕ್ತಿಗಳು, ನಮ್ಮ ಆಂತರಿಕ ವ್ಯಕ್ತಿಯಿಂದ ಹೊರಬರುತ್ತವೆ, ನಾವು ಮಾತನಾಡುವ ವಾಕ್ಯಗಳ ಮೂಲಕ ಬಿಡುಗಡೆಯಾಗುತ್ತವೆ.

ನಮ್ಮ ಹೃದಯಗಳು ಆತನ ವಾಕ್ಯದಿಂದ ತುಂಬಿದ್ದರೆ, ನಾವು ಮಾತನಾಡುವ ಮಾತುಗಳು ಆತನ ವಾಕ್ಯಕ್ಕೆ ಅನುಗುಣವಾಗಿರುತ್ತವೆ.. ನಾವು ಆತನ ವಾಕ್ಯವನ್ನು ಮಾತನಾಡುತ್ತೇವೆ. ನಮ್ಮ ಜೀವನವನ್ನು ರೂಪಿಸುವ ಶಕ್ತಿಗಳು ಆತನ ವಾಕ್ಯದಿಂದ ಬರುತ್ತವೆ. ನಮ್ಮ ಜೀವನದಲ್ಲಿ ಕೆಲಸ ಮಾಡಲು ಮತ್ತು ನಮ್ಮ ಜೀವನದ ಪ್ರತಿಯೊಂದು ಕ್ಷೇತ್ರ, ನಮ್ಮ ಪ್ರಸ್ತುತ ಮತ್ತು ನಮ್ಮ ಭವಿಷ್ಯದ ಮೇಲೆ ಪರಿಣಾಮ ಬೀರಲು ದೇವರ ವಾಕ್ಯದ ಶಕ್ತಿಯು ನಂತರ ಬಿಡುಗಡೆಯಾಗುತ್ತದೆ.

ದೇವರ ವಾಕ್ಯದಿಂದ ನಿಮ್ಮ ಹೃದಯವನ್ನು ತುಂಬಿಕೊಳ್ಳಿ. ಆತನ ವಾಕ್ಯವನ್ನು ಮಾತನಾಡಿ. ನಿಮ್ಮ ಜೀವನವನ್ನು ರೂಪಿಸುವ ಶಕ್ತಿಗಳು ನಿಮ್ಮಲ್ಲಿರುವ ದೇವರ ವಾಕ್ಯದಿಂದ ಹೊರಹೊಮ್ಮಲಿ.

# 21

# ನ್ಯಾಯಯುತ ಮಾತುಗಳು ಜೀವನ ಮತ್ತು ಶಕ್ತಿಯನ್ನು ಬಿಡುಗಡೆ ಮಾಡುತ್ತವೆ

**ಜ್ಞಾನೋಕ್ತಿಗಳು 10:11,20,21,31,32**

**[11] ಶಿಷ್ಟನ ಬಾಯಿ ಜೀವದ ಬುಗ್ಗೆ; ದುಷ್ಟನ ಬಾಯಲ್ಲಿ ಬಲಾತ್ಕಾರವು ತುಂಬಿ ತುಳುಕುತ್ತದೆ**

**[20] ಶಿಷ್ಟರ ನಾಲಿಗೆ ಚೊಕ್ಕಬೆಳ್ಳಿ; ದುಷ್ಟನ ಹೃದಯ ಹುಲ್ಲುಕಡ್ಡಿ**

**[21] ಶಿಷ್ಟರ ಭಾಷಣ ಬಹುಜನಪೋಷಣ; ಬುದ್ಧಿಯ ಕೊರತೆ ಮೂರ್ಖರ ನಾಶನ**

**[31] ಶಿಷ್ಟನ ಬಾಯಲ್ಲಿ ಜ್ಞಾನವು ಮೊಳೆಯುವದು; ನೀಚನ ನಾಲಿಗೆ ಕತ್ತರಿಸಲ್ಪಡುವದು.**

**[32] ಶಿಷ್ಟನ ತುಟಿಯಲ್ಲಿ ಉಚಿತವಚನ ದುಷ್ಟನ ಬಾಯಲ್ಲಿ ನೀಚವಚನ**

ಈ ವಚನಗಳಲ್ಲಿ ನೀತಿವಂತರ ಮತ್ತು ದುಷ್ಟರ ಮಾತುಗಳ ನಡುವಿನ ವ್ಯತ್ಯಾಸವನ್ನು ನಾವು ನೋಡುತ್ತೇವೆ. ನೀತಿವಂತರ ಮಾತುಗಳು "ಜೀವನದ ಬುಗ್ಗೆ." ಅವು ಜೀವನ, ಸಂಪೂರ್ಣತೆ, ಯೋಗಕ್ಷೇಮ ಮತ್ತು "ಜೀವನ" ದೊಂದಿಗೆ ಸಂಬಂಧಿಸಿರುವ ನಮಗೆ ತಿಳಿದಿರುವ ಎಲ್ಲವನ್ನೂ ನಿರ್ವಹಿಸುತ್ತವೆ. ನೀತಿವಂತರ ಮಾತುಗಳು "ಚೊಕ್ಕ ಬೆಳ್ಳಿ"ಯಂತಿವೆ, ಅಂದರೆ "ಬಹಳ ಶುದ್ಧ, ಬೆಲೆಬಾಳುವ ಮತ್ತು ಅಮೂಲ್ಯ." ನೀತಿವಂತರ ಮಾತುಗಳು *"ಬಹುಜನಪೋಷಣೆ."* ಅವು ಅನೇಕ ಜನರಿಗೆ ಪೋಷಣೆ, ಶಕ್ತಿ, ಜೀವನ, ಸಹಾಯ ಮತ್ತು ಆಶೀರ್ವಾದವನ್ನು ನಿರ್ವಹಿಸುತ್ತವೆ. ಎರಡು ಹೆಚ್ಚುವರಿ ವಿಷಯಗಳು ನೀತಿವಂತರ ಮಾತುಗಳನ್ನು ನಿರೂಪಿಸುತ್ತವೆ—ಬುದ್ಧಿವಂತಿಕೆ ಮತ್ತು ಯಾವುದು ಸ್ವೀಕಾರಾರ್ಹ (ಸಂತೋಷದಾಯಕ).

ಮಾತುಗಳು ಇತರರಿಗೆ ಜೀವನ ಮತ್ತು ಆಶೀರ್ವಾದವನ್ನು ನೀಡಬಹುದು. ನಾವು ಬಿಡುಗಡೆ ಮಾಡುವ ಮಾತುಗಳು ಕೆಲವರಿಗೆ ಜೀವನದ ಬಾವಿಯಾಗಿರಬಹುದು. ನಮ್ಮ ಮಾತುಗಳು ಯಾರಾದರೂ ಹುಡುಕುತ್ತಿರುವ ಚೊಕ್ಕ ಬೆಳ್ಳಿಯ ಆಗಿರಬಹುದು ಮತ್ತು ಇತರರಿಗೆ ಪೋಷಣೆ ಮತ್ತು ಶಕ್ತಿಯ ಮೂಲವಾಗಿರಬಹುದು.

ನಿಮ್ಮ ಮಾತುಗಳು (ನೀತಿವಂತ ಮಾತುಗಳು) ಸರಿಯಾಗಿವೆಯೆ

ಎಂದು ಖಚಿತಪಡಿಸಿಕೊಳ್ಳಲು ಒಂದು ನಿರ್ದಿಷ್ಟ ಮಾರ್ಗವಾಗಿದೆ ಅದು ದೇವರ ವಾಕ್ಯಕ್ಕೆ ಅನುಗುಣವಾಗಿ ಮಾತನಾಡುವುದು. ನಾವು ಹಾಗೆ ಮಾಡಿದರೆ, ನಮ್ಮ ಮಾತುಗಳು ಬುದ್ಧಿವಂತಿಕೆಯ ಮಾತುಗಳಾಗಿರುತ್ತವೆ ಮತ್ತು ಜನರಿಗೆ ಸಂತೋಷ, ಸ್ವಾತಂತ್ರ್ಯ ಮತ್ತು ಬಿಡುಗಡೆಯನ್ನು ತರುವ ಮಾತುಗಳಾಗಿರುತ್ತವೆ. ನೀತಿವಂತ ಮಾತುಗಳನ್ನು ಮಾತನಾಡಲು ಆಯ್ಕೆಮಾಡಿ. ದೇವರ ವಾಕ್ಯಕ್ಕೆ ಅನುಗುಣವಾಗಿ ಮಾತನಾಡಿ.

# 22

# ಮಾತುಗಳು ಗುಣಪಡಿಸಬಹುದು ಮತ್ತು ಸಂಪೂರ್ಣಗೊಳಿಸಬಹುದು

**ಜ್ಞಾನೋಕ್ತಿಗಳು 12:18**
**ಕತ್ತಿ ತಿವಿದ ಹಾಗೆ ದುಡುಕಿ ಮಾತಾಡುವವರುಂಟು; ಮತಿವಂತರ ಮಾತೇ ಮದ್ದು.**

**ಜ್ಞಾನೋಕ್ತಿಗಳು 15:4**
**ಸಂತೈಸುವ ನಾಲಿಗೆ ಜೀವವೃಕ್ಷವು; ಬಲಾತ್ಕರಿಸುವ ನಾಲಿಗೆ ಮನಮುರಿಯುವದು**

ಜ್ಞಾನೋಕ್ತಿಗಳು 12:18 ರಲ್ಲಿ, ಜ್ಞಾನಿಗಳ ನಾಲಿಗೆಯು ಆರೋಗ್ಯವನ್ನು ಉತ್ತೇಜಿಸುತ್ತದೆ ಎಂದು ನಾವು ಕಲಿಯುತ್ತೇವೆ. ಇಬ್ರಿಯ ಭಾಷೆಯಲ್ಲಿ 'ಮಾರ್ಪೆ' ಎಂಬ ಪದದ "ಆರೋಗ್ಯ" ಎಂದರೆ "ಚಿಕಿತ್ಸೆ, ಔಷಧ, ಪರಿಹಾರ, ಸ್ವಸ್ಥತೆ, ವಿಮೋಚನೆ, ಮನಸ್ಸಿನ ಸದೃಢತೆ, ಸಂಪೂರ್ಣತೆ." ಮಾತುಗಳನ್ನು ಸರಿಯಾಗಿ ಮತ್ತು ಬುದ್ಧಿವಂತಿಕೆಯಿಂದ ಬಳಸಿದರೆ, ನಿಮಗೆ ಮತ್ತು ನಿಮ್ಮನ್ನು ಕೇಳುವವರು ಸ್ವಸ್ಥರಾಗಬಹುದು ಮತ್ತು ಸಂಪೂರ್ಣತೆಯನ್ನು ತರಬಹುದು.

ಜ್ಞಾನೋಕ್ತಿಗಳು 15:4 ರಲ್ಲಿ ಮತ್ತೊಮ್ಮೆ ಅದೇ ಪದ 'ಮಾರ್ಪೆ' ಅನ್ನು ಬಳಸಲಾಗಿದೆ, ಅಲ್ಲಿ ಅದನ್ನು "ಆರೋಗ್ಯಕರ" ಎಂದು ಅನುವಾದಿಸಲಾಗಿದೆ. ಆರೋಗ್ಯಕರ ಮಾತುಗಳನ್ನು ಮಾತನಾಡುವ ನಾಲಿಗೆ - ಅಕ್ಷರಶಃ, ಗುಣಪಡಿಸುವ ಮತ್ತು ವಿಮೋಚನೆಯ ಮಾತುಗಳು -ಜೀವ ವೃಕ್ಷವಾಗಿದೆ. ಪ್ರಕಟನೆ 22:1,2ರಲ್ಲಿ, ನಾವು ಜೀವ ವೃಕ್ಷದ ಬಗ್ಗೆ ಓದುತ್ತೇವೆ - *"ಆಮೇಲೆ ಅವನು ಸ್ಫಟಿಕದಂತೆ ಪ್ರಕಾಶಮಾನವಾಗಿದ್ದ ಜೀವಜಲದ ನದಿಯನ್ನು ನನಗೆ ತೋರಿಸಿದನು ಅದು ದೇವರ ಮತ್ತು ಯಜ್ಞದ ಕುರಿಯಾದಾತನ ಸಿಂಹಾಸನದಿಂದ ಹೊರಟು ಪಟ್ಟಣದ ಬೀದಿಯ ಮಧ್ಯದಲ್ಲಿ ಹರಿಯುತಿತ್ತು. ಆ ನದಿಯ ಉಭಯ ಪಾರ್ಶ್ವಗಳಲ್ಲಿ ಜೀವವೃಕ್ಷವಿತ್ತು; ಅದು ತಿಂಗಳು ತಿಂಗಳಿಗೆ ಫಲವನ್ನು ಫಲಿಸುತ್ತಾ ಹನ್ನೆರೆಡು ತರದ ಫಲಗಳನ್ನು ಕೊಡುತ್ತದೆ. ಆ ಮರದ ಎಳೆಗಳು ಜನಾಂಗದವರನ್ನು ವಾಸಿಮಾಡುವದಕ್ಕೆ ಪ್ರಯೋಜನವಾಗಿದೆ."* ಜೀವ ವೃಕ್ಷದ ಎಲೆಗಳು ಸ್ವಸ್ಥತೆ ತಂದವು. ನಾವು

ವಾಸಿಮಾಡುವಿಕೆ, ಸಂಪೂರ್ಣತೆ, ವಿಮೋಚನೆ ಮತ್ತು ಸ್ವಸ್ಥತೆಯ ಪದಗಳನ್ನು ಮಾತನಾಡುವಾಗ, ನಾವು ನಮಗೂ ಮತ್ತು ನಾವು ಮಾತನಾಡುವವರಿಗೂ ಗುಣಪಡಿಸುವಿಕೆಯನ್ನು ನಿರ್ವಹಿಸಬಹುದು.

ಮಾತುಗಳು ಗುಣಪಡಿಸಬಹುದು ಮತ್ತು ಸಂಪೂರ್ಣಗೊಳಿಸಬಹುದು. ದೇವರು ತನ್ನ ವಾಕ್ಯವು ನಮ್ಮ ಇಡೀ ದೇಹಕ್ಕೆ ಜೀವನ (ತಾಜಾತನ, ಶಕ್ತಿ) ಮತ್ತು ಆರೋಗ್ಯ ('ಮಾರ್ಪೆ') ಎಂದು ಹೇಳುತ್ತಾನೆ (ಜ್ಞಾನೋಕ್ತಿಗಳು 4:22). ಜನರು ಆತನಿಗೆ ಮೊರೆಯಿಟ್ಟಾಗ, ದೇವರು ತನ್ನ ವಾಕ್ಯವನ್ನು ಕಳುಹಿಸಿದನು ಮತ್ತು ಅವರನ್ನು ಗುಣಪಡಿಸಿದನು ('ರಾಫಾ' ಗುಣಪಡಿಸಿ, ಸಂಪೂರ್ಣಗೊಳಿಸು) (ಕೀರ್ತನೆಗಳು 107:20). ದೇವರ ವಾಕ್ಯವು ಸಂಪೂರ್ಣ ವ್ಯಕ್ತಿಯನ್ನು ಗುಣಪಡಿಸುವ ಮತ್ತು ಸಂಪೂರ್ಣಗೊಳಿಸುವ ಶಕ್ತಿಯನ್ನು ಹೊಂದಿದೆ. ಆದ್ದರಿಂದ, ದೇವರ ವಾಕ್ಯವನ್ನು ಮಾತನಾಡಿ ಮತ್ತು ಆತನ ವಾಕ್ಯದ ಗುಣಪಡಿಸುವ ಶಕ್ತಿಯನ್ನು ನಿಮ್ಮ ಬಾಯಿಯ ಮಾತುಗಳ ಮೂಲಕ ಬಿಡುಗಡೆ ಮಾಡೋಣ. ಗುಣಪಡಿಸುವಿಕೆಯನ್ನು ಉತ್ತೇಜಿಸುವ, ಒಳ್ಳೆಯ ಔಷಧವಾದ, ಜೀವವೃಕ್ಷದಂತಿರುವ ಮಾತುಗಳು ನಿಮ್ಮ ಬಾಯಿಯಿಂದ ಬಿಡುಗಡೆಯಾಗಲಿ. ನಿಮಗಾಗಿ ಮತ್ತು ನಿಮ್ಮ ಸುತ್ತಮುತ್ತಲಿನವರಿಗೆ ಆರೋಗ್ಯ ಮತ್ತು ಸಂಪೂರ್ಣತೆಯನ್ನು ಉತ್ತೇಜಿಸಲು, ದೇವರ ಗುಣಪಡಿಸುವ ಮಾತುಗಳನ್ನು ಮಾತನಾಡುವ ಮೂಲಕ ನಿಮ್ಮ ಮಾತುಗಳನ್ನು ಬಳಸಿ.

# 23

# ಆಹ್ಲಾದಕರ ಮಾತುಗಳ ಶಕ್ತಿಯನ್ನು ಬಿಡುಗಡೆ ಮಾಡಿ

**ಜ್ಞಾನೋಕ್ತಿಗಳು 16:21,24**

**[21] ಜ್ಞಾನಹೃದಯರಿಗೆ ಜಾಣರೆಂಬ ಬಿರುದು ಬರುವದು; ಸವಿತುಟಿಯಿಂದ ಉಪದೇಶಶಕ್ತಿಯು ಹೆಚ್ಚುವದು.**

**[24] ಸವಿನುಡಿಯು ಜೇನುಕೊಡ; ಅದು ಆತ್ಮಕ್ಕೆ ಸಿಹಿ, ಎಲುಬಿಗೆ ಕ್ಷೇಮ.**

ಯಾವುದೇ ಸಂದರ್ಭದಲ್ಲಿ ನಾವು ಮಾತನಾಡುವ ಮಾತುಗಳನ್ನು ನಾವು ಆಯ್ಕೆ ಮಾಡಬಹುದು. ದಯೆ, ಸೌಮ್ಯ, ಆಹ್ಲಾದಕರ, ಸಮೃದ್ಧಗೊಳಿಸುವ, ಉನ್ನತಿಗೇರಿಸುವ ಮತ್ತು ಸಕಾರಾತ್ಮಕ ಮಾತುಗಳು ಪ್ರಬಲವಾದ ಪ್ರಭಾವವನ್ನು ಬೀರುತ್ತವೆ. ಮೃದುವಾಗಿ ಮತ್ತು ದಯೆಯಿಂದ ಮಾತನಾಡುವ ಮಾತುಗಳು ಕಲಿಕೆಯನ್ನು ಹೆಚ್ಚಿಸುತ್ತವೆ. ಅವು ಸೂಚನೆಗೆ ಜನರನ್ನು ಹೆಚ್ಚು ಗ್ರಹಿಸುವಂತೆ ಮಾಡುತ್ತವೆ, ಹೆಚ್ಚು ಮನವರಿಕೆಮಾಡುವವು ಮತ್ತು ಮನವೊಲಿಸುವವು. ದಯೆ, ಆಹ್ಲಾದಕರ ಮತ್ತು ಉತ್ಕೃಷ್ಟವಾದ ಮಾತುಗಳು ಆಂತರಿಕ ವ್ಯಕ್ತಿಗೆ ಶಕ್ತಿಯನ್ನು ಮತ್ತು ಆರೋಗ್ಯವನ್ನು ಒಬ್ಬರ ಅಸ್ತಿತ್ವದ ಮೂಲಕ್ಕೆ ತರುತ್ತವೆ. ನಾವು ಮುಖಸ್ತುತಿಯ ಬಗ್ಗೆ ಮಾತನಾಡುತ್ತಿಲ್ಲ, ಅವು ಪ್ರಾಮಾಣಿಕವಲ್ಲದ ಮಾತುಗಳು ಮತ್ತು ಆ ಮಾತುಗಳ ಹಿಂದೆ ನಿಜವಾದದ್ದು ಏನೂ ಇಲ್ಲದೇ ಒಬ್ಬರನ್ನು ಒಳ್ಳೆಯವರನ್ನಾಗಿಸುವ ಭಾವನೆಯನ್ನು ಉಂಟುಮಾಡುವ ಮಾತುಗಳಾಗಿವೆ. ನಾವು ಕಾಳಜಿ, ದಯೆ ಮತ್ತು ಸೌಮ್ಯತೆಯಿಂದ ಮಾತನಾಡುವ ನಿಜವಾದ ಮತ್ತು ಸತ್ಯವಾದ ಮಾತುಗಳನ್ನು ಉಲ್ಲೇಖಿಸುತ್ತಿದ್ದೇವೆ.

ನಮ್ಮ ಮಾತಿನ ಭಾಗವಾಗಿ ನಾವು ದೇವರ ಶಕ್ತಿಯುತವಾದ ವಾಕ್ಯವನ್ನು ಸೇರಿಸಿದಾಗ, ನಾವು ನಂಬಿಕೆ, ಭರವಸೆ, ಶಕ್ತಿ, ಧೈರ್ಯ, ವಾಸಿಮಾಡುವಿಕೆ, ಬುದ್ಧಿವಂತಿಕೆ ಮತ್ತು ಸಲಹೆಯನ್ನು ನಮ್ಮ ಮಾತುಗಳ ಮೂಲಕ ಪೂರೈಸಬಹುದು. ಮಾಧುರ್ಯದಿಂದ ಮಾತನಾಡಿ. ಹಿತವಾಗಿ

ಮಾತನಾಡಿ. ಜನರನ್ನು ನಿರ್ಮಿಸುವ ಮಾತುಗಳನ್ನು ಮಾತನಾಡಿ. ಜನರನ್ನು ಉತ್ಕೃಷ್ಟಗೊಳಿಸುವ ಮತ್ತು ಗುಣಪಡಿಸುವ ಮಾತುಗಳನ್ನು ಮಾತನಾಡಿ. ನೀವು ಆತನ ಬಗ್ಗೆ ಮಾತನಾಡುವಾಗ ದೇವರನ್ನು ಜನರಿಗೆ ಸಾರಿರಿ, ಆತನು ಏನು ಮಾಡಬಹುದು ಮತ್ತು ಆತನು ಏನು ಭರವಸೆ ನೀಡಿದ್ದಾನೆ. ಆಹ್ಲಾದಕರ ಪದಗಳ ಶಕ್ತಿಯನ್ನು ಬಿಡುಗಡೆ ಮಾಡಿ.

# 24

# ನಿಮ್ಮ ಮಾತುಗಳ ಫಲದಿಂದ ನಿಮ್ಮ ಜೀವನವು ತುಂಬುತ್ತದೆ

**ಜ್ಞಾನೋಕ್ತಿಗಳು 12:14**

**ಬಾಯ ಫಲವಾಗಿ ಮನುಷ್ಯನು ಬೇಕಾದಷ್ಟು ಸುಖವನ್ನನುಭವಿಸುವನು; ಅವನ ಕೈಕೆಲಸದ ಫಲವು ಅವನಿಗೇ ಪ್ರಾಪ್ತವಾಗುವದು.**

**ಜ್ಞಾನೋಕ್ತಿಗಳು 18:20**

**ಮನುಷ್ಯನು ತನ್ನ ಬಾಯ ಬೆಲೆಯನ್ನು ಹೊಟ್ಟೆತುಂಬಾ ಉಣ್ಣುವನು; ತನ್ನ ತುಟಿಗಳ ಫಲವನ್ನು ಸಾಕಾದಷ್ಟು ತಿನ್ನುವನು.**

ನಮ್ಮ ಮಾತುಗಳು ನಮ್ಮ ಜೀವನದ ಮೇಲೆ ಎಲ್ಲ ರೀತಿಯಲ್ಲೂ ಪರಿಣಾಮ ಬೀರುತ್ತವೆ. ಅವು ನಮ್ಮ ಆಂತರಿಕ ವ್ಯಕ್ತಿಯ ಮೇಲೆ ಪರಿಣಾಮ ಬೀರುತ್ತವೆ. ಮನುಷ್ಯನ ಹೊಟ್ಟೆಯು ಅವನ ಅಂತರಂಗವನ್ನು ಸೂಚಿಸುತ್ತದೆ. ಆಹಾರವು ಹೊಟ್ಟೆಗೆ ಮಾಡುವಂತೆಯೇ ನಮ್ಮ ಆಂತರಿಕ ವ್ಯಕ್ತಿಯು ಒಳ್ಳೆಯದರಿಂದ ತುಂಬಬಹುದು, ತೃಪ್ತಿ ಹೊಂದಬಹುದು, ಪೋಷಿಸಬಹುದು ಮತ್ತು ನಮ್ಮ ಮಾತುಗಳಿಂದ ಆಶೀರ್ವದಿಸಬಹುದು. ನಮ್ಮ ಮಾತುಗಳು ಜೀವನದಲ್ಲಿ ನಮಗೆ ಏನಾಗುತ್ತದೆ ಎಂಬುದರ ಮೇಲೆ ಪರಿಣಾಮ ಬೀರುತ್ತವೆ. ನಾವು ಮಾತನಾಡುವ ಮಾತುಗಳ ಫಲಿತಾಂಶದಿಂದ ನಮ್ಮ ಜೀವನವು ತುಂಬಿರುತ್ತದೆ. ನಾವು ಕಾಲಕಾಲಕ್ಕೆ ಮಾತನಾಡುವ ನಮ್ಮ ಮಾತುಗಳ ಪರಿಣಾಮಗಳೊಂದಿಗೆ ಬದುಕುತ್ತೇವೆ.

ನಿಮ್ಮ ಆಂತರಿಕ ವ್ಯಕ್ತಿ ಏನು ತುಂಬಿರಬೇಕೆಂದು ನೀವು ಬಯಸುತ್ತೀರಿ? ಆತ್ಮವಿಶ್ವಾಸ, ಧೈರ್ಯ, ನಂಬಿಕೆ, ಭರವಸೆ, ನೀತಿವಂತಿಕೆ, ಸಮಾಧಾನ, ಸಂತೋಷ, ಶಾಂತತೆ, ಬುದ್ಧಿವಂತಿಕೆ, ಶಕ್ತಿ ಮತ್ತು ದೇವರ ಪುತ್ರರು ಮತ್ತು ಪುತ್ರಿಯರಾಗಿ ನಮಗೆ ಲಭ್ಯವಿರುವ ಎಲ್ಲಾ ಒಳ್ಳೆಯ ವಿಷಯಗಳಿಂದ ತುಂಬಿರುವುದು ಹೇಗೆ? ಖಂಡಿತವಾಗಿ! ನಂತರ ನಾವು ಆತನ ವಾಕ್ಯ ಮತ್ತು ಆತ್ಮದ ಶಕ್ತಿಯಿಂದ ದೇವರಿಂದ ಬರುವ ಅಂತಹ ಸದ್ಗುಣಗಳಿಂದ ನಮ್ಮನ್ನು

ತುಂಬುವ ಮಾತುಗಳನ್ನು ಮಾತನಾಡಬೇಕು. ದೇವರ ವಾಕ್ಯವನ್ನು ಮಾತನಾಡಿ. ಕ್ರಿಸ್ತನಲ್ಲಿ ನಿಮ್ಮದು ಏನೆಂದು ಘೋಷಿಸಿ. ನೀವು ಆತನ ರಾಜ್ಯದ ಭಾಗವಾಗಿದ್ದೀರಿ ಮತ್ತು ಆದ್ದರಿಂದ ನೀವು ಪವಿತ್ರಾತ್ಮನಿಂದ ನೀತಿ, ಶಾಂತಿ ಮತ್ತು ಸಂತೋಷವನ್ನು ಹೊಂದಿದ್ದೀರಿ ಎಂದು ಘೋಷಿಸಿ. ಯೇಸು ಕೊಡುವ ಶಾಂತಿ, ಜಗತ್ತು ನೀಡಲಾಗದ ಶಾಂತಿ, ತಿಳುವಳಿಕೆಗೆ ಮೀರಿದ ಶಾಂತಿ, ಮತ್ತು ಈ ಶಾಂತಿ ನಿಮ್ಮ ಹೃದಯ ಮತ್ತು ಮನಸ್ಸನ್ನು ನಡೆಸುತ್ತದೆ ಎಂದು ಘೋಷಿಸಿ. ನಿಮಗೆ ಶಕ್ತಿ, ಪ್ರೀತಿ ಮತ್ತು ಉತ್ತಮ ಮನಸ್ಸು ಇದೆ ಎಂದು ಘೋಷಿಸಿ. ಕರ್ತನು ನಿಮ್ಮ ವಿಶ್ವಾಸ ಎಂದು ಘೋಷಿಸಿ. ನೀನು ಸಿಂಹದಂತೆ ಧೈರ್ಯಶಾಲಿ. ನೀವು ಎಲ್ಲಿಗೆ ಹೋದರೂ ಕರ್ತನು ನಿಮ್ಮೊಂದಿಗಿರುವುದರಿಂದ ನೀವು ಬಲಶಾಲಿ ಮತ್ತು ಧೈರ್ಯಶಾಲಿ. ನಿಮ್ಮ ಆಂತರಿಕ ವ್ಯಕ್ತಿಯಲ್ಲಿ ಒಳ್ಳೆಯ ವಿಷಯಗಳನ್ನು ನಿರ್ಮಿಸುವ ಪದಗಳನ್ನು ಮಾತನಾಡಿ.

ನಿಮ್ಮ ಜೀವನದ ಅನುಭವಗಳು ಯಾವುದರಿಂದ ತುಂಬಿರಬೇಕೆಂದು ನೀವು ಬಯಸುತ್ತೀರಿ? ನಿಮ್ಮ ಪ್ರಸ್ತುತ ಮತ್ತು ನಿಮ್ಮ ಭವಿಷ್ಯವು ಯಾವುದರಿಂದ ತುಂಬಿರಬೇಕೆಂದು ನೀವು ಬಯಸುತ್ತೀರಿ? ನಿಮ್ಮ ಜೀವನ, ನಿಮ್ಮ ವರ್ತಮಾನ ಮತ್ತು ನಿಮ್ಮ ಭವಿಷ್ಯದ ಮೇಲೆ ದೇವರ ವಾಗ್ದಾನಗಳನ್ನು ಮಾತನಾಡಿ. ನೀವು ಮಾತನಾಡುವ ಮಾತುಗಳ ಫಲದಿಂದ ನಿಮ್ಮ ಜೀವನವು ತುಂಬಿರುತ್ತದೆ.

# 25

# ನಿಮ್ಮ ಮಾತುಗಳು ಜೀವನ ಮತ್ತು ಮರಣದ ಶಕ್ತಿಯನ್ನು ಹೊಂದಿವೆ

**ಜ್ಞಾನೋಕ್ತಿಗಳು 18:21**
**ಜೀವನಮರಣಗಳು ನಾಲೆಗೆಯ ವಶ, ವಚನಪ್ರಿಯರು ಅದರ ಫಲವನ್ನು ಅನುಭವಿಸುವರು**

ದೇವರು ಜೀವನ ಮತ್ತು ಮರಣದ ವಿಷಯಗಳನ್ನು ನಾಲಿಗೆಯ ಶಕ್ತಿಯಲ್ಲಿ ಅಂದರೆ ನಾವು ಮಾತನಾಡುವ ಮಾತುಗಳಲ್ಲಿ ಇರಿಸಿದ್ದಾನೆ. ನಮ್ಮ ಮಾತುಗಳು ಜೀವ ಅಥವಾ ಸಾವನ್ನು ತರಬಹುದು. ನಮ್ಮ ಮಾತುಗಳ ಪರಿಣಾಮಗಳನ್ನು ಒಪ್ಪಿಕೊಳ್ಳಲು ನಾವು ಸಿದ್ಧರಾಗಿರಬೇಕು. ನಮ್ಮ ಮಾತಿನ ಫಲದಿಂದ ನಾವು ಬದುಕಬೇಕು.

"ಸಾವು" ಎಂಬುದು "ದೈಹಿಕವಾಗಿ ಸಾಯುವುದನ್ನು" ಸೂಚಿಸುತ್ತದೆ ಮತ್ತು ಇದನ್ನು ಸಾಂಕೇತಿಕವಾಗಿ ಪಿಡುಗು, ರೋಗ ಮತ್ತು ನಾಶವನ್ನು ಉಲ್ಲೇಖಿಸಲು ಬಳಸಲಾಗುತ್ತದೆ. ಜೀವನವು ಸಕಾರಾತ್ಮಕ ರೀತಿಯಲ್ಲಿ ಜೀವಂತವಾಗಿರುವುದಕ್ಕೆ ಸಂಬಂಧಿಸಿದ ಎಲ್ಲವನ್ನೂ ಸೂಚಿಸುತ್ತದೆ ಮತ್ತು ತಾಜಾತನ ಮತ್ತು ಶಕ್ತಿಯನ್ನು ಒಳಗೊಂಡಿರುತ್ತದೆ.

ನಾವು ಮಾತನಾಡುವ ಮಾತುಗಳು ನಮ್ಮನ್ನು ಹಾಳುಮಾಡಬಹುದು ಅಥವಾ ನಮ್ಮನ್ನು ಆಶೀರ್ವದಿಸಬಹುದು. ನಾವು ಮಾತನಾಡುವ ಮಾತುಗಳು ನಮಗೆ ಜೀವನ ಮತ್ತು ಶಕ್ತಿಯನ್ನು ತರಬಹುದು ಅಥವಾ ನಾವು ಮಾತನಾಡುವ ಮಾತುಗಳು ನಮ್ಮ ಜೀವನವನ್ನು ಕಿತ್ತುಹಾಕಬಹುದು, ನಮ್ಮನ್ನು ದುರ್ಬಲ ಮತ್ತು ದಿವಾಳಿಯಾಗುವಂತೆ ಮಾಡಬಹುದು. ದೇವರು ನಮ್ಮ ಮಾತುಗಳನ್ನು ನಮ್ಮ ಮೇಲೆ ಅಂತಹ ಪರಿಣಾಮ ಮತ್ತು ಪ್ರಭಾವ ಬೀರುವಂತೆ ವಿನ್ಯಾಸಗೊಳಿಸಿದ್ದಾನೆ. ನೀವು ಮಾತನಾಡುವ ಮಾತು ನಿಮ್ಮನ್ನು ನಿರ್ಮಿಸಬಹುದು ಅಥವಾ ನಾಶಪಡಿಸಬಹುದು.

ಆದ್ದರಿಂದ, ನಾವು ನಮ್ಮ ಮತ್ತು ಇತರರ ಮೇಲೆ ಜೀವನವನ್ನು

ಮತ್ತು ಆಶೀರ್ವಾದವನ್ನು ಬಿಡುಗಡೆ ಮಾಡುವ ಮಾತುಗಳನ್ನು ಮಾತನಾಡಲು ಆರಿಸಿಕೊಳ್ಳಬೇಕು. ದೇವರ ವಾಕ್ಯವನ್ನು ಹೇಳುವುದಕ್ಕಿಂತ ಉತ್ತಮವಾದದ್ದೇನೂ ಇರಲಾರದು. ನಿಮ್ಮ ಜೀವನದ ಮೇಲೆ ದೇವರ ವಾಗ್ದಾನಗಳನ್ನು ಮಾತನಾಡಿ. ಕ್ರಿಸ್ತನಲ್ಲಿ ಹೊಸ ಸೃಷ್ಟಿಯಾಗಿ ದೇವರು ನಿಮ್ಮ ಬಗ್ಗೆ ಏನು ಘೋಷಿಸಿದ್ದಾನೋ ಅದನ್ನು ಮಾತನಾಡಿ. ಆತನ ವಾಕ್ಯದ ಪ್ರಕಾರ ನಿಮ್ಮ ಜೀವನದಲ್ಲಿ ಆಶೀರ್ವಾದ, ಸಮೃದ್ಧಿ, ಯಶಸ್ಸು, ಹೇರಳ ಮತ್ತು ಒಳ್ಳೆಯತನವನ್ನು ಮಾತನಾಡಿ. ನೀವು ಅನೇಕರಿಗೆ ಆಶೀರ್ವಾದವಾಗಿರುವಿರಿ ಎಂದು ಘೋಷಿಸಿ. ಆಶೀರ್ವಾದವಾಗಲು ನೀವು ಆಶೀರ್ವದಿಸಲ್ಪಟ್ಟಿದ್ದೀರಿ ಎಂದು ಘೋಷಿಸಿ. ನಿಮಗಾಗಿ ದೇವರ ಎಲ್ಲಾ ಉದ್ದೇಶಗಳು ಮತ್ತು ನಿಯೋಜನೆಗಳನ್ನು ನೀವು ಪೂರೈಸುವಿರಿ ಎಂದು ಘೋಷಿಸಿ. ನಿಮ್ಮ ಜೀವನದ ಮೂಲಕ ದೇವರನ್ನು ಮಹಿಮೆಪಡಿಸಲಾಗುವುದು ಎಂದು ಘೋಷಿಸಿ. ನಿಮ್ಮ ಪ್ರಸ್ತುತ ಮತ್ತು ನಿಮ್ಮ ಭವಿಷ್ಯದ ಮೇಲೆ ಜೀವನ ಮತ್ತು ಆಶೀರ್ವಾದವನ್ನು ಬಿಡುಗಡೆ ಮಾಡಲು ನಿಮ್ಮ ಪದಗಳನ್ನು ಬಳಸಿ.

# 26

# ನಿಮ್ಮ ಬಾಯಿಯಲ್ಲಿರುವ ಆತನ ಮಾತು ಜನಾಂಗಗಳ ಮೇಲೆ ಪರಿಣಾಮಬೀರಬಹುದು

**ಯೆರೆಮೀಯ 1:9,10**

**[9] ಆಗ ಯೆಹೋವನು ಕೈಚಾಚಿ ನನ್ನ ಬಾಯನ್ನು ಮುಟ್ಟಿ – ಇಗೋ, ನಿನ್ನ ಬಾಯಲ್ಲಿ ನನ್ನ ಮಾತುಗಳನ್ನು ಇಟ್ಟಿದ್ದೇನೆ;**

**[10] ಕಿತ್ತುಹಾಕುವದು, ಕೆಡವುವದು, ನಾಶಪಡಿಸುವದು, ಹಾಳುಮಾಡುವದು, ಕಟ್ಟುವದು, ನೆಡುವದು, ಈ ಕಾರ್ಯಗಳನ್ನು ಮಾಡುವದಕ್ಕೋಸ್ಕರ ಜನಾಂಗಗಳ ಮೇಲೂ ರಾಜ್ಯಗಳ ಮೇಲೂ ನಿನ್ನನ್ನು ಈ ದಿನ ನೇಮಿಸಿದ್ದೇನೆ ಅಂದನು.**

ಈ ಎರಡು ವಚನಗಳಲ್ಲಿ ನಾವು ಪ್ರವಾದನೆಯ ಶಕ್ತಿಯನ್ನು ನೋಡುತ್ತೇವೆ. ಯೆರೆಮೀಯನು ದೇವರು ತನ್ನ ಬಾಯಲ್ಲಿ ಹೇಳಿದ ಮಾತುಗಳನ್ನು ಮಾತನಾಡುವಂತೆ, ಜನಾಂಗಗಳು ಮತ್ತು ರಾಜ್ಯಗಳ ಮೇಲೆ, ವಿಷಯಗಳನ್ನು ಬೇರುಸಹಿತ ಕಿತ್ತುಹಾಕಲಾಗುತ್ತದೆ, ಕೆಡವಲಾಗುತ್ತದೆ, ನಾಶಗೊಳಿಸಲಾಗುತ್ತದೆ ಮತ್ತು ಕೆಳಗೆ ಎಸೆಯಲಾಗುತ್ತದೆ. ಯೆರೆಮಿಯನು ದೇವರು ಅವನಿಗೆ ನೀಡಿದ ಮಾತುಗಳನ್ನು ಹೇಳಿದಂತೆಯೇ ದೇವರು ಕೆಳಗಿಳಿಯಲು ಬಯಸಿದ ರಾಷ್ಟ್ರಗಳು ಮತ್ತು ರಾಜ್ಯಗಳಲ್ಲಿನ ವಸ್ತುಗಳ ಹರಿದುಹೋಗುವಿಕೆ ಮತ್ತು ಕುಸಿತವುಂಟಾಗುತ್ತದೆ. ಮತ್ತು ಯೆರೆಮೀಯನು ಪ್ರವಾದಿಸಿದಂತೆ ರಾಷ್ಟ್ರಗಳು ಮತ್ತು ರಾಜ್ಯಗಳು ನಿರ್ಮಿಸಲಾಗುವವು , ಸ್ಥಾಪಿಸಲಾಗುವವು , ಎದ್ದೆಳುವವು.

ಪ್ರವಾದನೆಯು ಪವಿತ್ರಾತ್ಮನ ಪ್ರೇರಣೆಯಿಂದ ನೀಡಲ್ಪಟ್ಟ ಜನರ ಮೂಲಕ ಬಿಡುಗಡೆಯಾದ ಮಾತಾಗಿದೆ. ದೇವ ಜನರ ಜೀವನದಲ್ಲಿ ಪವಿತ್ರಾತ್ಮನು ಇನ್ನೂ ಕಾರ್ಯನಿರ್ವಹಿಸುತ್ತಿದ್ದಾನೆ. ಆತನು ಇನ್ನೂ ಪ್ರವಾದಿಸಲು ಮತ್ತು ಪ್ರೇರಿತ ಮಾತುಗಳನ್ನು ಅಥವಾ ರಾಷ್ಟ್ರಗಳು ಮತ್ತು ಜನರ ಮೇಲೆ ಪ್ರವಾದನೆಯನ್ನು ಬಿಡುಗಡೆ ಮಾಡಲು ನಮ್ಮ ಮೇಲೆ ಚಲಿಸುತ್ತಾನೆ. ದೇವರು ತನ್ನ ಮಾತುಗಳನ್ನು ನಮ್ಮ ಬಾಯಿಯಲ್ಲಿ ಇರಿಸಿದಾಗ ಮತ್ತು ನಾವು ಅವುಗಳನ್ನು ಮಾತನಾಡುವಾಗ, ನಾವು ರಾಷ್ಟ್ರಗಳು ಮತ್ತು ರಾಜ್ಯಗಳ

ಮೇಲೆ ಚಾಲ್ತಿಯಲ್ಲಿರುವ ಪರಿಸ್ಥಿತಿಗಳನ್ನು (ಆತ್ಮಿಕ, ಸಾಮಾಜಿಕ, ಆರ್ಥಿಕ, ಇತ್ಯಾದಿ) ಪರಿಣಾಮ ಬೀರುತ್ತೇವೆ. ನಮ್ಮ ಬಾಯಿಂದ ಬಿಡುಗಡೆಯಾದ ಆತನ ಮಾತುಗಳು ರಾಷ್ಟ್ರಗಳ ಮೇಲೆ ಪರಿಣಾಮ ಬೀರಬಹುದು. ದೇವರು ತನ್ನ ಮಾತುಗಳನ್ನು ನೆರವೇರಿಸುವದಕ್ಕೆ ನೋಡುತ್ತಾನೆ (ಯೆರೆಮೀಯ 1:12).

# 27

# ಒಣ ಎಲುಬುಗಳೊಂದಿಗೆ ಅವು ಜೀವಿಸಬಹುದೆಂದು ಮಾತನಾಡಿ

**ಯೆಹೆಜ್ಕೇಲ 37:1–7**

**1 ನಾನು ಯೆಹೋವನ ಹಸ್ತಸ್ಪರ್ಶದಿಂದ ಪರವಶನಾಗಿರಲು ಆತನು ತನ್ನ ಆತ್ಮದ ಮೂಲಕ ನನ್ನನ್ನು ಒಯ್ದು ಎಲುಬುಗಳಿಂದ ತುಂಬಿದ ಒಂದು ತಗ್ಗಿನಲ್ಲಿ ಇಳಿಸಿ**

**2 ನಾನು ಆ ಎಲುಬುಗಳ ಮಧ್ಯ ತಗ್ಗನ್ನು ಬಳಸಿಕೊಂಡು ಬರುವಂತೆ ಮಾಡಿದನು; ಇಗೋ, ತಗ್ಗಿನ ಮೇಲೆಲ್ಲಾ ತೀರಾ ಒಣಗಿದ ಎಲುಬುಗಳು ಲೆಕ್ಕವಿಲ್ಲದಷ್ಟು ಬಿದ್ದಿದ್ದವು.**

**3 ಆತನು ನನ್ನನ್ನು- ನರಪುತ್ರನೇ, ಈ ಎಲುಬುಗಳಿಗೆ ಜೀವವು ಬರಬಹುದೋ ಎಂದು ಕೇಳಲು ನಾನು ಕರ್ತನಾದ ಯೆಹೋವನೇ ನೀನೇ ಬಲ್ಲೆ ಎಂದುತ್ತರಕೊಟ್ಟೆನು.**

**4 ಆಗ ಆತನು ನನಗೆ ಹೀಗೆ ಅಪ್ಪಣೆಮಾಡಿದನು – ನೀನು ಎಲುಬುಗಳ ಮೇಲೆ ಧ್ವನಿಯನ್ನು ಹರಡಿ ಅದಕ್ಕೆ ಈ ದೈವೋಕ್ತಿಯನ್ನು ನುಡಿ - ಒಣಗಿದ ಎಲುಬುಗಳೇ, ಯೆಹೋವನ ವಾಕ್ಯವನ್ನು ಕೇಳಿರಿ.**

**5 ಕರ್ತನಾದ ಯೆಹೋವನು ನಿಮಗೆ ಹೀಗೆ ಹೇಳುತ್ತಾನೆ – ಇಗೋ, ನಾನು ನಿಮ್ಮೊಳಗೆ ಶ್ವಾಸವನ್ನು ಊದುವೆನು; ನೀವು ಬದುಕುವಿರಿ**

**6 ನಾನು ನಿಮ್ಮ ಮೇಲೆ ನರಗಳನ್ನು ಹಬ್ಬಿಸಿ ಮಾಂಸವನ್ನು ಹರಡಿ ಚರ್ಮವನ್ನು ಹೊದಿಸಿ ನಿಮ್ಮಲ್ಲಿ ಶ್ವಾಸವನ್ನು ತುಂಬುವೆನು; ಆಗ ನೀವು ಬದುಕಿ ನಾನೇ ಯೆಹೋವನು ಎಂದು ತಿಳಿದುಕೊಳ್ಳುವಿರಿ.**

**7 ನನಗೆ ಅಪ್ಪಣೆಯಾದಂತೆ ನಾನ ಆ ದೈವೋಕ್ತಿಯನ್ನೆತ್ತಿ ನುಡಿಯುತ್ತಿರಲು ಸದ್ದಾಯಿತು, ಇಗೋ, ಟಕಟಕ ಎನುತ್ತಾ ಎಲುಬು ಎಲುಬಿಗೆ ಜೋಡನೆಯಾದವು.**

ಈ ಭಾಗವು ಯೆಹೆಜ್ಕೇಲನ ಪ್ರವಾದಿಯ ಅನುಭವದ ಒಂದು ಭಾಗವನ್ನು ಬಹಿರಂಗಪಡಿಸುತ್ತದೆ. ಈ ಒಣ ಎಲುಬುಗಳು ಇಸ್ರಾಯೇಲ್ ರಾಷ್ಟ್ರದ ಚಿತ್ರವಾಗಿದ್ದು, ಅವರು ತಮ್ಮ ಸ್ವಂತ ಭೂಮಿಯಿಂದ ಚದುರಿಹೋಗಿದ್ದರು ಮತ್ತು ಹತಾಶರಾಗಿದ್ದರು (ಯೆಹೆಜ್ಕೇಲ 37:11,12). ದೇವರು ಯೆಹೆಜ್ಕೇಲ ಪ್ರವಾದನೆಯ ಮಾತನ್ನು—ದೇವರು ಕೊಟ್ಟ ಮಾತುಗಳನ್ನು—ಈ ಒಣಗಿದ ಎಲುಬುಗಳಿಗೆ ಮಾತನಾಡುವಂತೆ ಮಾಡಿದ್ದಾನೆ. ಎಲುಬುಗಳು ಒಟ್ಟಿಗೆ ಸೇರಿಕೊಂಡವು, ಅವುಗಳ ಮೇಲೆ ಮಾಂಸವು ರೂಪುಗೊಂಡಿತು, ಅವುಗಳಲ್ಲಿ ಜೀವವು ಬಂದಿತು ಮತ್ತು ಅವು ದೊಡ್ಡ ಸೈನ್ಯವಾಗಿ ಹುಟ್ಟಿಕೊಂಡವು

(ಯೆಹೆಜ್ಕೇಲ್ 37:10). ಇಡೀ ರಾಷ್ಟ್ರದ ಭವಿಷ್ಯವು ಪ್ರವಾದನೆಯ ಮಾತಿನ ಮೂಲಕ ಪರಿಣಾಮ ಬೀರಿತು. ಪ್ರವಾದನೆಯ ಮಾತು ದೇವರ ಉದ್ದೇಶಗಳನ್ನು ಪೂರೈಸಲು ಭೂಮಿಯ ಮೇಲೆ ದೇವರ ಶಕ್ತಿಯನ್ನು ಬಿಡುಗಡೆ ಮಾಡುವ ವಾಹನವಾಗಿತ್ತು.

ಇಂದಿಗೂ, ಪವಿತ್ರಾತ್ಮನು ನಮ್ಮನ್ನು ಪ್ರೇರೇಪಿಸುತ್ತಾನೆ ಮತ್ತು ಪ್ರವಾದನಾತ್ಮಕವಾಗಿ ಮಾತನಾಡಲು ನಮಗೆ ಮಾತುಗಳನ್ನು ನೀಡುತ್ತಾನೆ. ಇದು ನಮ್ಮ ಸ್ವಂತ ಜೀವನದ ಮೇಲೆ, ಇತರ ಜನರ ಮೇಲೆ, ನಗರಗಳು, ಪ್ರದೇಶಗಳು ಮತ್ತು ರಾಷ್ಟ್ರಗಳ ಮೇಲೆ ಆಗಿರಬಹುದು. ಆತನು ನಮಗೆ ಮಾತನಾಡಲು ಪ್ರೇರೇಪಿಸುವ ಮಾತುಗಳನ್ನು ನಾವು ಮಾತನಾಡುವಾಗ, ಒಣ ಮೂಳೆಗಳು ಜೀವಿಸುತ್ತವೆ! ಸತ್ತದ್ದನ್ನು ಮತ್ತೆ ಜೀವಂತಗೊಳಿಸಲಾಗುತ್ತದೆ! ಜನರು ಮತ್ತು ರಾಷ್ಟ್ರಗಳು ಭರವಸೆ ಮತ್ತು ಜೀವನದೊಂದಿಗೆ ಹೊರಹೊಮ್ಮುತ್ತವೆ. ನೆನಪಿಡಿ, ಪವಿತ್ರಾತ್ಮನು ನಿಮ್ಮನ್ನು ಪ್ರೇರೇಪಿಸುವಂತೆ, ಒಣಗಿದ ಎಲುಬುಗಳೊಂದಿಗೆ ಮಾತನಾಡಿ, ಮತ್ತು ಅವು ಬದುಕುತ್ತವೆ!

# 28

# ನಿಮ್ಮ ಮಾತುಗಳು ಸ್ವರ್ಗದಲ್ಲಿ ಕೇಳಿಬರುತ್ತವೆ

**ದಾನಿಯೇಲ 10:12**

**ಆಮೇಲೆ ಅವನು ನನಗೆ – ದಾನಿಯೇಲನೇ, ಭಯಪಡಬೇಡ, ನೀನು (ದೈವಸಂಕಲ್ಪವನ್ನು) ವಿಮರ್ಶಿಸುವದಕ್ಕೂ ನಿನ್ನನ್ನು ನಿನ್ನ ದೇವರ ಮುಂದೆ ತಗ್ಗಿಸಿಕೊಳ್ಳುವದಕ್ಕೂ ಮನಸಿಟ್ಟ ಮೊದಲನೆಯ ದಿನದಲ್ಲಿಯೇ ನಿನ್ನ ವಿಜ್ಞಾಪನೆಯು ದೇವರಿಗೆ ಮುಟ್ಟಿತು; ಆ ವಿಜ್ಞಾಪನೆಯ ನಿಮಿತ್ತವೇ ನಾನು ಬಂದೆನು.**

ನಾವು ಇಲ್ಲಿ ಭೂಮಿಯ ಮೇಲೆ ಮಾತನಾಡುವ ಮಾತುಗಳು ಸ್ವರ್ಗದಲ್ಲಿ ಕೇಳುತ್ತವೆ. ನಾವು ಮಾತನಾಡುವ ಮಾತುಗಳಿಗೆ ಪ್ರತಿಕ್ರಿಯೆಯಾಗಿ ದೇವರು ದೂತರನ್ನು ಕಳುಹಿಸುತ್ತಾನೆ.

ನಾವು ಪ್ರಾರ್ಥನೆಯಲ್ಲಿ ವಾಕ್ಯಗಳನ್ನು ಮಾತನಾಡುತ್ತೇವೆ. ನಮ್ಮ ನಂಬಿಕೆಯನ್ನು ಚಲಾಯಿಸಲು ನಾವು ವಾಕ್ಯಗಳನ್ನು ಮಾತನಾಡುತ್ತೇವೆ. ಕತ್ತಲೆಯ ಶಕ್ತಿಗಳ ವಿರುದ್ಧ ಯುದ್ಧದಲ್ಲಿ ನಾವು ಆತ್ಮನ ಕತ್ತಿಯನ್ನು ಹಿಡಿದಾಗ ನಾವು ವಾಕ್ಯಗಳನ್ನು ಮಾತನಾಡುತ್ತೇವೆ. ನಾವು ಜನರನ್ನು ಆಶೀರ್ವದಿಸಲು ವಾಕ್ಯಗಳನ್ನು ಮಾತನಾಡುತ್ತೇವೆ. ನಾವು ಜನರಿಗೆ ಚಿಕಿತ್ಸೆ, ವಿಮೋಚನೆ ಮತ್ತು ಅಧ್ಭುತಗಳ ಸೇವೆ ಮಾಡಲು ವಾಕ್ಯಗಳನ್ನು ಮಾತನಾಡುತ್ತೇವೆ. ನಾವು ಪರ್ವತಗಳನ್ನು ಸರಿಸಲು ಮತ್ತು ಬಿರುಗಾಳಿಗಳನ್ನು ಶಾಂತಗೊಳಿಸಲು ವಾಕ್ಯಗಳನ್ನು ಮಾತನಾಡುತ್ತೇವೆ. ನಮ್ಮ ಅಧಿಕಾರವನ್ನು ನಾವು ಭೂಲೋಕದಲ್ಲಿ ಕಟ್ಟಲು ಮತ್ತು ಬಿಚ್ಚಲು ವಾಕ್ಯಗಳನ್ನು ಮಾತನಾಡುತ್ತೇವೆ. ನಮ್ಮ ಮಾತುಗಳು ಸ್ವರ್ಗದಲ್ಲಿ ಕೇಳುತ್ತವೆ! ನಮ್ಮ ಮಾತುಗಳಿಗೆ ಪ್ರತಿಕ್ರಿಯೆಯಾಗಿ ದೂತರನ್ನು ಕಳುಹಿಸಲಾಗುತ್ತದೆ.

ನಿಮ್ಮ ಮಾತುಗಳು ಸ್ವರ್ಗದಲ್ಲಿ ಕೇಳಿಬರುತ್ತವೆ ಎಂದು ತಿಳಿದಾಗಿನಿಂದ ನೀವು ಯಾವ ಮಾತುಗಳನ್ನು ಮಾತನಾಡುತ್ತೀರಿ? ಸ್ವರ್ಗದಲ್ಲಿ, ದೇವರ ವಾಕ್ಯವು ಮೇಲುಗೈ ಸಾಧಿಸುತ್ತದೆ. *"ಯೆಹೋವನೇ, ನಿನ್ನ ವಾಕ್ಯವು ಪರಲೋಕದಲ್ಲಿ ಶಾಶ್ವತವಾಗಿ ಸ್ಥಾಪಿಸಲ್ಪಟ್ಟದೆ"* (ಕೀರ್ತನೆಗಳು 119:89). ನಾವು ಪ್ರಾರ್ಥನೆಯಲ್ಲಿ, ನಂಬಿಕೆಯಲ್ಲಿ, ಯುದ್ಧದಲ್ಲಿ, ಸೇವೆಯಲ್ಲಿ, ಅಧಿಕಾರವನ್ನು

ಚಲಾಯಿಸುವಲ್ಲಿ-ಎಲ್ಲಾ ಸಂದರ್ಭಗಳಲ್ಲಿ ಮಾತನಾಡುವ ಮಾತುಗಳು ಈಗಾಗಲೇ ಪರಲೋಕದಲ್ಲಿ ಸ್ಥಾಪಿಸಲಾದ ದೇವರ ವಾಕ್ಯಕ್ಕೆ ಜೋಡಿಸಲಾದ ಮಾತುಗಳಾಗಿರಬೇಕು. ನೆನಪಿಡಿ, ನಿಮ್ಮ ಮಾತುಗಳು ಪರಲೋಕದಲ್ಲಿ ಕೇಳಿಬರುತ್ತವೆ. ಯಾವಾಗಲೂ ಪರಲೋಕಕ್ಕೆ ಅನುಗುಣವಾಗಿ ಮಾತನಾಡಿ, ಮತ್ತು ಪರಲೋಕವು ನಿಮ್ಮ ಪರವಾಗಿ ಚಲಿಸುತ್ತದೆ.

# 29

# ಮಾತುಗಳು ಆತ್ಮಿಕದಿಂದ ಸ್ವಭಾವಿಕಕ್ಕೆ ರವಾನೆಯಾಗುತ್ತವೆ

**ದಾನಿಯೇಲ 10:17–19**

**17 ಏನ್ನೊಡೆಯನ ಸೇವಕನಾದ ನನ್ನಂಥವನು ಎನ್ನೋಡೆಯನಾದ ನಿನ್ನಂಥವನ ಸಂಗಡ ಹೇಗೆ ಮಾತಾಡಬಹುದು? ಈಗಿನಿಂದ ಶಕ್ತಿಯನ್ನೆಲ್ಲಾ ಕಳಕೊಂಡವನಾಗಿದ್ದೇನೆ , ನನ್ನಲ್ಲಿ ಉಸುರೇ ಇಲ್ಲ ಎಂದು ಹೇಳಿದೆನು .**

**18 ಮನುಷ್ಯಸದೃಶ್ಯನು ಪುನಃ ನನ್ನನ್ನು ಮುಟ್ಟಿ ಬಲಪಡಿಸಿದನು.**

**19 ಆಮೇಲೆ ಆ ಪುರುಷನು ನನಗೆ - ಅತಿಪ್ರಿಯನೇ, ಭಯಪಡಬೇಡ; ನಿನಗೆ ಸಮಾಧಾನವಿರಲಿ, ಬಲಗೊಳ್ಳು, ಬಲಗೊಳ್ಳು ಎಂದು ಹೇಳಿದನು. ಅವನು ಆ ಮಾತನ್ನು ಹೇಳಿದ ಕೂಡಲೆ ನಾನು ಬಲಗೊಂಡು – ಏನ್ನೊಡೆಯಾನೇ, ಮಾತಾಡು; ನನ್ನನ್ನು ಬಲಗೊಳಿಸಿದ್ಧೀ ಎಂದರಿಕೆಮಾಡಲು.**

ದಾನಿಯೇಲ ಈ ದೇವದೂತರ ಭೇಟಿಯನ್ನು ಹೊಂದಿದ್ದರಿಂದ, ಅವನು ಚಿತ್ತಸ್ಥೈರ್ಯವು ಕುಂದಿದವನಾಗಿ, ದುರ್ಬಲ, ಶಕ್ತಿಹೀನ ಮತ್ತು ಬಹುಶಃ ಭಯಭೀತನಾಗಿದ್ದನು. ದೇವದೂತನು ಅವನನ್ನು ಮುಟ್ಟಿದನು ಮತ್ತು ಅವನಿಗೆ ಮಾತುಗಳನ್ನು ಹೇಳಿದನು: *"ಭಯಪಡಬೇಡ, ಸಮಾಧಾನ, ಬಲವಾಗಿರು."* ಮತ್ತು ದಾನಿಯೇಲನು ಬಲಗೊಂಡನು. ದೇವದೂತನು ದಾನಿಯೇಲನಿಗೆ ಹೇಳಿದ ಮಾತುಗಳು ದಾನಿಯೇಲನಿಗೆ ಶಾಂತಿ ಮತ್ತು ಶಕ್ತಿಯನ್ನು ತಂದುಕೊಟ್ಟವು. ಮಾತುಗಳು ಆತ್ಮಿಕ ಕ್ಷೇತ್ರ ಮತ್ತು ಸ್ವಾಭಾವಿಕ ಕ್ಷೇತ್ರವನ್ನು ಸಂಪರ್ಕಿಸುತ್ತವೆ. ಮಾತುಗಳು ಆತ್ಮಿಕ ಕ್ಷೇತ್ರದಿಂದ ಸ್ವಾಭಾವಿಕ ಕ್ಷೇತ್ರಕ್ಕೆ ಹರಡುತ್ತವೆ.

ಜನರಂತೆ, ನಾವು ಸ್ವಾಭಾವಿಕ ಮತ್ತು ಆತ್ಮಿಕ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಲು ಸಾಧ್ಯವಾಗುವಂತೆ ದೇವರಿಂದ ವಿನ್ಯಾಸಗೊಳಿಸಲ್ಪಟ್ಟಿದ್ದೇವೆ. ವಿಶ್ವಾಸಿಗಳಾಗಿ, ನಾವು ಆತ್ಮಿಕ ಕ್ಷೇತ್ರದಲ್ಲಿ ಯೇಸು ಕ್ರಿಸ್ತನಲ್ಲಿ ದೇವರ ಬಲಗಡೆಯಲ್ಲಿ ನಮ್ಮ ಆಸನವನ್ನು ಹೊಂದಿದ್ದೇವೆ. ನಾವು ಕ್ರಿಸ್ತನಲ್ಲಿದ್ದೇವೆ. ನಾವು ದೇವರ ಉತ್ತರಾಧಿಕಾರಿಗಳು ಮತ್ತು ಯೇಸುವಿನೊಂದಿಗೆ ಜಂಟಿ ಉತ್ತರಾಧಿಕಾರಿಗಳು. ಆತ್ಮಿಕ ಕ್ಷೇತ್ರದಲ್ಲಿ ನಾವು ಈ ರೀತಿಯಾಗಿ ಇದ್ದೇವೆ.

ಆತ್ಮಿಕ ಕ್ಷೇತ್ರದಲ್ಲಿ ದೇವರು ನಮಗೆ ಕೊಟ್ಟದ್ದನ್ನು ತೆಗೆದುಕೊಳ್ಳಲು ಮತ್ತು ಸ್ವಾಭಾವಿಕ ಕ್ಷೇತ್ರದಲ್ಲಿ ಯಾರಿಗಾದರೂ ಅದನ್ನು ನಿರ್ವಹಿಸಲು ನಮ್ಮ ಮಾತುಗಳು ನಮಗೆ ಸಹಾಯ ಮಾಡುತ್ತವೆ.

ಉದಾಹರಣೆಗೆ, ನಾವು ರೋಗಿಗಳಿಗೆ ಸೇವೆ ಸಲ್ಲಿಸುವಾಗ ಮತ್ತು ಗುಣಪಡಿಸುವಿಕೆಯನ್ನು ಆಜ್ಞಾಪಿಸುವಾಗ, ಅಲೌಕಿಕ ಗುಣಪಡಿಸುವಿಕೆಯನ್ನು ತರಲು ಸ್ವಾಭಾವಿಕವಾಗಿ ನಮ್ಮದೇನಾದರೂ ಇದೆಯೇ? ಖಂಡಿತವಾಗಿಯೂ ಏನೂ ಇಲ್ಲ. ನಾವು ಮಾಡುತ್ತಿರುವುದು ಯೇಸುಕ್ರಿಸ್ತನ ಮುಗಿದ ಕೆಲಸವನ್ನು ತೆಗೆದುಕೊಳ್ಳುವುದು, ಆತ್ಮಿಕ ಕ್ಷೇತ್ರದಲ್ಲಿ ನಮಗಿರುವ ಅಭಿಷೇಕ ಮತ್ತು ಅಧಿಕಾರವನ್ನು ತೆಗೆದುಕೊಳ್ಳುವುದು ಮತ್ತು ಅವರ ಭೌತಿಕ ದೇಹವನ್ನು ಗುಣಪಡಿಸಲು ವ್ಯಕ್ತಿಗೆ ಅದನ್ನು ನಿರ್ವಹಿಸುವುದು. ನಮ್ಮ ಮಾತುಗಳು ಆತ್ಮಿಕ ಕ್ಷೇತ್ರವನ್ನು ಸ್ವಾಭಾವಿಕ ಕ್ಷೇತ್ರಕ್ಕೆ ಸಂಪರ್ಕಿಸುತ್ತವೆ. ನಾವು ದೇವರ ವಾಕ್ಯದ ಆಧಾರದ ಮೇಲೆ ಮಾತನಾಡುವಾಗ, ನಾವು ಆತ್ಮಿಕವಾಗಿ ನಮ್ಮದನ್ನು ತೆಗೆದುಕೊಳ್ಳಬಹುದು ಮತ್ತು ಅದನ್ನು ಸ್ವಾಭಾವಿಕವಾಗಿ ಬಿಡುಗಡೆ ಮಾಡಬಹುದು. ಆತನ ರಾಜ್ಯವು ಬರುವುದನ್ನು ನೋಡಲು ನಾವು ಇಲ್ಲಿದ್ದೇವೆ, ಆತನ ಚಿತ್ತವು ಪರಲೋಕದಲ್ಲಿ ನೆರವೇರುವಂತೆ ಭೂಲೋಕದಲ್ಲಿಯೂ ನೆರವೇರುತ್ತದೆ. ನಾವು ಇದನ್ನು ಮಾಡುವ ಒಂದು ಮಾರ್ಗವೆಂದರೆ ಆತನ ವಾಕ್ಯಕ್ಕೆ ಅನುಗುಣವಾಗಿ ಮಾತನಾಡುವುದು, ಇದರಿಂದ ಆತನು ಆತ್ಮಿಕವಾಗಿ ನಮಗೆ ಕೊಟ್ಟದ್ದನ್ನು ಇಲ್ಲಿ ಸ್ವಾಭಾವಿಕವಾಗಿ ಬಿಡುಗಡೆ ಮಾಡಲಾಗುತ್ತದೆ.

# 30

# ನಾನು ಬಲಶಾಲಿ ಎಂದು ದುರ್ಬಲರು ಹೇಳಲಿ

**ಯೋವೇಲ 3:9,10**

**[9] ಜನಾಂಗಗಳಲ್ಲಿ ಹೀಗೆ ಪ್ರಕಟಿಸಿರಿ [ಜನಾಂಗಗಳೇ] ಸನ್ನದ್ಧರಾಗಿರಿ, ಶೂರರನ್ನು ಎಚ್ಚರಪಡಿಸಿರಿ, ಯೋಧರೆಲ್ಲರೂ ಕೂಡಲಿ, ಯುದ್ಧಕ್ಕೆ ಹೊರಡಲಿ.**

**[10] ನಿಮ್ಮ ಗುಳಗಳನ್ನು ಕುಲುಮೆಗೆ ಹಾಕಿ ಕತ್ತಿಗಳನ್ನಾಗಿಯೂ ಕುಡುಗೋಲುಗಳನ್ನು ಬರ್ಜಿಗಳನ್ನಾಗಿಯೂ ಮಾಡಿರಿ; ದುರ್ಬಲನೂ ಶೂರನೆಂದುಕೊಳ್ಳಲಿ.**

ಯೋವೇಲ ಅಧ್ಯಾಯ 3 ಯೆಹೋಷಾಫಾಟ್ ಕಣಿವೆಯಲ್ಲಿ ಅರ್ಮಗೆದ್ದೋನ್ ಯುದ್ಧ ಮತ್ತು ಕರ್ತನ ದಿನದ ಬಗ್ಗೆ ಪ್ರವಾದನೆಯಾಗಿದೆ. ರಾಷ್ಟ್ರಗಳನ್ನು ಯುದ್ಧಕ್ಕೆ ಸಜ್ಜುಗೊಳಿಸಲಾಗುತ್ತಿದೆ. ಯೋವೇಲ ಶಾಂತಿಯುತ ಉಪಕರಣಗಳನ್ನು (ನೇಗಿಲು ಮತ್ತು ಸಮರುವಿಕೆಯ ಕೊಕ್ಕೆಗಳು) ಯುದ್ಧದ ಆಯುಧಗಳಾಗಿ (ಕತ್ತಿಗಳು ಮತ್ತು ಈಟಿಗಳು) ಪರಿವರ್ತಿಸುವುದನ್ನು ವಿವರಿಸುತ್ತಾನೆ. ಈ ಪ್ರಕ್ರಿಯೆಯಲ್ಲಿ ಒಂದು ಸ್ವಾರಸ್ಯಕರವಾದ ಹೇಳಿಕೆಯಿದೆ–*"ದುರ್ಬಲನೂ ಶೂರನೆಂದುಕೊಳ್ಳಲಿ."* ದುರ್ಬಲರು "ನಾನು ದುರ್ಬಲ" ಎಂದು ಹೇಳಬಾರದು. ದುರ್ಬಲರು "ನಾನು ಬಲಶಾಲಿ" ಎಂದು ಹೇಳಬೇಕು. ದುರ್ಬಲರು "ನಾನು ಬಲಶಾಲಿ" ಎಂದು ಹೇಳುವ ಮೂಲಕ ಬಲಶಾಲಿಯಾಗಬಹುದು ಮತ್ತು ಯುದ್ಧಕ್ಕೆ ಮುಂದುವರಿಯಬಹುದು ಎಂಬುದು ಇಲ್ಲಿನ ತಾತ್ಪರ್ಯ.

ಈ ಸಮಯದಲ್ಲಿ ನಮಗೆ ಅನಿಸದಿದ್ದರೂ ಸಹ ಇದೇ ರೀತಿಯಲ್ಲಿ ದೇವರು ತನ್ನ ವಾಕ್ಯದಲ್ಲಿ ನಮಗಾಗಿ ಘೋಷಿಸಿರುವುದನ್ನು ನಾವು ದೃಢೀಕರಿಸುವುದು ಸರಿಯೇ?

ಪಾಪದ ವಿರುದ್ಧ ಹೋರಾಡುತ್ತಿರುವವರು "ಪಾಪವು ನನ್ನ ಮೇಲೆ ಪ್ರಭುತ್ವ ನಡೆಸುವುದಿಲ್ಲ" ಎಂದು ಹೇಳುವುದು ಸರಿಯೇ? ಖಂಡಿತವಾಗಿ!

ಪಾಪ ಮತ್ತು ಶೋಧನೆಯನ್ನು ಎದುರಿಸುತ್ತಿರುವವರು (ಅಂದರೆ

ನಾವೆಲ್ಲರೂ) ಹೇಳಲಿ, "ನನ್ನ ಹಳೆಯ ಪಾಪಪೂರ್ಣ ಸ್ವಭಾವವು ಕ್ರಿಸ್ತನೊಂದಿಗೆ ಶಿಲುಬೆಗೇರಿಸಲ್ಪಟ್ಟಿದೆ ಮತ್ತು ನನ್ನ ಜೀವನದ ಮೇಲಿನ ಪಾಪದ ಶಕ್ತಿಯು ಮುರಿದುಹೋಗಿದೆ. ಪಾಪವು ನನ್ನ ಮೇಲೆ ಪ್ರಭುತ್ವ ನಡೆಸುವುದಿಲ್ಲ."

ರೋಗಿಯು ಗುಣಮುಖನಾಗಲು, "ನಾನು ಯೇಸುವಿನ ಬಾಸುಂಡೆಗಳಿಂದ ಗುಣಮುಖನಾಗಿದ್ದೇನೆ" ಎಂದು ಹೇಳುವುದು ಸರಿಯೇ? ಖಂಡಿತವಾಗಿ!

ಅಸ್ವಸ್ಥರು ಹೇಳಲಿ, "ಯೇಸುವೇ ನನ್ನ ರೋಗಗಳನ್ನು ತೆಗೆದುಕೊಂಡನು ಮತ್ತು ನನ್ನ ಬೇನೆಗಳನ್ನು ಹೊತ್ತುಕೊಂಡನು ಮತ್ತು ಆತನ ಬಾಸುಂಡೆಗಳಿಂದ ನಾನು ಗುಣವಾಗಿದ್ದೇನೆ."

ಅಗತ್ಯವಿರುವವರು ತಮ್ಮ ಅಗತ್ಯಗಳನ್ನು ಪೂರೈಸಲು "ನನ್ನ ಎಲ್ಲಾ ಅಗತ್ಯಗಳನ್ನು ನನ್ನ ದೇವರು ಪೂರೈಸುತ್ತಾನೆ" ಎಂದು ಹೇಳುವುದು ಸರಿಯೇ? ಖಂಡಿತವಾಗಿ!

ಅಗತ್ಯವಿರುವವರು ಹೇಳಲಿ, "ಕರ್ತನು ನನ್ನ ಕುರುಬನು; ನಾನು ಕೊರತೆ ಪಡೆನು. ನನ್ನ ದೇವರು ಯೇಸು ಕ್ರಿಸ್ತನ ಮೂಲಕ ಮಹಿಮೆಯಲ್ಲಿ ತನ್ನ ಐಶ್ವರ್ಯಕ್ಕೆ ತಕ್ಕಂತೆ ನನ್ನ ಎಲ್ಲಾ ಅಗತ್ಯಗಳನ್ನು ಪೂರೈಸುತ್ತಾನೆ."

ಶಕ್ತಿಹೀನರೆಂದು ಭಾವಿಸುವವರು, "ನಿಜವಾಗಿಯೂ ನಾನು ಶಕ್ತಿಯಿಂದ ತುಂಬಿದ್ದೇನೆ ಏಕೆಂದರೆ ಪವಿತ್ರಾತ್ಮನು ನನ್ನ ಮೇಲೆ ಬಂದಿದ್ದಾನೆ " ಎಂದು ಹೇಳುವುದು ಸರಿಯೇ? ಖಂಡಿತವಾಗಿ!

"ಪವಿತ್ರಾತ್ಮನು ನನ್ನ ಮೇಲೆ ಬಂದ ನಂತರ ನಾನು ಶಕ್ತಿಯನ್ನು ಪಡೆದುಕೊಂಡಿದ್ದೇನೆ ಮತ್ತು ಬಡವರಿಗೆ ಸುವಾರ್ತೆಯನ್ನು ಬೋಧಿಸಲು, ಮುರಿದ ಹೃದಯವನ್ನು ಗುಣಪಡಿಸಲು, ಸೆರೆಯಾಳುಗಳಿಗೆ ವಿಮೋಚನೆಯನ್ನು ಘೋಷಿಸಲು ನಾನು ಅಭಿಷೇಕಿಸಲ್ಪಟ್ಟಿದ್ದೇನೆ" ಎಂದು ಹೇಳೋಣ.

ನೀವು ನಿಖರವಾಗಿ ವಿರುದ್ಧವಾಗಿ ಭಾವಿಸಿದರೂ ಸಹ, ದೇವರ ವಾಕ್ಯವು ನಿಮ್ಮ ಬಗ್ಗೆ ಏನು ಹೇಳುತ್ತದೆ ಎಂಬುದನ್ನು ದೃಢೀಕರಿಸಿ. ದೇವರ ವಾಕ್ಯವು ಸತ್ಯವಾಗಿದೆ. ಸಂಗತಿಗಳು ಬದಲಾಗಬಹುದು. ದೇವರ ಸತ್ಯವು

ಶಾಶ್ವತವಾಗಿದೆ ಮತ್ತು ಬದಲಾಗುವುದಿಲ್ಲ. ನೀವು ಎದುರಿಸುತ್ತಿರುವ ಸಂಗತಿಗಳನ್ನು ದೇವರ ವಾಕ್ಯದ ಸತ್ಯಕ್ಕೆ ಹೊಂದಿಸಲು ಬದಲಾಯಿಸಬಹುದು. ದುರ್ಬಲರು "ನಾನು ಬಲಶಾಲಿ" ಎಂದು ಹೇಳಲಿ ಮತ್ತು ಆದ್ದರಿಂದ ಬಲಶಾಲಿಯಾಗಲಿ.

# 31
# ನಿಮ್ಮ ಮಾತುಗಳಿಂದ ದೇವರ ಮನಸ್ಸು ನೋಯಿಸ ಬೇಡಿರಿ

**ಮಲಾಕಿ 3:13-16**

13 ನೀವು ನನಗೆ ವಿರುದ್ಧವಾಗಿ ಆಡಿದ ಮಾತುಗಳು ಬಹು ಕಠಿನ ಎಂದು ಯೆಹೋವನು
ಅನ್ನುತ್ತಾನೆ. ನಿನಗೆ ವಿರುದ್ಧವಾಗಿ ಏನು ಮಾತಾಡಿದ್ದೇವೆ ಅನುತ್ತೀರಾ
14 ನೀವು – ದೇವರನ್ನು ಸೇವಿಸುವದು ವ್ಯರ್ಥ; ನಾವು ಆತನ ನಿಯಮವನ್ನು ಅನುಸರಿಸಿ
ಸೇನಾಧಿಶ್ವರ ಯೆಹೋವನ ಮುಂದೆ ದುಃಖದಿಂದ ವಿಕಾರಿಗಳಾಗಿ ನಡೆದುಕೊಂಡದರಿಂದ ಆದ
ಲಾಭವೇನು;
15 ಈಗ ಅಹಂಕಾರಿಗಳನ್ನು ಧನ್ಯರೆಂದು ಕೊಂಡಾಡಬೇಕಾಗಿ ಬಂತು; ಹೌದು, ದುಷ್ಕರ್ಮಿಗಳು
ಏಳಿಗೆಗೆ ಬಂದಿದ್ದಾರೆ, ದೇವರನ್ನು ಪರೀಕ್ಷಿಸಿದರೂ ಸುರಕ್ಷಿತರಾಗಿದ್ದಾರೆ ಅಂದುಕೊಂಡಿದ್ದೀರಲ್ಲಾ.
16 ಇಂಥ ಮಾತುಗಳನ್ನು ಕೇಳಿ ಯೆಹೋವನ ಭಕ್ತರು ಒಬ್ಬರಿಗೊಬ್ಬರು ಮಾತಾಡಿಕೊಳ್ಳಲು
ಯೆಹೋವನು ಕಿವಿಗೊಟ್ಟು ಆಲಿಸಿ ಭಯಭಕ್ತಿಯಿಂದ ತನ್ನ ನಾಮಸ್ಮರಣೆ ಮಾಡುವವರ
ಹೆಸರುಗಳನ್ನು ತನ್ನ ಮುಂದೆ ಜ್ಞಾಪಕದ ಪುಸ್ತಕದಲ್ಲಿ ಬರೆಯಿಸಿದನು.

ದೇವರು ತನ್ನ ಜನರು ಮಾತನಾಡುವ ಮಾತುಗಳು ಮತ್ತು ಅವರು ಹೇಳಿದ ಸಂಗತಿಗಳಿಂದ ನೊಂದುಕೊಳ್ಳುತ್ತಾನೆ ಎಂದು ಕಲ್ಪಿಸಿಕೊಳ್ಳಿ. ದೇವರು ನಮ್ಮ ಮಾತುಗಳನ್ನು ಕೇಳುತ್ತಾನೆ. 16 ನೇ ವಚನವು ನಮಗೆ, ದೇವರನ್ನು ಗೌರವಿಸುವ ಮತ್ತು ಆತನ ಹೆಸರನ್ನು ಧ್ಯಾನಿಸುವವರನ್ನು ದಾಖಲಿಸಲು ಜ್ಞಾಪಕ ಪುಸ್ತಕದಲ್ಲಿ ಬರೆಯಲಾಗಿದೆ ಎಂದು ತಿಳಿಸುತ್ತದೆ.

ನಾವು ಹೇಳುವ ಮಾತುಗಳನ್ನು ದೇವರು ಕೇಳುತ್ತಾನೆ. ನೀವು ಮಾತನಾಡುವುದನ್ನು ಕೇಳಿದಾಗ ದೇವರು ಹೇಗೆ ಭಾವಿಸಬೇಕೆಂದು ನೀವು ಬಯಸುತ್ತೀರಿ? ಖಂಡಿತವಾಗಿಯೂ, ನಮ್ಮ ಮಾತುಗಳಿಂದ ದೇವರನ್ನು ನೋಯಿಸಲು ಅಥವಾ ನೊಂದಿಸಲು ನಾವು ಬಯಸುವುದಿಲ್ಲ.

ನಾವು ಮಾತನಾಡುವುದು ನಮ್ಮ ದೇವರನ್ನು ಮಹಿಮೆಪಡಿಸುತ್ತದೆ ಮತ್ತು ವರ್ಣಿಸುತ್ತದೆ ಮತ್ತು ಆತನ ಹೃದಯವನ್ನು ಸಂತೋಷಪಡಿಸುತ್ತದೆ ಎಂದು ನಾವು ಹೇಗೆ ಖಚಿತಪಡಿಸಿಕೊಳ್ಳಬಹುದು? ನಾವು ಆತನ

ಮಾತುಗಳಿಗೆ ಅನುಗುಣವಾಗಿರುವುದನ್ನು ಮಾತನಾಡುವಾಗ ಮತ್ತು ಆತನ ಕಣ್ಣುಗಳ ಮುಂದೆ ಇರುತ್ತದೆ.

ನಿಮ್ಮ ಮಾತುಗಳು ದೇವರ ಮನಸ್ಸನ್ನು ನೋಯಿಸಲು ಬಿಡಬೇಡಿ. ದೇವರು ಹೇಳಿದ್ದನ್ನು ಹೇಳಿರಿ. ಪ್ರತಿಯೊಂದು ಸನ್ನಿವೇಶದಲ್ಲೂ ಆತನ ವಾಕ್ಯವನ್ನು ಮಾತನಾಡಿ. ಪ್ರತಿಯೊಂದು ಸನ್ನಿವೇಶದಲ್ಲೂ ನೀವು ಆತನನ್ನು ಮತ್ತು ಆತನ ವಾಕ್ಯವನ್ನು ಗೌರವಿಸುತ್ತೀರಿ ಎಂದು ಆತನಿಗೆ ತಿಳಿಸಿ.

# 32

# “ಅದನ್ನು ಬರೆಯಲಾಗಿದೆ” ಎಂದು ಹೇಳಲು ಕಲಿಯಿರಿ–ಯೇಸು ಹಾಗೆ ಮಾಡಿದ

**ಮತ್ತಾಯ 4:1–4**

**1 ಆಗ ಯೇಸು ಸೈತಾನನಿಂದ ಶೋಧಿಸಲ್ಪಡುವದಕ್ಕಾಗಿ ಆತ್ಮನು ಆತನನ್ನು ಅಡವಿಗೆ ಒಯ್ದನು.**
**2 ಆತನು ನಾಲ್ವತ್ತು ದಿವಸ ಹಗಲಿರುಳು ಉಪವಾಸವಿದ್ದ ತರುವಾಯ ಆತನಿಗೆ ಹಸಿವಾಯಿತು.**
**3 ಆಗ ಆ ಶೋಧಕನು ಆತನ ಬಳಿಗೆ ಬಂದು – ನೀನು ದೇವರ ಮಗನಾಗಿದ್ದರೆ ಈ ಕಲ್ಲುಗಳು ರೊಟ್ಟಿಯಾಗುವಂತೆ ಅಪ್ಪಣೆಕೊಡು ಎಂದು ಹೇಳಲು ಆತನು –**
**4 ಮನುಷ್ಯನು ರೊಟ್ಟಿತಿಂದ ಮಾತ್ರದಿಂದ ಬದುಕುವದಿಲ್ಲ, ದೇವರ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದಲೂ ಬದುಕುವನು ಎಂದು ಬರೆದದೆ ಅಂದನು.**

ಕರ್ತನಾದ ಯೇಸು ನಾವು ಎಲ್ಲದರಲ್ಲೂ ಅನುಕರಿಸುವ ಮತ್ತು ಅನುಸರಿಸುವ ನಮ್ಮ ಪರಿಪೂರ್ಣ ಉದಾಹರಣೆಯಾಗಿದ್ದಾನೆ. ಯೇಸು ಅರಣ್ಯದಲ್ಲಿ ಎದುರಿಸಿದ ಮೂರು ಶೋಧನೆಗಳನ್ನು ನಾವು ನಮಗಾಗಿ ದಾಖಲಿಸಿದ್ದೇವೆ. ಇವುಗಳು ಆತನು ಎದುರಿಸಿದ ಶೋಧನೆಗಳಷ್ಟೇ ಅಲ್ಲ. ಆತನು ನಮ್ಮಂತೆಯೇ ಎಲ್ಲಾ ಹಂತಗಳಲ್ಲಿ (ಪ್ರತಿ ವಿಷಯಗಳಲ್ಲಿ, ಎಲ್ಲಾ ರೀತಿಯಲ್ಲಿ) ಶೋಧನೆಗೆ ಒಳಗಾದನು ಮತ್ತು ಆತನು ಪಾಪವನ್ನು ಮಾತ್ರ ಮಾಡಲಿಲ್ಲ (ಇಬ್ರಿಯ 4:15). ಈ ಎಲ್ಲಾ ಶೋಧನೆಗಳ ದಾಖಲಾತಿ ನಮಲ್ಲಿಲ್ಲ. ಆದಾಗ್ಯೂ, ಮತ್ತಾಯ 4 ರಲ್ಲಿ ದಾಖಲಿಸಲಾದ ಮೂರು ಶೋಧನೆಗಳಲ್ಲಿ, ಪ್ರತಿ ಬಾರಿಯೂ ಕರ್ತನಾದ ಯೇಸು ವಾಕ್ಯವನ್ನು ಮಾತನಾಡುವ ಮೂಲಕ ಶೋಧನೆಗೆ ಪ್ರತಿಕ್ರಿಯಿಸುವುದನ್ನು ನಾವು ಗಮನಿಸುತ್ತೇವೆ. ಆತನು ಪ್ರತಿ ಬಾರಿಯೂ “ಎಂದು ಬರೆದದೆ” ಎಂದು ಹೇಳಿದನು. ಆದ್ದರಿಂದ, ಆತನು ಪ್ರತಿಯೊಂದು ಶೋಧನೆಯನ್ನು ಇದೇ ರೀತಿಯಲ್ಲಿ ವಾಕ್ಯ ಮಾತನಾಡುವ ಮೂಲಕ ವ್ಯವಹರಿಸಿದ್ದಾನೆ ಎಂದು ನಾವು ಖಚಿತವಾಗಿರಬಹುದು.

ಪ್ರತಿ ಶೋಧನೆಯಲ್ಲಿ, ಪ್ರತಿ ಸನ್ನಿವೇಶದಲ್ಲಿ, “ಎಂದು ಬರೆದದೆ” ಎಂದು ಹೇಳಲು ಕಲಿಯಿರಿ. ದೇವರು ಹೇಳಿದ್ದನ್ನು ಹೇಳಿರಿ. ನಿಮಗೆ ಸವಾಲು ಹಾಕುವ

ಶೋಧನೆಗಳು ಮತ್ತು ಸಂದರ್ಭಗಳನ್ನು ಜಯಿಸಲು ವಾಕ್ಯವನ್ನು ಮಾತನಾಡಿ. ಶೋಧನೆಯನ್ನು ಎದುರಿಸುವಾಗ, "ನನ್ನ ದೇಹವು ನನ್ನಲ್ಲಿ ವಾಸಿಸುವ ಪವಿತ್ರ ಆತ್ಮನ ದೇವಾಲಯವಾಗಿದೆ ಎಂದು ಬರೆಯಲಾಗಿದೆ. ಪಾಪವು ನನ್ನ ಮೇಲೆ ಆಳ್ವಿಕೆ ನಡೆಸುವುದಿಲ್ಲ ಎಂದು ಬರೆಯಲಾಗಿದೆ; ನಾನು ನನ್ನ ದೇಹವನ್ನು ನೀತಿಯ ಸಾಧನವಾಗಿ ಕೊಡುತ್ತೇನೆ." ದುಸ್ತರ ಸವಾಲುಗಳಿರುವಂತೆ ತೋರುವ ಸನ್ನಿವೇಶವನ್ನು ಎದುರಿಸುವಾಗ, "ನಾನು ದೇವರಿಂದ ಹುಟ್ಟಿದ್ದೇನೆ ಮತ್ತು ನಾನು ಈ ಜಗತ್ತನ್ನು ಜಯಿಸುತ್ತೇನೆ ಎಂದು ಬರೆಯಲಾಗಿದೆ. ಇದು ಜಗತ್ತನ್ನು ಗೆಲ್ಲುವ ವಿಜಯವಾಗಿದೆ, ನನ್ನ ನಂಬಿಕೆಯೂ ಸಹ. ದೇವರು ಯಾವಾಗಲೂ ನನಗೆ ವಿಜಯವನ್ನು ನೀಡುತ್ತಾನೆ. ಈ ಪರಿಸ್ಥಿತಿಯಲ್ಲಿಯೂ ನಾನು ಜಯಶಾಲಿಯಾಗುತ್ತೇನೆ." "ಎಂದು ಬರೆದದೆ" ಎಂದು ಹೇಳಲು ಕಲಿಯಿರಿ. ಯೇಸು ಹಾಗೆ ಮಾಡಿದನು. ಪ್ರತಿಯೊಂದು ಸಂದರ್ಭದಲ್ಲೂ ದೇವರ ವಾಕ್ಯವನ್ನು ಮಾತನಾಡಿ.

# 33
# ಮಾತಿನಿಂದ ಆತ್ಮಗಳನ್ನು ಹೊರಹಾಕಿ

**ಮತ್ತಾಯ 8:16**
**ಸಂಜೆಯಾಗಲು ದೆವ್ವಹಿಡಿದ ಬಹಳ ಜನರನ್ನು ಆತನ ಬಳಿಗೆ ಕರತಂದರು; ಆತನು ಮಾತು ಮಾತ್ರದಿಂದಲೇ ದೆವ್ವಗಳನ್ನು ಬಿಡಿಸಿದ್ದಲ್ಲದೆ ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನು ವಾಸಿಮಾಡಿದನು.**

ನಾವು ಸುವಾರ್ತೆಗಳ ಮೂಲಕ ಯೇಸುವಿನ ಸೇವೆಯನ್ನು ಅನುಸರಿಸುವಾಗ, ಆತನು ದುಷ್ಟಶಕ್ತಿಗಳೊಂದಿಗೆ ಹೇಗೆ ವ್ಯವಹರಿಸಿದನು ಎಂಬುದನ್ನು ನಾವು ಕಲಿಯುತ್ತೇವೆ. ಆತನು ಆಜ್ಞೆಯ ವಾಕ್ಯವನ್ನು ಹೇಳುವ ಮೂಲಕ ದೆವ್ವಗಳ ಮೇಲೆ ಅಧಿಕಾರ ಮತ್ತು ಪ್ರಭುತ್ವವನ್ನು ಚಲಾಯಿಸಿದನು. ಮತ್ತಾಯನು, ಆತನು ಒಂದು ಮಾತಿನಿಂದ ಆತ್ಮಗಳನ್ನು ಹೊರಹಾಕಿದನು ಎಂದು ಇಲ್ಲಿ ದಾಖಲಿಸಿದ್ದಾನೆ. ಆತನು ಕೇವಲ ಆಜ್ಞೆಯ ಮಾತನ್ನು ಮಾತನಾಡಿದನು.

ಯೇಸುವಿನ ಮಾದರಿಯನ್ನು ಅನುಸರಿಸೋಣ. ನಮ್ಮ ಮಾತುಗಳು ಕ್ರಿಸ್ತನಲ್ಲಿ ನಮಗೆ ನೀಡಲಾದ ಅಧಿಕಾರ ಮತ್ತು ಪ್ರಭುತ್ವದ ಅಭಿವ್ಯಕ್ತಿಯಾಗಿದೆ. ಆತನ ಹೆಸರನ್ನು ಬಳಸುವ ಹಕ್ಕಿನ ಮೂಲಕ ನಮಗೆ ನಿಯೋಜಿಸಲಾದ ಅಧಿಕಾರವನ್ನು ನಾವು ಹೊಂದಿದ್ದೇವೆ. ನಾವು ಆತನ ಅಧಿಕಾರದಲ್ಲಿ ನಡೆಯುತ್ತೇವೆ. ನಾವು ದೆವ್ವದ ಶಕ್ತಿಗಳನ್ನು ಎದುರಿಸಬೇಕಾದಾಗ, ಅಧಿಕಾರದ ಮಾತುಗಳನ್ನು ಮಾತನಾಡುವ ಮೂಲಕ ನಾವು ಹಾಗೆ ಮಾಡುತ್ತೇವೆ. ನಾವು ಆಜ್ಞೆಯ ಮಾತಿನಿಂದ ಆತ್ಮಗಳನ್ನು ಹೊರಹಾಕುತ್ತೇವೆ.

ಅಧಿಕಾರದ ಮಾತುಗಳನ್ನು ಮಾತನಾಡಲು ಕಲಿಯಿರಿ. ನೀವು ಇದನ್ನು ನಿಮಗಾಗಿ ಹಾಗೂ ನೀವು ಇತರರಿಗೆ ಸೇವೆ ಮಾಡುವಾಗ ಇದನ್ನು ಮಾಡಿರಿ. ಭಯದ ಆಲೋಚನೆಗಳು ಎದುರಾದಾಗ, ಹೇಳಲು ಕಲಿಯಿರಿ: “ಯೇಸುವಿನ ಹೆಸರಿನಲ್ಲಿ, ಭಯದ ಮನೋಭಾವವನ್ನು ಈಗ ತೊರೆಯಲು ನಾನು ಆಜ್ಞಾಪಿಸುತ್ತೇನೆ. ಯೇಸುವಿನ ಹೆಸರಿನಲ್ಲಿ ಭಯದ ಆಲೋಚನೆಗಳನ್ನು

ನಾನು ತಿರಸ್ಕರಿಸುತ್ತೇನೆ." ವಿಶಿಷ್ಟವಾಗಿ, ಉಂಟಾಗುವ ಸ್ಥಿತಿಯಿಂದ ನೀವು ಆತ್ಮವನ್ನು ಕರೆಯುತ್ತೀರಿ. ಅಸಾಮಾನ್ಯ ಅಥವಾ ವಿವರಿಸಲಾಗದ "ವಿಷಯ" ಗೊಂದಲವನ್ನು ಉಂಟುಮಾಡುತ್ತದೆ ಎಂದು ನೀವು ಭಾವಿಸಿದರೆ, ಆ ಗೊಂದಲದ ಮೇಲೆ ಅಧಿಕಾರವನ್ನು ತೆಗೆದುಕೊಳ್ಳಿ. ಹೇಳಲು ಕಲಿಯಿರಿ, "ಯೇಸುವಿನ ಹೆಸರಿನಲ್ಲಿ, ಈ ಪರಿಸ್ಥಿತಿಯಲ್ಲಿ ಕೆಲಸ ಮಾಡುವ ಗೊಂದಲದ ಶಕ್ತಿಗಳ ಮೇಲೆ ನಾನು ಅಧಿಕಾರವನ್ನು ತೆಗೆದುಕೊಳ್ಳುತ್ತೇನೆ. ನಾನು ಅವುಗಳ ಕೆಲಸವನ್ನು ಬಂಧಿಸುತ್ತೇನೆ. ಯೇಸುವಿನ ಹೆಸರಿನಲ್ಲಿ ಹೊರಡಲು ನಾನು ಅವರಿಗೆ ಆಜ್ಞಾಪಿಸುತ್ತೇನೆ." ಅನಾರೋಗ್ಯದಿಂದ ಬಳಲುತ್ತಿರುವ ಯಾರಿಗಾದರೂ ಸೇವೆ ಮಾಡುವಾಗ ಮತ್ತು ಈ ಸ್ಥಿತಿಯು ದುರಾತ್ಮನ ಶಕ್ತಿಯಿಂದ ಉಂಟಾಗುತ್ತದೆ ಎಂದು ನಿಮಗೆ ತಿಳಿದಿರುವಾಗ, ನೀವು ಹೇಳುತ್ತೀರಿ, "ಯೇಸುವಿನ ಹೆಸರಿನಲ್ಲಿ, ನಾನು ಈ ದುರ್ಬಲತೆಯ ಆತ್ಮದ ಮೇಲೆ ಅಧಿಕಾರವನ್ನು ತೆಗೆದುಕೊಳ್ಳುತ್ತೇನೆ ಮತ್ತು ಈಗ ಅದನ್ನು ತೊರೆಯಲು ಆಜ್ಞಾಪಿಸುತ್ತೇನೆ."

ಆಜ್ಞೆಯ ಮಾತಿನಿಂದ ದುರಾತ್ಮ ಶಕ್ತಿಗಳನ್ನು ಹೊರಹಾಕಿ. ಯೇಸು ಹಾಗೆ ಮಾಡಿದನು ಮತ್ತು ನಾವೂ ಮಾಡಬೇಕು.

# 34

# ನೀವು ಆತನನ್ನು ಭೂಮಿಯ ಮೇಲೆ ಒಪ್ಪಿಕೊಂಡಾಗ, ನಿಮ್ಮನ್ನು ಪರಲೋಕದಲ್ಲಿ ಉಲ್ಲೇಖಿಸಲಾಗುತ್ತದೆ

**ಮತ್ತಾಯ 10:32,33**

**[32] ಹಾಗಾದರೆ ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನೆಂದು ಒಪ್ಪಿಕೊಳ್ಳುವನೋ, ನಾನು ಸಹ ಅವನನ್ನು ನನ್ನವನೆಂದು ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ಒಪ್ಪಿಕೊಳ್ಳುವೆನು.**

**[33] ಆದರೆ ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನಲ್ಲವೆಂದು ಹೇಳುವನೋ ಅವನನ್ನು ನಾನು ಸಹ ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ನನ್ನವನಲ್ಲವೆಂದು ಹೇಳುವೆನು.**

ಯೇಸುವಿನ ಮಾತುಗಳು ಬಹಳ ಸ್ಪಷ್ಟವಾಗಿವೆ. ನಾವು ಆತನನ್ನು ಮನುಷ್ಯರ ಮುಂದೆ ಒಪ್ಪಿಕೊಂಡರೆ, ಆತನು ಸ್ವರ್ಗದಲ್ಲಿರುವ ತಂದೆಯ ಮುಂದೆ ನಮ್ಮನ್ನು ಒಪ್ಪಿಕೊಳ್ಳುತ್ತಾನೆ.

ಗ್ರೀಕ್‌ನಲ್ಲಿ "ಒಪ್ಪಿಕೊಳ್ಳು" ಎಂಬ ಪದವು *'ಹೋಮೊಲೋಜಿಯಾ,'* ಗ್ರೀಕ್ *'ಹೋಮೋ'* ಎಂಬ ಪದದ ಸಂಯುಕ್ತ ಪದವು "ಅದೇ" ಮತ್ತು ಗ್ರೀಕ್ *'ಲೋಗೋಸ್'* ಎಂದರೆ "ಏನೋ ಹೇಳಿದೆ". ಆದ್ದರಿಂದ, "ಒಪ್ಪಿಕೊಳ್ಳು" ಎಂದರೆ "ಅದೇ ವಿಷಯವನ್ನು ಹೇಳುವುದು, ಒಪ್ಪಿಕೊಳ್ಳುವುದು, ಸಮ್ಮತಿ, ಅಂಗೀಕರಿಸುವುದು, ಪ್ರತಿಪಾದಿಸುವುದು."

"ಒಪ್ಪಿಕೊಳ್ಳುವುದು" ಎಂದರೆ "ಇತರ ವ್ಯಕ್ತಿಯಂತೆಯೇ ಹೇಳುವುದು." ಸತ್ಯವೇದದ ತಪ್ಪೊಪ್ಪಿಗೆಯು ದೇವರು ಹೇಳಿದ ಸಂಗತಿಗಳೊಂದಿಗೆ–ಆತನ ವಾಕ್ಯದೊಂದಿಗೆ ಒಪ್ಪಂದಕ್ಕೆ ಬರುವದು. ದೇವರು ಹೇಳಿದ ಮಾತನ್ನೇ ಹೇಳುವದು. ಆತನು ಹೇಳಿದ್ದನ್ನು ನಾವು ಹೇಳುತ್ತೇವೆ. ದೇವರ ವಾಕ್ಯಕ್ಕೆ ವಿರುದ್ಧವಾದ ಮತ್ತು ಅದನ್ನು ಒಪ್ಪಿಕೊಳ್ಳುವುದು ಎಂದು ಕರೆಯುವ ನಿಮ್ಮ ಸ್ವಂತ ವಿಷಯವನ್ನು ನೀವು ಹೇಳಲು ಸಾಧ್ಯವಿಲ್ಲ.

ಯೇಸು ತಾನು ಯಾರೆಂದು ಹೇಳಿದನೆಂದು ನಾವು ಒಪ್ಪಿಕೊಳ್ಳಬೇಕು. ಯೇಸುವಿನ ಬಗ್ಗೆ ನಮ್ಮ ಅರಿಕೆಯು ಆತನು ತನ್ನ ಬಗ್ಗೆ ಏನು ಹೇಳಿದನೋ ಅದನ್ನು ಒಪ್ಪಿಕೊಳ್ಳಬೇಕು. ಯೇಸು ಕ್ರಿಸ್ತನು (ಮೆಸ್ಸೀಯ), ಜೀವಂತ ದೇವರ ಮಗ. ಆತನು ಮಾರ್ಗ, ಸತ್ಯ ಮತ್ತು ಜೀವ; ಆತನ ಮೂಲಕ ಹೊರತು ಯಾರೂ ತಂದೆಯ ಬಳಿಗೆ ಬರುವುದಿಲ್ಲ. ನಾವು ಆತನನ್ನು ಒಪ್ಪಿಕೊಂಡಾಗ ಅಂದರೆ, ಆತನು ತನ್ನ ಬಗ್ಗೆ ಹೇಳಿದಂತೆಯೇ ಮನುಷ್ಯರ ಮುಂದೆ ಹೇಳಿದಾಗ, ಆತನು ಸ್ವರ್ಗದಲ್ಲಿರುವ ತಂದೆಯ ಮುಂದೆ ನಮ್ಮನ್ನು ಒಪ್ಪಿಕೊಳ್ಳುತ್ತಾನೆ (ಆತನ ಸಂಬಂಧದಲ್ಲಿ ನಮ್ಮ ಬಗ್ಗೆ ನಾವು ಏನು ಹೇಳುತ್ತೇವೆ ಎಂಬುದನ್ನು ಒಪ್ಪಿಕೊಳ್ಳುತ್ತೇವೆ). ನಂತರ ನೀವು ಹೀಗೆ ಹೇಳಬಹುದು, “ನಾನು ಯೇಸುವಿನ ರಕ್ತದಿಂದ ತೊಳೆದ ದೇವರ ಮಗು, ಪಾಪದಿಂದ ರಕ್ಷಿಸಲ್ಪಟ್ಟಿದ್ದೇನೆ, ದೇವರ ರಾಜ್ಯಕ್ಕೆ ಸೇರಲ್ಪಟ್ಟಿದ್ದೇನೆ” ಮತ್ತು ಮುಂತಾದವು ಮತ್ತು ಹಾಗೆಯೇ ಸ್ವರ್ಗದಲ್ಲಿರುವ ತಂದೆಯ ಮುಂದೆ ಯೇಸು ನಿಮ್ಮ ಬಗ್ಗೆ ಒಪ್ಪಿಕೊಳ್ಳುತ್ತಾನೆ!

ಯೇಸುವಿನ ಬಗ್ಗೆ ಆತನು ತನ್ನ ಬಗ್ಗೆ ಏನು ಹೇಳಿದನು ಮತ್ತು ದೇವರ ವಾಕ್ಯವು ಆತನ ಬಗ್ಗೆ ಏನು ತಿಳಿಸುತ್ತದೆ ಎಂದು ಹೇಳಿ. ಆತನು ರಕ್ಷಕ. ಆತನು ಸ್ವಸ್ಥತೆಕೊಡುವಾತನು. ಆತನು ವಿಮೋಚಕ. ಆತನು ಸಮಾಧಾನ ಪ್ರಭು. ಜನರ ಮುಂದೆ ಆತನನ್ನು ಒಪ್ಪಿಕೊಳ್ಳಿ. ಆತನು ನಿಮ್ಮನ್ನು ತಂದೆಯ ಮುಂದೆ ಒಪ್ಪಿಕೊಳ್ಳುತ್ತಾನೆ.

# 35

# ಮಾತುಗಳು ನಿಮ್ಮ ಹೃದಯದಲ್ಲಿರುವುದನ್ನು ನಿಮ್ಮ ಜೀವನದಲ್ಲಿ ಬಿಡುಗಡೆ ಮಾಡುತ್ತವೆ

**ಮತ್ತಾಯ 12:33–35**
**33 ಮರ ಒಳ್ಳೇದಂದರೆ ಅದರ ಫಲವೂ ಒಳ್ಳೇದನ್ನಿರಿ. ಮರ ಹುಳುಕು ಅಂದರೆ ಅದರ ಫಲವೂ ಹುಳುಕು ಅನ್ನಿರಿ. ಫಲದಿಂದಲೇ ಮರದ ಗುಣವು ಗೊತ್ತಾಗುವದು.**
**34 ಸರ್ಪಜಾತಿಯವರೇ, ನೀವು ಕೆಟ್ಟವರಾಗಿರಲಾಗಿ ಒಳ್ಳೆಯ ಮಾತುಗಳನ್ನಾಡುವದಕ್ಕೆ ನಿಮ್ಮಿಂದ ಹೇಗಾದೀತು? ಹೃದಯದಲ್ಲಿ ತುಂಬಿರುವದೇ ಬಾಯಲ್ಲಿ ಹೊರಡುವದು.**
**35 ಒಳ್ಳೆಯವನು ತನ್ನ ಒಳ್ಳೆಯ ಬೊಕ್ಕಸದೊಳಗಿಂದ ಒಳ್ಳೆಯ ವಸ್ತುಗಳನ್ನು ತೆಗೆಯುತ್ತಾನೆ; ಕೆಟ್ಟವನು ಕೆಟ್ಟ ಬೊಕ್ಕಸದೊಳಗಿಂದ ಕೆಟ್ಟ ವಸ್ತುಗಳನ್ನು ತೆಗೆಯುತ್ತಾನೆ.**

ಒಂದು ಮರವನ್ನು ಅದರ ಹಣ್ಣಿನಿಂದ ಕರೆಯಲಾಗುತ್ತದೆ. ಮರವು ಹೊಂದಿರುವ ಹಣ್ಣು ಮರದಲ್ಲಿ ಏನಿದೆ ಮತ್ತು ಅದು ಯಾವ ರೀತಿಯ ಮರವಾಗಿದೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ನಂತರ ಯೇಸು ಇದನ್ನು ಜನರಿಗೆ ತಿಳಿಸುತ್ತಾನೆ. ಹೃದಯವು ಕೆಟ್ಟದ್ದಾಗಿದ್ದರೆ, ಬಾಯಿ ಕೆಟ್ಟದ್ದನ್ನು ಮಾತನಾಡುತ್ತದೆ ಏಕೆಂದರೆ ಹೃದಯದಲ್ಲಿರುವುದನ್ನು ನಮ್ಮ ಬಾಯಿಯ ಮಾತಿನ ಮೂಲಕ ಹೊರಬರುತ್ತದೆ.

ವಚನ 35 ರಲ್ಲಿ, ನಮ್ಮ ಜೀವನದಲ್ಲಿ ನಾವು ಯಾವ (ಫಲವನ್ನು) ನೀಡುತ್ತೇವೆ ಎಂಬುದು ನಮ್ಮೊಳಗೆ ಏನಿದೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ ಎಂದು ನಾವು ಕಲಿಯುತ್ತೇವೆ. ನಿಮ್ಮೊಳಗೆ ಒಳ್ಳೆಯ ಠೇವಣಿ (ಒಳ್ಳೆಯ ನಿಧಿ) ಇದ್ದರೆ, ನೀವು ಒಳ್ಳೆಯ ಫಲವನ್ನು ಹೊಂದುವಿರಿ–ನಿಮ್ಮ ಜೀವನದಲ್ಲಿ ಒಳ್ಳೆಯದನ್ನು ತರುತ್ತೀರಿ.

ನಮ್ಮ ಜೀವನದಲ್ಲಿ (ಫಲ) ಹೊರಬರಲು ಒಳಗಿರುವ (ಒಳ್ಳೆಯ ನಿಧಿ) ಪದಗಳು ಪ್ರಮುಖ ಪಾತ್ರವಹಿಸುತ್ತವೆ ಏಕೆಂದರೆ ಹೃದಯದ ಸಮೃದ್ಧಿಯಿಂದ (ಒಳ್ಳೆಯ ನಿಧಿ) ಬಾಯಿ ಮಾತನಾಡುತ್ತದೆ.

ಮಾತುಗಳು ನಮ್ಮೊಳಗೆ ಇರುವುದನ್ನು ನಮ್ಮ ಜೀವನದಲ್ಲಿ ಬಿಡುಗಡೆ ಮಾಡುತ್ತವೆ. ನಮ್ಮ ಹೃದಯದಲ್ಲಿ ಸಂಗ್ರಹವಾಗಿರುವದು ನಾವು ಮಾತನಾಡುವ ಮಾತುಗಳಿಂದ ನಮ್ಮ ಜೀವನದಲ್ಲಿ ಬಿಡುಗಡೆಯಾಗುತ್ತದೆ.

ಚೆನ್ನಾಗಿರುವದನ್ನು ಸಂಗ್ರಹ ಮಾಡಿ. ಕ್ರಿಸ್ತನ ವಾಕ್ಯವು ನಮ್ಮಲ್ಲಿ ಸಮೃದ್ಧವಾಗಿ ನೆಲೆಸುವಂತೆ ನಮಗೆ ಸೂಚಿಸಲಾಗಿದೆ (ಕೊಲೊಸ್ಸೆಯವರಿಗೆ 3:16). ನಿಮ್ಮೊಳಗೆ ದೇವರ ವಾಕ್ಯದ ಶ್ರೀಮಂತ ನಿಧಿಯನ್ನು ಹೊಂದಿರಿ. ಆಗ ನೀವು ಮಾತನಾಡುವ ಮಾತುಗಳು ನಿಮ್ಮಲ್ಲಿರುವ ದೇವರ ವಾಕ್ಯಕ್ಕೆ ಅನುಗುಣವಾಗಿರುತ್ತವೆ. ನೀವು ಬೇರೇನೂ ಮಾತನಾಡದೆ ವಾಕ್ಯದ ಪ್ರಕಾರ ಮಾತನಾಡುತ್ತಿರಿ ಏಕೆಂದರೆ ಅದು ನಿಮ್ಮೊಳಗಿನ ಸಂಗ್ರಹವಾಗಿದೆ. ನಿಮ್ಮ ಜೀವನವನ್ನು ರೂಪಿಸುವ ಶಕ್ತಿಗಳು ನಿಮ್ಮ ಹೃದಯದಿಂದ ಹೊರಬರುವುದರಿಂದ ನೀವು ಒಳ್ಳೆಯದನ್ನು ಸಹ ಹೊರತರುತ್ತೀರಿ (ಜ್ಞಾನೋಕ್ತಿಗಳು 4:22). ಮಾತುಗಳು ನಿಮ್ಮ ಹೃದಯದಲ್ಲಿರುವುದನ್ನು ನಿಮ್ಮ ಜೀವನದಲ್ಲಿ ಬಿಡುಗಡೆ ಮಾಡುತ್ತವೆ. ವಾಕ್ಯದೊಂದಿಗೆ ಭರ್ತಿ ಮಾಡಿ. ವಾಕ್ಯವನ್ನು ಮಾತನಾಡಿ.

# 36

# ನಿಮ್ಮ ಮಾತುಗಳಿಂದ ನೀವು ಸಮರ್ಥಿಸಲ್ಪಟ್ಟಿದ್ದೀರಿ ಅಥವಾ ಖಂಡಿಸಲ್ಪಟ್ಟಿದ್ದೀರಿ

**ಮತ್ತಾಯ 12:36,37**

**36 ಇದಲ್ಲದೆ ನಾನು ನಿಮಗೆ ಹೇಳುವದೆನಂದರೆ ಮನುಷ್ಯರು ಸುಮ್ಮನೆ ಆಡುವ ಪ್ರತಿಯೊಂದು ಮಾತಿನ ವಿಷಯವಾಗಿ ನ್ಯಾಯವಿಚಾರಣೆಯ ದಿನದಲ್ಲಿ ಉತ್ತರಕೊಡಬೇಕು**

**37 ನಿನ್ನ ಮಾತುಗಳಿಂದಲೇ ನೀತಿವಂತನೆಂದು ತೀರ್ಪು ಹೊಂದುವಿ; ನಿನ್ನ ಮಾತುಗಳಿಂದಲೇ ಅಪರಾಧಿಯೆಂದು ತೀರ್ಪುಹೊಂದುವಿ ಅಂದನು.**

ನಮ್ಮ ಮಾತು ಎಷ್ಟು ಮುಖ್ಯ? ನಾವು ಹೇಳಿದ ನಿಷ್ಪ್ರಯೋಜಕ ವಿಷಯಗಳಿಗೆ ನಾವು ಸಹ ಲೆಕ್ಕ ಕೊಡುತ್ತೇವೆ ಎಂದು ಯೇಸು ಹೇಳಿದನು. ಜ್ಞಾನೋಕ್ತಿಗಳು 18:21 ರಲ್ಲಿ ನಮ್ಮ ಮಾತುಗಳು ಜೀವನ ಮತ್ತು ಮರಣದ ಶಕ್ತಿಯನ್ನು ಹೊಂದಿವೆ ಎಂದು ನಾವು ನೋಡಿದ್ದೇವೆ. ಮತ್ತಾಯ 12:36,37 ರಲ್ಲಿ, ನಮ್ಮ ಮಾತುಗಳ ಶಾಶ್ವತ ಪರಿಣಾಮಗಳ ಬಗ್ಗೆ ಯೇಸು ನಮಗೆ ಹೇಳುತ್ತಾನೆ. ನಮ್ಮ ಮಾತುಗಳಿಂದ ನಾವು ಸಮರ್ಥಿಸಿಕೊಳ್ಳುತ್ತೇವೆ ಅಥವಾ ಖಂಡಿಸುತ್ತೇವೆ. ಇಲ್ಲಿ ಮತ್ತು ಪರಲೋಕದಲ್ಲಿ ಮಾತುಗಳು ತುಂಬಾ ಮುಖ್ಯವಾಗಿದ್ದರೆ, ನಾವು ನಮ್ಮ ಮಾತುಗಳನ್ನು ಗಂಭೀರವಾಗಿ ಪರಿಗಣಿಸಬೇಕು.

ಗ್ರೀಕ್‌ನಲ್ಲಿ "ಐಡಲ್" ಎಂಬ ಪದವು *'ಆರ್ಗೋಸ್'* ಎಂಬ ಪದವಾಗಿದ್ದು, "ನಿಷ್ಕ್ರಿಯ, ನಿರುದ್ಯೋಗಿ, ಲಾಭದಾಯಕವಲ್ಲದ, ನಿಷ್ಪ್ರಯೋಜಕ, ನಿಧಾನ, ಬಂಜರು" ಎಂದರ್ಥ. ನಾವು ಮಾತನಾಡುವ ಪ್ರತಿಯೊಂದು ನಿರರ್ಥಕ ಮಾತುಗಳಿಗೆ, ನಾವು ನಿಜವಾಗಿಯೂ ಹೇಳಲು ಉದ್ದೇಶಿಸದ ಮಾತುಗಳಿಗೆ, ಅಂದರೆ ನಾವು ಸಕ್ರಿಯವಾಗಿ ಬಳಸದ ಮಾತುಗಳಿಗೆ ನಾವು ಲೆಕ್ಕವನ್ನು ನೀಡುತ್ತೇವೆ ಎಂದು ಯೇಸು ಹೇಳಿದನು. ಇದನ್ನು ಹೇಗೆ ಮಾಡಲಾಗುತ್ತದೆ ಎಂದು ನನಗೆ ತಿಳಿದಿಲ್ಲ, ಆದರೆ ಆತನ ಎಚ್ಚರಿಕೆಯನ್ನು ಗಂಭೀರವಾಗಿ ತೆಗೆದುಕೊಳ್ಳೋಣ.

ನಿಷ್ಪ್ರಯೋಜಕ ಮಾತುಗಳನ್ನು ಮಾತನಾಡುವ ಬದಲು, ನಿಮಗೆ ಮತ್ತು ನಿಮ್ಮ ಸುತ್ತಮುತ್ತಲಿನ ಇತರರಿಗೆ ಉಪಯುಕ್ತ, ಫಲಪ್ರದ ಮತ್ತು ಲಾಭದಾಯಕ ಮಾತುಗಳನ್ನು ಮಾತನಾಡಿ. ನಿಮ್ಮ ಸ್ವಂತ ಮತ್ತು ಇತರರ ಜೀವನದಲ್ಲಿ ಜೀವನ, ಆಶೀರ್ವಾದ, ಬಲ ಮತ್ತು ಶಕ್ತಿಯನ್ನು ಬಿಡುಗಡೆ ಮಾಡುವ ಮಾತುಗಳನ್ನು ಮಾತನಾಡಿ. ನಿಮ್ಮನ್ನು ಮತ್ತು ನಿಮ್ಮ ಸುತ್ತಲಿರುವ ಜನರನ್ನು ಸಮರ್ಥಿಸುವ, ಉನ್ನತೀಕರಿಸುವ, ಉತ್ತೇಜಿಸುವ, ಎತ್ತುವ ಮತ್ತು ಶ್ರೀಮಂತಗೊಳಿಸುವ ಮಾತುಗಳನ್ನು ಮಾತನಾಡಿ. ವಾಕ್ಯವನ್ನು ಮಾತನಾಡಿ.

# 37

# ಮಾತುಗಳು ಕಟ್ಟಿ ಹಾಕಲು ಮತ್ತು ಬಿಡುಗಡೆ ಮಾಡಲು ರಾಜ್ಯದ ಅಧಿಕಾರವನ್ನು ಬಿಡುಗಡೆ ಮಾಡುತ್ತವೆ

**ಮತ್ತಾಯ 16:18,19**

**[18] ಮತ್ತು ನಾನೂ ನಿನಗೆ ಒಂದು ಮಾತನ್ನು ಹೇಳುತ್ತೇನೆ, ಅದೇನಂದರೆ – ನೀನು ಪೇತ್ರನು, ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು; ಪಾತಾಳಲೋಕದ ಬಲವು ಅದನ್ನು ಸೋಲಿಸಲಾರದು.**

**[19] ಪರಲೋಕರಾಜ್ಯದ ಬೀಗದ ಕೈಗಳನ್ನು ನಿನಗೆ ಕೊಡುವೆನು; ಭೂಲೋಕದಲ್ಲಿ ನೀನು ಯಾವದನ್ನು ಕಟ್ಟುತ್ತೀಯೋ, ಅದು ಪರಲೋಕದಲ್ಲಿಯೂ ಕಟ್ಟಿರುವದು; ಮತ್ತು ಭೂಲೋಕದಲ್ಲಿ ನೀನು ಯಾವದನ್ನು ಬಿಚ್ಚುತ್ತೀಯೋ ಅದು ಪರಲೋಕದಲ್ಲಿಯೂ ಬಿಚ್ಚಿರುವದು ಅಂದನು.**

ಸಭೆಯನ್ನು ಬಂಡೆಯ ಮೇಲೆ ನಿರ್ಮಿಸಲಾಗಿದೆ, ಯೇಸು ಕ್ರಿಸ್ತ (ಮೆಸ್ಸೀಯ), ಜೀವಂತ ದೇವರ ಮಗ. ಇದು ಪೇತ್ರನ ದೊಡ್ಡ ಅರಿಕೆಯಾಗಿದ್ದು ಅದು ತಂದೆಯಿಂದ ಬಹಿರಂಗವಾಯಿತು. ಯೇಸು ನಿರ್ಮಿಸುತ್ತಿರುವ ಸಭೆ ಪ್ರಬಲ ಸಭೆಯಾಗಿದ್ದು ಅದು ನರಕದ ಎಲ್ಲಾ ಶಕ್ತಿಗಳು ಹೊಂದಲು, ನಿಗ್ರಹಿಸಲು ಅಥವಾ ಮೇಲುಗೈ ಸಾಧಿಸಲು ಸಾಧ್ಯವಿಲ್ಲ. ಈ ಸಭೆಗೆ, ಕರ್ತನಾದ ಯೇಸು ಪರಲೋಕರಾಜ್ಯದ ಅಧಿಕಾರವನ್ನು (ಕೀಲಿಗಳು)—ದೇವರ ಸ್ವಂತ ರಾಜ್ಯಕ್ಕೆ ನೀಡಿದ್ದಾನೆ. ಈ ಕ್ಷೇತ್ರದಲ್ಲಿ ದೇವರ ರಾಜ್ಯವನ್ನು ಬಿಡುಗಡೆ ಮಾಡಲು ಸಭೆ ಭೂಮಿಯ ಮೇಲಿದೆ ಮತ್ತು ದೇವರ ರಾಜ್ಯದ ಅಧಿಕಾರವನ್ನು ಹೊಂದಿದೆ.

ಇಲ್ಲಿ, ಭೂಲೋಕದಲ್ಲಿ ರಾಜ್ಯದ ಅಧಿಕಾರವನ್ನು ಹೇಗೆ ಪ್ರಯೋಗಿಸಲಾಗುವುದು? ನಾವು "ಭೂಮಿಯಲ್ಲಿ ಕಟ್ಟುತ್ತೇವೆ" ಮತ್ತು "ಭೂಮಿಯಲ್ಲಿ ಬಿಚ್ಚುತ್ತೇವೆ" ಎಂದು ಯೇಸು ಹೇಳಿದನು. "ಕಟ್ಟು" ಎಂಬ ಪದದ ಅರ್ಥ "ನಿಷೇಧಿಸುವುದು, ತಡೆಗಟ್ಟುವುದು, ಅನುಮತಿಸದಿರುವುದು ಮತ್ತು ಕಾನೂನುಬಾಹಿರವೆಂದು ಘೋಷಿಸುವುದು." "ಬಿಚ್ಚು" ಎಂಬ ಪದದ ಅರ್ಥ "ನಾಶಮಾಡುವುದು, ಆರಿಸಿ ಹಾಕುವದು, ಬಿಚ್ಚುವುದು, ಸಡಿಲಗೊಳಿಸುವುದು, ಬಿಡುಗಡೆ ಮಾಡುವುದು, ಕರಗಿಸುವುದು, ರದ್ದುಗೊಳಿಸುವುದು, ಎಸೆಯುವುದು,

ಉರುಳಿಸುವುದು ಮತ್ತು ದೂರ ಮಾಡುವುದು." ನಾವು ಹೇಗೆ ಕಟ್ಟುತ್ತೇವೆ ಮತ್ತು ಬಿಚ್ಚುತ್ತೇವೆ? ಯೇಸು ತನ್ನ ಸೇವೆಯಲ್ಲಿ ಇದನ್ನು ಮಾಡುವುದನ್ನು ನಾವು ನೋಡುತ್ತೇವೆ. ಆತನು ತನ್ನ ಮಾತಿನ ಮೂಲಕ ತನ್ನ ಅಧಿಕಾರವನ್ನು ಚಲಾಯಿಸುವ ಮೂಲಕ ಅದನ್ನು ಮಾಡಿದನು. ಕಿವುಡ ಮತ್ತು ಮೂಕರಿಗೆ ಆತನು *"ತೆರೆಯಲಿ"* ಎಂದು ಹೇಳಿದನು ಮತ್ತು ಅವರ ಕಿವಿಗಳು ತೆರೆದವು ಮತ್ತು ನಾಲಿಗೆಯನ್ನು ಸಡಿಲಗೊಳಿಸಲಾಯಿತು (ಮಾರ್ಕ 7:33-35). ಆತನು ಆ ಸ್ತ್ರೀಗೆ ಹೇಳಿದನು, *"ನಿನ್ನ ರೋಗ ಬಿಡುಗಡೆಯಾಯಿತು"* (ಲೂಕ 13:12). ಯೇಸು ಅಧಿಕಾರದ ಮಾತುಗಳನ್ನು ಹೇಳಿದನು ಅದು ಜನರನ್ನು ಬಿಡುಗಡೆ ಮಾಡಿತು ಮತ್ತು ದೆವ್ವದ ಕಾರ್ಯಗಳನ್ನು ನಿಲ್ಲಿಸಿತು.

ನಾವು ಆತನ ಮಾದರಿಯನ್ನು ಅನುಸರಿಸುತ್ತೇವೆ. ನಾವು ಯೇಸುವಿನ ಹೆಸರಿನ ಅಧಿಕಾರದಲ್ಲಿ ಮಾತುಗಳನ್ನು ಮಾತನಾಡುತ್ತೇವೆ. ನಮಗೆ ನಿಯೋಜಿಸಲಾದ ಅಧಿಕಾರದಲ್ಲಿ ನಾವು ಮಾತನಾಡುವ ಮಾತುಗಳ ಮೂಲಕ ನಾವು ಕಟ್ಟುತೇವೆ ಮತ್ತು ಬಿಚ್ಚುತ್ತೇವೆ. ವಿಶ್ವಾಸಿಯಾಗಿ ನಿಮ್ಮಲ್ಲಿರುವ ದೇವರ ರಾಜ್ಯದ ಅಧಿಕಾರವನ್ನು ಚಲಾಯಿಸಲು ನಿಮ್ಮ ಮಾತುಗಳನ್ನು ಬಳಸಿ. ನಿಮ್ಮ ಮಾತುಗಳು ಕಟ್ಟಲು ಮತ್ತು ಬಿಚ್ಚಲು ದೇವರ ರಾಜ್ಯದ ಅಧಿಕಾರವನ್ನು ಬಿಡುಗಡೆ ಮಾಡುತ್ತವೆ! ಅಧಿಕಾರದ ಮಾತುಗಳನ್ನು ಮಾತನಾಡಿ.

# 38
# ಪರ್ವತದೊಂದಿಗೆ ಮಾತನಾಡಿ

**ಮತ್ತಾಯ 17:20**

**ನಿಮ್ಮ ನಂಬಿಕೆ ಕಡಿಮೆಯಾಗಿರುವದರಿಂದಲೇ ಆಗಲಿಲ್ಲ; ನಿಮಗೆ ಸತ್ಯವಾಗಿ ಹೇಳುತ್ತೇನೆ, ಸಾಸಿವೆಕಾಳಷ್ಟು ನಂಬಿಕೆ ನಿಮಗೆ ಇರುವದಾದರೆ ನೀವು ಈ ಬೆಟ್ಟಕ್ಕೆ – ಇಲ್ಲಿಂದ ಅಲ್ಲಿಗೆ ಹೋಗು ಎಂದು ಹೇಳಿದರೂ ಅದು ಹೋಗುವದು; ಮತ್ತು ನಿಮ್ಮ ಕೈಯಿಂದಾಗದಂಥದು ಒಂದೂ ಇರುವದಿಲ್ಲ ಅಂದನು.**

ಸುವಾರ್ತೆಗಳಲ್ಲಿನ ನಂಬಿಕೆಯ ಬಗ್ಗೆ ಯೇಸುವಿನ ಬೋಧನೆಯನ್ನು ನಾವು ಅಧ್ಯಯನ ಮಾಡಿದರೆ, ಆತನು ನಮ್ಮ ನಂಬಿಕೆಯನ್ನು ಮಾತನಾಡಲು ಹೆಚ್ಚಿನ ಒತ್ತು ನೀಡಿರುವುದನ್ನು ನಾವು ಕಂಡುಕೊಳ್ಳುತ್ತೇವೆ. ಮತ್ತಾಯ 17 ರಲ್ಲಿ, ಶಿಷ್ಯರು ದೆವ್ವವನ್ನು ಹೊರಹಾಕಲು ವಿಫಲವಾದಾಗ ಮತ್ತು ಅದನ್ನು ಏಕೆ ಮಾಡಲು ಸಾಧ್ಯವಿಲ್ಲ ಎಂದು ಯೇಸುವನ್ನು ಪ್ರಶ್ನಿಸಿದಾಗ, ಯೇಸು ಅವರ ಅಪನಂಬಿಕೆ ಅಥವಾ ನಂಬಿಕೆಯ ಕೊರತೆಯನ್ನು ಸೂಚಿಸಿದನು. ನಂತರ ಆತನು ಅವರಿಗೆ (ಮತ್ತು ನಮಗೆ) ನಂಬಿಕೆಯ ಸಾಧ್ಯತೆಗಳು, ಅದರೊಂದಿಗೆ ನಾವು ಏನು ಮಾಡಬಹುದು ಮತ್ತು ನಮ್ಮ ನಂಬಿಕೆಯನ್ನು ಹೇಗೆ ಅಭ್ಯಾಸ ಮಾಡುವುದು ಅಥವಾ ಬಳಸುವುದು ಎಂಬುದರ ಕುರಿತು ಕಲಿಸುತ್ತ ಹೋದನು.

ಸಂಕ್ಷಿಪ್ತವಾಗಿ ಹೇಳುವುದಾದರೆ, ನಂಬಿಕೆಯು ದೆವ್ವವನ್ನು ಮತ್ತು ಅದರ ಕಾರ್ಯಗಳನ್ನು ಉರುಳಿಸಲು ಮಾತ್ರವಲ್ಲದೆ ನೈಸರ್ಗಿಕ ಪ್ರಪಂಚದ ಬದಲಾವಣೆಯ ಮೇಲೂ ಪರಿಣಾಮ ಬೀರುತ್ತದೆ (ಉದಾಹರಣೆಗೆ, ಈ ಬೆಟ್ಟವನ್ನು ಇಲ್ಲಿಂದ ಅಲ್ಲಿಗೆ ಸ್ಥಳಾಂತರಿಸುವದು). ನಂಬಿಕೆಯಿಂದ, "ನಿಮಗೆ ಅಸಾಧ್ಯವಾದದ್ದು ಯಾವುದೂ ಇಲ್ಲ" ಎಂದು ಯೇಸು ಹೇಳಿದನು. ನಮ್ಮ ಮನದಾಳದಲ್ಲಿ ಇರುವ ನಂಬಿಕೆಯಿಂದ ಕೆಲಸವನ್ನು ಸಾಧಿಸಬಹುದು. ನಮ್ಮ ಹೃದಯದಲ್ಲಿನ ನಂಬಿಕೆಯು ಎಷ್ಟು ಪರಿಣಾಮಕಾರಿಯಾಗಿದೆ ಎಂದರೆ ಸಾಸಿವೆ ಕಾಳಿನ ಗಾತ್ರದ ನಂಬಿಕೆಯು ಪರ್ವತವನ್ನು ಚಲಿಸಬಲ್ಲದು ಎಂದು ಯೇಸು ಹೇಳಿದನು. ನಂಬಿಕೆಯನ್ನು ಚಲಾಯಿಸುವ ಮಾರ್ಗವೆಂದರೆ **ಹೇಳುವುದು**! ನಿಮ್ಮ ನಂಬಿಕೆಯನ್ನು ಮಾತನಾಡಿ. ನಿಮ್ಮ ಹೃದಯದಲ್ಲಿ ನಂಬಿಕೆಯೊಂದಿಗೆ,

ನೀವು ಏನನ್ನು ನಂಬುತ್ತೀರಿ ಎಂಬುದನ್ನು ವಿವರಿಸುವ ಮಾತುಗಳನ್ನು ಬಿಡುಗಡೆ ಮಾಡಿ.

ನಾವು ಬೆಟ್ಟದೊಂದಿಗೆ ಮಾತನಾಡಬೇಕು ಎಂದು ಆತನು ಸ್ಪಷ್ಟವಾಗಿ ಹೇಳಿದನು. ಬೆಟ್ಟವು ಚಲಿಸಬೇಕೆಂದು ನಾವು ಬಯಸಿದಾಗ, ನಾವು ಬೆಟ್ಟದೊಂದಿಗೆ ಮಾತನಾಡುತ್ತೇವೆ. ಆಗಾಗ್ಗೆ, ನಾವು ಇತರರೊಂದಿಗೆ ಬೆಟ್ಟದ ಕುರಿತು ಮಾತನಾಡಿ ತಪ್ಪು ಮಾಡುತ್ತೇವೆ. ಕೆಲವೊಮ್ಮೆ, ನಾವು ದೇವರಿಗೆ ಅದು ಗೊತ್ತಿಲ್ಲ ಎಂಬಂತೆ ದೇವರಿಗೂ ಬೆಟ್ಟವಿದೆ ಎಂದು ಮಾತನಾಡಬಹುದು ಅಥವಾ ದೂರು ನೀಡಬಹುದು. ನಮ್ಮ ಹೃದಯದಲ್ಲಿ ನಂಬಿಕೆಯಿಂದ ನಾವು ಬೆಟ್ಟದೊಂದಿಗೆ ಮಾತನಾಡಬೇಕು ಎಂದು ಯೇಸು ಸ್ಪಷ್ಟವಾಗಿ ನಮಗೆ ಸೂಚಿಸಿದನು. ದೆವ್ವಗಳೊಂದಿಗೆ ಮಾತನಾಡಿ. ರೋಗಗಳಿಗೆ ಮಾತನಾಡಿ. ಬಿರುಗಾಳಿಗಳೊಂದಿಗೆ ಮಾತನಾಡಿ. ಸನ್ನಿವೇಶಗಳೊಂದಿಗೆ ಮಾತನಾಡಿ. ಕೊರತೆಯ ಬಗ್ಗೆ ಮಾತನಾಡಿ. ಮುಚ್ಚಿದ ಬಾಗಿಲುಗಳೊಂದಿಗೆ ಮಾತನಾಡಿ. ನಮ್ಮ ಸ್ವಾಭಾವಿಕ ಕ್ಷೇತ್ರದಲ್ಲಿನ ವಿಷಯಗಳೊಂದಿಗೆ ಮಾತನಾಡಿ. ನಿಮ್ಮ ನಂಬಿಕೆಗೆ ಅನುಗುಣವಾಗಿ ಆಜ್ಞಾಪಿಸಿ. ಆತನು ಹೇಳಿದನು, *"ನಿಮಗೆ ಅಸಾಧ್ಯವಾದುದು ಯಾವುದೂ ಇಲ್ಲ."* ನಂಬಿಕೆಯ ಬಗ್ಗೆ ಯೇಸುವಿನ ಸೂಚನೆಯನ್ನು ಅನುಸರಿಸೋಣ. ನಿಮ್ಮ ನಂಬಿಕೆಯನ್ನು ಮಾತನಾಡಿ.

# 39

# ನಿಮ್ಮ ಅಪೇಕ್ಷಿತ ಫಲಿತಾಂಶವನ್ನು ಮಾತನಾಡಿ

**ಮಾರ್ಕ 5:25–34**

**[25] ಆಗ ಹನ್ನೆರಡು ವರುಷದಿಂದ ರಕ್ತ ಕುಸುಮರೋಗವಿದ್ದ ಒಬ್ಬ ಹೆಂಗಸು ಬಂದಳು.**

**[26] ಆಕೆಯು ಅನೇಕ ವೈದ್ಯರಿಂದ ಬಹು ಕಷ್ಟವನ್ನು ಅನುಭವಿಸಿ ಕೈಯಲ್ಲಿದ್ದದ್ದನ್ನೆಲ್ಲಾ ಕಳಕೊಂಡರೂ ರೋಗವು ಹೆಚ್ಚುತ್ತ ಬಂದದೇ ಹೊರತು ಮತ್ತೇನು ಪ್ರಯೋಜನವನ್ನೂ ಹೊಂದಿರಲಿಲ್ಲ.**

**[27-28] ಆ ಹೆಂಗಸು ಯೇಸುವಿನ ಸಮಾಚಾರವನ್ನು ಕೇಳಿ – ನಾನು ಆತನ ಉಡುಪನ್ನು ಮುಟ್ಟಿದರೆ ಸಾಕು, ನೆಟ್ಟಗಾಗುವೇನು ಎಂದು ಆಲೋಚಿಸಿ**

**[29] ಗುಂಪಿನಲ್ಲಿ ಹಿಂದಿನಿಂದ ಬಂದು ಆತನ ಉಡುಪನ್ನು ಮುಟ್ಟಿದಳು. ಮುಟ್ಟಿದ ಕೂಡಲೆ ಆಕೆಗೆ ರಕ್ತಹರಿಯುವದು ನಿಂತುಹೋದದರಿಂದ ಆಕೆಯು – ನನ್ನನ್ನು ಕಾಡಿದ ರೋಗವು ಹೋಗಿ ನನಗೆ ಗುಣವಾಯಿತು ಎಂದು ತನ್ನೊಳಗೆ ತಿಳುಕೊಂಡಳು.**

**[30] ಆ ಕ್ಷಣವೇ ಯೇಸು ತನ್ನಿಂದ ಶಕ್ತಿಯು ಹೊರಟಿತೆಂದು ತನ್ನಲ್ಲಿ ತಿಳುಕೊಂಡು ಗುಂಪಿನಲ್ಲಿ ಹಿಂತಿರುಗಿ – ನನ್ನ ಉಡುಪನ್ನು ಯಾರು ಮುಟ್ಟಿದರು? ಎಂದು ಕೇಳಲು**

**[31] ಆತನ ಶಿಷ್ಯರು ಆತನಿಗೆ – ಜನರು ನಿನ್ನನ್ನು ನೂಕುವದನ್ನು ಕಂಡೂ ಕಂಡು ನನ್ನನ್ನು ಯಾರು ಮುಟ್ಟಿದರೆಂದು ಕೇಳುತ್ತೀಯಲ್ಲಾ ಎಂದು ಹೇಳಿದರು.**

**[32] ಆದರೆ ಆತನು ಈ ಕೆಲಸ ಮಾಡಿದವಳನ್ನು ಕಾಣಬೇಕೆಂದು ಸುತ್ತಲು ನೋಡುತ್ತಾ ಇರಲಾಗಿ**

**[33] ಆ ಹೆಂಗಸು ತನಗಾದದ್ದನ್ನು ತಿಳುಕೊಂಡು ಅಂಜಿ ನಡುಗುತ್ತಾ ಬಂದು ಆತನಿಗೆ ಅಡ್ಡ ಬಿದ್ದು ಇದ್ದ ಸಂಗತಿಯನ್ನೆಲ್ಲಾ ಹೇಳಿದಳು.**

**[34] ಆತನು ಆಕೆಗೆ ಮಗಳೇ, ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥಮಾಡಿತು; ಸಮಾಧಾನದಿಂದ ಹೋಗು; ನಿನ್ನನ್ನು ಕಾಡಿದ ರೋಗವು ಹೋಗಿ ನಿನಗೆ ಗುಣವಾಗಲಿ ಎಂದು ಹೇಳಿದನು.**

ಈ ಮಹಿಳೆಯು ಆರಂಭದಲ್ಲಿ ತನ್ನೊಳಗೆ, "ಒಂದುವೇಳೆ ನಾನು ಆತನ ಬಟ್ಟೆಗಳನ್ನು ಮುಟ್ಟಿದರೆ, ನಾನು ಗುಣಮುಖಳಾಗುತ್ತೇನೆ" ಎಂದು ಯೋಚಿಸಿರಬಹುದು. ಅಂತಿಮವಾಗಿ, "ನಾನು ಆತನ ಬಟ್ಟೆಗಳನ್ನು ಮುಟ್ಟಿದರೆ ಮಾತ್ರ ನಾನು ಗುಣಮುಖಳಾಗುತ್ತೇನೆ" ಎಂದು ಹೇಳಿದಳು. ಹೀಗಾಗಿಯೇ ಆಕೆ ಹೇಳಿದ್ದನ್ನು ಇತರರು ತಿಳಿದು ನಮಗಾಗಿ ದಾಖಲಿಸಿದ್ದಾರೆ. ಅವಳ ನಂಬಿಕೆಯು ಅವಳನ್ನು ಸ್ವಸ್ಥ ಮಾಡಿದೆ ಎಂದು ಯೇಸು ಈ ಮಹಿಳೆಗೆ ಪ್ರತಿಕ್ರಿಯಿಸಿದನು. ಅವಳ ಮಾತು ಮತ್ತು ನಡವಳಿಕೆ ಅವಳ ನಂಬಿಕೆಗೆ ಅನುಗುಣವಾಗಿತ್ತು. ಅವಳು ನಂಬಿದಳು. ಅವಳು ಮಾತಾಡಿದಳು. ಅವಳು

ಕೈಗೊಂಡು ನಡೆದಳು.

ಅವಳು ಬಯಸಿದ ಫಲಿತಾಂಶವನ್ನು ವ್ಯಕ್ತಪಡಿಸುವ ತನ್ನ ನಂಬಿಕೆಯನ್ನು ಹೇಳಿದಳು. ಅವಳು ಯೇಸುವಿನ ಉಡುಪನ್ನು ಮುಟ್ಟಿದಾಗ ಅವಳು ಗುಣವಾಗುತ್ತಾಳೆ ಎಂದು ಹೇಳಿದಳು. ಕರ್ತನಾದ ಯೇಸು ಗುಣಪಡಿಸುವ ಅದ್ಭುತವನ್ನು ತಂದ ಅವಳ ನಂಬಿಕೆಯನ್ನು ಒಪ್ಪಿಕೊಂಡನು.

ಕಾಲ ಬದಲಾಗಿದೆ. ಆದಾಗ್ಯೂ, ದೇವರಲ್ಲಿ ನಂಬಿಕೆಯ ಸತ್ಯವೇದದ ತತ್ವವು ಇನ್ನೂ ಉತ್ತಮವಾಗಿದೆ. ದೇವರು ಇನ್ನೂ ನಮ್ಮ ಹೃದಯದಲ್ಲಿ ನಂಬಿಕೆಗೆ ಪ್ರತಿಕ್ರಿಯಿಸುತ್ತಾನೆ. ನಾವು ಏನು ಮಾತಾಡುತ್ತೇವೆ ಮತ್ತು ಮಾಡುತ್ತೇವೆ ಎಂಬುದರ ಮೂಲಕ ನಮ್ಮ ನಂಬಿಕೆ ವ್ಯಕ್ತವಾಗುತ್ತದೆ. ನಿಮ್ಮ ನಂಬಿಕೆಯನ್ನು ಮಾತನಾಡಿ. ನೀವು ದೇವರನ್ನು ನಂಬುವ ಅಪೇಕ್ಷಿತ ಫಲಿತಾಂಶವನ್ನು ಮಾತನಾಡಿ.

# 40

# ನೀವು ಏನು ಹೇಳುತ್ತೀರೋ ಅದು ಕಾರ್ಯರೂಪಕ್ಕೆ ಬರುತ್ತದೆ ಎಂದು ನಂಬಿರಿ

**ಮಾರ್ಕ 11:22,23**

**22 ಯೇಸು ಹೇಳಿದ್ದೇನಂದರೆ – ನಿಮಗೆ ದೇವರಲ್ಲಿ ನಂಬಿಕೆಯಿರಲಿ**

**23 ನಿಮಗೆ ಸತ್ಯವಾಗಿ ಹೇಳುತ್ತೇನೆ, ಯಾವನಾದರೂ ಈ ಬೆಟ್ಟಕ್ಕೆ – ನೀನು ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ ಬೀಳು ಎಂದು ಹೇಳಿ ತನ್ನ ಮನಸ್ಸಿನಲ್ಲಿ ಸಂಶಯಪಡದೆ ತಾನು ಹೇಳಿದ್ದು ಆಗುವದೆಂದು ನಂಬಿದರೆ ಅವನು ಹೇಳಿದಂತೆಯೇ ಆಗುವದು.**

ಮಾರ್ಕ 11:22,23 ರಲ್ಲಿ ದೇವರಲ್ಲಿ ನಂಬಿಕೆಯು ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದರ ಕುರಿತು ಯೇಸು ನಮಗೆ ಸ್ಪಷ್ಟವಾದ ಬೋಧನೆಯನ್ನು ನೀಡಿದ ಭಾಗಗಳಲ್ಲಿ ಒಂದಾಗಿದೆ. ಅಂಜೂರದ ಮರದೊಂದಿಗೆ ಮಾತನಾಡುವ ಮೂಲಕ ನಂಬಿಕೆಯನ್ನು ಹೇಗೆ ತೋರಿಸಬೇಕೆಂದು ಯೇಸು ಆಗಷ್ಟೇ ತೋರಿಸಿದ್ದನು. ಆತನು ಅಂಜೂರದ ಮರದೊಂದಿಗೆ ಮಾತನಾಡುವ ಫಲಿತಾಂಶವನ್ನು ಶಿಷ್ಯರು ನೋಡಿದರು. ಅವರು ದೇವರಲ್ಲಿ ತಮ್ಮ ನಂಬಿಕೆಯನ್ನು ಹೇಗೆ ಪ್ರದರ್ಶಿಸಬಹುದು ಎಂಬುದನ್ನು ಯೇಸು ಅವರಿಗೆ ವಿವರಿಸಲು ಮುಂದಾದನು.

ದೇವರಲ್ಲಿ ನಂಬಿಕೆಯೊಂದಿಗೆ, ಪರ್ವತವನ್ನು ಚಲಿಸುವಂತೆ ಆಜ್ಞಾಪಿಸಿ ಮಾತನಾಡಲು ಯೇಸು ನಮಗೆ ಸೂಚಿಸಿದನು. ನೀವು ಏನು ಹೇಳುತ್ತಿದ್ದೀರಿ ಎಂಬುದರ ಬಗ್ಗೆ ನಿಮ್ಮ ಹೃದಯದಲ್ಲಿ ಅನುಮಾನಿಸಬೇಡಿ. ನೀವು ಏನು ಹೇಳುತ್ತೀರೋ ಅದನ್ನು ಮಾಡಲಾಗುತ್ತದೆ ಎಂದು ನಂಬಿರಿ ಮತ್ತು ನೀವು ಹೇಳುವುದನ್ನು ನೀವು ಹೊಂದುತ್ತೀರಿ. ನಮ್ಮ ನಂಬಿಕೆ ದೇವರ ಮೇಲಿದೆ. ಆದರೆ ಅದೇ ಸಮಯದಲ್ಲಿ, ನಾವು ಸ್ವಾಭಾವಿಕವಾಗಿ ಏನನ್ನಾದರೂ ಮಾಡುತ್ತೇವೆ. ನಾವು ನಂಬಿಕೆಯ ಮಾತುಗಳನ್ನು ಮಾತನಾಡುತ್ತೇವೆ. ನಾವು ನಂಬುವ ದೇವರಿಂದ ನಾವು ಏನು ಮಾತನಾಡುತ್ತೇವೆಯೋ ಅದನ್ನು ಮಾಡಲಾಗುತ್ತದೆ ಎಂದು ನಾವು ನಂಬುತ್ತೇವೆ. ನಾವು ದೇವರೊಂದಿಗೆ ಸಹೋದ್ಯೋಗಿಗಳು ಎಂದು ನಾವು ನಂಬುತ್ತೇವೆ. ನಾವು ನಂಬಿಕೆಯ

ಮಾತುಗಳನ್ನು ಮಾತನಾಡುವಾಗ, ನಾವು ನಂಬುವ ದೇವರು ನಮ್ಮ ಪರವಾಗಿ ಕಾರ್ಯನಿರ್ವಹಿಸುತ್ತಾನೆ, ಆ ಮಾತುಗಳು ಜಾರಿಗೆ ಬರುತ್ತವೆ. ಇದು ದೇವರ ಮೇಲಿನ ನಂಬಿಕೆಯಿಂದಾಗಿ, ನಾವು ಏನು ಹೇಳುತ್ತೇವೋ ಅದನ್ನು ಮಾಡಲಾಗುತ್ತದೆ ಎಂದು ನಾವು ನಂಬಬಹುದು ಏಕೆಂದರೆ ದೇವರು ಅದನ್ನು ಮಾಡಲು ಸಮರ್ಥನಾಗಿದ್ದಾನೆ.

ದೇವರಲ್ಲಿ ನಂಬಿಕೆ ಇಡಿ. ನಿಮ್ಮ ನಂಬಿಕೆಯನ್ನು ಮಾತನಾಡಿ. ನೀವು ಏನು ಮಾತನಾಡುತ್ತೀರೋ ಅದನ್ನು ಮಾಡಲಾಗುತ್ತದೆ ಎಂದು ನಂಬಿರಿ ಏಕೆಂದರೆ ದೇವರು ಅದನ್ನು ಮಾಡುತ್ತಾನೆ. ನೀವು ಏನು ಹೇಳುತ್ತೀರೋ ಅದು ನೆರವೇರುತ್ತದೆ ಎಂದು ನಂಬಿರಿ.

# 41

# ಪ್ರಾರ್ಥನೆಯಲ್ಲಿ ನಂಬಿಕೆಯ ಮಾತುಗಳನ್ನು ಮಾತನಾಡಿ

**ಮಾರ್ಕ 11:22–24**

**[22] ಯೇಸು ಹೇಳಿದ್ದೇನಂದರೆ – ನಿಮಗೆ ದೇವರಲ್ಲಿ ನಂಬಿಕೆಯಿರಲಿ**

**[23] ನಿಮಗೆ ಸತ್ಯವಾಗಿ ಹೇಳುತ್ತೇನೆ, ಯಾವನಾದರೂ ಈ ಬೆಟ್ಟಕ್ಕೆ – ನೀನು ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ ಬೀಳು ಎಂದು ಹೇಳಿ ತನ್ನ ಮನಸ್ಸಿನಲ್ಲಿ ಸಂಶಯಪಡದೆ ತಾನು ಹೇಳಿದ್ದು ಆಗುವದೆಂದು ನಂಬಿದರೆ ಅವನು ಹೇಳಿದಂತೆಯೇ ಆಗುವದು.**

**[24] ಆದಕಾರಣ ನೀವು ಪ್ರಾರ್ಥನೆಮಾಡಿ ಏನೇನು ಬೇಡಿಕೊಳ್ಳುತ್ತೀರೋ ಅದನ್ನೆಲ್ಲಾ ಹೊಂದಿದ್ದೇವೆಂದು ನಂಬಿರಿ; ಅದು ನಿಮಗೆ ಸಿಕ್ಕುವದೆಂದು ನಿಮಗೆ ಹೇಳುತ್ತೇನೆ.**

ಕರ್ತನಾದ ಯೇಸುವು ದೇವರಲ್ಲಿ ನಂಬಿಕೆಯನ್ನು ಹೇಗೆ ಅಭ್ಯಾಸಿಸಬೇಕೆಂದು ನಮಗೆ ಕಲಿಸಿದ ಅದೇ ಭಾಗದಲ್ಲಿ, ಆತನು ಪ್ರಾರ್ಥನೆಯ ಬಗ್ಗೆ ನಮಗೆ ಕಲಿಸುವುದನ್ನು ಮುಂದುವರೆಸಿದನು. *"ಆದಕಾರಣ ನೀವು ಪ್ರಾರ್ಥನೆಮಾಡಿ ಏನೇನೂ ಬೇಡಿಕೊಳ್ಳುತ್ತೀರೋ...." "ಆದಕಾರಣ ... ನಿಮಗೆ ಹೇಳುತ್ತೇನೆ ..."* ಎಂದರೆ "ಈ ಕಾರಣಕ್ಕಾಗಿ, ನಾನು ಇದನ್ನು ನಿಮಗೆ ಹೇಳುತ್ತೇನೆ ..." ಅಥವಾ "ಅದಕ್ಕಾಗಿಯೇ ನಾನು ಇದನ್ನು ನಿಮಗೆ ಹೇಳುತ್ತೇನೆ ..." ಎಂದು ಯೇಸು ನಮಗೆ ನೀಡಿದ ಪ್ರಾರ್ಥನೆ ಕುರಿತು ಭರವಸೆ ಮತ್ತು ಮಾರ್ಕ 11:24ರಲ್ಲಿ ಪ್ರಾರ್ಥಿಸುವ ವಿಧಾನದ ಬಗ್ಗೆ ಆತನು ನಮಗೆ ಮಾರ್ಕ 11:22,23ರಲ್ಲಿ ಕಲಿಸಿದ ವಿಷಯಕ್ಕೆ ಸಂಪರ್ಕ ಹೊಂದಿದೆ.

ನೀವು ಪ್ರಾರ್ಥಿಸುವಾಗ, ನೀವು ಏನು ಕೇಳಿದರೂ, ನೀವು ಅವುಗಳನ್ನು ಸ್ವೀಕರಿಸಿದ್ದೀರಿ ಎಂದು ನಂಬಿರಿ ಮತ್ತು ನೀವು ಅವುಗಳನ್ನು ಹೊಂದುವಿರಿ ಎಂದು ಯೇಸು ಹೇಳಿದನು. ನಾವು ಆತನ ಚಿತ್ತಾನುಸಾರವಾಗಿ ಏನಾದರೂ ಬೇಡಿಕೊಂಡರೆ, ನಾವು ತಂದೆಯಿಂದ ಕೇಳಿಕೊಂಡದ್ದನ್ನು ನಾವು ಪಡೆದಿದ್ದೇವೆ ಎಂದು ನಮಗೆ ತಿಳಿದಿದೆ (1 ಯೋಹಾನ 5:14,15). ಆದ್ದರಿಂದ, ನಾವು ಪ್ರಾರ್ಥಿಸಿದ ಸಮಯದಲ್ಲಿ ನಾವು ಸ್ವೀಕರಿಸಿದ್ದೇವೆ ಎಂದು ನಾವು ನಂಬುತ್ತೇವೆ. ಇದು ಪೂರ್ಣಗೊಂಡ ವಿಷಯವಾಗಿದೆ. ಇದು ಆತ್ಮದಲ್ಲಿ

ಮಾಡಲಾಗುತ್ತದೆ. ಮಾರ್ಕ 11:23ರಲ್ಲಿ ಆತನು ನಮಗೆ ಕಲಿಸಿದ್ದನ್ನು ನಾವು ಈಗ ಅಭ್ಯಾಸ ಮಾಡುತ್ತೇವೆ. ನಾವು ಅಗತ್ಯಕ್ಕೆ, ಪರಿಸ್ಥಿತಿಗೆ, ಸಮಸ್ಯೆಗೆ, ಬೆಟ್ಟಕ್ಕೆ ಮಾತನಾಡುತ್ತೇವೆ ಮತ್ತು ಪ್ರಾರ್ಥನೆಯಲ್ಲಿ ನಾವು ಸ್ವೀಕರಿಸಿದ್ದನ್ನು ಘೋಷಿಸುತ್ತೇವೆ. ಪರ್ವತವು ಚಲಿಸಿದೆ ಎಂದು ನಾವು ಘೋಷಿಸುತ್ತೇವೆ. ನಾವು ಪ್ರಾರ್ಥಿಸಿದಾಗ ನಾವು ಸ್ವೀಕರಿಸಿದ್ದೇವೆ ಎಂದು ನಂಬುವ ಮೂಲಕ ಮತ್ತು ನಾವು ಸ್ವೀಕರಿಸಿದ್ದೇವೆ ಎಂದು ನಾವು ನಂಬಿದ್ದನ್ನು ಮಾಡಲಾಗಿದೆ ಎಂದು ಘೋಷಿಸುವ ಮೂಲಕ ಪರಿಸ್ಥಿತಿಯೊಂದಿಗೆ ಮಾತನಾಡುವ ಮೂಲಕ ದೇವರಲ್ಲಿ ನಂಬಿಕೆಯನ್ನು ಪ್ರದರ್ಶಿಸಲಾಗುತ್ತದೆ. ಪ್ರಾರ್ಥನೆಯಲ್ಲಿ ನಂಬಿಕೆಯ ಮಾತುಗಳನ್ನು ಮಾತನಾಡಿ. ಪ್ರಾರ್ಥನೆಯು ದೇವರಿಗೆ ನಂಬಿಕೆಯ ಮಾತುಗಳನ್ನು ಒಳಗೊಂಡಿರುತ್ತದೆ ಮತ್ತು ನಂತರ ನೀವು ಪ್ರಾರ್ಥಿಸಿದ ಪರಿಸ್ಥಿತಿಗೆ ನಂಬಿಕೆಯ ಮಾತುಗಳು ಒಳಗೊಂಡಿರುತ್ತದೆ.

# 42
# ಆತನ ಮಾತಿಗೆ ಒಪ್ಪಿಕೊಳ್ಳಿ

**ಲೂಕ 1:37,38,45**

**[37] ದೇವರಿಂದ ಬರುವ ಯಾವ ಮಾತಾದರೂ ನಿಷ್ಫಲವಾಗುವದಿಲ್ಲ ಅಂದನು.**

**[38] ಆಗ ಮರಿಯಳು – ಇಗೋ, ನಾನು ಕರ್ತನ ದಾಸಿ; ನಿನ್ನ ಮಾತಿನಂತೆ ನನಗಾಗಲಿ ಅಂದಳು. ಆಮೇಲೆ ಆ ದೂತನು ಆಕೆಯ ಬಳಿಯಿಂದ ಹೊರಟುಹೋದನು.**

**[45] ನಂಬಿದವಳಾದ ನೀನು ಧನ್ಯಳೆ; ಕರ್ತನು ನಿನಗೆ ಹೇಳಿದ ಮಾತುಗಳು ನೆರವೇರುವವು ಅಂದಳು.**

ಪವಿತ್ರಾತ್ಮನ ಶಕ್ತಿಯಿಂದ ಮರಿಯಳು ಗರ್ಭಿಣಿಯಾಗಲಿದ್ದಾಳೆ ಎಂಬ ಸುದ್ದಿಯನ್ನು ತಂದ ದೇವದೂತನು ಸಂದೇಶವನ್ನು ಹೀಗೆ ಕೊನೆಗೊಳಿಸಿದನು, *"ದೇವರಿಂದ ಬರುವ ಯಾವ ಮಾತಾದರೂ ನಿಷ್ಫಲವಾಗುವದಿಲ್ಲ."* ಈ "ಯಾವ" ಎಂಬ ಪದವು ಮೂರು ಗ್ರೀಕ್ ಪದಗಳಾದ *'ಪಾಸ್'* (ಎಲ್ಲವೂ, ಪ್ರತಿ), *'ರೇಮಾ'* (ಪದ, ಉಚ್ಚಾರಣೆ), ಮತ್ತು *'ಔ'* (ಇಲ್ಲ) ಸಂಯೋಜನೆಯಾಗಿದೆ. ಆದ್ದರಿಂದ, ಪರಿಷ್ಕೃತ ಆವೃತ್ತಿಯಲ್ಲಿ ನೋಡಿದಂತೆ 37 ನೇ ವಚನದ ಉತ್ತಮ ನಿರೂಪಣೆಯು *"... ದೇವರಿಂದ ಬರುವ ಯಾವ ಮಾತಾದರೂ ನಿರರ್ಥಕವಾಗುವದಿಲ್ಲ"* ನೆರವೇರುತ್ತದೆ . ದೇವರ ಪ್ರತಿಯೊಂದು ಮಾತು ಶಕ್ತಿಯುತವಾಗಿದೆ ಮತ್ತು ಅದು ನೆರವೇರುತ್ತದೆ.

ದೇವರು ಮಾತನಾಡಿದ್ದನು. ದೇವದೂತನು ಇದನ್ನು ದೃಢೀಕರಿಸಿದನು. ಮರಿಯಳು ದೇವರ ಮಾತಿಗೆ ಒಪ್ಪಿಕೊಳ್ಳುವ ಮೂಲಕ ಸರಳವಾಗಿ ಪ್ರತಿಕ್ರಿಯಿಸಿದಳು. ಅವಳು, *"ನಿನ್ನ ಮಾತಿನಂತೆ ನನಗಾಗಲಿ"* ಎಂದಳು. ಅವಳು ಈ ಮಾತುಗಳನ್ನು ಒಪ್ಪುತ್ತಾಳೆ ಎಂದರೆ ಆ ಕ್ಷಣದಿಂದ ಅವಳು ತನ್ನ ಮೇಲೆ ಮಾತನಾಡಿದ್ದಕ್ಕೆ ಅನುಗುಣವಾಗಿ ಎಲ್ಲವನ್ನೂ ಮಾಡಿದಳು. ನಂತರ, ಎಲಿಜಬೇತಳ ಮೂಲಕ ಪವಿತ್ರ ಆತ್ಮನು ಮೇರಿಯನ್ನು ಪ್ರೋತ್ಸಾಹಿಸಿದನು, ಏಕೆಂದರೆ ಅವಳು ನಂಬಿದ್ದರಿಂದ, ಅವಳಿಗೆ ಹೇಳಿದ ಮಾತು ನೆರವೇರುವುದನ್ನು ನೋಡುತ್ತಾಳೆ.

ಲಿಖಿತ ವೇದವಾಕ್ಯಗಳಲ್ಲಿ ನಾವು ಓದುವ ದೇವರ ಯಾವುದೇ

ಮಾತು ನೆರವೇರದೆ ಇರುವದಿಲ್ಲ . ವೇದವಾಕ್ಯಗಳಲ್ಲಿ ನಮಗೆ ನೀಡಲಾದ ಪ್ರತಿಯೊಂದು ವಾಕ್ಯವು ಶಕ್ತಿಯುತವಾಗಿದೆ ಮತ್ತು ಅದು ನೆರವೇರುತ್ತದೆ. ಆತನ ವಾಕ್ಯವನ್ನು ನಂಬುವುದು ಎಂದರೆ ನಾವು ಆತನ ವಾಕ್ಯದೊಂದಿಗೆ ಒಪ್ಪಂದಕ್ಕೆ ಬರುತ್ತೇವೆ ಎಂದರ್ಥ. ಮರಿಯಳು ಮಾಡಿದಂತೆ ನಾವು ಒಪ್ಪುತ್ತೇವೆ ಮತ್ತು ಹೇಳುತ್ತೇವೆ, *"ನಿನ್ನ ಮಾತಿನ ಪ್ರಕಾರ ನನಗಾಗಲಿ."* ಆತನ ವಾಕ್ಯದೊಂದಿಗಿನ ನಮ್ಮ ಒಪ್ಪಂದವು ನಾವು ಹೇಗೆ ಯೋಚಿಸುತ್ತೇವೆ, ಮಾತನಾಡುತ್ತೇವೆ ಮತ್ತು ವರ್ತಿಸುತ್ತೇವೆ ಎಂಬುದನ್ನು ಒಳಗೊಂಡಿರುತ್ತದೆ. ನಾವು ವಾಕ್ಯದ ವಿರುದ್ಧವಾಗಿ ಮಾತನಾಡಲು ಸಾಧ್ಯವಿಲ್ಲ ಮತ್ತು ನಾವು ಆತನ ವಾಕ್ಯವನ್ನು ಒಪ್ಪುತ್ತೇವೆ ಎಂದು ಹೇಳಲು ಸಾಧ್ಯವಿಲ್ಲ. ನಾವು ದೇವರೊಂದಿಗೆ ಮತ್ತು ದೇವರ ವಾಕ್ಯದೊಂದಿಗೆ ಸಮ್ಮತಿಸಿದರೆ, ನಮ್ಮ ಮಾತುಗಳು ಆತನ ವಾಕ್ಯದೊಂದಿಗೆ ಸಹ ಒಪ್ಪಿಕೊಳ್ಳಬೇಕು. ನಾವು ನಮ್ಮ ನಂಬಿಕೆಯನ್ನು ಮಾತನಾಡುವಾಗ, ಆತನ ವಾಕ್ಯದೊಂದಿಗೆ ಸಮ್ಮತಿಸುವಾಗ, ಕರ್ತನಿಂದ ನಮಗೆ ಮಾತನಾಡುವ ವಿಷಯಗಳ ಕಾರ್ಯಕ್ಷಮತೆ ಇರುತ್ತದೆ.

# 43
# ರೋಗಗಳು ಬಿಟ್ಟು ಹೋಗಲು ಆಜ್ಞಾಪಿಸಿ

**ಲೂಕ 4:38,39**

**[38] ಆತನು ಸಭಾಮಂದಿರದಿಂದೆದ್ದು ಸೀಮೋನನ ಮನೆಗೆ ಬಂದನು. ಅಲ್ಲಿ ಸೀಮೋನನ ಅತ್ತೆಯು ಕಠಿಣ ಜ್ವರದಿಂದ ಬಹಳ ಕಷ್ಟಪಡುತ್ತಿರಲಾಗಿ ಆಕೆಯ ವಿಷಯದಲ್ಲಿ ಆತನನ್ನು ಬೇಡಿಕೊಂಡರು.**
**[39] ಆತನು ಆಕೆಯ ಬಳಿ ನಿಂತು ಬಾಗಿ ಆ ಜ್ವರವನ್ನು ಗದರಿಸಲು ಅದು ಆಕೆಯನ್ನು ಬಿಟ್ಟುಹೋಯಿತು. ಕೊಡಲೆ ಆಕೆಯು ಎದ್ದು ಅವರಿಗೆ ಉಪಚಾರ ಮಾಡಿದಳು.**

ನಾವು ಜೀವನದಲ್ಲಿ ಮತ್ತು ಸೇವೆಯಲ್ಲಿ ಕರ್ತನಾದ ಯೇಸುವನ್ನು ಅನುಸರಿಸುತ್ತೇವೆ. ಅವರ ಕಾಯಿಲೆಗಳು ಮತ್ತು ರೋಗಗಳನ್ನು ಗುಣಪಡಿಸಲು ಯೇಸು ಜನರಿಗೆ ಹೇಗೆ ಸೇವೆ ಮಾಡಿದನು? ಅನಾರೋಗ್ಯ ಮತ್ತು ರೋಗವನ್ನು ತೊಡೆದುಹಾಕಲು ಯೇಸು ತಂದೆಗೆ ಪ್ರಾರ್ಥಿಸುವುದನ್ನು ನಾವು ನಿಜವಾಗಿಯೂ ಕಾಣುವುದಿಲ್ಲ. ಹೌದು, ಯೇಸು ತಂದೆಯೊಂದಿಗೆ ಸಂವಾದದ ಪ್ರಾರ್ಥನೆಯಲ್ಲಿ ಹೆಚ್ಚು ಸಮಯವನ್ನು ಕಳೆದನು. ಆದರೆ ಕಾಯಿಲೆಗಳು ಮತ್ತು ರೋಗಗಳೊಂದಿಗೆ ವ್ಯವಹರಿಸುವಾಗ, ಯೇಸು ರೋಗವನ್ನು ತೊರೆಯುವಂತೆ ಆಜ್ಞಾಪಿಸಿದ ಅಧಿಕಾರದೊಂದಿಗೆ ಮಾತನಾಡಿದನು. ಲೂಕ 4:38,39 ಅಂತಹ ಒಂದು ಉದಾಹರಣೆಯಾಗಿದೆ. ಕರ್ತನಾದ ಯೇಸು ಜ್ವರವನ್ನು ಗದರಿಸಿದನು. ಆತನು ಜ್ವರವನ್ನು ಮಾತನಾಡಿಸಿದನು ಮತ್ತು ಅದನ್ನು ಬಿಡಲು ಆಜ್ಞಾಪಿಸಿದನು, ಮತ್ತು ಅದು ತಕ್ಷಣವೇ ಹೊರಟುಹೋಯಿತು.

ಯೇಸು ಯಾವಾಗಲೂ ಸರಿ. ಆತನು ಶಾಶ್ವತವಾದ ವಾಕ್ಯ. ನಮ್ಮ ದೈವಶಾಸ್ತ್ರವು ಇಲ್ಲಿಯವರೆಗೆ ಯೇಸುವಿನಂತೆ ಕಾಯಿಲೆಗಳು ಮತ್ತು ರೋಗಗಳ ಬಗ್ಗೆ ಮಾತನಾಡುವುದನ್ನು ಒಳಗೊಂಡಿಲ್ಲದಿದ್ದರೆ, ನಮ್ಮ ದೈವಶಾಸ್ತ್ರವು ಯೇಸು ಹೇಳಿದ್ದನ್ನು ಮತ್ತು ಮಾಡಿದ್ದನ್ನು ಬದಲಿಸಬೇಕು ಮತ್ತು ಹೊಂದಿಸಿಕೊಳ್ಳಬೇಕು.

ನೀವು ಮತ್ತು ನಾನು ಯೇಸು ಮಾಡಿದ ಕ್ರಿಯೆಗಳನ್ನು ಮತ್ತು ಇನ್ನೂ ಮಹತ್ತಾದ ಕ್ರಿಯೆಗಳನ್ನು ಮಾಡಬೇಕು (ಯೋಹಾನ 14:12). ಮತ್ತು ಸಹಜವಾಗಿ, ಆತನು ಮಾಡಿದ ರೀತಿಯಲ್ಲಿ ನಾವು ಅದನ್ನು ಮಾಡಬೇಕು.

ಯೇಸು ಅನಾರೋಗ್ಯಕ್ಕೆ ಮತ್ತು ರೋಗಕ್ಕೆ ಮಾತನಾಡಿದನು ಮತ್ತು ಅವುಗಳಿಗೆ ಬಿಟ್ಟು ಹೋಗುವಂತೆ ಆಜ್ಞಾಪಿಸಿದನು. ಆದ್ದರಿಂದ, ನೀವು ಮತ್ತು ನಾನು ಅದೇ ರೀತಿಯಲ್ಲಿ ಮಾತನಾಡಬೇಕು. ರೋಗಗಳನ್ನು ಬಿಡಲು ನಾವು ಆಜ್ಞಾಪಿಸುತ್ತೇವೆ. ನಾವು ಇತರರಿಗೆ ಸೇವೆ ಮಾಡುವಾಗ ಮತ್ತು ನಮ್ಮ ದೇಹಕ್ಕಾಗಿ ಇದನ್ನು ಮಾಡಬಹುದು. ಯೇಸುವನ್ನು ಹಿಂಬಾಲಿಸಿ. ಆತನು ಮಾಡಿದ್ದನ್ನು ಮಾಡಿ. ನಿಮ್ಮ ಮಾತುಗಳು ಆತನು ನಿಮಗೆ ನೀಡಿದ ಅಧಿಕಾರದ ಅಭಿವ್ಯಕ್ತಿಯಾಗಿದೆ. ರೋಗಗಳನ್ನು ಬಿಡಲು ಆಜ್ಞಾಪಿಸಿ. ನಿಮ್ಮ ನಂಬಿಕೆಯನ್ನು ಮಾತನಾಡಿ.

# 44

# ಬೀರುಗಾಳಿಯೊಂದಿಗೆ ಮಾತನಾಡಿ

**ಲೂಕ 8:22–25**

**22 ಒಂದಾನೊಂದು ದಿನದಲ್ಲಿ ಆತನು ತನ್ನ ಶಿಷ್ಯರ ಸಂಗಡ ಒಂದು ದೋಣಿಯನ್ನು ಹತ್ತಿ ಕೆರೆಯ ಆಚೇದಡಕ್ಕೆ ಹೋಗೋಣ ಎಂದು ಅವರಿಗೆ ಹೇಳಲು ಅವರು ದೋಣಿಯನ್ನು ನೀರಿನೊಳಗೆ ನೂಕಿ ಹೊರಟರು.**

**23 ಅವರು ಹೋಗುತ್ತಿರುವಾಗ ಆತನಿಗೆ ನಿದ್ರೆ ಹತ್ತಿತ್ತು; ಅಷ್ಟರಲ್ಲಿ ಬಿರುಗಾಳಿ ಕೆರೆಯ ಮೇಲೆ ಬರಲು ದೋಣಿಯೊಳಗೆ ನೀರು ತುಂಬಿಕೊಂಡದರಿಂದ ಅವರು ಅಪಾಯಕ್ಕೆ ಗುರಿಯಾದರು**

**24 ಹೀಗಿರಲಾಗಿ ಅವರು ಆತನ ಹತ್ತಿರ ಬಂದು- ಗುರುವೇ, ಗುರುವೇ, ಸಾಯುತ್ತೇವೆ ಎಂದು ಹೇಳಿ ಆತನನ್ನು ಎಬ್ಬಿಸಿದರು. ಆಗ ಆತನು ಎದ್ದು ಗಾಳಿಯನ್ನೂ ಉಬ್ಬುವ ನೀರನ್ನೂ ಗದರಿಸಿದನು. ಗದರಿಸಲು ಅವು ನಿಂತವು, ಶಾಂತವಾಯಿತು.**

**25 ತರುವಾಯ ಆತನು – ನಿಮ್ಮ ನಂಬಿಕೆ ಎಲ್ಲಿ? ಎಂದು ಅವರನ್ನು ಕೇಳಿದನು. ಅವರಾದರೋ ಭಯಪಟ್ಟು- ಈತನು ಯಾರಿರಬಹುದು? ಗಾಳಿಗೂ ನೀರಿಗೂ ಅಪ್ಪಣೆ ಕೊಡುತ್ತಾನೆ ; ಅವು ಕೂಡ ಹೇಳಿದ ಹಾಗೆ ಕೇಳುತ್ತವಲ್ಲಾ ಎಂದು ಒಬ್ಬರಿಗೊಬ್ಬರು ಮಾತಾಡಿಕೊಂಡು ಅತ್ಯಾಶ್ಚರ್ಯಪಟ್ಟರು.**

ಯೇಸು ಗಾಳಿ ಮತ್ತು ನೀರಿನೊಂದಿಗೆ ಮಾತಾಡಿದನು ಮತ್ತು ಶಾಂತವಾಗಿರಲು ಅವುಗಳಿಗೆ ಆಜ್ಞಾಪಿಸಿದನು ಮತ್ತು ಅವು ಆತನಿಗೆ ವಿಧೇಯರಾದವು. ಯೇಸು ತನ್ನ ಶಿಷ್ಯರ ಕಡೆಗೆ ತಿರುಗಿ, "ನಿಮ್ಮ ನಂಬಿಕೆ ಎಲ್ಲಿದೆ?" ಎಂದು ಪ್ರಶ್ನಿಸಿದನು. ಅವರು ತಮ್ಮ ನಂಬಿಕೆಯಿಂದ ಈ ಪರಿಸ್ಥಿತಿಯನ್ನು ನಿಭಾಯಿಸಬಹುದಿತ್ತು ಎಂದು ಸೂಚಿಸುತ್ತದೆ. ಅವರು ತಮ್ಮ ನಂಬಿಕೆಯಿಂದ ಆತನು ಮಾಡಿದ್ದನ್ನು ಮಾಡಬಹುದಿತ್ತು.

ಕರ್ತನಾದ ಯೇಸು ನಮಗೆ ಬದುಕಲು ಮತ್ತು ತಂದೆಯೊಂದಿಗೆ ನಡೆಯುವ ಮಾರ್ಗವನ್ನು ನಮಗೆ ಮಾದರಿಯಾಗಿಸಿದನು. ಪವಿತ್ರಾತ್ಮನ ಅಭಿಷೇಕದ ಅಡಿಯಲ್ಲಿ ನಡೆಯುವುದು ಮತ್ತು ಸೇವೆ ಮಾಡುವುದು ಏನು ಎಂದು ಆತನು ನಮಗೆ ಮಾದರಿಯಾಗಿದ್ದಾನೆ. ನಂಬಿಕೆ ಏನು ಮಾಡಬಲ್ಲದು ಎಂಬುದರಲ್ಲೂ ಆತನು ನಮಗೆ ಮಾದರಿಯಾಗಿದ್ದಾನೆ. ಆತನು ನಿರ್ಜೀವ ವಸ್ತುಗಳೊಂದಿಗೆ ಮಾತನಾಡಿದನು - ಅಂಜೂರದ ಮರ, ಕಾಯಿಲೆ, ರೋಗ, ಗಾಳಿ ಮತ್ತು ಅಲೆಗಳು. ಅವು ಪಾಲಿಸಬೇಕೆಂದು ಅವುಗಳಿಗೆ ಆಜ್ಞಾಪಿಸಿದನು

ಮತ್ತು ಅವು ಮಾಡಿದವು. ಯೇಸು ಏನು ಮಾಡಿದನೋ ಅದನ್ನು ನಾವು ಅನುಸರಿಸಬೇಕೇ? ಖಂಡಿತವಾಗಿಯೂ!

ಮುಂದಿನ ಬಾರಿ ನೀವು ಬೀರುಗಾಳಿಯನ್ನು ಎದುರಿಸುವಾಗ–ಅದು ಅಕ್ಷರಶಃ ಗಾಳಿ ಮತ್ತು ಅಲೆಗಳು ಅಥವಾ ಜೀವನದ ಸಂದರ್ಭಗಳಲ್ಲಿ ಯಾವುದೇ "'ಬೀರುಗಾಳಿ" ಆಗಿರಲಿ, ಯೇಸು ಏನು ಮಾಡುತ್ತಾನೋ ಅದನ್ನು ಮಾಡಿ. ಬೀರುಗಾಳಿಯೊಂದಿಗೆ ಮಾತನಾಡಿ. ಶಾಂತವಾಗಿರಲು ಆಜ್ಞಾಪಿಸಿ. ಅಡಚಣೆಗಳನ್ನು ಹಿಂತೆಗೆದುಕೊಳ್ಳಲು, ನಿಲ್ಲಿಸಲು, ನಿಶ್ಚಲವಾಗಿರಲು ಆಜ್ಞಾಪಿಸಿ. ಗೊಂದಲದ ಬಿರುಗಾಳಿಗಳು, ಕೆಟ್ಟ ಇಚ್ಛೆ, ಗೊಡ್ಡು ಹರಟೆ, ಅಪಶ್ರುತಿ, ಕಲಹ, ಯಾವುದು ಸರಿಯಲ್ಲವೋ ಅದನ್ನು ನಿಲ್ಲಿಸಲು ಆಜ್ಞಾಪಿಸಿ.

# 45

# ಬಂಧನಗಳಿಂದ ಬಿಡುಗಡೆಯಾದ ಜನರನ್ನು ಘೋಷಿಸಿ

**ಲೂಕ 13:10-16**

**[10] ಒಂದಾನೊಂದು ಸಬ್ಬತ್ ದಿನದಲ್ಲಿ ಆತನು ಒಂದು ಸಭಾಮಂದಿರದೊಳಗೆ ಉಪದೇಶಮಾಡುತ್ತಾ ಇದ್ದನು.**
**[11] ಅಲ್ಲಿ ಹದಿನೆಂಟು ವರುಷಗಳಿಂದ ದೆವ್ವ ಬಡಿದು ಮೈಯಲ್ಲಿ ರೋಗವುಳ್ಳ ಒಬ್ಬ ಸ್ತ್ರೀಯು ಇದ್ದಳು. ಆಕೆಯು ನಡುಬೊಗ್ಗಿಹೋಗಿ ಸ್ವಲ್ಪವಾದರೂ ಮೈಯನ್ನು ಮೇಲಕ್ಕೆ ಎತ್ತಲಾರದೆ ಇದ್ದಳು.**
**[12] ಯೇಸು ಆಕೆಯನ್ನು ನೋಡಿ ಹತ್ತಿರಕ್ಕೆ ಕರೆದು ಆಕೆಗೆ – ಅಮ್ಮಾ, ನಿನಗೆ ರೋಗ ಬಿಡುಗಡೆಯಾಯಿತು ಎಂದು ಹೇಳಿ ಆಕೆಯ ಮೇಲೆ ತನ್ನ ಕೈಗಳನ್ನಿಟ್ಟನು;**
**[13] ಇಟ್ಟಕೊಡಲೆ ಆಕೆ ನೆಟ್ಟಗಾದಳು, ದೇವರನ್ನು ಕೊಂಡಾಡಿದಳು.**
**[14] ಆದರೆ ಆ ಸಭಾಮಂದಿರದ ಅಧಿಕಾರಿಯು ನಡೆದ ಸಂಗತಿಯನ್ನು ನೋಡಿ ಸಬ್ಬತ್ ದಿನದಲ್ಲಿ ಯೇಸು ಸ್ವಸ್ಥಮಾಡಿದನಲ್ಲಾ ಎಂದು ರೋಷಗೊಂಡು ಜನರಿಗೆ – ಕೆಲಸಮಾಡುವದಕ್ಕೆ ಆರು ದಿವಸಗಳು ಅವೆಅಷ್ಟೇ; ಆ ದಿವಸಗಳಲ್ಲಿ ಬಂದು ವಾಸಿಮಾಡಿಸಿಕೊಳ್ಳಿರಿ, ಸಬ್ಬತ್ ದಿನದಲ್ಲಿ ಮಾತ್ರ ಬೇಡ ಎಂದು ಹೇಳಿದನು.**
**[15] ಆ ಮಾತನ್ನು ಕೇಳಿ ಸ್ವಾಮಿಯು ಅವನಿಗೆ – ಕಪಟಿಗಳು ನೀವು, ನಿಮ್ಮಲ್ಲಿ ಪ್ರತಿಯೊಬ್ಬನೂ ಸಬ್ಬತ್ ದಿನದಲ್ಲಿ ತನ್ನ ಎತ್ತನ್ನಾಗಲಿ ಕತ್ತೆಯನ್ನಾಗಲಿ ಗೋದಲಿಯಿಂದ ಬಿಚ್ಚಿ ನೀರು ಕುಡಿಸುವದಕ್ಕಾಗಿ ಹಿಡುಕೊಂಡು ಹೋಗುತ್ತಾನಲ್ಲವೇ.**
**[16] ಹಾಗಾದರೆ ಹದಿನೆಂಟು ವರುಷಗಳ ತನಕ ಸೈತಾನನು ಕಟ್ಟಿಹಾಕಿದ್ದವಳೂ ಅಬ್ರಹಾಮನ ವಂಶದವಳೂ ಆಗಿರುವ ಈಕೆಯನ್ನು ಸಬ್ಬತ್‌ದಿನದಲ್ಲಿ ಈ ಕಟ್ಟಿನೊಳಗಿಂದ ಬಿಡಿಸಬಾರದೋ ಎಂದು ಉತ್ತರಕೊಟ್ಟನು.**

ಈ ವಾಕ್ಯವೃಂದದಲ್ಲಿ ಉಲ್ಲೇಖಿಸಲಾದ ಮಹಿಳೆಗೆ 18 ವರ್ಷಗಳಿಂದ ನಡುಬೊಗ್ಗಿಹೋಗಿ ಸ್ವಲ್ಪವಾದರೂ ಮೈಯನ್ನು ಮೇಲಕ್ಕೆ ಎತ್ತಲಾರದೆ ಇದ್ದಳು. ಸೈತಾನನು ಅವಳನ್ನು ಬಂಧಿಸಿ ಸೆರೆಯಲ್ಲಿಟ್ಟಿದ್ದನು. ದೇಹದೌರ್ಬಲ್ಯದ ಆತ್ಮವೆ ಈ ಪ್ರಕರಣದಲ್ಲಿ ಸಮಸ್ಯೆಗೆ ಕಾರಣವಾಗಿತ್ತು. ಯೇಸು ಅವಳಿಗೆ ಹೇಗೆ ಸೇವೆ ಮಾಡಿದನು? ಆತನು ಮಾತುಗಳನ್ನು ಹೇಳಿದನು ಮತ್ತು ಆತನು ಅವಳನ್ನು ಮುಟ್ಟಿದನು. ಆತನು, *"ಅಮ್ಮಾ ನಿನ್ನ ರೋಗ ಬಿಡುಗಡೆಯಾಯಿತು"* ಎಂದು ಹೇಳಿದನು. ಆತನ ಅಧಿಕಾರದ ಮಾತುಗಳು 18 ವರ್ಷಗಳಿಂದ ಸೈತಾನನು

ದುರ್ಬಲತೆಯ ಆತ್ಮನ ಮೂಲಕ ಮಾಡಿದ್ದನ್ನು ಕ್ಷಣಾರ್ಧದಲ್ಲಿ ಅಳಿಸಿಹಾಕಿತು.

ಯೇಸುವಿನಲ್ಲಿ ವಿಶ್ವಾಸಿಗಳಾದ ನಮಗೆ ಹಾವುಗಳನ್ನೂ ಚೇಳುಗಳನ್ನೂ ವೈರಿಯ ಸಮಸ್ತ ಬಲವನ್ನೂ ತುಳಿಯುವದಕ್ಕೆ ಅಧಿಕಾರ ಕೊಡಲ್ಪಟ್ಟಿದೆ (ಲೂಕ 10:19). ಯೇಸುವಿನ ಅಧಿಕಾರವು ನಿಮ್ಮ ಮತ್ತು ನನ್ನಂತಹ ವಿಶ್ವಾಸಿಗಳಿಂದ ಕೂಡಿದ ಆತನ ದೇಹ, ಸಭೆ ಮೂಲಕ ವ್ಯಕ್ತಪಡಿಸಲಾಗಿದೆ. ನಾವು ಮಾತನಾಡುವ ಮಾತುಗಳಿಂದ ಅಧಿಕಾರವನ್ನು ಚಲಾಯಿಸಲಾಗುತ್ತದೆ. ಅಧಿಕಾರದೊಂದಿಗೆ, ನಾವು ಜನರನ್ನು ಅವರ ಬಂಧನದಿಂದ ಬಿಡುಗಡೆಗೊಳಿಸುತ್ತೇವೆ ಎಂದು ಘೋಷಿಸುತ್ತೇವೆ. ವ್ಯಸನಗಳಲ್ಲಿ ಬಂಧಿಯಾಗಿರುವವರಿಗೆ, “ಯೇಸುವಿನ ಹೆಸರಿನಲ್ಲಿ, ನಿಮ್ಮ ಚಟಗಳಿಂದ ಮುಕ್ತರಾಗಿರಿ” ಎಂದು ನಾವು ಘೋಷಿಸುತ್ತೇವೆ. ಭಯದಲ್ಲಿ ಬಂಧಿತರಾದವರಿಗೆ, “ಯೇಸುವಿನ ಹೆಸರಿನಲ್ಲಿ, ಈ ಹಿಂಸಿಸುವ ಭಯದಿಂದ ಮುಕ್ತರಾಗಿರಿ” ಎಂದು ನಾವು ಘೋಷಿಸುತ್ತೇವೆ. ಅದೇ ರೀತಿಯಲ್ಲಿ, ನಾವು ಇತರ ರೀತಿಯ ಬಂಧನಗಳಿಂದ ಜನರನ್ನು ಬಿಡುಗಡೆ ಮಾಡುತ್ತೇವೆ. ಅಧಿಕಾರದ ಮಾತುಗಳನ್ನು ಮಾತನಾಡಿ. ಜನರನ್ನು ಅವರ ಬಂಧನದಿಂದ ಬಿಡುಗಡೆಯಾಗಿದ್ದಾರೆ ಎಂದು ಘೋಷಿಸಿ.

# 46

# ಅಭಿಷಿಕ್ತ ಮಾತುಗಳು ಆತ್ಮನ ಜೀವನವನ್ನು ಹೊತ್ತುಕೊಳ್ಳುತ್ತವೆ

**ಯೋಹಾನ 6:63**

**ಬದುಕಿಸುವಂಥದು ಆತ್ಮವೇ; ಮಾಂಸವು ಯಾವದಕ್ಕೂ ಬರುವದಿಲ್ಲ. ನಾನು ನಿಮಗೆ ಹೇಳಿರುವ ಮಾತುಗಳೇ ಆತ್ಮವಾಗಿಯೂ ಜೀವವಾಗಿಯೂ ಅವೆ.**

ಯೇಸು ತನ್ನ ಶಿಷ್ಯರೊಂದಿಗೆ ತನ್ನಲ್ಲಿ ನೆಲೆಸುವ ಬಗ್ಗೆ, ಆತನ ಮಾಂಸವನ್ನು ತಿನ್ನುವ ಮತ್ತು ಆತನ ರಕ್ತವನ್ನು ಕುಡಿಯುವ ಬಗ್ಗೆ ಮಾತನಾಡುವುದನ್ನು ಮುಗಿಸಿದನು. ತದನಂತರ ಆತನು ಅಕ್ಷರಶಃ, ಸ್ವಾಭಾವಿಕ ವಿಷಯಗಳ ಬಗ್ಗೆ ಮಾತನಾಡುತ್ತಿಲ್ಲ ಎಂದು ಅವರಿಗೆ ತಿಳಿಸಲು, ಬದುಕಿಸುವಂಥದು ಆತ್ಮವೇ (ಜೀವನದ ದೈವಿಕತೆ) ಎಂದು ಸ್ಪಷ್ಟಪಡಿಸಿದರು. ಮಾಂಸ (ನೈಸರ್ಗಿಕ) ಇದನ್ನು ಮಾಡಲು ಸಾಧ್ಯವಿಲ್ಲ. ನಂತರ ಆತನು ತನ್ನ ಮಾತುಗಳನ್ನು ಸೂಚಿಸಿದನು. ಆತನು ಹೇಳಿದ ಮಾತುಗಳು ಆತ್ಮ, ಆಧ್ಯಾತ್ಮಿಕ ಅಥವಾ ಆತ್ಮನ ಮಾತುಗಳು ಮತ್ತು ಆತನ ಮಾತುಗಳು ದೇವರ ಆತ್ಮನ ಜೀವವನ್ನು ಅವರಿಗೆ ತರುತ್ತವೆ. ಯೇಸುವು ಆತ್ಮನಿಂದ ಅಭಿಷೇಕಿಸಲ್ಪಟ್ಟಿದನು. ಆತನು ಮಾತನಾಡುವಾಗ, ಆತನ ಮಾತುಗಳು ಆತನ ಕೇಳುಗರಿಗೆ ಆತ್ಮನ ಜೀವವನ್ನು ತಂದವು.

ನಾವು ಪವಿತ್ರಾತ್ಮನಿಂದ ಅಭಿಷೇಕಿಸಲ್ಪಟ್ಟಿದ್ದೇವೆ (2 ಕೊರಿಂಥದವರಿಗೆ 1:21). ನಮ್ಮ ಮೂಲಕ ಕೆಲಸ ಮಾಡುವ ಆತನ ಅಭಿಷೇಕದ ಮೂಲಕ, ನಾವು ಮಾತನಾಡುವ ಮಾತುಗಳನ್ನು ದೇವರು ತನ್ನ ಆತ್ಮನ ಜೀವನದ ವಾಹಕಗಳಾಗಿ ಬಳಸುತ್ತಾನೆ. ಆದುದರಿಂದ, ನಾವು ಅಭಿಷೇಕದ ಅಡಿಯಲ್ಲಿ ಮಾತನಾಡುವಾಗ ಅಥವಾ ಆತ್ಮದಿಂದ ಪ್ರೇರಿತರಾಗಿ ಮಾತನಾಡುವಾಗ, ಆ ಮಾತುಗಳು ಅಲೌಕಿಕ ಸಂಗತಿಗಳು ಸಂಭವಿಸುವಂತೆ ಮಾಡುತ್ತವೆ. ಅವು ದೇವರ ಜೀವನವನ್ನು ಜನರಿಗೆ ಬಿಡುಗಡೆ ಮಾಡುತ್ತವೆ. ಅವು ಪರಿಸ್ಥಿತಿಗಳಲ್ಲಿ ಮತ್ತು ಸಂದರ್ಭಗಳಲ್ಲಿ ದೇವರ ಶಕ್ತಿಯನ್ನು ಬಿಡುಗಡೆ ಮಾಡುತ್ತವೆ. ಆ

ಮಾತುಗಳು ದೇವರು ನಮ್ಮ ಕ್ಷೇತ್ರಗಳಲ್ಲಿ ಬಿಡುಗಡೆ ಮಾಡಲು ಬಯಸುತ್ತಿರುವ ವಾಹಕಗಳಾಗಿವೆ. ಆತ್ಮನು ನಿಮ್ಮನ್ನು ಚಲಿಸುವಂತೆ ಧೈರ್ಯದಿಂದ ಮಾತನಾಡಿ, ಅಭಿಷಿಕ್ತ ಮಾತುಗಳು ಆತ್ಮನ ಜೀವವನ್ನು ತರುತ್ತವೆ ಎಂದು ತಿಳಿದುಕೊಳ್ಳಿ.

# 47
# ನಂಬಿಕೆಯಿಂದ ಆಜ್ಞಾಪಿಸಿ

**ಯೋಹಾನ 11:40–43**

**40 ಯೇಸು ಆಕೆಗೆ – ನೀನು ನಂಬಿದರೆ ದೇವರ ಮಹಿಮೆಯನ್ನು ಕಾಣುವಿ ಎಂದು ನಾನು ನಿನಗೆ ಹೇಳಲಿಲ್ಲವೇ ಎಂದು ಉತ್ತರಕೊಟ್ಟನು.**

**41 ಆಗ ಕಲ್ಲನ್ನು ತೆಗೆದುಹಾಕಿದರು. ಮತ್ತು ಯೇಸು ಕಣ್ಣೆತ್ತಿ ಮೇಲಕ್ಕೆ ನೋಡಿ – ತಂದೆಯೇ, ನೀನು ನನ್ನ ಪ್ರಾರ್ಥನೆಯನ್ನು ಕೇಳಿದ್ದಕ್ಕೆ ನಿನ್ನನ್ನು ಕೊಂಡಾಡುತ್ತೇನೆ;**

**42 ನೀನು ಯಾವಾಗಲೂ ನನ್ನ ಪ್ರಾರ್ಥನೆಯನ್ನು ಕೇಳುವವನಾಗಿದ್ದೀ ಎಂದು ನನಗೆ ಗೊತ್ತೇ ಇದೆ; ಆದರೂ ನೀನೆ ನನ್ನನ್ನು ಕಳುಹಿಸಿಕೊಟ್ಟೆ ಎಂದು ಸುತ್ತಲು ನಿಂತಿರುವ ಜನರು ನಂಬುವಂತೆ ಅವರಿಗೋಸ್ಕರ ಈ ಮಾತುಗಳನ್ನಾಡಿದೆನೆಂದು ಹೇಳಿದನು.**

**43 ಅದನ್ನು ಹೇಳಿದ ಮೇಲೆ ದೊಡ್ಡ ಶಬ್ದದಿಂದ – ಲಾಜರನೇ, ಹೊರಗೆ ಬಾ ಎಂದು ಕೂಗಿದನು.**

ನಾಲ್ಕು ದಿನಗಳ ಹಿಂದೆ ಸತ್ತುಹೋದ ಲಾಜರನ ಸಮಾಧಿಯ ಮುಂದೆ ನಿಂತು, ಕರ್ತನಾದ ಯೇಸು ಮಾರ್ಥಳಿಗೆ—ನೀನು ನಂಬಿದರೆ ದೇವರ ಮಹಿಮೆಯನ್ನು ಕಾಣುವಿ ಎಂದು ಭರವಸೆ ನೀಡಿದನು. ಆತನ ಪ್ರಾರ್ಥನೆಯನ್ನು ಈಗಾಗಲೇ ಕೇಳಿದ್ದಕ್ಕಾಗಿ ಆತನು ತಂದೆಗೆ ಧನ್ಯವಾದ ಹೇಳಿದನು. ತದನಂತರ ಯೇಸು, *"ಲಾಜರನೇ, ಹೊರಗೆ ಬಾ"* ಎಂಬ ಆಜ್ಞೆಯ ಮಾತುಗಳನ್ನು ಹೇಳಿದನು.

ಯೇಸು ತಂದೆಗೆ ಪ್ರಾರ್ಥಿಸಿದನು. ಆತನ ಮನವಿಯನ್ನು ಪುರಸ್ಕರಿಸಲಾಗಿದೆ ಎಂದು ಆತನಿಗೆ ತಿಳಿದಿತ್ತು. ಆದರೆ ಅಪೇಕ್ಷಿತ ಫಲಿತಾಂಶವು ನಡೆಯಲು ಸ್ವಾಭಾವಿಕ ಕ್ಷೇತ್ರದಲ್ಲಿ ಆತನು ಇಲ್ಲಿ ಆಜ್ಞೆಯ ಮಾತುಗಳನ್ನು ಹೇಳಿದನು. ನಾವು ದೇವರ ಮಹಿಮೆಯನ್ನು ಕಾಣುತ್ತೇವೆ ಎಂದು ನಾವು ನಂಬುತ್ತೇವೆ, ದೇವರ ಅದ್ಭುತ ಕಾರ್ಯಗಳು ನಮ್ಮ ಮುಂದೆ ಪ್ರದರ್ಶಿಸಲ್ಪಡುತ್ತವೆ. ಯೇಸುವಿನಂತೆ ನಾವು ನಂಬಿಕೆಯಿಂದ ಪ್ರಾರ್ಥಿಸುತ್ತೇವೆ. ಮತ್ತು ಯೇಸುವಿನಂತೆ, ನಾವು ಸಹ ನಂಬಿಕೆಯ ಆಜ್ಞೆಯ ಮಾತುಗಳನ್ನು ಮಾತನಾಡಬೇಕು.

ನೀವು ದೇವರನ್ನು ನಂಬುವ ವಿಷಯಗಳು ಯಾವುವು? ಕೆಲವೊಮ್ಮೆ,

ಲಾಜರನಂತೆ, ದೇವರು ಏನು ಮಾಡಬೇಕೆಂದು ನಾವು ನಿರೀಕ್ಷಿಸುತ್ತಿದ್ದೇವೆಯೋ ಅವು ಸಮಾಧಿಯಲ್ಲಿ ಸತ್ತುಬಿದ್ದಿರಬಹುದು. ಸಮಯ ಕಳೆದಿದೆ. ಇದು ಸ್ವಲ್ಪ ತಡವಾಗಿ ತೋರುತ್ತದೆ. ಆದರೆ ದೇವರ ವಾಗ್ದಾನವು ಸ್ಪಷ್ಟವಾಗಿದೆ. ನಾವು ನಂಬಿದರೆ, ನಾವು ದೇವರ ಮಹಿಮೆಯನ್ನು ಕಾಣುತ್ತೇವೆ. ನಾವು ದೇವರ ಅದ್ಭುತ ಕಾರ್ಯಗಳನ್ನು ನೋಡುತ್ತೇವೆ. ನಾವು ನಂಬಿಕೆಯ ಪ್ರಾರ್ಥನೆಗಳನ್ನು ಪ್ರಾರ್ಥಿಸಬೇಕು. ಮತ್ತು ನಾವು ನಂಬಿಕೆಯಿಂದ ಆಜ್ಞೆ ಮಾಡಬೇಕು. ನಿಮ್ಮ ನಂಬಿಕೆಯನ್ನು ಧೈರ್ಯದಿಂದ ಮಾತನಾಡಿ. ನಿಮ್ಮ "ಲಾಜರನು" ಹೊರಬರಲು ಆಜ್ಞಾಪಿಸಿ!

# 48

# ಮಾತುಗಳು ನಿಮ್ಮನ್ನು ನಿಮ್ಮ ಆನುವಂಶಿಕತೆಗೆ ತರುತ್ತದೆ

**ಅಪೋಸ್ತಲ ಕೃತ್ಯಗಳು 20:32**

**ನಾನೀಗ ನಿಮ್ಮನ್ನು ಕರ್ತನಿಗೂ ಆತನ ಕೃಪಾವಾಕ್ಯಕ್ಕೂ ಒಪ್ಪಿಸಿಕೊಡುತ್ತೇನೆ. ಆತನು ನಿಮ್ಮಲ್ಲಿ ಭಕ್ತಿವೃದ್ಧಿಯನ್ನುಂಟುಮಾಡುವದಕ್ಕೂ ಪವಿತ್ರರಾದವರೆಲ್ಲರಲ್ಲಿ ನಿಮಗೆ ಹಕ್ಕನ್ನು ಅನುಗ್ರಹಿಸುವದಕ್ಕೂ ಶಕ್ತನಾಗಿದ್ದಾನೆ.**

ಅಪೊಸ್ತಲನಾದ ಪೌಲನು ದೇವರ ವಾಕ್ಯವು ನಮ್ಮನ್ನು ನಿರ್ಮಿಸುತ್ತದೆ ಮತ್ತು ಯೇಸು ಕ್ರಿಸ್ತನಲ್ಲಿ ಪವಿತ್ರೀಕರಿಸಲ್ಪಟ್ಟ ಎಲ್ಲರಿಗೂ ಸೇರಿದ ಬಾಧ್ಯತೆಯಲ್ಲಿ ನಡೆಯಲು (ಸ್ವಾಧೀನಪಡಿಸಿಕೊಳ್ಳಲು) ಶಕ್ತಗೊಳಿಸುತ್ತದೆ ಎಂದು ಸ್ಪಷ್ಟಪಡಿಸುತ್ತಾನೆ. ಸಹಜವಾಗಿ, ನಾವೆಲ್ಲರೂ ನಮ್ಮ ಸ್ವಾಸ್ತ್ಯದಲ್ಲಿ ನಡೆಯಲು ಬಯಸುತ್ತೇವೆ. ದೇವರು ನಮಗೆ ಒದಗಿಸಿರುವ ಎಲ್ಲವನ್ನೂ, ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ, ಆತನ ವಿಮೋಚನೆಗೊಂಡ ಪುತ್ರರು ಮತ್ತು ಪುತ್ರಿಯರಂತೆ ಆನಂದಿಸಲು ನಾವು ಬಯಸುತ್ತೇವೆ. ಆದರೆ ನಾವು ನಮ್ಮ ಆಂತರಿಕ ವ್ಯಕ್ತಿಯಲ್ಲಿ ನಿರ್ಮಿಸಲು ಉದ್ದೇಶಪೂರ್ವಕವಾಗಿ ದೇವರ ವಾಕ್ಯದೊಂದಿಗೆ ತೊಡಗಿಸಿಕೊಳ್ಳಬೇಕು, ಇದರಿಂದ ದೇವರು ನಮಗೆ ಲಭ್ಯವಾಗುವಂತೆ ಒದಗಿಸಿದ ನಿಬಂಧನೆಗಳು ಮತ್ತು ಸವಲತ್ತುಗಳಲ್ಲಿ ನಾವು ನಡೆಯಬಹುದು.

ನಾವು ವಾಕ್ಯದೊಂದಿಗೆ ತೊಡಗಿಸಿಕೊಳ್ಳಲು ಹಲವಾರು ಮಾರ್ಗಗಳಿವೆ. ನಾವು ಆತನ ವಾಕ್ಯವನ್ನು ಓದಬೇಕು, ಆತನ ವಾಕ್ಯದ ಪ್ರಕಟನೆಯನ್ನು ಪಡೆಯಬೇಕು, ಆತನ ವಾಕ್ಯವನ್ನು ಧ್ಯಾನಿಸಬೇಕು, ಆತನ ವಾಕ್ಯವು ನಮ್ಮಲ್ಲಿ ನೆಲೆಸಲಿ (ನಿಂತಿರಲಿ) ಮತ್ತು ಆತನ ವಾಕ್ಯಕ್ಕೆ ವಿಧೆಯರಾಗಬೇಕು. ರೋಮಾಪುರದವರಿಗೆ 10:17 ನಮಗೆ ಹೇಳುವಂತೆ ಆತನ ವಾಕ್ಯವು ನಮ್ಮ ಹೃದಯದಲ್ಲಿ ನಂಬಿಕೆಯನ್ನು ಉಂಟುಮಾಡುತ್ತದೆ. ಮತ್ತು, ನಾವು ಈ ಪುಸ್ತಕದ ಉದ್ದಕ್ಕೂ ನೋಡುತ್ತಿರುವಂತೆ, ನಾವು ದೇವರ ವಾಕ್ಯದಲ್ಲಿ ನಮ್ಮ ನಂಬಿಕೆಯನ್ನು ಮಾತನಾಡಬೇಕು. ನಾವು ಇದನ್ನು ಮಾಡುವಾಗ ನಾವು

ದೇವರ ವಾಕ್ಯದೊಂದಿಗೆ ತೊಡಗಿಸಿಕೊಳ್ಳುತ್ತೇವೆ. ನಮ್ಮ ಸ್ವಾಸ್ಥ್ಯದಲ್ಲಿ ನಡೆಯಲು ಒಂದು ಕೀಲಿಯು ನಮ್ಮ ಜೀವನದ ಮೇಲೆ ದೇವರ ವಾಕ್ಯವನ್ನು ಮಾತನಾಡುವುದು. ಖಂಡಿತವಾಗಿ , ನಾವು ಇದನ್ನು ಅರ್ಥಹೀನ ಪಠಣ ಅಥವಾ ವ್ಯರ್ಥ ಆಚರಣೆಯಾಗಿ ಮಾಡುತ್ತಿಲ್ಲ. ನಾವು ದೇವರು ಮತ್ತು ಆತನ ವಾಕ್ಯದಲ್ಲಿ ನಂಬಿಕೆಯಿಂದ ವಾಕ್ಯವನ್ನು ಮಾತನಾಡುತ್ತೇವೆ. ಮತ್ತು ನಾವು ಇದನ್ನು ಮಾಡುವಾಗ, ನಮ್ಮ ಬಾಧ್ಯತೆಯಲ್ಲಿ ನಡೆಯಲು ನಾವು ಆತನ ವಾಕ್ಯದಿಂದ ನಿರ್ಮಿಸಲ್ಪಟ್ಟಿದ್ದೇವೆ. ದೇವರು ಮತ್ತು ಆತನ ವಾಕ್ಯದಲ್ಲಿ ನಿಮ್ಮ ನಂಬಿಕೆಯನ್ನು ಮಾತನಾಡಿ.

# 49

# ಇದು ನನಗೆ ಹೇಳಲ್ಪಟ್ಟ ಪ್ರಕಾರವೇ ಆಗುವದು ಎಂದು ನಾನು ನಂಬುತ್ತೇನೆ

**ಅಪೋಸ್ತಲರ ಕೃತ್ಯಗಳು 27:23–25**

**[23] ನಾನು ಯಾರವನಾಗಿದ್ದೇನೋ ಯಾರನ್ನು ಸೇವಿಸುತ್ತೇನೋ ಆ ದೇವರಿಂದ ಬಂದ ಒಬ್ಬ ದೂತನು ಕಳೆದ ರಾತ್ರಿಯಲ್ಲಿ ನನ್ನ ಹತ್ತಿರ ನಿಂತು–**

**[24] ಪೌಲನೇ, ಭಯಪಡಬೇಡ, ನೀನು ಚಕ್ರವರ್ತಿಯ ಮುಂದೆ ನಿಲ್ಲಬೇಕು; ಇದಲ್ಲದೆ ನಿನ್ನ ಸಂಗಡ ಈ ಹಡಗಿನಲ್ಲಿ ಪ್ರಯಾಣಮಾಡುವವರೆಲ್ಲರ ಪ್ರಾಣ ದೇವರು ನಿನ್ನ ಮೇಲಣ ದಯೆಯಿಂದ ಉಳಿಸಿಕೊಟ್ಟಿದ್ದಾನೆಂದು ನನ್ನ ಸಂಗಡ ಹೇಳಿದನು.**

**[25] ಆದದರಿಂದ ಜನರೇ ಧೈರ್ಯವಾಗಿರ್ರಿ. ನನಗೆ ಹೇಳಲ್ಪಟ್ಟ ಪ್ರಕಾರವೇ ಆಗುವದೆಂದು ದೇವರನ್ನು ನಂಬುತ್ತೇನೆ.**

ಒಬ್ಬ ದೇವದೂತನು ಪೌಲನಿಗೆ ದೇವರಿಂದ ಸಂದೇಶವನ್ನು ತಂದನು. ಮತ್ತು ಪೌಲನು ದೇವರಲ್ಲಿ ತನ್ನ ನಂಬಿಕೆಯನ್ನು ಧೈರ್ಯದಿಂದ ಘೋಷಿಸಿದನು, ಅದು ದೇವದೂತನು ಅವನಿಗೆ ಹೇಳಿದಂತೆಯೇ ಆಗುವದೆಂದು ಎಂದು ಹೇಳಿದನು.

ನಾವು ದೇವರ ಲಿಖಿತ ವಾಕ್ಯವನ್ನು ಹೊಂದಿದ್ದೇವೆ, ಪವಿತ್ರ ವಾಕ್ಯಗಳು, ಇದು ದೂತರ ಮಾತಿಗಿಂತ ಖಚಿತವಾದ ವಾಕ್ಯವಾಗಿದೆ. ದೇವರು ತನ್ನ ಲಿಖಿತ ವಾಕ್ಯದಲ್ಲಿ ನಮ್ಮೊಂದಿಗೆ ಮಾತನಾಡಿರುವುದನ್ನು ನಾವು ತೆಗೆದುಕೊಳ್ಳಬಹುದು, ಆತನು ಈಗಾಗಲೇ ಕ್ರಿಸ್ತನಲ್ಲಿ ನಮಗಾಗಿ ಸಾಧಿಸಿದ್ದಾನೆ ಎಂದು ಹೇಳಿದನು, ಈ ಜೀವನದಲ್ಲಿ ಆತನು ನಮಗಾಗಿ ಮಾಡುವುದಾಗಿ ಭರವಸೆ ನೀಡಿದನು ಮತ್ತು ಆತನು ಏನು ಮಾತನಾಡಿದ್ದಾನೆ ಎಂಬುದರ ಕುರಿತು ನಮ್ಮ ನಂಬಿಕೆಯನ್ನು ಘೋಷಿಸಬಹುದು. ದೇವರು ತನ್ನ ಪವಿತ್ರ ವಾಕ್ಯದಲ್ಲಿ ಹೇಳಿರುವಂತೆಯೇ ವಿಷಯಗಳು ಸಂಭವಿಸುತ್ತವೆ ಎಂದು ನೀವು ನಂಬುತ್ತೀರಿ ಎಂದು ಧೈರ್ಯದಿಂದ ಘೋಷಿಸಿ. ನಿಮ್ಮ ವರ್ತಮಾನದಲ್ಲಿ ಮತ್ತು ನಿಮ್ಮ ಭವಿಷ್ಯದಲ್ಲಿ ಎಲ್ಲವೂ ದೇವರು ಹೇಳಿರುವುದರೊಂದಿಗೆ ಹೊಂದಿಕೆಯಾಗುತ್ತದೆ.

ತದನಂತರ, ದೇವರು ತನ್ನ ಪವಿತ್ರಾತ್ಮನ ಮೂಲಕ ಆತ್ಮನ ಆಂತರಿಕ ಸಾಕ್ಷಿಯ ಮೂಲಕ, ಭವಿಷ್ಯವಾಣಿಯ ಮೂಲಕ, ಕನಸುಗಳು ಮತ್ತು ದರ್ಶನಗಳ ಮೂಲಕ, ಇತ್ಯಾದಿಗಳ ಮೂಲಕ ನಮ್ಮೊಂದಿಗೆ ಮಾತನಾಡುವ ಸಂದರ್ಭಗಳಿವೆ. ಒಮ್ಮೆ ನಾವು ಪರೀಕ್ಷಿಸಿ ಮತ್ತು ಪವಿತ್ರಾತ್ಮನು ನಿಜವಾಗಿಯೂ ನಿರ್ದಿಷ್ಟವಾಗಿ ಮಾತನಾಡಿದ್ದಾನೆ ಎಂದು ಭರವಸೆ ಹೊಂದಿದಾಗ, ಅದು ನಮಗೆ ಹೇಳಲ್ಪಟ್ಟ ಪ್ರಕಾರವೇ ಆಗುತ್ತದೆ ಎಂದು ನಾವು ನಂಬುತ್ತೇವೆ ಎಂದು ನಾವು ಧೈರ್ಯದಿಂದ ಘೋಷಿಸಬಹುದು.

"ನಾನು ದೇವರನ್ನು ನಂಬುತ್ತೇನೆ" ಎಂದು ಧೈರ್ಯದಿಂದ ಘೋಷಿಸಿ.

ದೇವರು ನನ್ನ ಬಗ್ಗೆ ತನ್ನ ವಾಕ್ಯದಲ್ಲಿ ಹೇಳಿದಂತೆ ಅದು ಆಗುತ್ತದೆ ಎಂದು ನಾನು ದೇವರನ್ನು ನಂಬುತ್ತೇನೆ.

# 50

# ಇಲ್ಲದ್ದನ್ನು ಇರುವದಾಗಿ ಕರೆಯುವವರಾಗಿ

**ರೋಮಾಪುರದವರಿಗೆ 4:17**

**ನಾನು ನಿನ್ನನ್ನು ಅನೇಕ ಜನಾಂಗಗಳಿಗೆ ಮೂಲಪಿತೃವಾಗಿ ನೇಮಿಸಿದ್ದೇನೆಂದು ಶಾಸ್ತ್ರದಲ್ಲಿ ಬರೆದಿರುವ ಪ್ರಕಾರ ಅಬ್ರಹಾಮನು ನಮ್ಮೆಲ್ಲರಿಗೂ ದೇವರ ಸನ್ನಿಧಿಯಲ್ಲಿ ಮೂಲ ಪಿತೃವಾಗಿದ್ದಾನೆ. ದೇವರು ಸತ್ತವರನ್ನು ಬದುಕಿಸುವವನಾಗಿಯೂ ಇಲ್ಲದ್ದನ್ನು ಇರುವದಾಗಿ ಕರೆಯುವವನಾಗಿಯೂ ಇದ್ದಾನೆಂದು ಅಬ್ರಹಾಮನು ನಂಬಿದನು.**

ಅಪೊಸ್ತಲನಾದ ಪೌಲನು ಪವಿತ್ರಾತ್ಮನ ಮೂಲಕ, ಅಬ್ರಹಾಮನ ನಂಬಿಕೆಯ ನಡಿಗೆಯ ಒಳನೋಟಗಳನ್ನು ಬಹಿರಂಗಪಡಿಸುತ್ತಾನೆ. ಅಬ್ರಹಾಮನು ದೇವರನ್ನು ನಂಬಿದನು. ಭೂಮಿಯ ಮೇಲೆ ದೇವರ ಯೋಜನೆಯನ್ನು ಬಿಡುಗಡೆ ಮಾಡಲು ಅಬ್ರಹಾಮನು ನಂಬಿಕೆಯ ಮೂಲಕ ದೇವರೊಂದಿಗೆ ಪಾಲುದಾರನಾದನು. ಅಬ್ರಹಾಮನು ನಂಬಿದ ಮತ್ತು ಪಾಲುದಾರನಾಗಿದ್ದ ದೇವರು ಸತ್ತವರಿಗೆ ಜೀವ ನೀಡುವ ಮತ್ತು ಇಲ್ಲದ್ದನ್ನು ಇರುವದಾಗಿ ಕರೆಯುವವನಾದ ದೇವರು. ಅಬ್ರಹಾಮನು ಸತ್ತಂತೆ ತೋರುವದನ್ನು ಜೀವಂತಗೊಳಿಸಲಾಗುವುದು ಎಂದು ನಂಬಬೇಕಾಗಿತ್ತು, ನಿರ್ದಿಷ್ಟವಾಗಿ ಅವರ ವಯಸ್ಸಾದ ದೇಹಗಳು ಮತ್ತು ಸಾರಳ ಬಂಜರು ಗರ್ಭ. ಮತ್ತು ಅಬ್ರಹಾಮ ಇಲ್ಲದ್ದನ್ನು ಇರುವಂತೆ ಕರೆಯಲು ಕಲಿಯಬೇಕಾಗಿತ್ತು. ದೇವರು ಅದನ್ನು ಮೊದಲು ಮಾಡಿದನು. ಅಬ್ರಹಾಮನಿಗೆ ಮಕ್ಕಳಿಲ್ಲದಿದ್ದಾಗಲೂ, ದೇವರು ಅಬ್ರಹಾಮನ ಬಗ್ಗೆ ಮಾತಾಡಿದನು ಮತ್ತು ಅವನು ಅಬ್ರಹಾಮನನ್ನು ದೊಡ್ಡ ಜನಾಂಗದ ತಂದೆಯನ್ನಾಗಿ ಮಾಡಿದ್ದೇನೆ ಎಂದು ಹೇಳಿದನು. ತದನಂತರ ದೇವರು ಅಬ್ರಾಮ್ ಮತ್ತು ಸಾರಾಯಿಯ ಹೆಸರನ್ನು ಅಬ್ರಹಾಮ ಮತ್ತು ಸಾರಳು ಎಂದು ಬದಲಾಯಿಸಿದನು, ವಾಸ್ತವವಾಗಿ, ಅವರು ಇಲ್ಲದ್ದನ್ನು ಇರುವಂತೆ ಕರೆಯುವಂತೆ ಮಾಡಿದನು.

ನಂಬಿಕೆಯು ಶೀರ್ಷಿಕೆ ಪತ್ರವಾಗಿದೆ, ಆಶಿಸಿದ ಅಥವಾ ಬಯಸಿದ ವಸ್ತುಗಳ ಮಾಲೀಕತ್ವದ ಪುರಾವೆಯಾಗಿದೆ. ನಂಬಿಕೆಯು ಮನಗಾಣಿಸುತ್ತದೆ, ಇನ್ನೂ ನೋಡದ ವಿಷಯಗಳ ಆತ್ಮವಿಶ್ವಾಸದ ಭರವಸೆ, ಭೌತಿಕ

ಇಂದ್ರಿಯಗಳಿಗೆ ಇನ್ನೂ ಬಹಿರಂಗಪಡಿಸದ ವಿಷಯಗಳು. ಈ ರೀತಿಯ ನಂಬಿಕೆಯು, ಅದು ಮಾತನಾಡುವಾಗ, ವಿಷಯಗಳನ್ನು ಸ್ವಾಭಾವಿಕವಾಗಿ ಇರುವಂತೆ ಕರೆಯುವುದಿಲ್ಲ, ಆದರೆ ಅವು ಆಧ್ಯಾತ್ಮಿಕವಾಗಿರುವಂತೆ ಕರೆಯುತ್ತದೆ. ಈ ರೀತಿಯ ನಂಬಿಕೆಯು ಇಲ್ಲದ್ದನ್ನು ಇರುವಂತೆ ಕರೆಯುತ್ತದೆ. ದೇವರು ಒಮ್ಮೆ ಮಾತನಾಡಿದರೆ ಅದು ಆಗುತ್ತದೆ ಎಂದು ನಂಬಿಕೆಗೆ ಮನವರಿಕೆಯಾಗುತ್ತದೆ. ನಿಮ್ಮ ನಂಬಿಕೆಯನ್ನು ಮಾತನಾಡಿ. ಸ್ವಾಭಾವಿಕವಾಗಿ ಇನ್ನೂ ಇಲ್ಲದಿರುವ ವಿಷಯವನ್ನು ಇರುವಂತೆ ಕರೆಯಿರಿ ಯಾಕಂದರೆ ದೇವರು ಮಾತನಾಡಿದ್ದರಿಂದ.

# 51
# ಆತನ ವಾಗ್ದಾನದ ಪ್ರಕಾರ ಮಾತನಾಡಿ

**ರೋಮಾಪುರದವರಿಗೆ 4:18–21**

**18 ನಿನ್ನ ಸಂತಾನವು ನಕ್ಷತ್ರಗಳಷ್ಟಾಗುವದು ಎಂಬದಾಗಿ ತನಗೆ ಹೇಳಲ್ಪಟ್ಟ ಮಾತು ನೆರವೇರುವದಕ್ಕೆ ಮಾರ್ಗ ತೋರದೆ ಇರುವದರಿಂದ ಅಬ್ರಹಾಮನು ತಾನು ಅನೇಕ ಜನಾಂಗಗಳಿಗೆ ಮೂಲಪಿತೃವಾಗುವೆನೆಂಬ ನಿರೀಕ್ಷೆಗೆ ಆಸ್ಪದವಿಲ್ಲದಿರುವಾಗಲೂ ನಿರೀಕ್ಷಿಸಿ ನಂಬಿದನು.**

**19 ಅವನು ಹೆಚ್ಚುಕಡಿಮೆ ನೂರು ವರುಷದವನಾಗಿದ್ದು ತನ್ನ ದೇಹವು ಆಗಲೇ ಮೃತಪ್ರಾಯವಾಯಿತೆಂದೂ ಸಾರಳಿಗೆ ಗರ್ಭಕಾಲ ಕಳೆದುಹೋಯಿತೆಂದೂ ಯೋಚಿಸಿದಾಗ್ಯೂ ಅವನ ನಂಬಿಕೆಯು ಕುಂದಲಿಲ್ಲ.**

**20 ದೇವರು ಮಾಡಿದ ವಾಗ್ದಾನದ ವಿಷಯದಲ್ಲಿ ಅವನು ಅಪನಂಬಿಕೆಯಿಂದ ಚಂಚಲಚಿತ್ತನಾಗಲಿಲ್ಲ.**

**21 ದೇವರನ್ನು ಘನಪಡಿಸುವವನಾಗಿ ಆತನು ತನ್ನ ವಾಗ್ದಾನವನ್ನು ನೆರವೇರಿಸುವದಕ್ಕೆ ಸಮರ್ಥನೆಂದು ಪೂರಾ ಭರವಸವಿಟ್ಟು ದೃಢನಂಬಿಕೆಯುಳ್ಳವನಾದನು.**

ದೇವರು ವಾಗ್ದಾನ ಮಾಡಿದ್ದನ್ನು ಸ್ವೀಕರಿಸಲು ಅಬ್ರಹಾಮನು ದೇವರಲ್ಲಿ ನಂಬಿಕೆಯಿಂದ ಹೇಗೆ ನಡೆದುಕೊಂಡನು ಎಂಬುದನ್ನು ಅಪೊಸ್ತಲನಾದ ಪೌಲನ ಮೂಲಕ ಪವಿತ್ರಾತ್ಮನು ತಿಳಿಸುತ್ತಾನೆ. ಭರವಸೆಗೆ ಯಾವುದೇ ಕಾರಣವಿಲ್ಲದಿದ್ದರೂ ಸಹ, ಅಬ್ರಹಾಮನು ನಿರಿಕ್ಷಿಸಿದನು ಮತ್ತು ನಿರೀಕ್ಷೆಯಿಂದ ಸ್ಫೂರ್ತಿ ಪಡೆದನು, ಅವನು ನಂಬಿದನು. ಅವನು ಏನು ನಂಬಿದನು? ದೇವರು ಅವನ ಬಗ್ಗೆ ಹೇಳಿದಂತೆಯೇ ಅವನು ಆಗುತ್ತಾನೆ ಎಂದು ಅವನು ನಂಬಿದನು. ವಾಸ್ತವಾಂಶಗಳು ಇದ್ದಾಗ—ಅವನ ದೇಹ ಮತ್ತು ಸಾರಳ ದೇಹದ ಭೌತಿಕ ಸ್ಥಿತಿಯ ವಾಸ್ತವ, ವಾಸ್ತವಗಳು ತನ್ನ ನಂಬಿಕೆಯನ್ನು ನಿರ್ದೇಶಿಸಲು ಅವನು ಬಿಡಲಿಲ್ಲ. ಅವನು ದೇವರಿಂದ ಒಂದು ಮಾತನ್ನು ಹೊಂದಿದ್ದನು. ದೇವರು ಅವನ ಪರಿಸ್ಥಿತಿಯ ಬಗ್ಗೆ ಮಾತನಾಡಿದ್ದನು ಮತ್ತು ದೇವರಿಂದ ಆ ಮಾತು ಅವನ ಜೀವನದಲ್ಲಿ ಅಂತಿಮ ಅಧಿಕಾರವಾಗಿತ್ತು. ಅಬ್ರಹಾಮನ ನಂಬಿಕೆಯು ದೇವರ ವಾಗ್ದಾನದ ಮೇಲೆ ಆಧಾರವಾಗಿತ್ತು ಮತ್ತು ದೇವರು ಆ ವಾಗ್ದಾನವನ್ನು ನೆರವೇರಿಸಲು ಶಕ್ತನಾಗಿದ್ದನು. ಜೀವನದಲ್ಲಿ ಎಲ್ಲವೂ—ಅವನು ನಂಬಿದ್ದನು, ಅವನು ಮಾಡಿದ್ದು ಮತ್ತು ಅವನು ಹೇಳಿದ್ದು—ದೇವರು ಹೇಳಿದಂತೆಯೇ ಅದಕ್ಕೆ

ಅನುಗುಣವಾಗಿ ಇತ್ತು. ದೇವರು ಹೇಳಿದ ಪ್ರಕಾರ ನಂಬಿಕೆ ಹೇಳುತ್ತದೆ.

ಸಾಮಾನ್ಯವಾಗಿ ನಮ್ಮ ಸ್ವಂತ ಜೀವನದಲ್ಲಿ, ನಮ್ಮ ಪ್ರಸ್ತುತ ಸನ್ನಿವೇಶಗಳು ವಾಕ್ಯದಲ್ಲಿ ನಮಗಾಗಿ ಬರೆದ ಅಥವಾ ವಾಗ್ದಾನ ಮಾಡಿರುವುದನ್ನು ನಾವು ಕಂಡುಕೊಂಡಿದ್ದೇವೆ. ದೇವರ ವಾಕ್ಯವು ಏನೋ ಒಂದು ಭರವಸೆ ನೀಡುತ್ತದೆ ಮತ್ತು ನಮ್ಮ ಅನುಭವಗಳು ಸಂಪೂರ್ಣವಾಗಿ ವಿರುದ್ಧವಾಗಿರಬಹುದು. ದೇವರು ಯೆಹೋವ ರಾಫಾ ಎಂದು ದೇವರ ವಾಕ್ಯವು ಘೋಷಿಸುತ್ತದೆ ಮತ್ತು ದೇಹವನ್ನು ಧ್ವಂಸಗೊಳಿಸುವ ಕಾಯಿಲೆ ಇರಬಹುದು. ಇತ್ತೀಚಿನ ಅನುಭವಗಳು ವೈಫಲ್ಯಗಳ ಸರಮಾಲೆಯಾಗಿರಬಹುದು, ನೀವು ಏನು ಮಾಡಿದರೂ ಅದು ಏಳಿಗೆಯಾಗುತ್ತದೆ ಎಂದು ದೇವರ ವಾಕ್ಯವು ಘೋಷಿಸುತ್ತದೆ. ದೇವರ ವಾಕ್ಯವು ವಿಜಯದ ಭರವಸೆ ನೀಡುತ್ತದೆ, ಆದರೆ ಸೋಲಿನ ಹಲವಾರು ಕ್ಷೇತ್ರಗಳು ಇರಬಹುದು. ನಾವೇನು ಮಾಡಬೇಕು? ಇವುಗಳು ದೇವರ ಚಿತ್ತವೆಂಬಂತೆ ನಾವು ನಮ್ಮ ಅನುಭವವನ್ನು ಸ್ವೀಕರಿಸಬೇಕೇ ಅಥವಾ ದೇವರ ವಾಕ್ಯವನ್ನು ನಮ್ಮ ಜೀವನದಲ್ಲಿ ದೇವರ ಚಿತ್ತವೆಂದು ಒಪ್ಪಿಕೊಳ್ಳಬೇಕೇ?

ಅಬ್ರಹಾಮನ ನಂಬಿಕೆಯ ಹೆಜ್ಜೆಗಳಲ್ಲಿ ನಡೆಯಲು ನಾವು ಕರೆಯಲ್ಪಟ್ಟಿದ್ದೇವೆ. ನಿರೀಕ್ಷೆಗೆ ಯಾವುದೇ ಕಾರಣವಿಲ್ಲದಿದ್ದರೂ ಸಹ, ನಾವು ನಿರೀಕ್ಷೆಯನ್ನು ಹೊಂದಿರಬೇಕು ಮತ್ತು ದೇವರು ಮತ್ತು ಆತನ ವಾಕ್ಯವನ್ನು ನಂಬಬೇಕು. ವಾಸ್ತವಾಂಶಗಳು ನಿಮ್ಮ ನಂಬಿಕೆಯನ್ನು ದುರ್ಬಲಗೊಳಿಸಲು ಬಿಡಬೇಡಿ. ದೇವರ ವಾಕ್ಯದಲ್ಲಿ ನಿಮ್ಮ ನಂಬಿಕೆಯನ್ನು ಸ್ಥಾಪಿಸಿ. ನಂಬಿಕೆಯು ಆತನ ವಾಗ್ದಾನದ ಪ್ರಕಾರ ಮಾತನಾಡುತ್ತದೆ. ನಿಮ್ಮ ನಂಬಿಕೆಯನ್ನು ಮಾತನಾಡಿ.

# 52

# ಜೀವನದಲ್ಲಿ ಆಳ್ವಿಕೆ–ಪ್ರಭುತ್ವದ ಮಾತುಗಳನ್ನು ಮಾತನಾಡಿ

**ರೋಮಾಪುರದವರಿಗೆ 5:17**

**ಒಬ್ಬನು ಮಾಡಿದ ಅಪರಾಧದಿಂದ ಮರಣವು ಉಂಟಾಗಿ ಆ ಒಬ್ಬನ ದೆಸೆಯಿಂದಲೇ ಆಳುವದಾದರೆ ದೇವರು ಧಾರಾಳವಾಗಿ ಅನುಗ್ರಹಿಸುವ ಕೃಪಾದಾನವನ್ನೂ ನೀತಿಯೆಂಬ ವರವನ್ನೂ ಹೊಂದಿದವರು ಯೇಸು ಕ್ರಿಸ್ತನೆಂಬ ಈ ಒಬ್ಬ ಪುರುಷನ ಮೂಲಕ ಜೀವಭರಿತರಾಗಿ ಆಳುವದು ಮತ್ತೂ ನಿಶ್ಚಯವಲ್ಲವೇ.**

ಆದಾಮನು ನಮ್ಮನ್ನು ಕೆಳಗಿಳಿಸಿರುವ ಎಲ್ಲದರಿಂದ ಕರ್ತನಾದ ಯೇಸು ನಮ್ಮನ್ನು ಹೊರಗೆ ತಂದನು. ನಾವು ಹೇರಳವಾದ ಕೃಪೆಯನ್ನು ಮತ್ತು ನೀತಿವಂತಿಕೆಯ ವರವನ್ನು ಪಡೆದಿದ್ದೇವೆ. ದೇವರು ತನ್ನ ಕೃಪೆಯನ್ನು ನಮ್ಮ ಜೀವನದ ಮೇಲೆ ಧಾರೆಯೆರೆದಿದ್ದಾನೆ. ಆತನು ತನ್ನ ಸ್ವಂತ ನೀತಿಯನ್ನು ಕ್ರಿಸ್ತನಲ್ಲಿ ನಂಬಿಕೆಯ ಮೂಲಕ ಉಡುಗೊರೆಯಾಗಿ ನಮಗೆ ನೀಡಿದ್ದಾನೆ. ಹಿಂದೆ ನಾವು ಪಾಪಿಗಳಾಗಿದ್ದೇವೆ. ಆದರೆ ಈಗ ವಿಷಯಗಳು ವಿಭಿನ್ನವಾಗಿವೆ. ನಾವು ದೇವರ ನೀತಿವಂತರು. ಕರ್ತನ ಯಥೇಚ್ಛವಾದ ಕೃಪೆಯನ್ನು ನಾವು ಪಡೆದಿದ್ದೇವೆ. ಕೃಪೆಯು ಎಂದರೆ ದೇವರು ನಮಗೆ ಅರ್ಹವಲ್ಲದ್ದನ್ನು ಅಥವಾ ನಾವು ಎಂದಿಗೂ ಸ್ವಂತವಾಗಿ ಗಳಿಸಲು ಸಾಧ್ಯವಾಗದದನ್ನು ನಮಗೆ ನೀಡುವುದು. ದೇವರು ಕೃಪೆಯಿಂದ ನಮಗೆ ಕೊಟ್ಟದ್ದು ನಿಜವಾಗಿಯೂ ನಮ್ಮದು. ಅದು ನಮ್ಮ ಬಳಿ ಇದೆ. ದೇವರು ನಮಗೆ ಅದನ್ನು ಆನಂದಿಸಲು, ಬದುಕಲು ಮತ್ತು ನಮ್ಮದೇ ಆಗಿರಲು ಕೊಟ್ಟಿದ್ದಾನೆ.

ದೇವರು ತನ್ನ ಕೃಪೆಯಿಂದ ನಮಗೆ ಉಚಿತವಾಗಿ ನೀಡಿದ ಅನೇಕ ವಿಷಯಗಳಲ್ಲಿ ಒಂದಾಗಿದೆ, ಯೇಸು ಕ್ರಿಸ್ತನ ಮೂಲಕ ಜೀವನದಲ್ಲಿ ರಾಜರಂತೆ ಬದುಕಲು ಮತ್ತು ಆಳ್ವಿಕೆ ಮಾಡಲು ಆತನು ನಮಗೆ ಸ್ಥಾನ ನೀಡಿದ್ದಾನೆ. ಯೇಸುವಿನ ಮೂಲಕ, ಅಂದರೆ, ಆತನಿಂದ ಮತ್ತು ಆತನು ಒದಗಿಸುವ ಅಧಿಕಾರದ ಮೂಲಕ, ನಾವು ಜೀವನದಲ್ಲಿ ಆಡಳಿತ ಮತ್ತು ಆಳ್ವಿಕೆ ನಡೆಸುತ್ತೇವೆ. ಈ ಸತ್ಯವನ್ನು ಅರ್ಥಮಾಡಿಕೊಳ್ಳಿ. ನೀವು ಆತ್ಮಿಕ ಅಧಿಕಾರ

ಮತ್ತು ಪ್ರಭುತ್ವ ಹೊಂದಿರುವ ವ್ಯಕ್ತಿ. ನೀವು ಅದನ್ನು ಅಭ್ಯಾಸ ಮಾಡದಿದ್ದರೆ ಇದರಿಂದ ಯಾವುದೇ ಪ್ರಯೋಜನವಿಲ್ಲ. ರಾಜರು ಏನು ಮಾಡುತ್ತಾರೆ? ರಾಜರು ತಮ್ಮ ಮಾತುಗಳಿಂದ ಅಧಿಕಾರ ಮತ್ತು ಪ್ರಭುತ್ವವನ್ನು ಚಲಾಯಿಸುತ್ತಾರೆ. ಅವರು ಮಾತುಗಳನ್ನು ಮಾತನಾಡುತ್ತಾರೆ, ಅವರು ವಿಷಯಗಳನ್ನು ನಿರ್ಧರಿಸುತ್ತಾರೆ, ಇದರಿಂದ ಅವರು ತೀರ್ಪು ಮಾಡುವುದನ್ನು ಅವರ ಪ್ರಭಾವದ ಕ್ಷೇತ್ರದಲ್ಲಿ ಸ್ಥಾಪಿಸಲಾಗುತ್ತದೆ.

ಆದಾಮನು ನಮ್ಮನ್ನು ಪಾಪಕ್ಕೆ ಮತ್ತು ಸೈತಾನನಿಗೆ ಮತ್ತು ಅವನ ದೆವ್ವಗಳಿಗೆ ಮತ್ತು ಅನಾರೋಗ್ಯ, ಬಡತನ, ದೆವ್ವದ ದಬ್ಬಾಳಿಕೆ ಸೇರಿದಂತೆ ಪತನದ ಕಾರಣದಿಂದ ಬಂದ ಎಲ್ಲದಕ್ಕೂ ಅಧೀನಗೊಳಿಸಿದನು. ಕರ್ತನಾದ ಯೇಸು ಆದಾಮ ನಮ್ಮನ್ನು ಒಳಪಡಿಸಿದ ಮತ್ತು ಈಗ ನಮ್ಮನ್ನು ಇರಿಸಿರುವ ಎಲ್ಲದರಿಂದ ನಮ್ಮನ್ನು ಹೊರತಂದನು ಮತ್ತು ಜೀವನದಲ್ಲಿ ಆ ಎಲ್ಲದರ ಮೇಲೆ ಆಡಳಿತ ಮತ್ತು ಆಳ್ವಿಕೆ ಮಾಡುವಂತೆ ನಮ್ಮನ್ನು ಇರಿಸಿದನು. ಆದರೆ ನಾವು ನಮ್ಮ ಪ್ರಭುತ್ವವನ್ನು ಚಲಾಯಿಸದಿದ್ದರೆ ಅದನ್ನು ಅನುಭವಿಸಲು ಸಾಧ್ಯವಿಲ್ಲ. ಪ್ರಾಬಲ್ಯದ ಮಾತುಗಳನ್ನು ಮಾತನಾಡಿ. ತೀರ್ಪುಗಳನ್ನು ನೀಡಿ. ವಾಕ್ಯವನ್ನು ಘೋಷಿಸಿ. ನಿಮ್ಮ ನಂಬಿಕೆಯನ್ನು ಮಾತನಾಡಿ ಮತ್ತು ನಿಮ್ಮ ಪ್ರಭಾವದ ವ್ಯಾಪ್ತಿಯಲ್ಲಿರುವ ಎಲ್ಲವೂ ದೇವರ ರಾಜ್ಯದ ಸತ್ಯದಿಂದ ಆಳಲ್ಪಡಲಿ ಮತ್ತು ಆಳ್ವಿಕೆ ನಡೆಸಲಿ.

# 53
# ನಂಬಿಕೆ ಈ ರೀತಿ ಮಾತನಾಡುತ್ತದೆ

**ರೋಮಾಪುರದವರಿಗೆ 10:6–8**

**6 ಪಾಪಾಧೀನಸ್ವಭಾವವು ನಾಶವಾಗಿ ನಾವು ಇನ್ನೂ ಪಾಪದ ವಶದಲ್ಲಿರದಂತೆ ನಮ್ಮ ಪೂರ್ವಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದಿದ್ದೇವೆ.**

**7 ಸತ್ತವನು ಪಾಪದ ವಶದಿಂದ ಬಿಡುಗಡೆ ಹೊಂದಿದ್ದಾನಷ್ಟೆ.**

**8 ಇದಲ್ಲದೆ ನಾವು ಕ್ರಿಸ್ತನೊಡನೆ ಸತ್ತ ಪಕ್ಷದಲ್ಲಿ ಆತನೊಡನೆ ಜೀವಿಸುವೆವೆಂದು ನಂಬುತ್ತೇವೆ.**

ಅಬ್ರಹಾಮನಿಗೆ ದೇವರಲ್ಲಿ ನಂಬಿಕೆಯಿತ್ತು ಮತ್ತು ಆದ್ದರಿಂದ ದೇವರು ಅವನನ್ನು ನೀತಿವಂತನೆಂದು ಪರಿಗಣಿಸಿದನು ಎಂದು ಅಪೊಸ್ತಲನಾದ ಪೌಲನು ರೋಮಾಪುರದವರಿಗೆ 4 ನೇ ಅಧ್ಯಾಯದಲ್ಲಿ ಉಲ್ಲೇಖಿಸಿದ್ದಾನೆ. ಕ್ರಿಸ್ತನಲ್ಲಿ ನಾವು ಹೇರಳವಾದ ಕೃಪೆಯನ್ನು ಪಡೆದಿದ್ದೇವೆ ಮತ್ತು ದೇವರ ನೀತಿಯ ಉಡುಗೊರೆಯನ್ನು ನಮಗೆ ನೀಡಲಾಗಿದೆ ಎಂದು ಅವನು ಸ್ಥಾಪಿಸಿದ್ದಾನೆ. ಈಗ ನಾವು ದೇವರೊಂದಿಗೆ ಸರಿಯಾದ ನಿಲುವನ್ನು ಹೊಂದಿದ್ದೇವೆ, ದೇವರಲ್ಲಿ ನಂಬಿಕೆ ಹೇಗೆ ವ್ಯಕ್ತವಾಗುತ್ತದೆ? ನಂಬಿಕೆ ಮತ್ತು ನೀತಿಯ ಜನರಾಗಿರುವ ನಾವು ಹೇಗೆ ಮಾತನಾಡುತ್ತೇವೆ?

ನಾವು ನಿರಾಶೆಸ್ಥಿತಿ ಮತ್ತು ಹತಾಶೆಯನ್ನು ಮಾತನಾಡುವುದಿಲ್ಲ. ದೇವರು ನಮಗೆ ಸಹಾಯ ಮಾಡಲಾರದಷ್ಟು ದೂರ ಪರಲೋಕದಲ್ಲಿರುವಂತೆ ನಾವು ಮಾತನಾಡುವುದಿಲ್ಲ. ದೇವರು ಸತ್ತಿದ್ದಾನೆ ಮತ್ತು ನಮಗೆ ಸಹಾಯ ಮಾಡಲು ಶಕ್ತಿಯಿಲ್ಲ ಎಂದು ನಾವು ಮಾತನಾಡುವುದಿಲ್ಲ. ಬದಲಾಗಿ, ಅಪೊಸ್ತಲನಾದ ಪೌಲನು ಹೊಸ ಒಡಂಬಡಿಕೆಯ ವಿಶ್ವಾಸಿಗಳಾದ ನಮಗೆ ಹಳೆಯ ಒಡಂಬಡಿಕೆಯ ಸತ್ಯವನ್ನು ಅನ್ವಯಿಸುತ್ತಾನೆ. ಧರ್ಮೋಪದೇಶಕಾಂಡ 30:11–14ರಲ್ಲಿ ಮೋಶೆಯು ದೇವಜನರಿಗೆ ಹೇಳಿದಂತೆಯೇ ಅವನು ನಮಗೆ ಹೇಳುತ್ತಾನೆ. ಈ ವಾಕ್ಯವು ನಿಮಗೆ ಸಮೀಪದಲ್ಲಿಯೇ ಇದೆ. ಇದು ನಿಮ್ಮ ಬಾಯಲ್ಲಿಯೂ ಹೃದಯದಲ್ಲಿಯೂ ಇದೆ. ಇದನ್ನು ಅನುಸರಿಸುವದಕ್ಕೆ ಅವಕಾಶವುಂಟಷ್ಟೆ. ಇಲ್ಲಿ ಸ್ಪಷ್ಟವಾದ ತೀರ್ಮಾನವೆಂದರೆ ನೀವು ಅದನ್ನು ನಂಬಲು ವಾಕ್ಯವು ನಿಮ್ಮ ಹೃದಯದಲ್ಲಿದೆ ಮತ್ತು ನೀವು ಅದನ್ನು ಒಪ್ಪಿಕೊಳ್ಳಲು

ವಾಕ್ಯವು ನಿಮ್ಮ ಬಾಯಿಯಲ್ಲಿದೆ. ನಂತರ ಅವನು ಅದನ್ನು ನಂಬಿಕೆಯ ವಾಕ್ಯಕ್ಕೆ , ನಾವು ಬೋಧಿಸುವ ಯೇಸುವಿನ ಸುವಾರ್ತೆಯ ಸಂದೇಶಕ್ಕೆ ಅನ್ವಯಿಸುತ್ತಾನೆ.

ಇಲ್ಲಿ ಮುಖ್ಯವಾದ ಸತ್ಯವೆಂದರೆ ನಂಬಿಕೆಯು ಮಾತನಾಡುತ್ತದೆ ಎಂದು ನಮಗೆ ತಿಳಿಯುವುದು. ನಂಬಿಕೆಯು ದೇವರ ವಾಕ್ಯವನ್ನು ಮಾತನಾಡುತ್ತದೆ, ಅದು ನಮ್ಮ ಹೃದಯದಲ್ಲಿ ಮತ್ತು ನಮ್ಮ ಬಾಯಿಯಲ್ಲಿ ನಿರಂತರವಾಗಿ ಇರಬೇಕು. ಎಂದಿಗೂ ನಿರಾಶೆಸ್ಥಿತಿಯನ್ನು ಮಾತನಾಡಬೇಡಿ. ಎಂದಿಗೂ ಹತಾಶೆಯನ್ನು ಮಾತನಾಡಬೇಡಿ. ನೀವು ಅದನ್ನು ನಂಬಲು ದೇವರ ವಾಕ್ಯವು ನಿಮ್ಮ ಹೃದಯದಲ್ಲಿದೆ ಮತ್ತು ನೀವು ಅದನ್ನು ಮಾತನಾಡಲು ನಿಮ್ಮ ಬಾಯಿಯಲ್ಲಿದೆ. ವಾಕ್ಯವನ್ನು ಮಾತನಾಡಿ. ದೇವರ ವಾಕ್ಯದಲ್ಲಿ ನಿಮ್ಮ ನಂಬಿಕೆಯನ್ನು ಮಾತನಾಡಿ.

# 54

# ಅರಿಕೆಮಾಡುವದರ ಮೂಲಕ ರಕ್ಷಣೆಯಾಗುತ್ತದೆ

**ರೋಮಾಪುರದವರಿಗೆ 10:6–10**

**6 ಆದರೆ ನಂಬಿಕೆಯಿಂದುಂಟಾಗುವ ನೀತಿಯು ಏನು ಹೇಳುತ್ತದೆ? ಕ್ರಿಸ್ತನನ್ನು ಕೆಳಕ್ಕೆ ಕರೆದುಕೊಂಡು ಬರುವದಕ್ಕೆ ಯಾರು ಮೇಲಣ ಲೋಕಕ್ಕೆ ಏರಿಹೋದಾರು? ಎಂದಾಗಲಿ**

**7 ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿಕೊಂಡು ಬರುವದಕ್ಕೆ ಯಾರು ಪ್ರೇತಲೋಕಕ್ಕೆ ಇಳಿದುಹೋದಾರು? ಎಂದಾಗಲಿ**

**8 ನಿನ್ನ ಮನಸ್ಸಿನಲ್ಲಿ ಅಂದುಕೊಳ್ಳಬೇಡ. ದೇವರ ವಾಕ್ಯವು ನಿನ್ನ ಸಮೀಪದಲ್ಲಿಯೇ ಇದೆ; ಅದು ನಿನ್ನ ಬಾಯಲ್ಲಿಯೂ ನಿನ್ನ ಹೃದಯದಲ್ಲಿಯೂ ಇದೆ ಅನ್ನುತ್ತದೆ. ಆ ವಾಕ್ಯವು ನಾವು ಸಾರುವ ನಂಬಿಕೆಯ ವಿಷಯವಾದ ವಾಕ್ಯವೇ.**

**9 ಅದೇನಂದರೆ ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬದೇ.**

**10 ಹೃದಯದಿಂದ ನಂಬುವದರ ಮೂಲಕ ನೀತಿಯು ದೊರಕುತ್ತದೆ. ಬಾಯಿಂದ ಅರಿಕೆಮಾಡುವದರ ಮೂಲಕ ರಕ್ಷಣೆಯಾಗುತ್ತದೆ.**

ಈ ಭಾಗದಿಂದ ನಾವು ಎತ್ತಿ ತೋರಿಸಬೇಕಾದ ಇನ್ನೊಂದು ಸತ್ಯವೆಂದರೆ ನಂಬಿಕೆ ಮತ್ತು ಅರಿಕೆಯ ಪ್ರಾಮುಖ್ಯತೆ. ನಮ್ಮ ಹೃದಯದಲ್ಲಿ ದೇವರ ವಾಕ್ಯವನ್ನು ನಂಬುವುದು ನಮ್ಮನ್ನು ದೇವರೊಂದಿಗೆ ಸರಿಯಾದ ಸ್ಥಾನದಲ್ಲಿ ಇರಿಸುತ್ತದೆ ("ಹೃದಯದಿಂದ ನಂಬುವದರ ಮೂಲಕ ನೀತಿಯು ದೊರಕುತ್ತದೆ"). ನಾವು ದೇವರಿಂದ ಸ್ವೀಕರಿಸಲು ಸರಿಯಾದ ಸ್ಥಳದಲ್ಲಿ, ಸ್ಥಾನದಲ್ಲಿರುತ್ತೇವೆ. ತದನಂತರ ವೇದವಾಕ್ಯವು ನಮಗೆ ಇನ್ನೊಂದು ಹೆಜ್ಜೆಯನ್ನು ತೆಗೆದುಕೊಳ್ಳುವಂತೆ ಸೂಚಿಸುತ್ತವೆ. ನಮ್ಮ ಬಾಯಿಯಿಂದ ಅರಿಕೆಮಾಡುವಂತೆ ನಮಗೆ ಸೂಚಿಸಲಾಗಿದೆ, ಅದು ನಂತರ ನಾವು ರಕ್ಷಣೆಯನ್ನು ಸ್ವೀಕರಿಸಲು ಅಥವಾ ಅನುಭವಿಸಲು ಕಾರಣವಾಗುತ್ತದೆ ("ಅರಿಕೆಮಾಡುವದರ ಮೂಲಕ ರಕ್ಷಣೆಯಾಗುತ್ತದೆ").

ಕರ್ತನಾದ ಯೇಸು ಕ್ರಿಸ್ತನು ತನ್ನ ಶಿಲುಬೆಯ ಮರಣದ ಮೂಲಕ ಮತ್ತು ಸತ್ತವರೊಳಗಿಂದ ಆತನ ಪುನರುತ್ಥಾನದ ಮೂಲಕ ನೀತಿ ಮತ್ತು ರಕ್ಷಣೆ

ಉಡುಗೊರೆಯಾಗಿ ಲಭ್ಯವಾಗುವಂತೆ ಮಾಡಿದ್ದಾನೆ. ಅದನ್ನು ಸ್ವೀಕರಿಸಲು ಎಲ್ಲರಿಗೂ ಇದೆ. ರಕ್ಷಣೆಯನ್ನು ಒದಗಿಸಲಾಗಿದೆ, ಆದರೆ ಅದನ್ನು ಸ್ವೀಕರಿಸಲು ನಾವು ನಂಬುತ್ತೇವೆ ಮತ್ತು ಒಪ್ಪಿಕೊಳ್ಳುತ್ತೇವೆ. ಅರಿಕೆಯ ಮಹತ್ವವನ್ನು ಗಮನಿಸಿ. ನಾವು ನಂಬಿದಾಗ, ನಾವು ಸ್ವೀಕರಿಸುವ ಸ್ಥಾನದಲ್ಲಿರುತ್ತೇವೆ. ಆದರೆ ಬಾಯಿಂದ ಅರಿಕೆಮಾಡುವದರಿಂದ ನಮ್ಮ ಸ್ವಾಧೀನಕ್ಕೆ ರಕ್ಷಣೆಯನ್ನು ತರುತ್ತದೆ.

ಹೊಸ ಒಡಂಬಡಿಕೆಯಲ್ಲಿ ನಾವು ಅರ್ಥಮಾಡಿಕೊಂಡಂತೆ ರಕ್ಷಣೆಯು ಸಮಗ್ರ ಪದವಾಗಿದ್ದು, ಶಾಶ್ವತವಾದ ರಕ್ಷಣೆ, ಪಾಪಗಳ ಕ್ಷಮಾಪಣೆ, ಪಾಪದ ಮೇಲಿನ ವಿಜಯ, ಅನಾರೋಗ್ಯದಿಂದ ಗುಣಪಡಿಸುವುದು, ಸಂಘರ್ಷದಲ್ಲಿ ಗೆಲುವು, ಶತ್ರುವಿನ ಪ್ರತಿಯೊಂದು ಕೆಲಸದಿಂದ ವಿಮೋಚನೆ, ಹಾನಿಯಿಂದ ಪಾರುಮಾಡುವಿಕೆ, ಅಪಾಯದಿಂದ ಸಂರಕ್ಷಣೆ, ಮತ್ತು ಸರ್ವಸಂಪೂರ್ಣತೆ. ಇದರರ್ಥ ರಕ್ಷಿಸಲ್ಪಡುವದು, ಗುಣವಾಗುವದು , ವಿಮೋಚನೆಗೊಳಿಸುವುದು, ವಿಜಯವನ್ನು ಹೊಂದುವುದು, ಕಾಪಾಡಲ್ಪಡುವುದು, ಸಂರಕ್ಷಿಸುವುದು ಮತ್ತು ಸಂಪೂರ್ಣಗೊಳಿಸುವುದು. ದೇವರ ವಾಕ್ಯವನ್ನು ನಂಬುವುದು ಮತ್ತು ದೇವರ ವಾಕ್ಯವನ್ನು ಒಪ್ಪಿಕೊಳ್ಳುವುದು ಇವುಗಳಲ್ಲಿ ಪ್ರತಿಯೊಂದನ್ನು ನಮ್ಮ ಅನುಭವವನ್ನಾಗಿ ಮಾಡುತ್ತದೆ. ನಿಮ್ಮ ನಂಬಿಕೆಯನ್ನು ಮಾತನಾಡಿ ಏಕೆಂದರೆ ಅರಿಕೆಯು ರಕ್ಷಣೆಗೆ ಕಾರಣವಾಗುತ್ತದೆ.

# 55

# ಆತನ ಎಲ್ಲಾ ವಾಗ್ದಾನಗಳಿಗೆ ನಿಮ್ಮ "ಹೌದು ಮತ್ತು ಆಮೆನ್" ಎಂದು ಘೋಷಿಸಿ

**2 ಕೊರಿಂಥದವರಿಗೆ 1:19,20**

**19 ನಾವು ಅಂದರೆ ನಾನೂ ಸಿಲ್ವಾನನೂ ತಿಮೊಥೆಯನೂ ನಿಮ್ಮಲ್ಲಿ ಪ್ರಸಿದ್ಧಿಪಡಿಸಿದ ದೇವರ ಮಗನಾದ ಯೇಸು ಕ್ರಿಸ್ತನು ಹೌದೆಂತಲೂ ಅಲ್ಲವೆಂತಲೂ ಎರಡು ಪ್ರಕಾರವಾಗಿರಲಿಲ್ಲ; ಆತನಲ್ಲಿ ಹೌದೆಂಬದೇ ನೆಲೆಗೊಂಡಿದೆ.**

**20 ನಿಶ್ಚಯವಾಗಿ ದೇವರ ವಾಗ್ದಾನಗಳು ಎಷ್ಟಿದ್ದರೂ ಕ್ರಿಸ್ತನಲ್ಲೇ ದೃಡವಾಗುತ್ತವೆ. ಆದಕಾರಣ ದೇವರ ಪ್ರಭಾವವು ಪ್ರಕಾಶವಾಗುವದಕ್ಕೋಸ್ಕರ ಆತನ ಮೂಲಕವಾಗಿ ನಾವು ಆಮೆನ್ ಎಂದು ಹೇಳುತ್ತೇವೆ.**

ದೇವರು ಬರುವ ಸಂದರ್ಭಗಳಿವೆ ಮತ್ತು ಆತನು ಬರದ ಸಂದರ್ಭಗಳಿವೆ ಎಂದು ಜನರು ನಮಗೆ ಎಷ್ಟು ಬಾರಿ ಹೇಳುವುದನ್ನು ನಾವು ಕೇಳಿದ್ದೇವೆ. ನಮಗೆ ಖಚಿತವಾಗಿ ತಿಳಿದಿಲ್ಲ. ಕೆಲವೊಮ್ಮೆ ದೇವರ ವಾಗ್ದಾನಗಳು ಕೆಲಸ ಮಾಡುತ್ತವೆ ಮತ್ತು ಕೆಲವೊಮ್ಮೆ ಅವು ಮಾಡುವುದಿಲ್ಲ ಎಂದು ಜನರು ನಮಗೆ ಹೇಳುತ್ತಾರೆ. ದೇವರನ್ನು ನಂಬಿದ ಮತ್ತು ಇನ್ನೂ ವಿಫಲವಾದ, ಅಥವಾ ಸತ್ತ ಅಥವಾ ದುರಂತವನ್ನು ಅನುಭವಿಸಿದ ಎಲ್ಲ ಜನರನ್ನು ನೋಡಿ. ಇವೆಲ್ಲವೂ ವಾಸ್ತವಗಳು ಮತ್ತು ನಿಜವಾಗಿದ್ದರೂ, ದೇವರು ಯಾರೆಂಬುದನ್ನು ಬದಲಾಯಿಸಲು ನಮಗೆ ಹಕ್ಕಿದೆಯೇ ಅಥವಾ ಜನರ ಅನುಭವಗಳಿಂದ ದೇವರ ವಾಕ್ಯವು ಏನು ಹೇಳುತ್ತದೆ? ಅನುಭವಗಳು ದೇವರು ಮತ್ತು ಆತನ ವಾಕ್ಯಕ್ಕಿಂತ ಹೆಚ್ಚು ವಿಶ್ವಾಸಾರ್ಹವೇ? ನಾವು ನಮ್ಮ ದೈವಶಾಸ್ತ್ರವನ್ನು ಜನರ ಅನುಭವದ ಮೇಲೆ ಆಧಾರಿಸುತ್ತೇವೆಯೇ ಅಥವಾ ನಮ್ಮ ದೈವಶಾಸ್ತ್ರವನ್ನು ದೇವರು ಮತ್ತು ಆತನ ವಾಕ್ಯದ ಮೇಲೆ ಆಧಾರಿಸುತ್ತೇವೆಯೇ?

ದೇವರು ಚಂಚಲನಲ್ಲ ಎಂದು ಅಪೊಸ್ತಲನಾದ ಪೌಲನು ಸ್ಪಷ್ಟಪಡಿಸುತ್ತಾನೆ. ಯೇಸುವಿನಲ್ಲಿ, "ಹೌದು" ಮತ್ತು "ಇಲ್ಲ" ಇಲ್ಲ, ಆದರೆ ಯಾವಾಗಲೂ ಮತ್ತು ಖಂಡಿತವಾಗಿ "ಹೌದು" ಮಾತ್ರ. ದೇವರಲ್ಲಿ *"ವಂಚಕತನ ಇಲ್ಲ, ದ್ವಿಮುಖ ಇಲ್ಲ, ಚಂಚಲತ್ವವೇನೂ ಇಲ್ಲ, ಮತ್ತು ಆತನು ಎಂದಿಗೂ*

*ಬದಲಾಗುವದಿಲ್ಲ"* (ಯಾಕೋಬ 1:17 ಸಂದೇಶ ಸತ್ಯವೇದ ಮತ್ತು ಪ್ಯಾಶನ್ ಅನುವಾದದ ಆಧಾರದ ಮೇಲೆ). ಯೇಸುವಿನಲ್ಲಿ ದೇವರ ವಾಗ್ದಾನಗಳೆಲ್ಲವೂ "ಹೌದು" ಎಂದು ಅಪೊಸ್ತಲನಾದ ಪೌಲನು ಧೈರ್ಯದಿಂದ ಘೋಷಿಸುತ್ತಾನೆ. ದೇವರ ಎಲ್ಲಾ ವಾಗ್ದಾನಗಳು ಸತ್ಯ ಮತ್ತು ನಂಬಿಗಸ್ತವಾಗಿವೆ ಮತ್ತು ಯೇಸುವಿನಲ್ಲಿ ಅವುಗಳ ನೆರವೇರಿಕೆಯನ್ನು ಕಂಡುಕೊಳ್ಳುತ್ತವೆ. ತದನಂತರ ನಾವು ದೇವರ ಮಹಿಮೆಯನ್ನು ಹೆಚ್ಚಿಸುವ "ಆಮೆನ್" ಇದೆ.

ಯೇಸುವಿನಲ್ಲಿ ದೇವರ ಎಲ್ಲಾ ವಾಗ್ದಾನಗಳಿಗೆ "ಹೌದು ಮತ್ತು ಆಮೆನ್" ಇದೆ. ಇದು ನಾವು ಹೊಂದಿರಬೇಕಾದ ನಿರೀಕ್ಷೆ. ಯೇಸುವಿನಲ್ಲಿ ದೇವರ ಎಲ್ಲಾ ವಾಗ್ದಾನಗಳ ನೆರವೇರಿಕೆಯನ್ನು ನಾವು ನೋಡುತ್ತೇವೆ ಇದರಿಂದ ದೇವರನ್ನು ನಮ್ಮ ಜೀವನದ ಮೂಲಕ ಮಹಿಮೆಪಡಿಸಬಹುದು. ಯೇಸುವಿನಲ್ಲಿ, ದೇವರ ಎಲ್ಲಾ ವಾಗ್ದಾನಗಳು ಉತ್ತಮವಾಗಿವೆ ಎಂಬ ಈ ಸತ್ಯದಲ್ಲಿ ಸ್ಥಾಪಿತರಾಗಿರಿ. ಅವು ಹೌದು. ದೇವರ ಎಲ್ಲಾ ವಾಗ್ದಾನಗಳಲ್ಲಿ ನಿಮ್ಮ ನಂಬಿಕೆಯನ್ನು ಮಾತನಾಡಿ. ದೇವರ ಎಲ್ಲಾ ವಾಗ್ದಾನಗಳಿಗೆ ನಿಮ್ಮ ಹೌದು ಮತ್ತು ಆಮೆನ್ ಎಂದು ಘೋಷಿಸಿ, ಅವುಗಳು ನೆರವೇರುವದನ್ನು ನೀವು ನಿರೀಕ್ಷಿಸುತ್ತೀರಿ ಎಂದು ತೋರಿಸುತ್ತದೆ.

# 56

# ನಾವು ನಂಬುತ್ತೇವೆ ಆದ್ದರಿಂದ ನಾವು ಮಾತನಾಡುತ್ತೇವೆ

**2 ಕೊರಿಂಥದವರಿಗೆ 4:13,14**

**[13] ಹೀಗಿದ್ದರೂ – ನಂಬಿದೆನು, ಆದದರಿಂದ ಮಾತಾಡಿದೆನು ಎಂಬ ಶಾಸ್ತ್ರೋಕ್ತಿಯಲ್ಲಿ ಕಾಣುವ ನಂಬಿಕೆಯ ಭಾವವನ್ನೇ ಹೊಂದಿ ನಾವೂ ನಂಬಿದವರು, ಆದದರಿಂದ ಮಾತಾಡುತ್ತೇವೆ.**

**[14] ಕರ್ತನಾದ ಯೇಸುವನ್ನು ಎಬ್ಬಿಸಿದಾತನು ನಮ್ಮನ್ನು ಸಹ ಯೇಸುವಿನೊಂದಿಗೆ ಎಬ್ಬಿಸಿ ನಿಮ್ಮ ಜೊತೆಯಲ್ಲಿ ತನ್ನ ಮುಂದೆ ನಿಲ್ಲಿಸುವನೆಂದು ತಿಳಿದವರಾಗಿದ್ದೇವೆ.**

ಅಪೊಸ್ತಲನಾದ ಪೌಲನು ಇಲ್ಲಿ ಕೀರ್ತನೆಗಳು 116:10 ರಿಂದ ಉಲ್ಲೇಖಿಸುತ್ತಾನೆ. ವಾಸ್ತವವಾಗಿ, ಅಪೊಸ್ತಲನಾದ ಪೌಲನು ಪವಿತ್ರಾತ್ಮನ ಪ್ರೇರಣೆಯಿಂದ, ಆ ವಚನದ ಒಂದು ಭಾಗವನ್ನು ಮಾತ್ರ ಉಲ್ಲೇಖಿಸುತ್ತಾನೆ, ಬಹುಶಃ ಅವನು ವಿಶ್ವಾಸಿಗಳಿಗೆ ಹೊಂದಲು ಬಯಸುವ ನಿರ್ದಿಷ್ಟ ಸತ್ಯವನ್ನು ಒತ್ತಿಹೇಳಲು. ನಾವು ನಂಬುವ ಪ್ರಕಾರ ಮಾತನಾಡುತ್ತೇವೆ. ನಾವು ನಮ್ಮ ನಂಬಿಕೆಯನ್ನು ಮಾತನಾಡಬೇಕು. ನಂಬಿಕೆ ಮಾತನಾಡುತ್ತದೆ. "ನಂಬಿಕೆಯ ಆತ್ಮ" ಒಡಂಬಡಿಕೆಗಳಾದ್ಯಂತ ಬದಲಾಗಿಲ್ಲ. ಹಳೆಯ ಒಡಂಬಡಿಕೆಯಲ್ಲಿದ್ದ ಜನರು ಅಥವಾ ಹೊಸ ಒಡಂಬಡಿಕೆಯಲ್ಲಿರುವ ಜನರು ದೇವರಲ್ಲಿ ನಂಬಿಕೆಯ ಸಾರವು ಬದಲಾಗಿಲ್ಲ. ನಂಬಿಕೆಯ ತತ್ವವು ಇನ್ನೂ ಒಂದೇ ಆಗಿರುತ್ತದೆ ಮತ್ತು ಇದು—ನನಗೆ ನಂಬಿಕೆ ಇದೆ ಮತ್ತು ನಾನು ನಂಬಿಕೆಯಲ್ಲಿ ಮಾತನಾಡುತ್ತೇನೆ, ಅಥವಾ ಸರಳವಾಗಿ, ನಂಬಿಕೆ ಮಾತನಾಡುತ್ತದೆ.

ನಾವು ನಂಬುತ್ತೇವೆ ಮತ್ತು ಆದ್ದರಿಂದ, ನಾವು ನಂಬುವದನ್ನು ಮಾತನಾಡುತ್ತೇವೆ. ನಮಗೆ ನಂಬಿಕೆ ಇದೆ ಮತ್ತು ನಾವು ನಮ್ಮ ನಂಬಿಕೆಯನ್ನು ಮಾತನಾಡುತ್ತೇವೆ. ಇದು ಸತ್ಯವೇದದ ಮೂಲಕ ನಂಬಿಕೆಯ ಆಧಾರವಾಗಿರುವ ತತ್ವವಾಗಿದೆ. ನಾವು ನಂಬಿದ್ದನ್ನು ಮಾತನಾಡಬೇಕು. ನಂಬಿಕೆಯನ್ನು ಮಾತನಾಡಬೇಕು. ನಾವು ದೇವರನ್ನು ಮತ್ತು ಆತನ ವಾಕ್ಯವನ್ನು ನಂಬುತ್ತೇವೆ. ನಂತರ ನಾವು ಅದಕ್ಕೆ ಅನುಗುಣವಾಗಿ ಮಾತನಾಡಬೇಕು. ದೇವರು ಯಾರು ಮತ್ತು ಆತನು ನಮಗೆ ಏನು ವಾಗ್ದಾನ

ಮಾಡಿದ್ದಾನೆ ಎಂಬುದರಲ್ಲಿ ನಮ್ಮ ನಂಬಿಕೆಯನ್ನು ನಾವು ಘೋಷಿಸುತ್ತೇವೆ.

ನಾವು ಯೇಸುವನ್ನು ಮತ್ತು ಆತನ ಶಿಲುಬೆಯ ಮರಣ, ಆತನ ಪುನರುತ್ಥಾನ, ಆರೋಹಣ ಮತ್ತು ಉನ್ನತೀಕರಣದ ಮೂಲಕ ಆತನು ನಮಗಾಗಿ ಏನನ್ನು ಸಾಧಿಸಿದ್ದಾನೆ ಎಂಬದನ್ನು ನಂಬುತ್ತೇವೆ. ಆದ್ದರಿಂದ ನಾವು ನಿಮ್ಮ ನಂಬಿಕೆಯನ್ನು ಮಾತನಾಡಿ ಎಂದು ಮಾತನಾಡುತ್ತೇವೆ ಮತ್ತು ಘೋಷಿಸುತ್ತೇವೆ.

# 57

# ಕೃಪೆಯನ್ನು ಸಾರಲು ವಾಕ್ಯಗಳನ್ನು ಬಳಸಿ

**ಎಫೆಸದವರಿಗೆ 4:29**

**ನಿಮ್ಮ ಬಾಯೊಳಗಿಂದ ಯಾವ ಕೆಟ್ಟ ಮಾತೂ ಹೊರಡಬಾರದು; ಭಕ್ತಿಯನ್ನು ವೃದ್ಧಿಮಾಡುವಂಥ ಕಾಲೋಚಿತವಾದ ಮಾತು ಇದ್ದರೆ ಕೇಳುವವರ ಹಿತಕ್ಕಾಗಿ ಅದನ್ನು ಆಡಿರಿ.**

ಮಾತುಗಳು ಕೇಳುಗರಿಗೆ ಏನನ್ನಾದರೂ ನೀಡುತ್ತವೆ. ಭ್ರಷ್ಟ (ಕೆಟ್ಟ, ಕೊಳೆತ, ನಿಷ್ಪ್ರಯೋಜಕ) ಮಾತುಗಳು ಭ್ರಷ್ಟಾಚಾರವನ್ನು ನೀಡುತ್ತವೆ (ಯಾವುದೇ ಪ್ರಯೋಜನವನ್ನು ತರದ ವಿಷಯಗಳು). ಒಳ್ಳೆಯ ಮಾತುಗಳು ಶಕ್ತಿ, ಅನುಗ್ರಹ ಮತ್ತು ಸಂಪೂರ್ಣತೆಯನ್ನು ನೀಡುತ್ತವೆ.

ಮಾತುಗಳು ಧಾರಕಗಳಾಗಿವೆ. ಮಾತುಗಳು ವಾಹಕಗಳು. ಮಾತುಗಳು ರವಾನಿಸುವವು (ಟ್ರಾನ್ಸ್ಮಿಟರ್ಗಳು). ಮಾತುಗಳು "ಸೇವಕರು." ಅವು ಸ್ವೀಕರಿಸುವವರಿಗೆ ಏನಾದರೂ ಮಾಡುತ್ತವೆ. ಅವು ಆಶೀರ್ವದಿಸಬಹುದು, ನಿರ್ಮಿಸಬಹುದು ಮತ್ತು ಬಲಪಡಿಸಬಹುದು. ಅಥವಾ ಅವು ಕೆಡವಬಹುದು, ದುರ್ಬಲಗೊಳಿಸಬಹುದು, ನೋಯಿಸಬಹುದು ಮತ್ತು ನಾಶಪಡಿಸಬಹುದು.

ವಿಶ್ವಾಸಿಗಳಾಗಿ, ನಾವು ನಂಬಿಕೆಯನ್ನು ಹೊತ್ತುಸಾಗುವ ಮತ್ತು ನೀಡುವ ಮಾತುಗಳನ್ನು ಮಾತನಾಡಬೇಕು. ನಂಬಿಕೆ ತುಂಬಿದ ಮಾತುಗಳನ್ನು ಮಾತನಾಡಿ ಇದರಿಂದ ಅದು ನಮ್ಮನ್ನು ಕೇಳುವವರಲ್ಲಿ ನಂಬಿಕೆಯನ್ನು ಹುಟ್ಟುಹಾಕುತ್ತದೆ, ಪ್ರೇರೇಪಿಸುತ್ತದೆ ಮತ್ತು ಜಾಗೃತಗೊಳಿಸುತ್ತದೆ. ನಾವು ಬುದ್ಧಿವಂತಿಕೆಯ ಮಾತುಗಳನ್ನು ಮಾತನಾಡಬೇಕು. ನಾವು ಸಹಾಯ ಮಾಡುವ, ಪೋಷಿಸುವ, ಮಾರ್ಗದರ್ಶನ ಮಾಡುವ ಮತ್ತು ಆಶೀರ್ವದಿಸುವ ಮಾತುಗಳನ್ನು ಮಾತನಾಡಬೇಕು. ನಿಮ್ಮ ಮಾತುಗಳನ್ನು ಬುದ್ಧಿವಂತಿಕೆಯಿಂದ ಬಳಸಿ. ಜನರನ್ನು ಆಶೀರ್ವದಿಸಲು ಇದನ್ನು ಬಳಸಿ. ಇತರರನ್ನು ಆಶೀರ್ವದಿಸಲು ನಂಬಿಕೆಯನ್ನು ಮಾತನಾಡಿ.

# 58

# ಆತ್ಮನ ಕತ್ತಿಯನ್ನು ಉಪಯೋಗಿಸಿ

**ಎಫೆಸದವರಿಗೆ 6:17**

**ಇದಲ್ಲದೆ ರಕ್ಷಣೆಯೆಂಬ ಶಿರಸ್ತ್ರಾಣವನ್ನು ಇಟ್ಟುಕೊಂಡು ಪವಿತ್ರಾತ್ಮನು ಕೊಡುವ ದೇವರ ವಾಕ್ಯವೆಂಬ ಕತ್ತಿಯನ್ನು ಹಿಡಿಯಿರಿ.**

ಅಪೊಸ್ತಲನಾದ ಪೌಲನು ಎಫೆಸದವರಿಗೆ 6:17 ರಲ್ಲಿ ಸೂಚಿಸಿದಂತೆ ನಾವು ಆತ್ಮಿಕ ಸಂಘರ್ಷದ ಮಧ್ಯೆ ಇದ್ದೇವೆ. ಶತ್ರುವನ್ನು ಸೋಲಿಸಲಾಗಿದೆ, ಆದರೂ, ಉಳಿದಿರುವ ಸಮಯಕ್ಕೆ, ಅವನು ಇನ್ನೂ ತನ್ನ ಗೆರಿಲ್ಲಾ ತಂತ್ರಗಳನ್ನು ಪ್ರಯತ್ನಿಸುತ್ತಾನೆ. ವಿಶ್ವಾಸಿಗಳಾಗಿ, ದೇವರು ನಮಗೆ ಆತ್ಮಿಕ ಯುದ್ಧದ ಆಯುಧಗಳನ್ನು ನೀಡಿದ್ದಾನೆ, ಅದು ವಿಜಯಶಾಲಿಯಾಗಿ ಬದುಕಲು ಮತ್ತು ಶಕ್ತಿಯುತವಾಗಿ ಸೇವೆ ಮಾಡಲು ಸಾಕಾಗುವಷ್ಟು ಹೆಚ್ಚು ಇವೆ . ಈ ಶಸ್ತ್ರಾಸ್ತ್ರದ ಭಾಗವು ಅಪರಾಧದ ಪ್ರಬಲ ಆಯುಧವಾಗಿದೆ, ಆತ್ಮನ ಕತ್ತಿಯಾಗಿದೆ. ಇದು ಪವಿತ್ರಾತ್ಮನಿಂದ ನಮಗೆ ನೀಡಲ್ಪಟ್ಟ ಕತ್ತಿಯಾಗಿದೆ. ಇದು ಶಕ್ತಿಯುತವಾದ ಪವಿತ್ರಾತ್ಮದಿಂದಲೇ ಶಕ್ತಿಯುತವಾಗಿದೆ ಮತ್ತು ಬೆಂಬಲಿತವಾಗಿದೆ. ಆದಾಗ್ಯೂ, ನಾವು ಖಡ್ಗವನ್ನು ತೆಗೆದುಕೊಂಡು ಅದನ್ನು ಬಳಸಬೇಕು. ನಾವು ಈ ಖಡ್ಗವನ್ನು ಬಳಸಿದಾಗ, ಪವಿತ್ರಾತ್ಮನೇ ನಮ್ಮ ಪರವಾಗಿ ಚಲಿಸುತ್ತಾನೆ ಏಕೆಂದರೆ ಅದು ಆತನ ಖಡ್ಗವಾಗಿದೆ.

ಖಡ್ಗ, ಶತ್ರುಗಳ ಮೇಲೆ ದಾಳಿ ಮಾಡುವ ಮತ್ತು ಹರಿದು ಹಾಕುವ ನಮ್ಮ ಆಯುಧವು ದೇವರ ವಾಕ್ಯವಾಗಿದೆ. ನಾವು ಕತ್ತಿಯನ್ನು ಹೇಗೆ ಬಳಸುತ್ತೇವೆ? ಸರಿ, ನಾವು ಮಾತುಗಳೊಂದಿಗೆ ಏನು ಮಾಡಬೇಕು? ನಾವು ಮಾತುಗಳನ್ನು ಮಾತನಾಡುತ್ತೇವೆ. *"ಆತನ ಬಾಯಿಂದ ಹದವಾದ ಕತ್ತಿಯು ಹೊರಡುತ್ತದೆ"* (ಪ್ರಕಟನೆ 19:13,15) ಎಂಬ ದೇವರ ವಾಕ್ಯವಾದ ಯೇಸುವಿನ ಬಗ್ಗೆ ಪ್ರಕಟನೆ ಪುಸ್ತಕದಲ್ಲಿ ನಾವು ಸ್ಪಷ್ಟವಾದ ಚಿತ್ರಣವನ್ನು ನೋಡುತ್ತೇವೆ. ಆದ್ದರಿಂದ, ಮಾತುಗಳ ಹರಿತವಾದ ಕತ್ತಿಯು ನಾವು ನಮ್ಮ ಬಾಯಿಂದ ಮಾತನಾಡುವ ದೇವರ ವಾಕ್ಯವಾಗಿದೆ.

ನಾವು ದೇವರ ವಾಕ್ಯವನ್ನು ಮಾತನಾಡುವ ಮೂಲಕ ಆತ್ಮನ ಕತ್ತಿಯನ್ನು ಬಳಸುತ್ತೇವೆ. ಪ್ರತಿ ಬಾರಿ ನೀವು ದೇವರ ವಾಕ್ಯವನ್ನು ಘೋಷಿಸಿದಾಗ ಮತ್ತು ದೇವರ ವಾಕ್ಯದಲ್ಲಿ ನಿಮ್ಮ ನಂಬಿಕೆಯನ್ನು ಮಾತನಾಡುವಾಗ ಶತ್ರುಗಳ ಮೇಲೆ ಗಾಯವಾಗುತ್ತದೆ. ಶತ್ರುವು ನಿಮ್ಮ ವಿರುದ್ಧ ಬಂದಾಗ, ನಿಮ್ಮ ಮನಸ್ಸಿನಲ್ಲಿ ತಪ್ಪು ಆಲೋಚನೆಗಳು ಅಥವಾ ನಿಮ್ಮ ಜೀವನದ ಯಾವುದೇ ಕ್ಷೇತ್ರದಲ್ಲಿ ಹಸ್ತಕ್ಷೇಪವಾಗಲಿ, ಅವನ ವಿರುದ್ಧ ಆತ್ಮನ ಕತ್ತಿಯನ್ನು ಬಳಸಿ. ಶಕ್ತಿಯುತ ಪವಿತ್ರಾತ್ಮನ ವಿರುದ್ಧ ಅವನು ಯಾವುದೇ ಅವಕಾಶವನ್ನು ಹೊಂದಿಲ್ಲ. ದೇವರ ವಾಕ್ಯವನ್ನು ಮಾತನಾಡಿ. ನಿಮ್ಮ ನಂಬಿಕೆಯನ್ನು ಮಾತನಾಡಿ.

# 59

# ಪ್ರವಾದಿಯ ಮಾತುಗಳೊಂದಿಗೆ ಉತ್ತಮ ಯುದ್ಧವನ್ನು ಸಾರಿರಿ

**1 ತಿಮೊಥೆಯನಿಗೆ 1:18**

**ಮಗನಾದ ತಿಮೊಥೆಯನೇ, ನಿನ್ನ ವಿಷಯದಲ್ಲಿ ಮುಂಚೆ ಉಂಟಾದ ಪ್ರವಾದನೆಗಳನ್ನು ನಾನು ನೆನಸಿ – ನೀನು ಅವುಗಳಿಂದ ಧೈರ್ಯಗೊಂಡು ಕ್ರೈಸ್ತರ ದಿವ್ಯಯುದ್ಧವನ್ನು ನಡಿಸಬೇಕೆಂದು ನಿನಗೆ ಆಜ್ಞಾಪನೆಮಾಡುತ್ತೇನೆ .**

ಪ್ರವಾದಿಯ ಮಾತುಗಳು ಪವಿತ್ರಾತ್ಮನ ಪ್ರೇರಣೆ ಅಥವಾ ಸ್ಫೂರ್ತಿಯಿಂದ ನೀಡಲಾದ ಮಾತುಗಳಾಗಿವೆ. ಪ್ರವಾದನೆಯ ವರ ಮತ್ತು ಪ್ರವಾದನಾ ಸೇವೆಯು ಇಂದು ಕ್ರಿಸ್ತನ ದೇಹದಲ್ಲಿ ನಿಜವಾಗಿಯೂ ಕಾರ್ಯನಿರ್ವಹಿಸುತ್ತಿದೆ. ನಮಗೆ ಪ್ರವಾದನೆಗಳನ್ನು ನೀಡಿದಾಗ, ಈ ಮಾತುಗಳನ್ನು ನೀಡಿದ ಕಾರಣಗಳಲ್ಲಿ ಒಂದು ಆತ್ಮಿಕ ಯುದ್ಧದಲ್ಲಿ ನಮ್ಮನ್ನು ಸಬಲಗೊಳಿಸುವುದು ಎಂದು ನಾವು ಅರ್ಥಮಾಡಿಕೊಳ್ಳಬೇಕು. ವೈರಿಗಳ ವಿರುದ್ಧ ದಿವ್ಯಯುದ್ಧವನ್ನು ನಡೆಸಲು ನಾವು ಈ ಪ್ರವಾದನೆಗಳನ್ನು ಬಳಸಬೇಕು.

ವೈರಿಯಾದ, ಸೈತಾನ ಮತ್ತು ಅವನ ದೆವ್ವಗಳು ಕದಿಯಲು, ಕೊಲ್ಲಲು ಮತ್ತು ನಾಶಮಾಡಲು ಬರುತ್ತಾರೆ. ಅವರು ಅಡ್ಡಿಪಡಿಸಲು, ವಿಚಲಿತರಾಗಲು ಮತ್ತು ಕೆಲವು ರೀತಿಯಲ್ಲಿ ದೇವರ ಉದ್ದೇಶಗಳಿಂದ ನಮ್ಮನ್ನು ತೊಂದರೆಗೊಳಿಸಲು ಪ್ರಯತ್ನಿಸುತ್ತಾರೆ. ದೇವರ ಉದ್ದೇಶ, ದೇವರ ವಾಗ್ದಾನ ಮತ್ತು ನಮ್ಮ ಜೀವನದಲ್ಲಿ ದೇವರ ಸಾಮರ್ಥ್ಯವನ್ನು ಘೋಷಿಸುವ ನಮ್ಮ ಜೀವನದಲ್ಲಿ ಮಾತನಾಡುವ ಪ್ರವಾದನೆಗಳನ್ನು ನಾವು ಹಿಡಿದಿಟ್ಟುಕೊಳ್ಳುತ್ತೇವೆ. ಈ ಪ್ರವಾದನೆಗಳೊಂದಿಗೆ, ನಾವು ದಿವ್ಯಯುದ್ಧವನ್ನು ನಡೆಸುತ್ತೇವೆ. ನಾವು ತೊಡಗಿಸಿಕೊಂಡಿರುವ ಆತ್ಮಿಕ ಸಂಘರ್ಷದಲ್ಲಿ ವೈರಿಗಳ ವಿರುದ್ಧ ಆಯುಧಗಳಾಗಿ ಪ್ರವಾದನೆಯ ಮಾತುಗಳನ್ನು ಬಳಸಬೇಕು. ನೆನಪಿಡಿ, ಮಾತುಗಳನ್ನು ಮಾತನಾಡಬೇಕು. ನಿಮ್ಮ ಜೀವನದಲ್ಲಿ ಒಮ್ಮೆ ಮಾತನಾಡಿರುವ ಆ ಪ್ರವಾದನೆಯ ಮಾತುಗಳನ್ನು ಮಾತನಾಡಿ (ನಿಜವಾಗಿಯೂ ನೀವು ಪರೀಕ್ಷಿಸಿರುವಿರಿ ಮತ್ತು ಆತ್ಮನಿಂದ

ಎಂದು ತಿಳಿದಿದ್ದೀರಿ). ದೇವರು ತನ್ನ ಆತ್ಮನ ಮೂಲಕ ನಿಮ್ಮ ಮೇಲೆ ಏನು ಘೋಷಿಸಿದ್ದಾನೆಂದು ಘೋಷಿಸಿ. ಆ ಮಾತುಗಳು ಶತ್ರುಗಳ ವಿರುದ್ಧ ನಿಮ್ಮ ಆಯುಧಗಳ ಭಾಗವಾಗಿದೆ ಎಂದು ದೇವರು ಹೇಳಿದ್ದಾನೆ. ಆ ಪ್ರವಾದನೆಯ ಮಾತುಗಳನ್ನು ಹೇಳಿ. ನಿಮ್ಮ ನಂಬಿಕೆಯನ್ನು ಮಾತನಾಡಿ.

# 60

# ಕ್ರಿಸ್ತನಲ್ಲಿ ನಿಮ್ಮಲ್ಲಿರುವ ಪ್ರತಿಯೊಂದು ಒಳ್ಳೆಯದನ್ನು ಒಪ್ಪಿಕೊಳ್ಳಿ

**ಫಿಲೆಮೋನನಿಗೆ 1:6**

**ಕ್ರಿಸ್ತನಲ್ಲಿ ನಮಗೆ ದೊರಕಿರುವ ಎಲ್ಲಾ ಸುವರಗಳನ್ನು ಕುರಿತು ನೀನು ತಿಳುವಳಿಕೆಯನ್ನು ಹೊಂದುತ್ತಿರುವಲ್ಲಿ ಕ್ರಿಸ್ತ ನಂಬಿಕೆಯಲ್ಲಿರುವ ನಿನ್ನ ಅನ್ಯೋನ್ಯತೆಯು ಕ್ರಿಸ್ತನಿಗೆ ಹೆಚ್ಚಾದ ಮಹಿಮೆಯನ್ನು ಉಂಟುಮಾಡಬೇಕೆಂದು ಪ್ರಾರ್ಥಿಸುತ್ತೇನೆ.**

ಪೌಲನು ಫಿಲೆಮೋನನಿಗೆ ಬರೆದ ಪತ್ರದ ಸಂದರ್ಭವು ಆಸಕ್ತಿದಾಯಕವಾಗಿದೆ. ಓಡಿಹೋದ ಗುಲಾಮನಾದ ಒನೇಸಿಮನು ಈಗ ಪೌಲನ ಸೇವೆಯ ಅಡಿಯಲ್ಲಿ ವಿಶ್ವಾಸಿಯಾಗಿದ್ದಾನೆ, ತನ್ನ ಹಿಂದಿನ ಗುಲಾಮನಿಗೆ ಈಗ ಕರ್ತನಲ್ಲಿ ಸಹೋದರನಾಗಿರುವ ತನ್ನ ಯಜಮಾನನಾದ ಫಿಲೆಮೋನನ ಬಳಿಗೆ ಕಳುಹಿಸಲು ಪೌಲನು ಬರೆಯುತ್ತಿದ್ದಾನೆ. ಪೌಲನು ಈ ಚಿಕ್ಕ ಪತ್ರವನ್ನು ತೆರೆಯುತ್ತಿದ್ದಂತೆ, ಕ್ರಿಸ್ತನಲ್ಲಿ ನಮಗೆ ಇರುವ ಪ್ರತಿಯೊಂದು ಒಳ್ಳೆಯದನ್ನು (ಎಲ್ಲಾ ಐಶ್ವರ್ಯ ಮತ್ತು ಆಶೀರ್ವಾದಗಳನ್ನು) ಅಂಗೀಕರಿಸಿದಾಗ (ಸಂಪೂರ್ಣವಾಗಿ ಗುರುತಿಸಿದಾಗ) ನಮ್ಮ ನಂಬಿಕೆಯ ಅನ್ಯೋನ್ಯತೆಯು ಪರಿಣಾಮಕಾರಿಯಾಗುತ್ತದೆ (ಉತ್ಪನ್ನಕಾರಿ, ಶಕ್ತಿಯುತ, ಬಲವಾಗಿ) ಎಂಬ ಪ್ರಮುಖ ಸತ್ಯವನ್ನು ಅವನು ಸೂಚಿಸುತ್ತಾನೆ.

ನಮ್ಮನ್ನು ಕ್ರಿಸ್ತನೊಳಗೆ ಕರೆತರುವ ಮೂಲಕ ದೇವರು ನಮ್ಮಲ್ಲಿ ಇಟ್ಟಿರುವ ಒಳ್ಳೆಯ ಸಂಗತಿಗಳನ್ನು ಕರೆಯಲು, ಅಂಗೀಕರಿಸಲು ಮತ್ತು ಗುರುತಿಸಲು ನಾವು ಮಾತನಾಡಲು ಕಲಿಯಬೇಕು. ನಾವು ಕ್ರಿಸ್ತನಲ್ಲಿ ಯಾರೆಂದು ಗುರುತಿಸಬೇಕು ಮತ್ತು ಒಪ್ಪಿಕೊಳ್ಳಬೇಕು. ಇದನ್ನು ನಿಮಗಾಗಿ ಮತ್ತು ಇತರರಿಗಾಗಿ ಮಾಡಿ. ಕ್ರಿಸ್ತನಲ್ಲಿ ದೇವರು ನಮಗಾಗಿ ಏನು ಮಾಡಿದ್ದಾನೆ ಎಂಬುದರ ಸುತ್ತಲೂ ನಾವು ಅನ್ಯೋನ್ಯವಾಗಿದ್ದೇವೆ. ಇದೇ ನಮ್ಮ ಅನ್ಯೋನ್ಯತೆಯನ್ನು ಶಕ್ತಿಯುತವಾಗಿಸುತ್ತದೆ. ದೌರ್ಬಲ್ಯ, ನಾವು ಎಷ್ಟು ಬಡವರು ಮತ್ತು ಶೋಚನೀಯರು, ನಾವು ಎಷ್ಟು ಪಾಪಿಗಳು ಮತ್ತು ಭ್ರಷ್ಟರಾಗಿದ್ದೇವೆ ಎಂದು ಮಾತನಾಡುವುದಕ್ಕಿಂತ ಹೆಚ್ಚಾಗಿ,

ನಾವು ಕ್ರಿಸ್ತನಲ್ಲಿರುವುದರಿಂದ ನಮ್ಮಲ್ಲಿರುವ ಒಳ್ಳೆಯ ವಿಷಯಗಳನ್ನು ಒಪ್ಪಿಕೊಳ್ಳೋಣ.

**ಗಮನಿಸಿ:** ಪಾಪವನ್ನು ಉದ್ದೇಶಿಸಬಾರದು ಅಥವಾ ಏನಾದರೂ ತಪ್ಪಾಗಿದ್ದರೆ, ನಾವು ಅದನ್ನು ಕಡೆಗಣಿಸಬೇಕು ಮತ್ತು ತಿದ್ದುಪಡಿಯನ್ನು ತರಬಾರದು ಎಂದು ನಾವು ಇಲ್ಲಿ ಹೇಳುತ್ತಿಲ್ಲ. ನಾವು ದೋಷ, ಲೋಪಗಳು ಮತ್ತು ತಪ್ಪುಗಳನ್ನು ಎದುರಿಸಬೇಕು ಮತ್ತು ತಿದ್ದುಪಡಿ ಅಗತ್ಯವಿರುವಲ್ಲಿ ತಿದ್ದುಪಡಿಯನ್ನು ತರಬೇಕು. ಆದರೆ ತಿದ್ದುಪಡಿಯನ್ನು ನಿರ್ವಹಿಸಿದ ನಂತರ ಮತ್ತು ಸ್ವೀಕರಿಸಿದ ನಂತರ, ನಾವು ಹಿಂದಿನದನ್ನು ಬಿಟ್ಟುಬಿಡುತ್ತೇವೆ ಮತ್ತು ಕ್ರಿಸ್ತನಲ್ಲಿ ನಮ್ಮಲ್ಲಿ ಪ್ರತಿಯೊಬ್ಬರಲ್ಲಿರುವ ಒಳ್ಳೆಯ ವಿಷಯಗಳನ್ನು ನೋಡುತ್ತೇವೆ ಎಂದು ತಿಳಿದುಕೊಂಡು ನಾವು ಇದನ್ನು ಮಾಡುತ್ತೇವೆ.

# 61

# ಆತನ ಮಾತು ನಿಮ್ಮ ಪ್ರಪಂಚವನ್ನು ಎತ್ತಿಹಿಡಿಯಬಹುದು ಮತ್ತು ನಿಯಂತ್ರಿಸಬಹುದು

**ಇಬ್ರಿಯರಿಗೆ 1:3**

**ಈತನು ದೇವರ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ ತನ್ನ ಶಕ್ತಿಯ ವಾಕ್ಯದಿಂದ ಸಮಸ್ತಕ್ಕೆ ಆಧಾರವೂ ಆಗಿದ್ದು ಪಾಪವಿಶುದ್ಧಿಮಾಡಿದ ಮೇಲೆ ಉನ್ನತಲೋಕದೊಳಗೆ ಮಹತ್ವವುಳ್ಳ ದೇವರ ಬಲಗಡೆಯಲ್ಲಿ ಆಸನಾರೂಢನಾದನು.**

ನಾವು ಈಗಾಗಲೇ ಹಳೆಯ ಒಡಂಬಡಿಕೆಯಲ್ಲಿ ಹಲವಾರು ನಿದರ್ಶನಗಳಲ್ಲಿ ನೋಡಿದಂತೆ, ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ ಮತ್ತೊಮ್ಮೆ, ವಾಕ್ಯವು ನಮಗೆ ಆತನ ವಾಕ್ಯದ ಶಕ್ತಿಯಿಂದ, ಎಲ್ಲಾ ವಿಷಯಗಳು, ಇಡೀ ವಿಶ್ವವು ಎತ್ತಿಹಿಡಿಯಲ್ಪಟ್ಟಿದೆ, ಸಮರ್ಥವಾಗಿದೆ, ನಿಯಂತ್ರಿಸಲ್ಪಡುತ್ತದೆ ಮತ್ತು ಸ್ಥಳದಲ್ಲಿ ಇರಿಸಲ್ಪಟ್ಟಿದೆ ಎಂದು ಕಲಿಸುತ್ತದೆ.

ಅದೇ ಸರ್ವಶಕ್ತ ದೇವರು ಇಲ್ಲಿ ಭೂಮಿಯ ಮೇಲಿನ ನಮ್ಮ ಜೀವನಕ್ಕಾಗಿ ಆತನ ವಾಕ್ಯವನ್ನು ನಮಗೆ ಕೊಟ್ಟಿದ್ದಾನೆ. ಖಂಡಿತವಾಗಿಯೂ ಆತನು ನಮಗೆ ನೀಡಿದ ಆತನ ವಾಕ್ಯವು ನಮ್ಮ "ಪುಟ್ಟ ಪ್ರಪಂಚಗಳನ್ನು" ಉತ್ತಮ ಕ್ರಮದಲ್ಲಿ ಮತ್ತು ಉತ್ತಮವಾಗಿ ಕಾರ್ಯ ನಿರ್ವಹಿಸುವಂತೆ ಎತ್ತಿಹಿಡಿಯಬಹುದು, ಆಧಾರವಾಗಿರಬಹುದು, ನಿಯಂತ್ರಿಸಬಹುದು ಮತ್ತು ಸಂರಕ್ಷಿಸಬಹುದು.

ಪವಿತ್ರ ವಾಕ್ಯಗಳಲ್ಲಿ ಲಿಖಿತ ರೂಪದಲ್ಲಿ ಆತನು ನಮಗೆ ನೀಡಿದ ಆತನ ವಾಕ್ಯವನ್ನು ತೆಗೆದುಕೊಂಡು ಅದನ್ನು ನಮ್ಮ ಲೋಕಗಳಿಗೆ ತರುವುದು ಮುಖ್ಯವಾದುದು. ವಾಕ್ಯಗಳಾದ್ಯಂತ ನಾವು ನೋಡಿದಂತೆ ನಾವು ಮಾಡುವ ಒಂದು ಮಾರ್ಗವೆಂದರೆ ಆತನ ವಾಕ್ಯವನ್ನು ನಂಬುವುದು ಮತ್ತು ನಮ್ಮ ಜಗತ್ತಿನಲ್ಲಿ ಆತನ ವಾಕ್ಯವನ್ನು ಮಾತನಾಡುವುದು.

ನಿಮ್ಮ ಜಗತ್ತನ್ನು ಎತ್ತಿಹಿಡಿಯಲು ಮತ್ತು ನಿಯಂತ್ರಿಸಲು ದೇವರ ವಾಕ್ಯಕ್ಕೆ ಸಾಕಷ್ಟು ಶಕ್ತಿಯಿದೆ ಎಂದು ತಿಳಿಯಿರಿ. ಕೆಲವೊಂದು ಸಂದರ್ಭಗಳಲ್ಲಿ

ವಿಷಯಗಳು ಬಿದ್ದು ಹೋಗುತ್ತಾ ಇರುವಂತೆ ತೋರಬಹುದು. ವಿಷಯಗಳು ಕೈ ಮೀರುತ್ತಿರುವಂತೆ ಅಥವಾ ನಿಯಂತ್ರಣದಿಂದ ಹೊರಗುಳಿಯುತ್ತಿರುವಂತೆ ತೋರಬಹುದು. ದೇವರ ವಾಕ್ಯದ ಶಕ್ತಿಯಲ್ಲಿ ವಿಶ್ವಾಸವಿರಲಿ. ನಿಮ್ಮ ಜೀವನ, ನಿಮ್ಮ ವರ್ತಮಾನ ಮತ್ತು ನಿಮ್ಮ ಭವಿಷ್ಯದ ಮೇಲೆ, ಪರಿಸ್ಥಿತಿಗಳು ಮತ್ತು ಸಂದರ್ಭಗಳ ಮೇಲೆ ಆತನ ವಾಕ್ಯವನ್ನು ಮಾತನಾಡಿ. ಆತನ ವಾಗ್ದಾನಗಳನ್ನು ಮಾತನಾಡಿ. ನಿಮ್ಮ ಪ್ರಪಂಚದಲ್ಲಿರುವ ಎಲ್ಲವೂ ದೇವರ ವಾಕ್ಯಕ್ಕೆ ಒಳಪಟ್ಟಿರುತ್ತದೆ ಮತ್ತು ಆತನ ವಾಕ್ಯಕ್ಕೆ ಹೊಂದಿಕೆಯಾಗುತ್ತದೆ ಎಂದು ಘೋಷಿಸಿ. ನಿಮ್ಮ ನಂಬಿಕೆಯನ್ನು ಮಾತನಾಡಿ. ನಿಮ್ಮ ಜೀವನದಲ್ಲಿ ದೇವರ ವಾಕ್ಯದ ಶಕ್ತಿಯು ಕಾರ್ಯನಿರ್ವಹಿಸುವುದನ್ನು ನೀವು ನೋಡುತ್ತೀರಿ.

# 62

# ಯೇಸು ನಮ್ಮ ತಪ್ಪೊಪ್ಪಿಗೆಯ ಮಹಾಯಾಜಕ

**ಇಬ್ರಿಯರಿಗೆ 3:1**

**ಆದದರಿಂದ ದೇವಜನರಾದ ಸಹೋದರರೇ, ಪರಲೋಕಸ್ವಾಸ್ಥ್ಯಕ್ಕಾಗಿ ನನ್ನೊಂದಿಗೆ ಕರೆಯಲ್ಪಟ್ಟವರೇ, ನಾವು ಪ್ರತಿಜ್ಞೆಮಾಡಿ ಒಪ್ಪಿಕೊಂಡಿರುವ ದೇವಪ್ರೇಷಿತನೂ ಮಹಾಯಾಜಕನೂ ಆಗಿರುವ ಯೇಸುವನ್ನು ಲಕ್ಷ್ಯವಿಟ್ಟು ಯೋಚಿಸಿರಿ.**

"ಅರಿಕೆ" (ಗ್ರೀಕ್ '*ಹೋಮೋಲೋಜಿಯಾ*') ಪದದ ಅರ್ಥ "ಅದೇ ವಿಷಯವನ್ನು ಹೇಳುವುದು" ಅಥವಾ "ಮಾತುಗಳಲ್ಲಿ ಒಪ್ಪಿಕೊಳ್ಳುವುದು" ಎಂದು ನಾವು ಹಿಂದಿನ ಅಧ್ಯಾಯದಲ್ಲಿ ವಿವರಿಸಿದ್ದೇವೆ. ಈ ಹೊಸ ಒಡಂಬಡಿಕೆಯ ಸಂದರ್ಭದಲ್ಲಿ ಅರಿಕೆಯು ನಾವು ದೇವರು ಮತ್ತು ಆತನ ವಾಕ್ಯದೊಂದಿಗೆ ಒಪ್ಪಂದದಲ್ಲಿ ಹೇಳುತ್ತೇವೆ. ದೇವರು ಹೇಳಿದ ಮಾತನ್ನೇ ಹೇಳಿದಾಗ ಅಥವಾ ನಮ್ಮ ಮಾತುಗಳನ್ನು ದೇವರೊಂದಿಗೆ ಒಪ್ಪಿದಾಗ ನಾವು ನಮ್ಮ ಅರಿಕೆಯನ್ನು ಮಾಡುತ್ತೇವೆ.

ಇಬ್ರಿಯರಿಗೆ ಬರೆದ ಪತ್ರಿಕೆಯ ಬರಹಗಾರನು ನಮ್ಮನ್ನು ಯೇಸುವಿನ ಕಡೆಗೆ ತೋರಿಸುತ್ತಾನೆ ಮತ್ತು ಆತನು ನಮ್ಮ ಅರಿಕೆಯ ಅಪೊಸ್ತಲ (ಮುಂಚೂಣಿಯಲ್ಲಿರುವವನು, ಮುಂದೆ ಹೋಗುವವನು) ಮತ್ತು ಮಹಾಯಾಜಕ (ಪ್ರತಿನಿಧಿಸುವವರು) ಎಂದು ಹೇಳುತ್ತಾನೆ. ನಾವು ಪರಲೋಕದಲ್ಲಿ ಒಪ್ಪಿಕೊಳ್ಳುವ ಅಥವಾ ಪ್ರತಿಪಾದಿಸುವ ನಂಬಿಕೆಯನ್ನು ಯೇಸು ಪ್ರತಿನಿಧಿಸುತ್ತಿದ್ದಾನೆ. ಇದರ ಅರ್ಥವೇನೆಂದರೆ, ನಾವು ದೇವರ ವಾಕ್ಯಕ್ಕೆ ಅನುಗುಣವಾಗಿ ಮಾತನಾಡುವಾಗ ಮತ್ತು ದೇವರು ಹೇಳಿದ್ದನ್ನು ಒಪ್ಪಿಕೊಳ್ಳುವಾಗ, ಯೇಸು ನಮ್ಮ ಪರವಾಗಿ ತಂದೆಯ ಮುಂದೆ ಅದನ್ನು ಅಂಗೀಕರಿಸುತ್ತಾನೆ ಮತ್ತು ಪ್ರತಿನಿಧಿಸುತ್ತಾನೆ.

ನೆನಪಿಡಿ, ಯೇಸು ನಿಮ್ಮ ಅರಿಕೆಯ ಮಹಾಯಾಜಕ. ಆತನ ವಾಕ್ಯದೊಂದಿಗೆ ಒಪ್ಪಂದದಲ್ಲಿ ಮಾತನಾಡಿ. ನಿಮ್ಮ ನಂಬಿಕೆಯನ್ನು ಮಾತನಾಡಿ.

# 63

# ನಿಮ್ಮ ಪ್ರತಿಜ್ಞೆಯನ್ನು ಗಟ್ಟಿಯಾಗಿ ಹಿಡಿದುಕೊಳ್ಳಿ

**ಇಬ್ರಿಯರಿಗೆ 4:14**

**ಆಕಾಶಮಂಡಲಗಳನ್ನು ದಾಟಿಹೋದ ದೇವಕುಮಾರನಾದ ಯೇಸುವೆಂಬ ಶ್ರೇಷ್ಠ ಮಹಾಯಾಜಕನು ನಮಗಿರುವದರಿಂದ ನಾವು ಮಾಡಿರುವ ಪ್ರತಿಜ್ಞೆಯನ್ನು ಬಿಡದೆ ಹಿಡಿಯೋಣ.**

**ಇಬ್ರಿಯರಿಗೆ 10:23**

**ನಮ್ಮ ನಿರೀಕ್ಷೆಯನ್ನು ಕುರಿತು ನಾವು ಮಾಡಿದ ಪ್ರತಿಜ್ಞೆಯನ್ನು ನಿಶ್ಚಂಚಲವಾಗಿ ಪರಿಗ್ರಹಿಸೋಣ; ವಾಗ್ದಾನ ಮಾಡಿದಾತನು ನಂಬಿಗಸ್ತನು.**

ನಮಗೆ ಯೇಸು ನಮ್ಮ ಶ್ರೇಷ್ಠ ಮಹಾಯಾಜಕನಾಗಿರುವ ಕಾರಣ, ನಾವು ಆತನ ವಾಕ್ಯದೊಂದಿಗೆ ಒಪ್ಪಂದದಲ್ಲಿ ಘೋಷಿಸುತ್ತಿರುವ ನಮ್ಮ ಪ್ರತಿಜ್ಞೆಯನ್ನು (ಶಕ್ತಿಯ ಬಳಕೆಯಿಂದ ಉಳಿಸಿಕೊಳ್ಳುವದು, ಜಾರಿ ಹೋಗದಂತೆ ಗಟ್ಟಿಯಾಗಿ ಅಂಟಿಕೊಳ್ಳಬೇಕು) ನಾವು ಹಿಡಿದಿಟ್ಟುಕೊಳ್ಳಬೇಕು. ಇದಲ್ಲದೆ, ವಾಗ್ದಾನ ಮಾಡಿದಾತನು ನಂಬಿಗಸ್ತನು ಎಂದು ನಮಗೆ ತಿಳಿದಿದೆ. ಆತನು ತನ್ನ ವಾಗ್ದಾನಗಳನ್ನು ಉಳಿಸಿಕೊಳ್ಳಲು ವಿಫಲನಾಗುವುದಿಲ್ಲ. ಆದ್ದರಿಂದ, ನಾವು ನಮ್ಮ ನಂಬಿಕೆಯ ನಿವೇದನೆಯನ್ನು ಅಲುಗಾಡದೆ ಗಟ್ಟಿಯಾಗಿ ಹಿಡಿದುಕೊಳ್ಳುತ್ತೇವೆ.

ದೇವರು ಮತ್ತು ಆತನ ವಾಕ್ಯದ ಬಗ್ಗೆ ನಾವು ಏನನ್ನು ನಂಬುತ್ತೇವೆ ಎಂಬುದಕ್ಕೆ ಸವಾಲು ಹಾಕುವ ವಿಷಯಗಳಿರುವಾಗ, ನಾವು ನಮ್ಮ ಪ್ರತಿಜ್ಞೆಯನ್ನು ಅಲುಗಾಡದೆ ಗಟ್ಟಿಯಾಗಿ ಹಿಡಿದಿಟ್ಟುಕೊಳ್ಳಬೇಕು. ನಿಮ್ಮ ನಂಬಿಕೆಯನ್ನು ಮಾತನಾಡುತ್ತಾ ಇರಿ, ದೇವರು ಮತ್ತು ಆತನ ವಾಕ್ಯದೊಂದಿಗೆ ಒಪ್ಪಂದದಲ್ಲಿ ಉಳಿಯಿರಿ.

ದೇವರ ವಾಕ್ಯದ ನೆರವೇರಿಕೆಯನ್ನು ನೋಡಲು ತಡವಾಗಿ ತೋರುತ್ತಿರುವಾಗ, ನಾವು ನಮ್ಮ ಪ್ರತಿಜ್ಞೆಯನ್ನು ಅಲುಗಾಡದೆ ಗಟ್ಟಿಯಾಗಿ ಹಿಡಿದುಕೊಳ್ಳಬೇಕು. ನಿಮ್ಮ ನಂಬಿಕೆಯನ್ನು ಮಾತನಾಡುತ್ತಾ ಇರಿ, ದೇವರು ಮತ್ತು ಆತನ ವಾಕ್ಯದೊಂದಿಗೆ ಒಪ್ಪಂದದಲ್ಲಿ ಉಳಿಯಿರಿ.

ವಿಷಯಗಳು ಹದಗೆಡುತ್ತಿರುವಂತೆ ತೋರಿದಾಗ, ನಾವು ಬಲವಾಗಿ ನಿಲ್ಲಬೇಕು ಮತ್ತು ನಮ್ಮ ನಂಬಿಕೆಯ ನಿವೇದನೆಯನ್ನು ಅಲುಗಾಡದೆ ಗಟ್ಟಿಯಾಗಿ ಹಿಡಿದಿಟ್ಟುಕೊಳ್ಳಬೇಕು. ನಮ್ಮ ಪ್ರತಿಜ್ಞೆಯನ್ನು ಪ್ರತಿನಿಧಿಸುವ ಮತ್ತು ಆತನ ವಾಗ್ದಾನಗಳಿಗೆ ನಂಬಿಗಸ್ತರಾಗಿರುವ ಒಬ್ಬ ಶ್ರೇಷ್ಠ ಮಾಹಾಯಾಜಕನನ್ನು ನಾವು ಪರಲೋಕದಲ್ಲಿ ಹೊಂದಿದ್ದೇವೆ. ನಿಮ್ಮ ನಂಬಿಕೆಯನ್ನು ಮಾತನಾಡುತ್ತಾ ಇರಿ ಮತ್ತು ದೇವರು ಮತ್ತು ಆತನ ವಾಕ್ಯದೊಂದಿಗೆ ಒಪ್ಪಂದದಲ್ಲಿ ಉಳಿಯಿರಿ.

# 64

# ಆತನ ಮಾತುಗಳು ಲೋಕವನ್ನು ರೂಪಿಸಿದವು

**ಇಬ್ರಿಯರಿಗೆ 11:3**

**ಲೋಕಗಳು ದೇವರ ಮಾತಿನಿಂದ ನಿರ್ಮಿತವಾದವೆಂದು ನಂಬಿಕೆಯಿಂದಲೇ ನಾವು ತಿಳಿದುಕೊಂಡು ಕಾಣಿಸುವ ಈ ಜಗತ್ತು ದೃಶ್ಯ ವಸ್ತುಗಳಿಂದ ಉಂಟಾಗಲಿಲ್ಲವೆಂದು ಗ್ರಹಿಸುತ್ತೇವೆ.**

ನಂಬಿಕೆಯ ಮೂಲಕ, ಲೋಕಗಳನ್ನು ದೇವರ ವಾಕ್ಯದಿಂದ ರಚಿಸಲಾಗಿದೆ (ಸೃಷ್ಟಿಸಲಾಗಿದೆ, ರೂಪುಗೊಂಡಿದೆ, ನಿರ್ಮಿಸಲಾಗಿದೆ, ಆಕಾರ ಮಾಡಲಾಗಿದೆ) ಎಂದು ನಮಗೆ ತಿಳಿದಿದೆ. ಗೋಚರವಾಗುವ, ನೈಸರ್ಗಿಕ ಪ್ರಪಂಚವು ಅದೃಶ್ಯ, ಆತ್ಮಿಕ ಕ್ಷೇತ್ರದಿಂದ ಹೊರಬಂದಿತು. ದೇವರು ತನ್ನ ವಾಕ್ಯದ ಮೂಲಕ ಎಲ್ಲವನ್ನೂ ಸೃಷ್ಟಿಸಿದನು ಮತ್ತು ಆತನು ಅಸ್ತಿತ್ವದಲ್ಲಿಲ್ಲದ್ದನ್ನು ತಂದನು. ನೈಸರ್ಗಿಕ, ಗೋಚರವಾಗುವ ಜಗತ್ತಿನಲ್ಲಿ ಎಲ್ಲವೂ ದೇವರಿಗೆ ಮತ್ತು ದೇವರ ವಾಕ್ಯಕ್ಕೆ ಒಳಪಟ್ಟಿರುತ್ತದೆ.

ಆದ್ದರಿಂದ, ನಾವು ಈ ರೀತಿಯಲ್ಲಿ ವಿಷಯಗಳನ್ನು ನೋಡೋಣ. ನಮ್ಮಲ್ಲಿ ಪ್ರತಿಯೊಬ್ಬರೂ ನಾವು ವಾಸಿಸುವ ನಮ್ಮ ಪ್ರಪಂಚವನ್ನು ಹೊಂದಿದ್ದೇವೆ. “ನಮ್ಮ ಪ್ರಪಂಚಗಳ” ಮೂಲಕ ನಾವು ನಮ್ಮ ವೈಯಕ್ತಿಕ ಜವಾಬ್ದಾರಿ ಮತ್ತು ಪ್ರಭಾವದ ಕ್ಷೇತ್ರಗಳನ್ನು ಉಲ್ಲೇಖಿಸುತ್ತೇವೆ-ನಮ್ಮ ಮನೆಗಳು, ಕುಟುಂಬಗಳು, ವೃತ್ತಿಗಳು, ವ್ಯವಹಾರಗಳು, ಸೇವೆಯ ಕ್ಷೇತ್ರಗಳು ಇತ್ಯಾದಿ. ನಮ್ಮ ಜಗತ್ತಿನಲ್ಲಿ ಅಸ್ತಿತ್ವದಲ್ಲಿಲ್ಲದ ವಿಷಯಗಳಿವೆ. ದೇವರು ತನ್ನ ವಾಕ್ಯದ ಶಕ್ತಿಯಿಂದ ಅಸ್ತಿತ್ವದಲ್ಲಿಲ್ಲದ್ದನ್ನು ನಮ್ಮ ಜಗತ್ತಿನಲ್ಲಿ ಅಸ್ತಿತ್ವಕ್ಕೆ ತರಬಹುದು. ಆತನ ಮಾತು ನಮ್ಮ ಪ್ರಪಂಚಗಳನ್ನು ಸೃಷ್ಟಿಸಬಹುದು, ರೂಪಿಸಬಹುದು, ನಿರ್ಮಿಸಬಹುದು ಮತ್ತು ರಚಿಸಬಹುದು. ನೀವು ಇಂದು ನಿಮ್ಮ ಜಗತ್ತನ್ನು ನೋಡುತ್ತಿರುವಾಗ, ಬಹುಶಃ ಅದು “ಆಕಾರವಿಲ್ಲದೆ ಮತ್ತು ಶೂನ್ಯವಾಗಿ,” ಕತ್ತಲೆ ಮತ್ತು ಖಾಲಿಯಾದಂತೆ ಕಾಣಬಹುದು. ಬಹುಶಃ ನೀವು ಬಯಸುವ ಮತ್ತು ದೇವರ ವಾಕ್ಯದಲ್ಲಿ ವಾಗ್ದಾನ ಮಾಡಿರುವುದನ್ನು ನೋಡುವ ಅನೇಕ ವಿಷಯಗಳು ನಿಮ್ಮ ಜಗತ್ತಿನಲ್ಲಿ ಅಸ್ತಿತ್ವದಲ್ಲಿಲ್ಲ. ದೇವರ ವಾಕ್ಯಕ್ಕೆ ನಿಮ್ಮ

ಪ್ರಪಂಚದಲ್ಲಿ ಸೃಷ್ಟಿಸುವ ಶಕ್ತಿಯಿದೆ ಎಂದು ನೀವು ನಂಬುತ್ತೀರಾ? ದೇವರ ವಾಕ್ಯವು ನಿಮ್ಮ ಜಗತ್ತಿನಲ್ಲಿ ಅಸ್ತಿತ್ವದಲ್ಲಿಲ್ಲದ್ದನ್ನು ತರಬಲ್ಲದು ಎಂದು ನೀವು ನಂಬುತ್ತೀರಾ? ದೇವರ ವಾಕ್ಯವನ್ನು ಹಿಡಿದುಕೊಳ್ಳಿ. ಆತನ ವಾಕ್ಯವು ಸತ್ಯವಾಗಿದೆ. ಆತನ ವಾಕ್ಯವು ಜೀವಂತವಾಗಿದೆ ಮತ್ತು ಶಕ್ತಿಯಿಂದ ತುಂಬಿದೆ. ಆತನ ಮಾತನ್ನು ನಂಬಿರಿ. ನಿಮ್ಮ ಪ್ರಪಂಚದ ಮೇಲೆ ಆತನ ವಾಕ್ಯವನ್ನು ಮಾತನಾಡಿ. ಆತನ ವಾಕ್ಯಗಳು, ನಿಮ್ಮ ಪ್ರಪಂಚವನ್ನು ಸೃಷ್ಟಿಸಲು, ರಚಿಸಲು, ನಿರ್ಮಿಸಲು ಮತ್ತು ರೂಪಿಸಲು ಅವಕಾಶ ಮಾಡಿಕೊಡಿ. ನಿಮ್ಮ ನಂಬಿಕೆಯನ್ನು ಮಾತನಾಡಿ.

# 65

# ದೇವರು ಹೇಳಿದ್ದಾನೆ, ಆದ್ದರಿಂದ ನಾವು ಧೈರ್ಯವಾಗಿ ಹೇಳುತ್ತೇವೆ

**ಇಬ್ರಿಯರಿಗೆ 13:5,6**

**5 ದ್ರವ್ಯಾಶೆಯಿಲ್ಲದವರಾಗಿರಿ; ನಿಮಗಿರುವವುಗಳಲ್ಲಿ ತೃಪ್ತರಾಗಿರಿ; ನಾನು ನಿನ್ನನ್ನು ಎಂದಿಗೂ ಕೈಬಿಡುವದಿಲ್ಲ, ಎಂದಿಗೂ ತೊರೆಯುವದಿಲ್ಲವೆಂದು ದೇವರು ತಾನೇ ಹೇಳಿದ್ದಾನೆ.**
**6 ಆದದರಿಂದ ಕರ್ತನು ನನ್ನ ಸಹಾಯಕನು, ಭಯಪಡೆನು, ಮನುಷ್ಯನು ನನಗೆ ಏನು ಮಾಡಾನು? ಎಂದು ನಾವು ದೈರ್ಯವಾಗಿ ಹೇಳಬಲ್ಲೆವು. ನಿಮಗೆ ದೇವರ ವಾಕ್ಯಾವನ್ನು ತಿಳಿಸಿದ ನಿಮ್ಮ ಸಭಾನಾಯಕರನ್ನು ಜ್ಞಾಪಕಮಾಡಿಕೊಳ್ಳಿರಿ.**

ಇಬ್ರಿಯರಿಗೆ ಲೇಖಕನು ನಾವು ಹೇಗೆ ಮಾತನಾಡಬೇಕು ಎಂಬುದರ ಕುರಿತು ಸರಳವಾದ ತಾರ್ಕಿಕತೆಯನ್ನು ಹೊಂದಿದ್ದಾನೆ–ಏಕೆಂದರೆ ದೇವರು ಹೇಳಿದ್ದಾನೆ, ನಾವು ಧೈರ್ಯದಿಂದ ಹೇಳುತ್ತೇವೆ. ನಾವು ಧೈರ್ಯದಿಂದ ದೃಢೀಕರಿಸುತ್ತೇವೆ ಮತ್ತು ದೇವರೇ ಹೇಳಿದ್ದನ್ನು ಒಪ್ಪಿ ಮಾತನಾಡುತ್ತೇವೆ.

ದೇವರು ಹೇಳಿದ್ದಾನೆ, *"ನಾನು ನಿನ್ನನ್ನು ಎಂದಿಗೂ ಕೈಬಿಡುವದಿಲ್ಲ, ಎಂದಿಗೂ ತೊರೆಯುವುದಿಲ್ಲ."* ಆದ್ದರಿಂದ, ನಾವು ಧೈರ್ಯದಿಂದ ಹೇಳುತ್ತೇವೆ, "ಕರ್ತನು ನನ್ನ ಸಹಾಯಕ, ಭಯಪಡೆನು."

ದೇವರು ಹೇಳಿದ್ದಾನೆ, *"ಆತನ ಬಾಸುಂಡೆಗಳಿಂದ ನಾವು ಗುಣವಾಗಿದ್ದೇವೆ."* ಆದ್ದರಿಂದ, ನಾವು ಧೈರ್ಯದಿಂದ ಹೇಳುತ್ತೇವೆ, "ಆತನು ನನ್ನ ರೋಗಗಳನ್ನು ತೆಗೆದುಕೊಂಡನು ಮತ್ತು ನನ್ನ ನೋವುಗಳನ್ನು ಹೊತ್ತುಕೊಂಡನು ಮತ್ತು ಆತನ ಬಾಸುಂಡೆಗಳಿಂದ ನಾನು ಗುಣವಾಗಿದ್ದೇನೆ."

"ನೀನು ನೀರಿನ ಕಾಲುವೆಗಳ ಬಳಿಯಲ್ಲಿ ಬೆಳೆದಿರುವ ಮರದ ಹಾಗಿರುವಿ" ಎಂದು ದೇವರು ಹೇಳಿದ್ದಾನೆ. ಆದ್ದರಿಂದ, ನಾವು ಧೈರ್ಯದಿಂದ ಹೇಳುತ್ತೇವೆ, "ನಾನು ತಕ್ಕ ಕಾಲದಲ್ಲಿ ಫಲಕೊಡುತ್ತೇನೆ, ನನ್ನ ಎಲೆ ಬಾಡುವದೇ ಇಲ್ಲ ಅದರಂತೆ ನನ್ನ ಕಾರ್ಯವೆಲ್ಲವು ಸಫಲವಾಗುವವು."

ನಾವು ಇದಕ್ಕೆ ಸೇರಿಸಬಹುದು.

ದೇವರು ಹೇಳಿದ್ದನ್ನು ಯಾವಾಗಲೂ, ಪ್ರತಿಯೊಂದು ಸಂದರ್ಭದಲ್ಲೂ ಧೈರ್ಯದಿಂದ ಹೇಳುವುದನ್ನು ಅಭ್ಯಾಸ ಮಾಡಿಕೊಳ್ಳಿ. ನಿಮ್ಮ ನಂಬಿಕೆಯನ್ನು ಧೈರ್ಯದಿಂದ ಮಾತನಾಡಿ ಏಕೆಂದರೆ ದೇವರು ಏನು ಹೇಳಿದ್ದಾನೆಂದು ನಿಮಗೆ ತಿಳಿದಿದೆ ಮತ್ತು ಆದ್ದರಿಂದ ನೀವು ಆತನೊಂದಿಗೆ ಒಪ್ಪಂದದಲ್ಲಿ ಮಾತನಾಡಬಹುದು. ಆತನು ನಿಮ್ಮನ್ನು ನಿರಾಸೆಗೊಳಿಸುವುದಿಲ್ಲ.

ಇಬ್ಬರು ಒಪ್ಪಂದದಲ್ಲಿದ್ದಾಗ ಮಾತ್ರ ಒಟ್ಟಿಗೆ ನಡೆಯಬಹುದು (ಆಮೋಸ್ 3:3). ನಾವು ದೇವರೊಂದಿಗೆ ಒಪ್ಪಂದದಲ್ಲಿದ್ದಾಗ ಮಾತ್ರ ನಾವು ಆತನೊಂದಿಗೆ ನಡೆಯಬಹುದು. ನಾವು ದೇವರ ವಾಕ್ಯದೊಂದಿಗೆ ಒಪ್ಪಂದ ಮಾಡಿಕೊಳ್ಳುವ ಮೂಲಕ ಆತನೊಂದಿಗೆ ಸಮ್ಮತಿಸುತ್ತೇವೆ. ದೇವರು ಮಾತನಾಡಿದ್ದಾನೆ, ಮತ್ತು ಆದ್ದರಿಂದ, ನಾವು ಉದ್ದೇಶಪೂರ್ವಕವಾಗಿ ಮತ್ತು ಧೈರ್ಯದಿಂದ ಆತನೊಂದಿಗೆ ಒಪ್ಪಂದದಲ್ಲಿ ಮಾತನಾಡುತ್ತೇವೆ.

# 66

# ನಿಮ್ಮ ನಾಲಿಗೆಯನ್ನು ನಿಯಂತ್ರಿಸಿ, ನಿಮ್ಮ ಇಡೀ ವ್ಯಕ್ತಿಯನ್ನು ನಿಯಂತ್ರಿಸಿ

**ಯಾಕೋಬನು 1:26**

**ಸದ್ಭಕ್ತನೆಂದೆಣಿಸಿಕೊಳ್ಳುವ ಯಾವನಾದರೂ ತನ್ನ ನಾಲಿಗೆಗೆ ಕಡಿವಾಣವನ್ನು ಹಾಕದೆ ತನ್ನ ಹೃದಯವನ್ನು ಮೋಸಗೊಳಿಸುವವನಾದರೆ ಅವನ ಭಕ್ತಿ ನಿಷ್ಪ್ರಯೋಜನವಾಗಿದೆ.**

**ಯಾಕೋಬನು 3:1–6**

**1 ನನ್ನ ಸಹೋದರರರೇ, ಬೋಧಕರಾದ ನಮಗೆ ಕಠಿಣವಾದ ತೀರ್ಪು ಆಗುವದೆಂದು ತಿಳಿದುಕೊಂಡು ಬಹುಮಂದಿ ಬೋಧಕರಾಗಬೇಡಿರಿ.**

**2 ಅನೇಕ ವಿಷಯಗಳಲ್ಲಿ ನಾವೆಲ್ಲರೂ ತಪ್ಪುವದುಂಟು. ಒಬ್ಬನು ಮಾತಿನಲ್ಲಿ ತಪ್ಪದಿದ್ದರೆ ಅವನು ಶಿಕ್ಷಿತನೂ ತನ್ನ ದೇಹವನ್ನೆಲ್ಲಾ ಸ್ವಾಧೀನಪಡಿಸಿಕೊಳ್ಳುವದಕ್ಕೆ ಸಮರ್ಥನೂ ಆಗಿದ್ದಾನೆ.**

**3 ನಾವು ಕುದುರೆಗಳನ್ನು ಸ್ವಾಧೀನ ಮಾಡಿಕೊಳ್ಳಬೇಕೆಂದಿರುವಾಗ ಅವುಗಳ ಬಾಯಿಗೆ ಕಡಿವಾಣಹಾಕುತ್ತೇವಲ್ಲಾ; ಆಗ ಅವುಗಳ ದೇಹವನ್ನೆಲ್ಲಾ ತಿರುಗಿಸುವದಕ್ಕೆ ಆಗುತ್ತದೆ.**

**4 ಹಡಗುಗಳನ್ನು ನೋಡಿರಿ. ಅವು ಬಹು ದೊಡ್ಡವು, ಬಲವಾದ ಗಾಳಿಯಿಂದ ಬಡಿಸಿಕೊಂಡು ಹೋಗುತ್ತವೆ. ಆದರೂ ನಡಿಸುವವನು ಬಹು ಸಣ್ಣ ಚುಕ್ಕಾಣಿಯಿಂದ ಅವುಗಳನ್ನು ತನ್ನ ಮನಸ್ಸಿಗೆ ಬಂದ ಕಡೆಗೆ ತಿರುಗಿಸುತ್ತಾನೆ.**

**5 ಹಾಗೆಯೇ ನಾಲಿಗೆಯು ಕೂಡ ಚಿಕ್ಕ ಅಂಗವಾಗಿದ್ದರೂ ದೊಡ್ಡ ಕಾರ್ಯಗಳನ್ನು ಕೊಚ್ಚಿಕೊಳ್ಳುತ್ತದೆ.**

**6 ಎಷ್ಟು ಕೊಂಚ ಕಿಚ್ಚು ಎಷ್ಟು ದೊಡ್ಡ ಕಾಡನ್ನು ಉರಿಸುತ್ತದೆ ನೋಡಿರಿ. ನಾಲಿಗೆಯೂ ಕಿಚ್ಚೇ. ನಾಲಿಗೆಯು ಅಧರ್ಮಲೋಕರೂಪವಾಗಿ ನಮ್ಮ ಅಂಗಗಳ ನಡುವೆ ಇಟ್ಟದೆ. ಅದು ದೇಹವನ್ನೆಲ್ಲಾ ಕೆಡಿಸುತ್ತದೆ. ತಾನೇ ನರಕದಿಂದ ಬೆಂಕಿಹತ್ತಿಸಿಕೊಳ್ಳುತ್ತಾ ಪ್ರಪಂಚವೆಂಬ ಚಕ್ರಕ್ಕೆ ಬೆಂಕಿಹಚ್ಚುತ್ತದೆ.**

ಒಬ್ಬ "ಪರಿಪೂರ್ಣ ಪುರುಷ," ಅಂದರೆ, ಸಂಪೂರ್ಣವಾಗಿ ಬೆಳೆದ ಮತ್ತು ಪ್ರೌಢರಾಗಿರುವ, ಆತ್ಮಿಕವಾಗಿ ಹೇಳುವುದಾದರೆ, ತನ್ನ ನಾಲಿಗೆಯನ್ನು ನಿಯಂತ್ರಿಸಬಲ್ಲವನು. ನಾವು ನಮ್ಮ ಮಾತುಗಳ ಮೇಲೆ ಲಕ್ಷ್ಯ ಇಡುವಾಗ ಮತ್ತು ನಮ್ಮ ನಾಲಿಗೆಯನ್ನು ಪಳಗಿಸಲು ಶಕ್ತರಾದಾಗ, ನಾವು ನಮ್ಮ ಇಡೀ ದೇಹದ ಮೇಲೆ ನಿಯಂತ್ರಣ ಅಥವಾ ಪಾಂಡಿತ್ಯವನ್ನು ಹೊಂದಲು

ಸಾಧ್ಯವಾಗುತ್ತದೆ ಅಥವಾ *“ಎಲ್ಲಾ ರೀತಿಯಲ್ಲಿಯೂ ನಮ್ಮನ್ನು ನಿಯಂತ್ರಿಸಲು”* ಸಾಧ್ಯವಾಗುತ್ತದೆ.

ಇದು ನಮ್ಮ ನಾಲಿಗೆಯನ್ನು ನಿಯಂತ್ರಿಸಲು ಅಥವಾ ನಾವು ಮಾತನಾಡುವುದನ್ನು ನಿಯಂತ್ರಿಸಲು ಸಾಧ್ಯವಾಗುವ ಪ್ರಾಮುಖ್ಯತೆಯನ್ನು ತೋರಿಸುತ್ತದೆ. ನಮ್ಮ ಮಾತುಗಳನ್ನು ನಿಯಂತ್ರಿಸಲು ನಾವು ಹೊಂದಬಹುದಾದ ಅತ್ಯುತ್ತಮ ಶಿಸ್ತುಗಳಲ್ಲಿ ಒಂದು, ನಾವು ಯಾವಾಗಲೂ ದೇವರು ಅನುಮೋದಿಸುವದನ್ನು ಮಾತನಾಡುತ್ತೇವೆ ಎಂದು ಖಚಿತಪಡಿಸಿಕೊಳ್ಳುವುದು. ದೇವರ ದೃಷ್ಟಿಯಲ್ಲಿ ಮೆಚ್ಚುವದನ್ನು ಮಾತನಾಡಿ. ದೇವರನ್ನು ಮಹಿಮೆಪಡಿಸುವದನ್ನು ಮಾತನಾಡಿ. ಆತನ ವಾಕ್ಯಕ್ಕೆ ಒಪ್ಪುವದನ್ನು ಮಾತನಾಡಿ. ನಂಬಿಕೆಯನ್ನು ಮಾತನಾಡಿ. ನಾವು ಇದನ್ನು ಮಾಡಲು ಸಾಧ್ಯವಾದರೆ, ನಾವು ಎಲ್ಲ ರೀತಿಯಲ್ಲೂ ನಮ್ಮನ್ನು ನಾವು ಆಳಲು ಸಾಧ್ಯವಾಗುತ್ತದೆ.

ದೇವರ ವಾಕ್ಯವು ಏನು ಹೇಳುತ್ತದೆಯೋ ಅದನ್ನು ಉದ್ದೇಶಪೂರ್ವಕವಾಗಿ ಹೇಳುವುದನ್ನು ಅಭ್ಯಾಸ ಮಾಡುವುದು ನಮ್ಮ ನಾಲಿಗೆಗೆ ತರಬೇತಿ ನೀಡುವ ಅತ್ಯುತ್ತಮ ಮಾರ್ಗಗಳಲ್ಲಿ ಒಂದಾಗಿದೆ. ವೇದವಾಕ್ಯಗಳಲ್ಲಿ ನಾವು ನೋಡುವ ಅನೇಕ ಆತ್ಮಿಕ ಅಭ್ಯಾಸಗಳಿವೆ. ಉದಾಹರಣೆಗೆ, ನಾವು ದೇವರಿಗೆ ಸ್ತುತಿ ಮತ್ತು ಆರಾಧನೆಯ ಯಜ್ಞಗಳನ್ನು ಅರ್ಪಿಸುತ್ತೇವೆ ಎಂದು ನಮಗೆ ತಿಳಿದಿದೆ. ನಾವು ಹೇಗೆ ಪ್ರಾರ್ಥಿಸಬೇಕು ಮತ್ತು ವಿವಿಧ ರೀತಿಯ ಪ್ರಾರ್ಥನೆಯಲ್ಲಿ ತೊಡಗಿಸಿಕೊಳ್ಳಬೇಕೆಂದು ನಮಗೆ ತಿಳಿದಿದೆ. ದೇವರ ವಾಕ್ಯವನ್ನು ಹೇಗೆ ಓದಬೇಕು, ಹೇಗೆ ಅಧ್ಯಯನ ಮಾಡಬೇಕು ಮತ್ತು ದೇವರ ವಾಕ್ಯವನ್ನು ಹೇಗೆ ಧ್ಯಾನಿಸಬೇಕು ಎಂದು ನಮಗೆ ತಿಳಿದಿದೆ. ಅದೇ ರೀತಿ, ನಮ್ಮ ಆತ್ಮಿಕ ಶಿಸ್ತಿನ ಭಾಗವಾಗಿ, ನಾವು ವಾಕ್ಯವನ್ನು ಮಾತನಾಡಲು ಸಮಯವನ್ನು ತೆಗೆದುಕೊಳ್ಳಬಹುದು. ಈ ಪುಸ್ತಕದ ಆರಂಭದಲ್ಲಿ, ನಾವು A ನಿಂದ Z ವರೆಗಿನ ಜೀವನದ ಕ್ಷೇತ್ರಗಳನ್ನು ಒಳಗೊಂಡಿರುವ ವೈಯಕ್ತಿಕಗೊಳಿಸಿದ ರೀತಿಯಲ್ಲಿ ಬರೆದ ದೇವರ ವಾಕ್ಯದಿಂದ ಘೋಷಣೆಗಳ ಉದಾಹರಣೆಗಳನ್ನು ನೀಡಿದ್ದೇವೆ. ನಿಮ್ಮ ಸ್ವಂತ ಜೀವನದ ಮೇಲೆ ದೇವರ ವಾಕ್ಯವನ್ನು ಘೋಷಿಸಲು ನೀವು ಈ ಸ್ವರೂಪವನ್ನು ಅಥವಾ ಬೇರೆ ಯಾವುದನ್ನಾದರೂ ಬಳಸಬಹುದು. ಅರ್ಥಹೀನ ಆಚರಣೆಯಂತೆ ಅಥವಾ ಪ್ರತಿ ದಿನ ಇತರ ಕೆಲವು (ಚೆಕ್‌ಬಾಕ್ಸ್) ಸಣ್ಣಪೆಟ್ಟಿಗೆಯಲ್ಲಿ ಗುರುತು ನಮೂದಿಸುವಂತೆ ಮಾಡಬೇಡಿ. ಸತ್ಯದಿಂದ

ಪ್ರೇರಿತರಾಗಿ ಮಾಡಿ ಏಕೆಂದರೆ ನಿಮ್ಮ ನಂಬಿಕೆಯನ್ನು ಮಾತನಾಡುವ ಪ್ರಾಮುಖ್ಯತೆಯ ಪ್ರಕಟನೆ ಅಥವಾ ತಿಳುವಳಿಕೆಯನ್ನು ನೀವು ಹೊಂದಿದ್ದೀರಿ. ನೀವು ನಿಮ್ಮ ನಾಲಿಗೆಯನ್ನು ಈ ರೀತಿ ತರಬೇತಿ ಮಾಡುವಾಗ, ನಿಮ್ಮ ಮಾತುಗಳ ಬಗ್ಗೆ ಜಾಗರೂಕರಾಗಿರಲು ಮತ್ತು ನೀವು ಆತನ ವಾಕ್ಯದೊಂದಿಗೆ ನೀವು ಮಾತನಾಡುವುದನ್ನು ಖಚಿತಪಡಿಸಿಕೊಳ್ಳಲು ಇದು ಸಾಮಾನ್ಯವಾಗುತ್ತದೆ. ನಿಮ್ಮ ನಂಬಿಕೆಯನ್ನು ನೀವು ಹೇಳುವುದು ಸಾಮಾನ್ಯವಾಗಿರುತ್ತದೆ.

# 67

# ನಿಮ್ಮ ಮಾತುಗಳು ನಿಮ್ಮ ಜೀವನವನ್ನು ಮಾರ್ಗದರ್ಶಿಸುತ್ತವೆ, ಆಳುತ್ತವೆ ಮತ್ತು ಆಶೀರ್ವದಿಸುತ್ತವೆ

**ಯಾಕೋಬನು 3:3–6**

**3 ನಾವು ಕುದುರೆಗಳನ್ನು ಸ್ವಾಧೀನ ಮಾಡಿಕೊಳ್ಳಬೇಕೆಂದಿರುವಾಗ ಅವುಗಳ ಬಾಯಿಗೆ ಕಡಿವಾಣಹಾಕುತ್ತೇವಲ್ಲಾ; ಆಗ ಅವುಗಳ ದೇಹವನ್ನೆಲ್ಲಾ ತಿರುಗಿಸುವದಕ್ಕೆ ಆಗುತ್ತದೆ.**

**4 ಹಡಗುಗಳನ್ನು ನೋಡಿರಿ. ಅವು ಬಹು ದೊಡ್ಡವು, ಬಲವಾದ ಗಾಳಿಯಿಂದ ಬಡಿಸಿಕೊಂಡು ಹೋಗುತ್ತವೆ. ಆದರೂ ನಡಿಸುವವನು ಬಹು ಸಣ್ಣ ಚುಕ್ಕಾಣಿಯಿಂದ ಅವುಗಳನ್ನು ತನ್ನ ಮನಸ್ಸಿಗೆ ಬಂದ ಕಡೆಗೆ ತಿರುಗಿಸುತ್ತಾನೆ.**

**5 ಹಾಗೆಯೇ ನಾಲಿಗೆಯು ಕೂಡ ಚಿಕ್ಕ ಅಂಗವಾಗಿದ್ದರೂ ದೊಡ್ಡ ಕಾರ್ಯಗಳನ್ನು ಕೊಚ್ಚಿಕೊಳ್ಳುತ್ತದೆ.**

**6 ಎಷ್ಟು ಕೊಂಚ ಕಿಚ್ಚು ಎಷ್ಟು ದೊಡ್ಡ ಕಾಡನ್ನು ಉರಿಸುತ್ತದೆ ನೋಡಿರಿ. ನಾಲಿಗೆಯೂ ಕಿಚ್ಚೇ. ನಾಲಿಗೆಯು ಅಧರ್ಮಲೋಕರೂಪವಾಗಿ ನಮ್ಮ ಅಂಗಗಳ ನಡುವೆ ಇಟ್ಟದೆ. ಅದು ದೇಹವನ್ನೆಲ್ಲಾ ಕೆಡಿಸುತ್ತದೆ. ತಾನೇ ನರಕದಿಂದ ಬೆಂಕಿಹತ್ತಿಸಿಕೊಳ್ಳುತ್ತಾ ಪ್ರಪಂಚವೆಂಬ ಚಕ್ರಕ್ಕೆ ಬೆಂಕಿಹಚ್ಚುತ್ತದೆ.**

ಪವಿತ್ರಾತ್ಮನ ಮಾರ್ಗದರ್ಶನದಲ್ಲಿ ಯಾಕೋಬನ ಬರವಣಿಗೆಯು ನಾವು ಮಾತನಾಡುವ ಮಾತುಗಳ ಶಕ್ತಿ ಮತ್ತು ಪ್ರಭಾವವನ್ನು ಬಹಿರಂಗಪಡಿಸಲು ನಮ್ಮ ಪ್ರಪಂಚದ ಚಿತ್ರಗಳನ್ನು ಬಳಸುತ್ತದೆ. ಅವನು ಬಳಸುವ ಸಾದೃಶ್ಯಗಳನ್ನು ಪರಿಗಣಿಸಿ-ಕುದುರೆಗಳ ಬಾಯಿಯಲ್ಲಿ ಕಡಿವಾಣಗಳು, ಹಡಗುಗಳಲ್ಲಿನ ಚುಕ್ಕಾಣಿ, ಉರಿಯುವ ಕಾಡಿನ ಕಿಚ್ಚು ಬಲಶಾಲಿಯಾದ ಕುದುರೆಯನ್ನು ಅದರ ಬಾಯಿಯಲ್ಲಿರುವ ಕಡಿವಾಣದ ಮೂಲಕ ಸವಾರನು ಬಯಸಿದ ದಿಕ್ಕಿನಲ್ಲಿ ನಿಯಂತ್ರಿಸಲಾಗುತ್ತದೆ ಮತ್ತು ಮಾರ್ಗದರ್ಶನ ಮಾಡಲಾಗುತ್ತದೆ. ಅಂತೆಯೇ, ದೊಡ್ಡ ಹಡಗು, ಗಾಳಿ ಮತ್ತು ಅಲೆಗಳ ಮಧ್ಯದಲ್ಲಿಯೂ ಸಹ ಸಣ್ಣ ಚುಕ್ಕಾಣಿ ಬಳಸಿ ನೌಕಾನಾಯಕ ಮಾರ್ಗದರ್ಶನ ನೀಡುತ್ತಾನೆ. ಒಂದು ಸಣ್ಣ ಕಿಚ್ಚು ದೊಡ್ಡ ಅರಣ್ಯವನ್ನು ನಾಶಪಡಿಸುತ್ತದೆ. ನಮ್ಮ ಮಾತುಗಳು ಸಣ್ಣ, ದುರ್ಬಲ ಮತ್ತು ಅತ್ಯಲ್ಪವೆಂದು ತೋರುತ್ತದೆ. ಆದರೂ, ನಾವು

ಮಾತನಾಡುವ ಮಾತುಗಳು ಶಕ್ತಿಯುತವಾಗಿವೆ, ಅವು ನಮ್ಮ ಜೀವನದ ಸಂಪೂರ್ಣ ಹಾದಿಯನ್ನು ಮಾರ್ಗದರ್ಶಿಸಬಲ್ಲವು, ನಿರ್ದೇಶಿಸಬಲ್ಲವು ಮತ್ತು ನಿಯಂತ್ರಿಸಬಲ್ಲವು ಎಂಬುದನ್ನು ನಾವು ತಿಳಿದುಕೊಳ್ಳಬೇಕೆಂದು ಪವಿತ್ರಾತ್ಮನು ಬಯಸುತ್ತಾನೆ.

ವಚನ 6ರಲ್ಲಿ, ಯಾಕೋಬನು ಕೆಟ್ಟ ನಾಲಿಗೆಯ ಬಗ್ಗೆ ಬರೆಯುತ್ತಾನೆ. ದುಷ್ಟ ನಾಲಿಗೆಯು "ಬೆಂಕಿಹತ್ತಿಸಿಕೊಳ್ಳುತ್ತಾ" ಅಥವಾ ನರಕದಿಂದಲೇ ಬರುವ ದುಷ್ಟತನದಿಂದ ಪ್ರೇರಿತವಾಗಿದೆ ಅಥವಾ ಉರಿಯುತ್ತದೆ. ಇಲ್ಲಿ ಪ್ರಸ್ತುತಪಡಿಸಲಾದ ದುಷ್ಟ ನಾಲಿಗೆಯ ಪ್ರಭಾವವನ್ನು ಪರಿಗಣಿಸಿ. ದುಷ್ಟ ನಾಲಿಗೆಯು ವ್ಯಕ್ತಿಯ ಸಂಪೂರ್ಣ ದೇಹವನ್ನು ಅಥವಾ ಸಂಪೂರ್ಣ ಜೀವಿಯನ್ನು (ಆತ್ಮ, ಪ್ರಾಣ ಮತ್ತು ಶರೀರ) ಅಪವಿತ್ರಗೊಳಿಸುತ್ತದೆ. ಇದು "ಬೆಂಕಿ ಹತ್ತಿಸಿಕೊಳ್ಳುತ್ತಾ" ಅಥವಾ ಆ ವ್ಯಕ್ತಿಯ ಜೀವನದ ಸಂಪೂರ್ಣ ಹಾದಿಯನ್ನು ಪ್ರಭಾವಿಸುತ್ತದೆ, ಪರಿಣಾಮ ಬೀರುತ್ತದೆ. ಕೆಟ್ಟ ಮಾತುಗಳು ನಮ್ಮ ಇಡೀ ವ್ಯಕ್ತಿಯನ್ನು ಮತ್ತು ನಮ್ಮ ಜೀವನದ ಸಂಪೂರ್ಣ ಹಾದಿಯನ್ನು ಅಶುದ್ಧಗೊಳಿಸುತ್ತವೆ ಮತ್ತು ನಾಶಮಾಡುತ್ತವೆ. ಈಗ, ನಾವು ಒಳ್ಳೆಯ ನಾಲಿಗೆಯನ್ನು ಹೊಂದಿದ್ದರೆ ಏನು–ದೇವರ ವಾಕ್ಯದ ಬೆಂಕಿಯಿಂದ "ಬೆಂಕಿಹತ್ತಿಸಿಕೊಳ್ಳುತ್ತಾ" ಇರುವ ನಾಲಿಗೆ (ದೇವರ ವಾಕ್ಯವು ಬೆಂಕಿಯಂತಿದೆ. ಯೆರೆಮಿಯನು 23:29). ದೇವರ ವಾಕ್ಯದಿಂದ ಪ್ರೇರಿತವಾದ ಮತ್ತು ಅದಕ್ಕೆ ಅನುಗುಣವಾದ ಮಾತುಗಳನ್ನು ಮಾತನಾಡುವ ಉತ್ತಮ ನಾಲಿಗೆ. ಅಂತಹ ಮಾತುಗಳು ನಮ್ಮ ಇಡೀ ವ್ಯಕ್ತಿಯನ್ನು ಆಶೀರ್ವದಿಸುತ್ತವೆ ಮತ್ತು ನಿರ್ಮಿಸುತ್ತವೆ ಮತ್ತು ನಮ್ಮ ಜೀವನದ ಸಂಪೂರ್ಣ ಹಾದಿಯನ್ನು ಆಶೀರ್ವದಿಸುತ್ತವೆ ಮತ್ತು ನಿರ್ಮಿಸುತ್ತವೆ.

ನಮ್ಮ ಮಾತುಗಳು ನಮ್ಮ ಜೀವನದ ಸಂಪೂರ್ಣ ಹಾದಿಯನ್ನು ಮಾರ್ಗದರ್ಶಿಸುತ್ತವೆ, ಆಳುತ್ತವೆ ಮತ್ತು ನಿರ್ದೇಶಿಸುತ್ತವೆ. ನಮ್ಮ ಮಾತುಗಳು ನಮ್ಮ ಇಡೀ ವ್ಯಕ್ತಿಯನ್ನು ಮತ್ತು ನಮ್ಮ ಜೀವನದ ಸಂಪೂರ್ಣ ಹಾದಿಯನ್ನು ಆಶೀರ್ವದಿಸಬಹುದು ಮತ್ತು ನಿರ್ಮಿಸಬಹುದು. ವಾಕ್ಯವನ್ನು ಮಾತನಾಡಿ. ನಂಬಿಕೆಯ ಮಾತುಗಳನ್ನು ಮಾತನಾಡಿ. ನೀವು ಮಾತನಾಡುವ ಮಾತುಗಳು ನಿಮ್ಮ ಜೀವನವನ್ನು ಆಶೀರ್ವದಿಸಲಿ ಮತ್ತು ನಿರ್ಮಿಸಲಿ.

# 68

# ನಂಬಿಕೆಯನ್ನು ನಿರಂತರವಾಗಿ ಮಾತನಾಡಿ

**ಯಾಕೋಬನು 3:7–12**

**[7] ನರಜಾತಿಯು ಸಕಲಜಾತಿಯ ಮೃಗ ಪಕ್ಷಿ ಕ್ರಿಮಿ ಜಲಚರಗಳನ್ನೂ ಹತೋಟಿಗೆ ತರುವದುಂಟು ಮತ್ತು ತಂದದುಂಟು.**

**[8] ಆದರೆ ನಾಲಿಗೆಯನ್ನು ಯಾವ ಮಾನವನೂ ಹತೋಟಿಗೆ ತರಲಾರನು. ಅದು ಸುಮ್ಮನಿರಲಾರದ ಕೆಡುಕಾಗಿದೆ; ಮರಣಕರವಾದ ವಿಷದಿಂದ ತುಂಬಿ ಇದೆ.**

**[9] ನಾಲಿಗೆಯಿಂದ ತಂದೆಯಾದ ಕರ್ತನನ್ನು ಕೊಂಡಾಡುತ್ತೇವೆ; ಅದರಿಂದಲೇ ದೇವರ ಹೋಲಿಕೆಗೆ ಸರಿಯಾಗಿ ಉಂಟುಮಾಡಲ್ಪಟ್ಟ ಮನುಷ್ಯರನ್ನು ಶಪಿಸುತ್ತೇವೆ.**

**[10] ಅದೇ ಬಾಯಿಂದ ಸ್ತುತಿ ಶಾಪ ಎರಡೂ ಬರುತ್ತವೆ. ನನ್ನ ಸಹೋದರರೇ, ಹೀಗಿರುವದು ಯೋಗ್ಯವಲ್ಲ.**

**[11] ಊಟೆಯ ಒಂದೇ ಬಾಯಿಂದ ಸಿಹಿನೀರು ಕಹಿನೀರು ಎರಡೂ ಹೊರದುವದುಂಟೆ?**

**[12] ನನ್ನ ಸಹೋದರರೇ, ಅಂಜೂರದ ಮರವು ಎಣ್ಣೆ ಮರದ ಕಾಯಿ ಬಿಡುವದೋ? ದ್ರಾಕ್ಷೆ ಬಳ್ಳಿಯಲ್ಲಿ ಅಂಜೂರದ ಹಣ್ಣಾಗುವದೋ? ಹಾಗೆಯೇ ಉಪ್ಪುನೀರಿನ ಬಾವಿಯಿಂದ ಸಿಹಿನೀರು ಬರುವದಿಲ್ಲ.**

ಯಾಕೋಬನು, ಪವಿತ್ರ ಆತ್ಮನ ಮೂಲಕ, ನಾವು ಮಾತನಾಡುವ ಮಾತುಗಳಲ್ಲಿ ಸ್ಥಿರವಾಗಿ ಒಳ್ಳೆಯ, ಸರಿಯಾದ, ಶುದ್ಧ ಮತ್ತು ಶುದ್ಧತೆಯ ಪ್ರಾಮುಖ್ಯತೆಯನ್ನು ತಿಳಿಸುತ್ತಾನೆ. ನಾವು ಯಾವಾಗಲೂ ನಮ್ಮ ಮಾತುಗಳ ಮೇಲೆ ನಿಯಂತ್ರಣವನ್ನು ಹೊಂದಿರಬೇಕು ಆದ್ದರಿಂದ ನಾವು ಯಾವಾಗಲೂ ಜೀವನ ಮತ್ತು ಆಶೀರ್ವಾದವನ್ನು ಮಾತನಾಡುತ್ತೇವೆ. ನಾವು ಎರಡು ನಾಲಿಗೆಯವರಾಗಿರಬಾರದು, ಕೆಲವೊಮ್ಮೆ ಜೀವನ ಮತ್ತು ಆಶೀರ್ವಾದ ಮತ್ತು ಇನ್ನೊಂದು ಸಮಯದಲ್ಲಿ ಸಾವು ಮತ್ತು ಶಾಪವನ್ನು ಮಾತನಾಡಬಾರದು. ಯಾವಾಗಲೂ, ಎಂದೆಂದಿಗೂ, ಪ್ರತಿ ಸನ್ನಿವೇಶದಲ್ಲಿ, ಸ್ಥಿರವಾಗಿ ಜೀವನ ಮತ್ತು ಆಶೀರ್ವಾದವನ್ನು ಮಾತನಾಡಿ.

ಅಂತೆಯೇ, ನಾವು ಕೆಲವೊಮ್ಮೆ ನಂಬಿಕೆಯನ್ನು ಮಾತನಾಡಬಾರದು ಮತ್ತು ನಂತರ ಭಯ, ಅನುಮಾನ ಮತ್ತು ಅಪನಂಬಿಕೆಯನ್ನು ಇತರ ಸಮಯದಲ್ಲಿ ಮಾತನಾಡಬಾರದು. ನಿರಂತರವಾಗಿ, ಯಾವಾಗಲೂ

ನಂಬಿಕೆಯನ್ನು ಮಾತನಾಡಿ. ನಾವು ಸತತವಾಗಿ ನಮ್ಮ ಹೃದಯ ಮತ್ತು ಮನಸ್ಸನ್ನು ದೇವರ ವಾಕ್ಯದಿಂದ ತುಂಬಿದರೆ ನಾವು ಇದನ್ನು ಮಾಡಬಹುದು. ನಾವು ಸತತವಾಗಿ ನಂಬಿಕೆಯ ಮಾತುಗಳಿಂದ ನಮ್ಮನ್ನು ಪೋಷಿಸಿದರೆ, ನಾವು ನಿರಂತರವಾಗಿ ನಂಬಿಕೆಯ ಮಾತುಗಳನ್ನು ಮಾತನಾಡುತ್ತೇವೆ.

ನಿಮ್ಮ ನಾಲಿಗೆಯನ್ನು ಪಳಗಿಸಿ. ಜೀವನ, ಆಶೀರ್ವಾದ ಮತ್ತು ನಂಬಿಕೆಯನ್ನು ಯಾವಾಗಲೂ ಮಾತನಾಡಲು ತರಬೇತಿ ನೀಡಿ. ನಿಮ್ಮ ನಂಬಿಕೆಯನ್ನು ನಿರಂತರವಾಗಿ ಮಾತನಾಡಿ.

# 69
# ಸೈತಾನನನ್ನು ವಿರೋಧಿಸಿ

**ಯಾಕೋಬನು 4:7**
**ಹೀಗಿರಲಾಗಿ ದೇವರಿಗೆ ಒಳಗಾಗಿರಿ. ಸೈತಾನನನ್ನು ಎದುರಿಸಿರಿ, ಅವನು ನಿಮ್ಮನ್ನು ಬಿಟ್ಟು ಓಡಿಹೋಗುವನು.**

ನಾವು ದೇವರಿಗೆ ವಿಧೇಯರಾಗಬೇಕು ಮತ್ತು ನಂತರ ಸೈತಾನನನ್ನು ವಿರೋಧಿಸಬೇಕು. "ಪ್ರತಿರೋಧಿಸುವುದು" ಎಂಬ ಪದವು "ಸೈತಾನನು ನಮಗೆ ಏನನ್ನು ಪ್ರಸ್ತುತಪಡಿಸುತ್ತದೋ ಅದನ್ನು ವಿರೋಧಿಸುವುದು." ನಾವು ಹೊಸ ಒಡಂಬಡಿಕೆಯ ವಾಕ್ಯದಲ್ಲಿ ನೋಡುವಂತೆ, ನಾವು ದೇವರ ವಾಕ್ಯವನ್ನು ಮಾತನಾಡುವ ಮೂಲಕ ಸೈತಾನನನ್ನು ವಿರೋಧಿಸುತ್ತೇವೆ, "ಇದು ಬರೆಯಲ್ಪಟ್ಟಿದೆ ..." ಎಂದು ಹೇಳುವ ಮೂಲಕ ಆತ್ಮನ ಕತ್ತಿಯನ್ನು ಬಳಸಿ– ದೇವರ ವಾಕ್ಯ ಮತ್ತು ನಾವು ಯೇಸು ಕ್ರಿಸ್ತನಲ್ಲಿ ಹೊಂದಿರುವ ಅಧಿಕಾರದಿಂದ ಆಜ್ಞೆಯ ಮಾತುಗಳನ್ನು ಮಾತನಾಡುತ್ತೇವೆ. ದೇವರ ವಾಕ್ಯವು ಮಹತ್ವದ್ದಾಗಿದೆ ಎಂದು ಯೋಚಿಸುವಾಗ, ಸೈತಾನನು ಏನು ಮಾಡಲು ಪ್ರಯತ್ನಿಸುತ್ತಿದೆಯೋ ಅದಕ್ಕೆ ನಮ್ಮ ಪ್ರತಿರೋಧ ಮತ್ತು ಆಕ್ರಮಣಕಾರಿ ವಿರೋಧದ ಭಾಗವಾಗಿ ದೇವರ ವಾಕ್ಯವನ್ನು ಮಾತನಾಡುವುದು ಅಷ್ಟೇ ಮುಖ್ಯ.

ವೈರಿಯು ನಿಮ್ಮ ಮನಸ್ಸಿನಲ್ಲಿ ತಪ್ಪು ಮತ್ತು ಕೆಟ್ಟ ಆಲೋಚನೆಗಳು, ವಿಚಾರಣೆಗಳು, ಕಲ್ಪನೆಗಳು, ವಾದಗಳು ಮತ್ತು ತಾರ್ಕಿಕತೆಯನ್ನು ಚುಚ್ಚಿದಾಗ, ಅದಕ್ಕೆ ಸಂಬಂಧಿಸಿದಂತೆ ದೇವರ ವಾಕ್ಯವು ಏನು ಹೇಳುತ್ತದೆ ಎಂಬುದನ್ನು ತಕ್ಷಣವೇ ನಿಮ್ಮ ಮನಸ್ಸಿನಲ್ಲಿ ಮುಂಚೂಣಿಗೆ ತರುವುದು ಮುಖ್ಯವಾಗಿದೆ. ಮತ್ತು ಸೈತಾನನು ಪ್ರಸ್ತುತಪಡಿಸಿದ ಆ ದುಷ್ಟ ಕಲ್ಪನೆಯ ಬಗ್ಗೆ ದೇವರ ವಾಕ್ಯವು ಏನು ಹೇಳುತ್ತದೆ ಎಂಬುದನ್ನು ಮಾತನಾಡುವುದು ಸಹ ಮುಖ್ಯವಾಗಿದೆ. ನಾವು ಮಾತನಾಡುತ್ತೇವೆ "ಇದು ಬರೆಯಲಾಗಿದೆ ..."

ಇದನ್ನು ಮಾಡುವುದರಲ್ಲಿ ದೃಢವಾಗಿರಿ ಮತ್ತು ಆಕ್ರಮಣಕಾರಿಯಾಗಿರಿ. ನೀವು ನಂಬಿಕೆಯಲ್ಲಿ ದೃಢವಾಗಿದ್ದು **ಸೈತಾನನನ್ನು** ಎದುರಿಸಿ (1 ಪೇತ್ರನು

5:9). ನಿಮ್ಮ ನಂಬಿಕೆಯನ್ನು ಮಾತನಾಡಿ. ಅವನು ಹಿಂತಿರುಗಿ ಬರುವಷ್ಟು ಬಾರಿ ನಿಮ್ಮ ನಂಬಿಕೆಯನ್ನು ಹೇಳುತ್ತಿರಿ. ನಿಮ್ಮ ಜೀವನದಲ್ಲಿ ನೀವು ಅವನಿಗೆ ಯಾವುದೇ ನೆಲೆಯನ್ನು ನೀಡುವುದಿಲ್ಲ ಎಂದು ದೆವ್ವಕ್ಕೆ ತಿಳಿಸಿ.

# 70

# ಆಶೀರ್ವಾದದ ಮಾತುಗಳನ್ನು ಬಿಡುಗಡೆ ಮಾಡಿ

**1 ಪೇತ್ರನು 3:8–12**

**8 ಕಡೆಗೆ ನೀವೆಲ್ಲರೂ ಏಕಮನಸ್ಸುಳವರಾಗಿರಿ; ಪರರ ಸುಖದುಃಖಗಳಲ್ಲಿ ಸೇರುವವರಾಗಿರಿ; ಅಣ್ಣತಮ್ಮಂದಿರಂತೆ ಒಬ್ಬರನ್ನೊಬ್ಬರು ಪ್ರೀತಿಸಿರಿ; ಕರುಣೆಯೂ ದೀನಭಾವವೂ ಉಳ್ಳವರಾಗಿರಿ.**

**9 ಅಪಕಾರಕ್ಕೆ ಅಪಕಾರವನ್ನು ನಿಂದೆಗೆ ನಿಂದೆಯನ್ನು ಮಾಡದೆ ಆಶೀರ್ವದಿಸಿರಿ. ಇದಕ್ಕಾಗಿ ದೇವರು ನಿಮ್ಮನ್ನು ಕರೆದನಲ್ಲಾ. ಹೀಗೆ ಮಾಡುವದಾದರೆ ನೀವು ಆಶೀರ್ವಾದವನ್ನು ಬಾಧ್ಯವಾಗಿ ಹೊಂದುವಿರಿ.**

**10 ಜೀವದಲ್ಲಿ ಸಂತೋಷಪಟ್ಟು ಸುದಿನಗಳನ್ನು ನೋಡುವದಕ್ಕೆ ಇಷ್ಟವುಳ್ಳವನು ಕೆಟ್ಟದನ್ನು ನುಡಿಯದಂತೆ ತನ್ನ ನಾಲಿಗೆಯನ್ನೂ ವಂಚನೆಯ ಮಾತುಗಳನ್ನಾಡದಂತೆ ತುಟಿಗಳನ್ನೂ ಬಿಗಿಹಿಡಿಯಲಿ.**

**11 ಅವನು ಕೆಟ್ಟದ್ದನ್ನು ಬಿಟ್ಟು ಒಳ್ಳೇದನ್ನು ಮಾಡಲಿ; ಸಮಾಧಾನವನ್ನು ಹಾರೈಸಿ ಅದಕ್ಕೋಸ್ಕರ ಪ್ರಯತ್ನಪಡಲಿ.**

**12 ಯಾಕಂದರೆ ಕರ್ತನು ನೀತಿವಂತರನ್ನು ಕಟಾಕ್ಷಿಸುತ್ತಾನೆ, ಆತನು ಅವರ ವಿಜ್ಞಾಪನೆಗಳಿಗೆ ಕಿವಿಗೊಡುತ್ತಾನೆ. ಕೆಡುಕರಿಗೂ ಕರ್ತನು ಕೋಪದ ಮುಖವುಳ್ಳವನಾಗಿರುತ್ತಾನೆ ಎಂದು ಬರೆದದೆ.**

ನಾವು ಶಾಪಗ್ರಸ್ತರಾದಾಗ ಅಥವಾ ಅನ್ಯಾಯಕ್ಕೊಳಗಾದಾಗಲೂ ನಾವು ಆಶೀರ್ವಾದವನ್ನು ಹಿಂದಿರುಗಿಸುವ ಒಂದು ಮಾರ್ಗವೆಂದರೆ ಆಶೀರ್ವಾದವನ್ನು ಮಾತನಾಡುವುದು. ಯೇಸು ನಮಗೆ ಕಲಿಸಿದನು, *"ನಿಮ್ಮನ್ನು ಶಪಿಸುವವರನ್ನು ಆಶೀರ್ವದಿಸಿ"* (ಮತ್ತಾಯ 5:44). ಆದ್ದರಿಂದ, ನಾವು ಉದ್ದೇಶಪೂರ್ವಕವಾಗಿ ಅವರಿಗೆ ಮತ್ತು ಅವರ ಮೇಲೆ ಆಶೀರ್ವಾದದ ಮಾತುಗಳನ್ನು ಮಾತನಾಡುತ್ತೇವೆ. ಇದು ನಾವು ಮಾಡುವ ಆಯ್ಕೆಯಾಗಿದೆ. ನಿಮ್ಮ ನಾಲಿಗೆಯನ್ನು ಹಿಡಿದಿಟ್ಟುಕೊಳ್ಳಲು ಆಯ್ಕೆಮಾಡಿ ಮತ್ತು ಕೆಟ್ಟ ಮಾತುಗಳನ್ನು ಮಾತನಾಡಲು ಅನುಮತಿಸಬೇಡಿ. ತಡೆಯಿರಿ. ಬದಲಾಗಿ, ಆಶೀರ್ವಾದದ ಮಾತುಗಳನ್ನು ಬಿಡುಗಡೆ ಮಾಡಲು ಉದ್ದೇಶಪೂರ್ವಕ ಆಯ್ಕೆ ಮಾಡಿ. ದೇವರ ಮುಂದೆ ಹೋಗಿ ಹೇಳು, "ತಂದೆಯೇ, ಯೇಸುವಿನ ಹೆಸರಿನಲ್ಲಿ, ಇಂತಿಂತವರಿಗೆ ನಾನು ಆಶೀರ್ವಾದವನ್ನು ಹೇಳುತ್ತೇನೆ. ಅವರು ನನ್ನನ್ನು ನೋಯಿಸಿದ್ದರೂ ಸಹ, ನಾನು ಯೇಸುವಿನ ಹೆಸರಿನಲ್ಲಿ ಅವರ

ಜೀವನವನ್ನು ಆಶೀರ್ವದಿಸುತ್ತೇನೆ. ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಅವರೊಂದಿಗೆ ಎಲ್ಲವೂ ಚೆನ್ನಾಗಿರಲಿ. ಅವರು ಫಲಪ್ರದವಾಗಲಿ ಮತ್ತು ಆಶೀರ್ವದಿಸಲ್ಪಟ್ಟವರಾಗಲಿ."

ನೀವು ಅವರಿಗೆ ನಿಮ್ಮ ಅಂತರಂಗದಿಂದ ಆಶೀರ್ವಾದವನ್ನು ಬಿಡುಗಡೆ ಮಾಡಿದ ನಂತರ, ತಂಟೆ ಮಾಡಬೇಡಿ ಮತ್ತು ಅವರು ನಿಮಗೆ ಹೇಗೆ ಕೆಟ್ಟದಾಗಿ ವರ್ತಿಸಿದ್ದಾರೆ ಮತ್ತು ಅವರು ನಿಮಗೆ ಹೇಗೆ ಅನ್ಯಾಯ ಮಾಡಿದ್ದಾರೆ ಅಥವಾ ನೋಯಿಸಿದ್ದಾರೆ ಎಂದು ಇತರರಿಗೆ ತಿಳಿಸಬೇಡಿರಿ. ನಿಮ್ಮ ನಾಲಿಗೆಯನ್ನು ಕೆಟ್ಟದಾಗಿ ಮಾತನಾಡದಂತೆ ನೋಡಿಕೊಳ್ಳಿ. ಆಶೀರ್ವಾದವನ್ನು ಬಿಡುಗಡೆ ಮಾಡುವಲ್ಲಿ, ನೀವು ಆಶೀರ್ವಾದವನ್ನು ಪಡೆದುಕೊಳ್ಳಲು ಅಥವಾ ಸ್ವೀಕರಿಸಲು ನಿಮ್ಮನ್ನು ಇರಿಸಿದ್ದೀರಿ. ಕರ್ತನ ಕಣ್ಣುಗಳು ನಿಮ್ಮ ಮೇಲಿವೆ. ನೀವು ಉತ್ತಮ ಜೀವನವನ್ನು ಹೊಂದಿ ಮತ್ತು ಒಳ್ಳೆಯ ದಿನಗಳನ್ನು ನೋಡುತ್ತೀರಿ ಎಂದು ಆತನು ಖಚಿತಪಡಿಸುತ್ತಾನೆ. ಯಾವಾಗಲೂ ಆಶೀರ್ವಾದದ ಮಾತುಗಳನ್ನು ಬಿಡುಗಡೆ ಮಾಡಿ. ನಂಬಿಕೆಯಲ್ಲಿ ಆಶೀರ್ವಾದದ ಮಾತುಗಳನ್ನು ಮಾತನಾಡಿ.

# 71

# ಮಾತುಗಳು ವಿಜಯಕ್ಕಾಗಿ ನಿಮ್ಮ ನಂಬಿಕೆಯನ್ನು ಬಿಡುಗಡೆ ಮಾಡುತ್ತವೆ

**1 ಯೋಹಾನ 5:1,4**

**[1] ಯೇಸುವು ಕ್ರಿಸ್ತನೆಂದು ನಂಬುವ ಪ್ರತಿಯೊಬ್ಬನು ದೇವರಿಂದ ಹುಟ್ಟಿದವನಾಗಿದ್ದಾನೆ. ಯಾವನು ಹುಟ್ಟಿಸಿದ ತಂದೆಯನ್ನು ಪ್ರೀತಿಸುತ್ತಾನೋ ಅವನು ತಂದೆಯಿಂದ ಹುಟ್ಟಿದವರೆಲ್ಲರನ್ನೂ ಪ್ರೀತಿಸುತ್ತಾನೆ.**
**[4] ಯಾಕಂದರೆ ದೇವರಿಂದ ಹುಟ್ಟಿರುವಂಥದೆಲ್ಲವು ಲೋಕವನ್ನು ಜಯಿಸುತ್ತದೆ. ಲೋಕವನ್ನು ಜಯಿಸಿದಂಥದು ನಮ್ಮ ನಂಬಿಕೆಯೇ.**

ಯೇಸು ಕ್ರಿಸ್ತನಲ್ಲಿ ನಂಬಿಕೆಯ ಮೂಲಕ, ನಾವು ದೇವರಿಂದ ಹುಟ್ಟಿದ್ದೇವೆ. ನಮ್ಮಲ್ಲಿ ದೇವರ ಜೀವ ಮತ್ತು ಸ್ವಭಾವವಿದೆ. ನಾವು ಆತನ ಪುತ್ರರು ಮತ್ತು ಪುತ್ರಿಯರು. ಮತ್ತು ನಾವು ದೇವರಿಂದ ಹುಟ್ಟಿದ ಕಾರಣ, ನಾವು ಜಯಿಸುವವರು. ಜಗತ್ತು, ಶರೀರ ಮತ್ತು ದೆವ್ವದ ಮೇಲೆ ವಿಜಯಶಾಲಿಯಾಗಿ ಬದುಕಲು ಅಗತ್ಯವಿರುವ ಎಲ್ಲವುಗಳಿಂದ ನಾವು ತುಂಬಿದ್ದೇವೆ. ಮತ್ತು ದೇವರಲ್ಲಿ ನಮ್ಮ ನಂಬಿಕೆಯ ಅಭ್ಯಾಸದ ಮೂಲಕ ನಾವು ವಿಜಯವನ್ನು ಹೊಂದಿದ್ದೇವೆ ಎಂದು ಈ ವಾಕ್ಯವು ಸ್ಪಷ್ಟವಾಗಿದೆ. ನಾವು ಜಯಿಸುವ, ವಿಜಯದ ಜೀವನವನ್ನು ನಡೆಸಬೇಕಾದರೆ ನಾವು ನಂಬಿಕೆಯಿಂದ ನಡೆಯಬೇಕು. ನಾವು ಕೇವಲ ನಮ್ಮ ಸ್ವ-ಇಚ್ಛೆಯ ಶಕ್ತಿಯಿಂದ ಅಥವಾ ನಮ್ಮ ಬುದ್ಧಿ ಶಕ್ತಿಯಿಂದ ಜಯಶಾಲಿಗಳಾಗಿ ಮತ್ತು ಜಯಿಸುವವರಾಗಿ ಬದುಕುವುದಿಲ್ಲ. ನಾವು ಪ್ರಪಂಚದ ಮೇಲೆ ವಿಜಯವನ್ನು ಹೊಂದುವ ಮಾರ್ಗವು ನಂಬಿಕೆಯ ಮೂಲಕ ಎಂದು ದೇವರು ಹೇಳಿದನು.

ಈ ಪುಸ್ತಕದಲ್ಲಿ ನಾವು ಎತ್ತಿಹಿಡಿದ ವಾಕ್ಯಗಳಾದ್ಯಂತ ನಾವು ನೋಡುವ ನಂಬಿಕೆಯ ಪ್ರಮುಖ ತತ್ವವೆಂದರೆ ನಂಬಿಕೆ ಮಾತನಾಡುವುದು. ನಂಬಿಕೆಯನ್ನು ಮಾತುಗಳ ಮೂಲಕ ವ್ಯಕ್ತಪಡಿಸಲಾಗುತ್ತದೆ. ನಾವು ನಂಬಿಕೆಯ ಮಾತುಗಳನ್ನು ಮಾತನಾಡಬೇಕು, ದೇವರಲ್ಲಿ ನಮ್ಮ ನಂಬಿಕೆಯನ್ನು ವ್ಯಕ್ತಪಡಿಸುವ ಮಾತುಗಳು, ಆತನ ವಾಕ್ಯದಲ್ಲಿ ಮತ್ತು

ಯೇಸು ಕ್ರಿಸ್ತನು ನಮಗಾಗಿ ಸಾಧಿಸಿದ ಎಲ್ಲದರಲ್ಲೂ. ಹಾಗೆ ಮಾಡುವುದು ನಾವು ಜಗತ್ತು, ಶರೀರ ಮತ್ತು ದೆವ್ವದ ಮೇಲೆ ಜಯಗಳಿಸುವ ಮತ್ತು ವಿಜಯಶಾಲಿಯಾಗಿ ಬದುಕುವ ಮಾರ್ಗಗಳಲ್ಲಿ ಒಂದಾಗಿದೆ.

ನಿಮ್ಮ ನಂಬಿಕೆಯನ್ನು ಮಾತನಾಡಿ. ವಿಜಯಶಾಲಿಯಾಗಿ ಮತ್ತು ಜಯಶಾಲಿಯಾಗಿ ಬದುಕಲು ಇದು ಒಂದು ಕೀಲಿಯಾಗಿದೆ.

# 72

# ನಾವು ದೇವರವರಾಗಿದ್ದೇವೆ, ಆದ್ದರಿಂದ ನಾವು ದೇವರಿಂದ ಮಾತನಾಡುತ್ತೇವೆ

**1 ಯೋಹಾನ 4:4-6**

**4ಪ್ರಿಯರಾದ ಮಕ್ಕಳೇ, ನಿವಂತೂ ದೇವರಿಂದ ಹುಟ್ಟಿದವರಾಗಿದ್ದೀರಿ; ಮತ್ತು ಲೋಕದಲ್ಲಿರುವವನಿಗಿಂತ ನಿಮ್ಮಲ್ಲಿರುವಾತನು ಹೆಚ್ಚಿನವನಾಗಿರುವದರಿಂದ ನೀವು ಆ ಸುಳ್ಳು ಪ್ರವಾದಿಗಳನ್ನು ಜಯಿಸಿದ್ದೀರಿ.**

**5 ಅವರು ಲೋಕದಿಂದ ಹುಟ್ಟಿದವರಾಗಿದ್ದಾರೆ; ಈ ಕಾರಣದಿಂದ ಅವರು ಲೋಕಪ್ರೇರಿತರಾಗಿ ಮಾತಾಡುತ್ತಾರೆ. ಮತ್ತು ಲೋಕದವರು ಅವರ ಮಾತನ್ನು ಕೇಳುತ್ತಾರೆ.**

**6 ನಾವಂತೂ ದೇವರಿಂದ ಹುಟ್ಟಿದವರಾಗಿದ್ದೇವೆ; ದೇವರನ್ನು ಬಲ್ಲವನು ನಮ್ಮ ಮಾತನ್ನು ಕೇಳುತ್ತಾನೆ; ದೇವರಿಂದ ಹುಟ್ಟದವನು ನಮ್ಮ ಮಾತನ್ನು ಕೇಳುವದಿಲ್ಲ. ಇದು ಸತ್ಯವನ್ನು ಬೋಧಿಸುವ ಆತ್ಮ ಅದು ಸುಳ್ಳನ್ನು ಬೋಧಿಸುವ ಆತ್ಮ ಎಂದು ಇದರಿಂದಲೇ ತಿಳಕೊಳ್ಳುತ್ತೇವೆ.**

ಅಪೊಸ್ತಲ ಯೋಹಾನನು ಎರಡು ರೀತಿಯ ಜನರ ನಡುವೆ ವ್ಯತ್ಯಾಸವನ್ನು ತೋರಿಸುತ್ತಾನೆ. ಯಾರು *"ಲೋಕದವರು"* ಮತ್ತು ಯಾರು *"ದೇವರವರು"*. ಲೋಕದವರನ್ನು ಇದರಿಂದ ಗುರುತಿಸಲಾಗುತ್ತದೆ ಎಂದು ಅವನು ಹೇಳುತ್ತಾನೆ–*"ಅವರು ಲೋಕಪ್ರೇರಿತರಾಗಿ ಮಾತಾಡುತ್ತಾರೆ."* ಅವರು ಲೋಕದ ಭಾಷೆ, ಲೌಕಿಕ ವಿಷಯಗಳನ್ನು ಮಾತನಾಡುತ್ತಾರೆ ಮತ್ತು ಲೋಕದ ಆತ್ಮವನ್ನು ವ್ಯಕ್ತಪಡಿಸುತ್ತಾರೆ. ಹಾಗಾಗಿ ಲೋಕದವರು ಅವರ ಮಾತನ್ನು ಕೇಳುತ್ತಾರೆ. ಆದಾಗ್ಯೂ, *"ದೇವರವರು"* ಆಗಿರುವ ನಾವು, ಇದರ ಅರ್ಥವೇನೆಂದರೆ, ನಾವು *"ದೇವರವರು"* ಎಂದು ಮಾತನಾಡುತ್ತೇವೆ ಮತ್ತು ದೇವರನ್ನು ತಿಳಿದಿರುವವರು, ಕೇಳುತ್ತಾರೆ, ಅರ್ಥಮಾಡಿಕೊಳ್ಳುತ್ತಾರೆ ಮತ್ತು ನಾವು ಏನು ಮಾತನಾಡುತ್ತಿದ್ದೇವೆ ಎಂಬುದರ ಬಗ್ಗೆ ಗಮನ ಹರಿಸುತ್ತಾರೆ.

ನಾವು *"ದೇವರವರು,"* ಆದ್ದರಿಂದ ನಾವು *"ದೇವರವರು"* ಎಂಬಂತೆ ಮಾತನಾಡುತ್ತೇವೆ. ನಾವು ಬೇರೆ ಭಾಷೆ ಮಾತನಾಡುತ್ತೇವೆ. ನಾವು ದೇವರ ವಾಕ್ಯದ ಭಾಷೆಯನ್ನು ಮಾತನಾಡುತ್ತೇವೆ. ನಾವು ದೇವರ ವಾಕ್ಯದ ಸತ್ಯಕ್ಕೆ ಅನುಗುಣವಾಗಿ ಮಾತನಾಡುತ್ತೇವೆ.

ನೀವು *“ದೇವರವರು”* ಎಂದು ನೆನಪಿಡಿ. ನೀವು *“ಲೋಕದವರ”* ಸುತ್ತಲೂ ಇರುವಾಗ, *“ಲೋಕದವರ”* ಅನುಗುಣವಾಗಿರಲು ಮತ್ತು ಮಾತನಾಡಲು ನೀವು ಒತ್ತಡವನ್ನು ಅನುಭವಿಸುವಿರಿ. ಆದರೆ ನೀವು ಈ ಲೋಕದ ಒತ್ತಡಗಳಿಗೆ ಮಣಿಯಬೇಕಾಗಿಲ್ಲ. ನೀವು ದೇವರಿಂದ ಬಂದವರು. ನೀವು ಜಯಿಸಿದವರು. ನೀವು ದೋಷದ ಆತ್ಮವನ್ನು, ಈ ಯುಗದ ಆತ್ಮವನ್ನು, ಕ್ರಿಸ್ತನ ವಿರುದ್ಧವಾಗಿರುವ ಆತ್ಮವನ್ನು ಜಯಿಸಿದ್ದೀರಿ. ಲೋಕದಲ್ಲಿ ಇರುವವರಿಗಿಂತ ನಿಮ್ಮಲ್ಲಿರುವವನು ದೊಡ್ಡವನು. ನೀವು ಲೋಕದ ಭಾಷೆ ಅಥವಾ *“ಲೋಕದವರು”* ಎಂದು ಮಾತನಾಡುವುದನ್ನು ಒಪ್ಪಿಕೊಳ್ಳಬೇಕಾಗಿಲ್ಲ. ನಿಮ್ಮ ಮಾತುಗಳನ್ನು ನೀವು ಆರಿಸಿಕೊಳ್ಳಿ. ನೀವು *“ದೇವರವರು”* ಎಂದು ಮಾತನಾಡುತ್ತೀರಿ. ನೀವು ದೇವರ ವಾಕ್ಯಕ್ಕೆ ಅನುಗುಣವಾಗಿ ಮಾತನಾಡುತ್ತೀರಿ. ನಿಮ್ಮ ನಂಬಿಕೆಯನ್ನು ಮಾತನಾಡಿ.

# 73

# ಕುರಿಮರಿಯ ರಕ್ತದಿಂದ ಮತ್ತು ನಮ್ಮ ಸಾಕ್ಷಿಯ ವಾಕ್ಯದಿಂದ ನಾವು ಜಯಿಸುತ್ತೇವೆ

**ಪ್ರಕಟನೆ 12:11**

**ಅವರು ಪ್ರಾಣದ ಮೇಲಣ ಪ್ರೀತಿಯನ್ನು ತೊರೆದು ಮರಣಕ್ಕೆ ಹಿಂತೆಗೆಯದೆ ಯಜ್ಞದ ಕುರಿಯಾದಾತನ ರಕ್ತದ ಬಲದಿಂದಲೂ ತಮ್ಮ ವಾಕ್ಯದ ಬಲದಿಂದಲೂ ಅವನನ್ನು ಜಯಿಸಿದರು.**

ಸೈತಾನ ನಮ್ಮ ವಿರೋಧಿ. ಸೈತಾನ ಮತ್ತು ಅವನ ದೆವ್ವಗಳು ಸೋಲಿಸಲ್ಪಟ್ಟವು ಮತ್ತು ಶಕ್ತಿಹೀನಗೊಳಿಸಲ್ಪಟ್ಟಿವೆ. ತಮ್ಮ ದುರ್ಬಲ ಸ್ಥಿತಿಯಲ್ಲಿ ಅವರು ಸುಳ್ಳು, ವಂಚನೆಗಳು, ಆರೋಪಗಳು ಮತ್ತು ಬೆದರಿಕೆಗಳನ್ನು ಬಳಸಿಕೊಂಡು ಮನಸ್ಸಿನ ಆಟ ಆಡುವ ಸಾಮರ್ಥ್ಯನ್ನು ಹೊಂದಿದ್ದಾರೆ. ಅದಕ್ಕಾಗಿಯೇ ಸೈತಾನನನ್ನು ಸಹೋದರರ ದೂಷಕ ಎಂದು ಕರೆಯಲಾಗುತ್ತದೆ, ಅವನ ಆರೋಪಗಳು ನಿರಂತರವಾಗಿ ನಮ್ಮ ಮನಸ್ಸಿನ ಮೇಲೆ ಭಾರವಾಗುವಂತೆ ಮಾಡುತ್ತದೆ, ಹೀಗೆ ದೇವರ ಮುಂದೆ ನಮ್ಮ ಮನಸ್ಸಿನಲ್ಲಿ ನಮ್ಮನ್ನು ದೂಷಿಸುತ್ತಾನೆ. ದೇವರ ಮುಂದೆ ನಮ್ಮನ್ನು ನಿಷ್ಪ್ರಯೋಜಕ, ಖಂಡಿಸಿದ ಮತ್ತು ಪ್ರೀತಿಪಾತ್ರರಾಗಿರದವರೆಂದು ಭಾವಿಸಲು ಅವನು ಪ್ರಯತ್ನಿಸುತ್ತಾನೆ.

ಪ್ರಕಟನೆ 12ರಲ್ಲಿ, ನಾವು ವಿಶ್ವಾಸಿಗಳು ಈ ಎದುರಾಳಿಯನ್ನು ಮತ್ತು ಅವನ ಆರೋಪಗಳನ್ನು ಹೇಗೆ ಜಯಿಸುತ್ತೇವೆ ಎಂಬುದರ ಕುರಿತು ಯೋಹಾನನು ಪ್ರಬಲವಾದ ಕೀಲಿಯನ್ನು ಹೊರತರುತ್ತಾನೆ. ಕುರಿಮರಿಯಾದಾತನ ರಕ್ತದಿಂದ ಮತ್ತು ನಮ್ಮ ಸಾಕ್ಷಿಯ ವಾಕ್ಯದಿಂದ ನಾವು ಸೈತಾನನನ್ನು ಜಯಿಸುತ್ತೇವೆ. ಯೇಸುವಿನ ರಕ್ತವು ನಮಗಾಗಿ ಏನು ಮಾಡಿದೆ ಎಂದು ನಾವು ನಂಬುತ್ತೇವೆ ಮತ್ತು ನಾವು ಮಾತನಾಡುತ್ತೇವೆ ಮತ್ತು ನಮ್ಮ ಸಾಕ್ಷ್ಯವನ್ನು ಘೋಷಿಸುತ್ತೇವೆ, ಅಂದರೆ ಯೇಸುವಿನ ರಕ್ತವು ನಮಗಾಗಿ ವೈಯಕ್ತಿಕವಾಗಿ ಏನು ಮಾಡಿದೆ ಎಂದು ನಾವು ಘೋಷಿಸುತ್ತೇವೆ. ನಾವು ಘೋಷಿಸಬೇಕು, ಯೇಸುವಿನ ರಕ್ತವು ನಮಗಾಗಿ ಏನು ಮಾಡಿದೆ ಎಂಬುದಕ್ಕೆ ನಾವು ನಮ್ಮ

ಸಾಕ್ಷ್ಯವನ್ನು ಮಾತನಾಡಬೇಕು. ಯೇಸು ಕ್ರಿಸ್ತನು ತನ್ನ ಶಿಲುಬೆಯ ಮೂಲಕ ನಮಗಾಗಿ ಏನನ್ನು ಪೂರ್ಣಗೊಳಿಸಿದ್ದಾನೆಂದು ನಾವು ನಮ್ಮ ಬಾಯಿಯಿಂದ ಹೇಳಬೇಕು ಮತ್ತು ನಾವು ಆತನ ಪೂರ್ಣಗೊಳಿಸಿದ ಕೆಲಸವನ್ನು ನಂಬುತ್ತೇವೆ. ಕುರಿಮರಿಯಾದಾತನ ರಕ್ತವು ನಮಗಾಗಿ ಏನು ಮಾಡಿದೆ ಎಂಬ ನಮ್ಮ ಘೋಷಣೆಯು ವಿರೋಧಿಯನ್ನು ತುಳಿಯುತ್ತದೆ. ಶಿಲುಬೆಯ ಮೂಲಕ ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದು ನಿಮ್ಮ ನಂಬಿಕೆಯನ್ನು ಘೋಷಿಸಿ. ನಿಮ್ಮ ನಂಬಿಕೆಯನ್ನು ಮಾತನಾಡಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದೀರೋ?

ಸುಮಾರು 2000 ವರ್ಶಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು. ಆತನು ಪಾಪರಹಿತ ಜೀವಿತ ನಡೆಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ. ಯೇಸು ಭೂಲೋಕದಲ್ಲಿ ಅನೇಕ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕೇಳುವಂತೆ ಮಾಡಿದನು. ಹಸಿದ 5000 ಜನರಿಗೆ ಐದು ರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು, ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಕಾರ್ಯಗಳು ದೇವರು ಒಳ್ಳೆಯ ದೇವರಾಗಿದ್ದಾನೆ, ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಆತನು ಬಯಸುತ್ತಾನೆ. ಆತನು ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತಾನೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಸರಿ ಕಾಣದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಸುತ್ತದೆ ಅಥವಾ ದೂರ ಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ***"ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯ ಜೀವ"* (ರೋಮಾಪುರದವರಿಗೆ 6:23)** ಎಂದು ಹೇಳುತ್ತದೆ. ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆ ಮಾಡಿದ್ದಾನೆ. ಮೂರನೇ ದಿನದಲ್ಲಿ ಜೀವದಿಂದ ಎದ್ದು

ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ ಮತ್ತು ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ. ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ಜನರನ್ನು ಪಾಪದಿಂದ ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ—ನೀನು ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

***"ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು ..."*** **(ಅಪೋಸ್ತಲರ ಕೃತ್ಯಗಳು 10:43).**

***"ನೀನು ಯೇಸುವನ್ನೇ ಕರ್ತನೆಂದು ಬಾಯಿಯಿಂದ ಅರಿಕೆ ಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬದು"*** **(ರೋಮಾಪುರದವರಿಗೆ 10:9).**

ನೀವು ಸಹ ಯೇಸು ಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪಾಪ ಪರಿಹಾರಗಳನ್ನು ಹೊಂದಿಕೊಳ್ಳಬಹುದು.

ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧಿಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರೀಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದನ್ನು ಅರ್ಥಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರು ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮೆಯನ್ನು ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ*

*ನೀನು ಮಾಡಿದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನ್ನು ರಕ್ಷಿಸಿಕೊಳ್ಳಲು ಆಗುವದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ, ನನ್ನ ಬಾಯಿಯಿಂದ ನೀನು ನನಗಾಗಿ ಮರಣವನ್ನು ಹೊಂದಿದೆ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ, ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧಿಕರಣ ಪಡೆದುಕೊಂಡೆ ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು, ನಿನ್ನನ್ನು ಪ್ರೀತಿಸಲು ಸಹಾಯ ಮಾಡು, ನಿನ್ನನ್ನು ಇನ್ನೂ ತಿಳಿಯಲೂ ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯ ಮಾಡು.*

*ಆಮೇನ್.*

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರಕ್ಕೆ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ಆಲ್ ಪೀಪಲ್ಸ್ ಸಭೆಯು **ಯೇಸು ಕ್ರಿಸ್ತನನ್ನು ಪ್ರೀತಿಸುವ, ವಾಕ್ಯದ ಮೇಲೆ ಕೇಂದ್ರೀಕರಿಸಲ್ಪಟ್ಟ, ಆತ್ಮನಿಂದ ತುಂಬಿಸಲ್ಪಟ್ಟ,** ಒಂದು ಸಜ್ಜುಗೊಳಿಸುವ ಕೇಂದ್ರ, ಸೇವಾ ತಳಹದಿಯ ಮತ್ತು ದೇಶಗಳನ್ನು ಸಂಧಿಸುವ ಒಂದು ಕುಟುಂಬ ಸಭೆಯಾಗಿದೆ.

- ಒಂದು **ಕುಟುಂಬ ಸಭೆಯಾಗಿ,** ನಾವು ಕ್ರಿಸ್ತನ ಕೇಂದ್ರಿತ ಸಹಭಾಗಿತ್ವ, ದೇವರ ಸಭೆಯಂತೆ ನಾವು ಒಬ್ಬರಿಗೊಬ್ಬರು ಪ್ರೀತಿಯಲ್ಲಿ ಪರಸ್ಪರ ಕಾಳಜಿ ಮತ್ತು ಸೇವೆ ಮಾಡುವಂತಹ ಒಂದು ಸಮುದಾಯವಾಗಿ ಒಟ್ಟಿಗೆ ಬೆಳೆಯುತ್ತೇವೆ.
- ಒಂದು **ಸಜ್ಜುಗೊಳಿಸುವ ಕೇಂದ್ರವಾಗಿ,** ನಾವು ಪ್ರತಿ ವಿಶ್ವಾಸಿಯು ವಿಜಯಶಾಲಿಯಾಗಿ ಜೀವಿಸಲು, ಕ್ರಿಸ್ತನಂತೆ ಪ್ರಬುದ್ಧರಾಗಿ ಮತ್ತು ಅವರ ಜೀವಿತಗಳಿಗಾಗಿ ದೇವರ ಉದ್ದೇಶಗಳನ್ನು ನೆರವೇರಿಸಲು ಸಜ್ಜುಗೊಳಿಸುತ್ತೇವೆ ಮತ್ತು ಅಧಿಕಾರ ನೀಡುತ್ತೇವೆ.
- ಒಂದು **ಸೇವಾ ನೆಲೆಯಾಗಿ,** ದೇವರ ವಾಕ್ಯದ ಮೂಲಕವಾಗಿ ಯೇಸು ಕ್ರಿಸ್ತನ ಸಂಪೂರ್ಣ ಸುವಾರ್ತೆಯೊಂದಿಗೆ ಮತ್ತು ಪವಿತ್ರಾತ್ಮದ ಬಲದ ಅಪ್ರಾಕೃತ ತೋರ್ಪಡಿಸುವಿಕೆಗಳೊಡನೆ ನಮ್ಮ ನಗರ, ದೇಶ ಮತ್ತು ದೇಶಗಳನ್ನು ಆಶೀರ್ವದಿಸಲು ಅರ್ಥಪೂರ್ಣ ಸೇವೆಯಲ್ಲಿ ನಾವು ತೊಡಗುತ್ತೇವೆ.
- ಒಂದು **ಪ್ರಪಂಚವನ್ನು ಸಂಧಿಸುವವರಾಗಿ,** ದೇವರ ರಾಜ್ಯಕ್ಕಾಗಿ ತಮ್ಮ ಪ್ರದೇಶಗಳ ಮೇಲೆ ಪ್ರಭಾವ ಬೀರುವ ದೈವಿಕ ನಾಯಕರು ಮತ್ತು ಆತ್ಮಭರಿತ ಸಭೆಗಳನ್ನು ಪೋಷಿಸುವದರಿಂದ ಸ್ಥಳಿಯವಾಗಿ ಮತ್ತು ಜಾಗತಿಕವಾಗಿ ನಾವು ಸೇವೆ ಸಲ್ಲಿಸುತ್ತೇವೆ.

ಆಲ್ ಪೀಪಲ್ಸ್ ಸಭೆಯಲ್ಲಿ ನಾವು, ಆತನ ಪವಿತ್ರಾತ್ಮನ ಪ್ರಮಾಣೀಕರಣ ಮತ್ತು ರಾಜಿ ಹೊಂದದ, ಅಭಿಷೇಕ ಹೊಂದಿದ, ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜ್ಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನ ಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅದ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ (1 ಕೊರಿಂಥದವರಿಗೆ 2:4,5; ಇಬ್ರಿಯರಿಗೆ 2:3,4). ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆಯು ನಮ್ಮ ಗುರಿಯಾಗಿದೆ.

ಬೆಂಗಳೂರಿನ ಆಲ್ ಪೀಪಲ್ಸ್ ಸಭೆಯ ಮುಖ್ಯ ನೆಲೆಯೊಡನೆ ಭಾರತದಲ್ಲಿ ಅನೇಕ ಇತರ ಸಭೆಗಳನ್ನು ಹೊಂದಿದೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್ ನ್ನು ಸಂಪರ್ಕಿಸಿರಿ. **apcwo.org/locations** ಅಥವಾ **contact@apcwo.org** ಗೆ ಇ-ಮೇಲ್ ಕಳುಹಿಸಿರಿ.

# ಉಚಿತ ಪ್ರಕಾಶನಗಳು

A Church in Revival
A Real Place Called Heaven
A Time for Every Purpose
Ancient Landmarks
Baptism in the Holy Spirit
Being Spiritually Minded and Earthly Wise
Biblical Attitude Towards Work
Breaking Personal and Generational Bondages
Change
Code of Honor
Divine Favor
Divine Order in the Citywide Church
Don't Compromise Your Calling
Don't Lose Hope
Equipping the Saints
Foundations (Track 1)
Fulfilling God's Purpose for Your Life
Gifts of the Holy Spirit
Giving Birth to the Purposes of God
God Is a Good God
God's Word—The Miracle Seed
How to Help Your Pastor
Integrity
Kingdom Builders
Laying the Axe to the Root
Living Life Without Strife
Marriage and Family
Ministering Healing and Deliverance
Offenses—Don't Take Them
Open Heavens
Our Redemption
Receiving God's Guidance
Revivals, Visitations and Moves of God
Shhh! No Gossip!
Speak Your Faith
The Conquest of the Mind
The Father's Love
The House of God
The Kingdom of God
The Mighty Name of Jesus
The Night Seasons of Life
The Power of Commitment
The Presence of God
The Redemptive Heart of God
The Refiner's Fire
The Spirit of Wisdom, Revelation and Power
The Wonderful Benefits of Praying in Tongues
Timeless Principles for the Workplace
Understanding the Prophetic
Water Baptism
We Are Different
Who We Are in Christ
Women in the Workplace
Work—Its Original Design

ಹೊಸ ಪುಸ್ತಕಗಳು ನಿಯಮಿತವಾಗಿ ಬಿಡುಗಡೆಗೊಳ್ಳುತ್ತವೆ. ಆಲ್ ಪೀಪಲ್ಸ್ ಸಭೆಯ ಕ್ರಿಸ್ತೀಯ ಉಚಿತ ಪುಸ್ತಕಗಳನ್ನು PDF ನಲ್ಲಿ, ಆಡಿಯೋ ಮತ್ತು ಇತರ ಸ್ವರೂಪಗಳಲ್ಲಿ ಡೌನ್ಲೋಡ್ ಮಾಡಲು ದಯವಿಟ್ಟು **apcwo.org/books** ನಿಂದ ಸಂಗ್ರಹಿಸಿರಿ. ಇವುಗಳಲ್ಲಿ ಅನೇಕ ಪುಸ್ತಕಗಳು ಇತರ ಭಾಷೆಗಳಲ್ಲೂ ಸಹ ದೊರೆಯುತ್ತವೆ. ಉಚಿತ ಆಡಿಯೋ ಮತ್ತು ವಿಡಿಯೋ ಸಂದೇಶಗಳು, ಪ್ರಸಂಗ ಟಿಪ್ಪಣಿಗಳು ಮತ್ತು ಇತರ ಉಚಿತ ಅಧ್ಯಯನ ಸಂಗ್ರಹಗಳಿಗಾಗಿ ದಯವಿಟ್ಟು **apcwo.org/sermons** ನ್ನು ಸಂಪರ್ಕಿಸಿರಿ.

# ಕ್ರಿಸಾಲಿಸ್ ಕೌನ್ಸೆಲಿಂಗ್

ಕ್ರಿಸಾಲಿಸ್ ಕೌನ್ಸೆಲಿಂಗ್ ಜನರು ಜೀವನದ ಸವಾಲುಗಳನ್ನು ಎದುರಿಸಲು ಮತ್ತು ಜಯಿಸಿ ಹೊರಬರಲು ಸಹಾಯ ಮಾಡಲು ವೈಯಕ್ತಿಕ ಸಲಹೆಯನ್ನು ನೀಡುತ್ತದೆ. ಕ್ರಿಸಾಲಿಸ್ ಕೌನ್ಸೆಲಿಂಗ, ತರಬೇತಿ ಪಡೆದ ವೃತ್ತಿಪರ ಮತ್ತು ಅನುಭವಿ ಕ್ರೈಸ್ತೀಯ ಸಲಹೆಗಾರರ ತಂಡವಾಗಿದೆ.

ನಮ್ಮ ಸೇವೆಗಳು ಎಲ್ಲಾ ವಯೋಮಾನದವರಿಗೆ ಮತ್ತು ವಿಶಾಲ ವ್ಯಾಪ್ತಿಯ ಜೀವನದ ಸವಾಲುಗಳ ಕುರಿತು ಸಂಬೋಧಿಸುವದಾಗಿದೆ.

- **ಹದಿಹರೆಯದವರು**
- **ವಯಕ್ತಿಕ ಹೊಂದಾಣಿಕೆಗಳು**
- **ಸಂಭಂದಿತ ಸವಾಲುಗಳು**
- **ಶೈಕ್ಷಣಿಕ ಕಡಿಮೆ ಸಾಧನೆ**
- **ಕೆಲಸಕ್ಕೆ ಸಂಭಂದಿಸಿದ ಸವಾಲುಗಳು**
- **ಕುಟುಂಬ / ದಂಪತಿಗಳು: ವಿವಾಹಪೂರ್ವ, ವೈವಾಹಿಕ**
- **ಪೋಷಕರು / ಮಕ್ಕಳು / ಒಡಹುಟ್ಟಿದವರು / ಗೆಳೆಯರು**
- **ವರ್ತನೆಯ ಅಸ್ತವ್ಯಸ್ತತೆಗಳು**
- **ವ್ಯಕ್ತಿತ್ವ ಅಸ್ತವ್ಯಸ್ತತೆಗಳು**
- **ಮಾನಸಿಕ / ಭಾವನಾತ್ಮಕ ಸಮಸ್ಯೆಗಳು**
- **ಒತ್ತಡ / ಆಘಾತ**
- **ಮಧುಪಾನ / ಮಾದಕವಸ್ತು ದುರುಪಯೋಗ**
- **ಆತ್ಮೀಕ ಸಮಸ್ಯೆಗಳು**
- **ಜೀವನ ತರಬೇತಿ**

ಕ್ರಿಸಾಲಿಸ್ ಕೌನ್ಸೆಲಿಂಗ ಸೇವೆಗಳು ಕೈಗೆಟಕುವ ಶುಲ್ಕಗಳು ಮತ್ತು ಸುಲಭವಾಗಿ ಪಡೆದುಕೊಳ್ಳಬಹುದಾಗಿದೆ.

ನಮ್ಮ ತರಬೇತಿ ಪಡೆದ ಸಲಹೆಗಾರರೊಂದಿಗೆ ನಿಮ್ಮ ನೇಮಕಾತಿಯನ್ನು ನಿಗದಿಪಡಿಸಲು:

**ವೆಬ್ಸೈಟ್: chrysalislife.org**
**ದೂರವಾಣಿ:** +91-80-25452617 ಅಥವಾ ಟೋಲ್-ಫ್ರೀ (ಭಾರತದೊಳಗೆ) 1-800-300-00998
**ಇಮೆಲ್: counselor@chrysalislife.org**

ಕ್ರಿಸಾಲಿಸ್ ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್ ನ ಒಂದು ಸೇವೆಯಾಗಿದೆ.

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವದು, (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತುಗೊಳಿಸುವದು, (ಇ) ಕ್ರಿಸ್ತನ ಅಂಗವನ್ನು ಕಟ್ಟುವದನ್ನು, ಬಹಳ ಮುಖ್ಯ ಗುರಿಯಾಗಿಸಿಕೊಂಡಿರುವ, ಭಾರತ ದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಬೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾ 'ಸೇವಕರ ಸಮಾವೇಶವನ್ನು' ವರ್ಷಪೂರ್ತಿ ನಡೆಸುವದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಕಗಳನ್ನು ಉಚಿತವಾಗಿ ಹಂಚುವದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳುಹಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚ್ಚುಗೆಯುಳ್ಳದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ ನಮ್ಮ ಕಛೇರಿಯ ವಿಳಾಸವಾದ "All Peoples Church" ಬೆಂಗಳೂರಿಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಯಿಸಬಹುದು.

**ಖಾತೆಯ ಹೆಸರು:** All Peoples Church

**ಖಾತೆ ಸಂಖ್ಯೆ:** 50200068829058

**IFSC ಕೋಡ್:** HDFC0004367

**ಬ್ಯಾಂಕು:** HDFC Bank, 7M/308, 80 Ft Road, HRBR Layout, Kalyan Nagar, Bengaluru, Karanataka 560043

*ದಯವಿಟ್ಟು ಗಮನಿಸಿ: ಆಲ್ ಪೀಪಲ್ಸ್ ಸಭೆಯು ಭಾರತ ದೇಶದಲ್ಲಿ ಬ್ಯಾಂಕ್ ಖಾತೆ ಹೊಂದಿರುವವರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು. ಹೆಚ್ಚುವರಿ ವಿವರಗಳಿಗಾಗಿ ದಯವಿಟ್ಟು ಸಂಪರ್ಕಿಸಿರಿ* **apcwo.org/give**.

ಹಾಗೆಯೇ ನಿಮಗೆ ಸಾಧ್ಯವಾಗುವಾಗಲೆಲ್ಲಾ ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ.

**ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!**


DOWNLOAD THE FREE APP!

*Search for*

"All Peoples Church Bangalore"
in the App or Google play stores.

Available on the App Store

ANDROID APP ON Google play




*A daily 5-minute video devotional.*
*A daily Bible reading and prayer guide.*
*5-minute Sermon summary.*
*Toolkit with Scriptures on various topics to build faith and information to share the Gospel.*
*Resources with sermons, sermon notes, TV programs, books, music and more.*

*IF YOU LOVE IT, TELL OTHERS ABOUT IT!*

# ಆಲ್ ಪೀಪಲ್ಸ್ ಚರ್ಚ್ ಬೈಬಲ್ ಕಾಲೇಜು

**apcbiblecollege.org**

ಆಲ್ ಪೀಪಲ್ಸ್ ಚರ್ಚ್ ಬೈಬಲ್ ಕಾಲೇಜು ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ತೇಜಿಸುವಿಕೆಯ ಅಧ್ಯಯನ ಮತ್ತು ಸಿದ್ದಾಂತಗಳ ಉತ್ತಮವಾದ ದೈವಿಕ ಸಿದ್ದಾಂತಗಳೊಡನೆ ಪವಿತ್ರಾತ್ಮನ ಅತ್ಯದ್ಭುತಕರವಾದ ಬಲದಲ್ಲಿ ಸೇವೆ ಮಾಡಲು ಸಜ್ಜುಗೊಳಿಸಲಾಗುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು–ತರಬೇತಿಯನ್ನು ಪಡೆದುಕ್ಕೊಳ್ಳುವದನ್ನು ಒದಗಿಸುತ್ತವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣನಡತೆಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಭಂದದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿವುದನ್ನು ನಾವು ನಂಬುತ್ತೇವೆ.

ಆಲ್ ಪೀಪಲ್ಸ್ ಚರ್ಚ್ ಬೈಬಲ್ ಕಾಲೇಜು (ಏಪಿಸಿ-ಬಿಸಿ)ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಭುತಕರ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೇಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಸಲ್ಪಟ್ಟಿದ್ದಾರೆ.

ನಾವು ಮೂರು ಕಾರ್ಯಕ್ರಮಗಳನ್ನು ನೀಡುತ್ತೇವೆ.

- ಒಂದು ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (C.Th.)
- ಎರಡು ವರ್ಷದ ಡಿಪ್ಲಮೋ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (Dip.Th.)
- ಮೂರು ವರ್ಷದ ಬ್ಯಾಚೆಲೊರ್ಸ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (B.Th.)

ತರಗತಿಗಳು ವಾರದ ಪ್ರತೀದಿನ **ಸೋಮವಾರದಿಂದ ಶುಕ್ರವಾರದವರೆಗೆ ಬೆಳ್ಳಿಗ್ಗೆ 9 ರಿಂದ ಮಧ್ಯಾಹ್ನ 12 ರವರೆಗೆ ಜರಗುತ್ತದೆ. ಭಾರತದ ಕಾಲಮಾನ (ಸಂಘಟಿತ ಸಾರ್ವಾತ್ರಿಕ ಸಮಯ+5:30).** ನಾವು ಇತರೆ ಮೂರು ಕಲಿಕಾ ಐಚ್ಚಿಕ ವಿಷಯಗಳನ್ನು ನೀಡುತ್ತೇವೆ.

- **ಆನ್–ಕ್ಯಾಂಪಸ್:** ಅಧ್ಯಯನ ಆವರಣದಲ್ಲಿ ವಯಕ್ತಿಕ ತರಗತಿಗಳಿಗೆ ಹಾಜರಾಗುವುದು.
- **ಅನ್ ಲೈನ್:** ಅನ್ ಲೈನ್ ನ ನೇರ ಉಪನ್ಯಾಸಗಳಿಗೆ ಹಾಜರಾಗುವದು.
- **ಇ–ಕಲಿಕೆ:** ಅನ್ ಲೈನ್ ಪೋರ್ಟರ್ ಆದ **apcbiblecollege.org/elearn** ನ ಮೂಲಕ ಸ್ವಯಂ ಚಾಲಿತವಾಗಿ ಕಲಿಯುವದು.

**ಅನ್ ಲೈನ್** ನಲ್ಲಿ ಅರ್ಜಿ ಸಲ್ಲಿಸಲು ಮತ್ತು ಕಾಲೇಜು ಪಠ್ಯಕ್ರಮ, ಅರ್ಹತಾ ಮಾನದಂಡ, ಬೋಧನಾ ವೆಚ್ಚಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಮತ್ತು ಅರ್ಜಿ ನಮೂನೆಯನ್ನು ಡೌನ್ಲೋಡ್ ಮಾಡಲು ದಯವಿಟ್ಟು **apcbiblecollege.org** ಯನ್ನು ಸಂಪರ್ಕಿಸಿ.

ವಾಕ್ಯಾದ್ಯಾಂತ, ದೇವರು ತನ್ನ ಜನರಿಗೆ ತನ್ನ ವಾಕ್ಯವನ್ನು ಮಾತನಾಡಲು ಸೂಚಿಸುತ್ತಾನೆ. ನಮ್ಮ ಹೃದಯದಲ್ಲಿ ನಂಬಿಕೆಯಿಂದ ಆತನ ಮಾತುಗಳನ್ನು ನಮ್ಮ ಬಾಯಿಂದ ಹೊರಡುವ ಮಾತುಗಳಂತೆ ಆತನ ಮಾತುಗಳು ಆತನ ಸೃಜನಶೀಲ, ಅದ್ಭುತ ಮಾಡುವ ಶಕ್ತಿಯನ್ನು ನಮ್ಮ ನೈಸರ್ಗಿಕ ಕ್ಷೇತ್ರದಲ್ಲಿ ಬಿಡುಗಡೆ ಮಾಡುತ್ತವೆ. ನಮ್ಮ ಬಾಯಿಂದ ಹೊರಡುವ ಆತನ ಮಾತು ವೈರಿಗಳ ವಿರುದ್ಧ ನಮ್ಮ ಅಸ್ತ್ರವಾಗುತ್ತದೆ

ನಮ್ಮ ಪ್ರಸ್ತುತ ಮತ್ತು ನಮ್ಮ ಭವಿಷ್ಯದ ಮೇಲೆ ದೇವರ ವಾಕ್ಯವನ್ನು ಮಾತನಾಡುವ ಮೂಲಕ ನಾವು ನಮ್ಮ ಜಗತ್ತನ್ನು ರೂಪಿಸಬಹುದು. ನಾವು ಎಲ್ಲಾ ಸಮಯದಲ್ಲೂ ಮತ್ತು ಎಲ್ಲಾ ಸಂದರ್ಭಗಳಲ್ಲಿ ನಂಬಿಕೆ ತುಂಬಿದ ಮಾತುಗಳನ್ನು ಮಾತನಾಡಲು ಕಲಿಯಬೇಕು. ನಂಬಿಕೆಯಿಂದ ಮಾತನಾಡುವುದು ಬೆಟ್ಟದ ಅಸ್ತಿತ್ವವನ್ನು ಅಥವಾ ಚಾಲ್ತಿಯಲ್ಲಿರುವ ಬೀರುಗಾಳಿಯ ಉಗ್ರತೆಯನ್ನು ನಿರಾಕರಿಸುವುದು ಅಲ್ಲ. ಬದಲಿಗೆ, ನಂಬಿಕೆಯು ಬೆಟ್ಟಕ್ಕೆ ದಾರಿಯಲ್ಲಿ ನಿಲ್ಲುವ ಹಕ್ಕನ್ನು ನಿರಾಕರಿಸುತ್ತದೆ. ನಂಬಿಕೆಯು ಗಾಳಿ ಮತ್ತು ಬೀರುಗಾಳಿಗೆ ನಾಶಪಡಿಸುವ ಹಕ್ಕನ್ನು ಕಸಿದುಕೊಳ್ಳುತ್ತದೆ ಮತ್ತು ಬದಲಾಗಿ, ದೇವರು ಬಿಡುಗಡೆ ಮಾಡುವ ಸಮಾಧಾನ ಮತ್ತು ಶಾಂತತೆಗೆ ದಾರಿ ಮಾಡಿಕೊಡುತ್ತದೆ. ನಂಬಿಕೆಯು ರೋಗಕ್ಕೆ ಮಾತನಾಡುತ್ತದೆ ಮತ್ತು ದೇವರಿಂದ ಬರುವ ಗುಣಪಡಿಸುವಿಕೆ ಮತ್ತು ಸಂಪೂರ್ಣತೆಗೆ ದಾರಿ ಮಾಡಿಕೊಡುವಂತೆ ಆದೇಶಿಸುತ್ತದೆ.

ಈ ಪುಸ್ತಕವು ಈ ಸತ್ಯವೇದದ ಸತ್ಯದಲ್ಲಿ ನಿಮ್ಮನ್ನು ಸ್ಥಾಪಿಸುತ್ತದೆ ಮತ್ತು ಎಲ್ಲಾ ಸಮಯದಲ್ಲೂ ನಿಮ್ಮ ನಂಬಿಕೆಯನ್ನು ಮಾತನಾಡಲು ನಿಮ್ಮನ್ನು ಪ್ರೇರೇಪಿಸುತ್ತದೆ!


**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: apcwo.org